ಕಾರ್ಯಕ್ರಮಗಳೂ ನಡೆಯುತ್ತಿರುತ್ತವೆ. ಶ್ರಾವಣ ಬಹುಳ ಬಿದಿಗೆಯಲ್ಲಿ ರಾಘವೇಂದ್ರ ಸ್ವಾಮಿಗಳ ಆರಾಧನೆ, ಪುಷ್ಯ ಶುದ್ಧ ಚತುರ್ದಶಿ ಅಥವಾ ಹುಣ್ಣಿಮೆಯಂದು ಕುಮಾರವ್ಯಾಸ ಜಯಂತಿ ವಿಜೃಂಭಣೆಯಿಂದ ನಡೆಯುತ್ತವೆ. ಗದಗಿನಲ್ಲಿ ತೋಂಟದ ಸಿದ್ಧಲಿಂಗೇಶ್ವರ ಮಠವಿದೆ. ಇಲ್ಲಿನ ತೋಂಟದಾರ್ಯರ ಜಾತ್ರೆ ಬಹುಜನರನ್ನು ಆಕರ್ಷಿಸುತ್ತದೆ. ಜೋಡು ಹನುಮಾನ್, ಶಂಕರಲಿಂಗ, ದುರ್ಗಾ, ವೀರಭದ್ರ, ವಿಠೋಬ ಮುಂತಾದವು ಈ ಪಟ್ಟಣದ ಇತರ ದೇವಸ್ಥಾನಗಳು. (ಸಿ.ವಿ.ಆರ್.)

**ಗದಬ :** ಆಂಧ್ರ ಪ್ರದೇಶದ ವಿಶಾಖಪಟ್ಟಣಮ್ ಹರವು ಮತ್ತು ಒರಿಸ್ಸದ ಕೋರಾಪುತ್ ಹರವುಗಳಲ್ಲಿ ಬಳಕೆಯಲ್ಲಿರುವ ಅಪ್ರಸಿದ್ಧ ಭಾಷೆ. ಇದನ್ನು ಮುಂಡ ಭಾಷಾವರ್ಗದ ಒಂದು ಉಪಭಾಷೆ ಎನ್ನುವವರೂ ಇದ್ದಾರೆ.

ಗದಬ ಭಾಷೆ ಮುಂಡ ಭಾಷಾವರ್ಗಕ್ಕೆ ಅಥವಾ ಗ್ರಿಯಸನ್ನರ ಲಿಂಗ್ವಿಸ್ಟಿಕ್ ಸರ್ವೇ ಆಫ್ ಇಂಡಿಯಕ್ಕೆ ಅನುಸಾರವಾಗಿ ಆಸ್ಟ್ರಿಕ್ ಭಾಷಾವರ್ಗದ ಆಸ್ಟ್ರೋ–ಏಷ್ಯಾಟಿಕ್ ಉಪವರ್ಗದ ಮುಂಡಶಾಖೆಗೆ ಸೇರಿದ್ದು. ನಾರ್ಮನ್ ಎಚ್. ಜೈದ್ ಎಂಬುವವರು ಗದ್ಬಾ ಮತ್ತು ಗದಬ ಎಂಬ ಎರಡು ಉಪಭಾಷೆಗಳನ್ನು ಕರೆಂಟ್ ಟ್ರೆಂಡ್ಸ್ ಇನ್ ಲಿಂಗ್ವಿಸ್ಟಿಕ್ಸ್ ಎಂಬ ಗ್ರಂಥದಲ್ಲಿ ಗುರುತಿಸಿದ್ದಾರೆ. ಅವರ ಪ್ರಕಾರ ಮೊದಲನೆಯದು ಗುತೋಬ್ ಭಾಷೆಯ ಒಂದು ಅಂಗ. ಈ ಗುತೋಬ್ ಒಂದು ಪ್ರತ್ಯೇಕ ಮುಂಡ ಭಾಷೆ. ಎರಡನೆಯದನ್ನು ಲಿಂಗ್ವಿಸ್ಟಿಕ್ ಸರ್ವೇ ಆಫ್ ಇಂಡಿಯದಲ್ಲಿ ವಿಶಾಖಪಟ್ಟಣದ ಗದಬ ಎಂದು ಗುರುತಿಸಲಾಗಿದ್ದು ಮತ್ತೊಂದು ಮುಂಡಭಾಷೆಯಾದ ಗೋರುಮ್‍ನ ಅಂಗವಾಗಿ ಪರೆಂಗಾ ಮತ್ತಿತರ ಉಪಭಾಷೆಗಳೊಡನೆ ಪರಿಗಣಿಸಲಾಗಿದೆ. ಗದಬದ ಒಂದು ಶಾಖೆಗೆ ಸಂಬಂಧಿಸಿದಂತೆ ನಡೆದಿರುವ ಕಾರ್ಯ ಇದು ದ್ರಾವಿಡ ಭಾಷಾವರ್ಗದೊಡನೆ ಸಂಬಂಧ ಹೊಂದಿದೆಯೆಂಬುದನ್ನು ತೋರಿಸಿ ಕೊಟ್ಟಿರುವುದಾಗಿ ವರದಿಯಾಗಿದೆ ಎಂದು 1961ರ ಜನಗಣತಿಯ ಭಾಷಾಕೋಷ್ಟಕದಲ್ಲಿ ಹೇಳಲಾಗಿದೆ.

ಈ ಭಾಷೆಯ ಭಾಷಾವೈಜ್ಞಾನಿಕ ಅಧ್ಯಯನ ಸಿದ್ಧರೂಪದಲ್ಲಿ ದೊರೆಯುವುದಿಲ್ಲ. ಗ್ರಿಯರ್ಸನ್ನನ ಲಿಂಗ್ವಿಸ್ಟಿಕ್ ಸರ್ವೇ ಆಫ್ ಇಂಡಿಯದ ನಾಲ್ಕನೆಯ ಸಂಪುಟದಲ್ಲಿ ಬಸ್ತಾರ್ ಮಾಹಿತಿಯ ಆಧಾರದ ಮೇಲೆ ಇದರ ಉಚ್ಚಾರ, ಸಂಖ್ಯಾವಾಚಕಗಳು, ನಾಮಪದಗಳು, ಕ್ರಿಯಾಪದಗಳು ಮತ್ತಿತರ ವ್ಯಾಕರಣಾಂಶಗಳ ಬಗ್ಗೆ ಚಿಕ್ಕ ನಿರೂಪಣೆಯೊಂದನ್ನು ಕೊಟ್ಟಿದೆ. ಘೋಷಸ್ಪರ್ಶವ್ಯಂಜನ ಮಾಲೆಯಲ್ಲಿ ಮತ್ತು ಸ್ವರಗಳಲ್ಲಿ ಕಾಣಬರುವ ಕಾಕಲ್ಯೀಕರಣವೇ ಈ ಭಾಷೆಯ ವೈಶಿಷ್ಟ್ಯ. ಇದು ಆರ್ಯ ಮತ್ತು ದ್ರಾವಿಡ ವಾಕ್ಯರಚನಾ ಸ್ವರೂಪಗಳನ್ನು ಬಹಳವಾಗಿ ಎರವಲು ಪಡೆದಿರುವಂತೆ ತೋರುತ್ತದೆ. ಇದಕ್ಕೆ ತನ್ನದೇ ಆದ ಲಿಪಿಯಿಲ್ಲ. ಗೋಪೀನಾಥ ಮೊಹಾಂತಿ ತಮ್ಮ ಗದ್ಬಾ ಭಾಷಾ ಎಂಬ ಪುಸ್ತಿಕೆಯಲ್ಲಿ ಈ ಭಾಷೆಗೆ ಬೇರೊಂದು ವರ್ಣ ಮಾಲೆಯನ್ನು ಸೂಚಿಸಿದ್ದಾರಾದರೂ ಆಯಾ ಪ್ರದೇಶಗಳಲ್ಲಿನ ಪ್ರಮುಖ ಪ್ರಾದೇಶಿಕ ಭಾಷೆಗಳ ಲಿಪಿಯನ್ನೇ ಈ ಭಾಷೆಯ ಬರೆವಣಿಗೆಗೆ ಉಪಯೋಗಿಸಲಾಗುತ್ತಿದೆ. ಇಷ್ಟಾದರೂ ಇದನ್ನು ಮಾತನಾಡುವ ಜನಗಳಲ್ಲಿ ಸಾಕ್ಷರತೆಯ ಪ್ರಮಾಣ ತುಂಬ ಕಡಿಮೆ ಯಾಗಿದೆಯೆಂದೇ ಹೇಳಬೇಕು. (ಎಂ.ಎಸ್.ಟಿ.)

**ಗದಾಧರ ಭಟ್ಟಾಚಾರ್ಯ :** ಪಶ್ಚಿಮದ ಬಂಗಾಲದ ನವದ್ವೀಪದಲ್ಲಿ (ನದಿಯಾ) ಪ್ರಾಬಲ್ಯಕ್ಕೆ ಬಂದ ನವ್ಯನ್ಯಾಯ (ತಾರ್ಕಿಕ) ಪಂಥದ ಸುಪ್ರಸಿದ್ಧ ಆಚಾರ್ಯ ಪರಂಪರೆಯಲ್ಲಿ ಒಬ್ಬ. ಅವರಲ್ಲಿ ಪ್ರಾಚಾರ್ಯನೆಂಬ ಕೀರ್ತಿಗೆ ಪಾತ್ರನಾದವ. ಈತನ ಕಾಲ ಹದಿನಾರನೆಯ ಶತಮಾನದ ಉತ್ತರಾರ್ಧ ಅಥವಾ ಹದಿನೇಳನೆಯ ಶತಮಾನದ ಪೂರ್ವಾರ್ಧ. ಜಗದೀಶಭಟ್ಟಾಚಾರ್ಯನ (ತರ್ಕಾಲಂಕಾರ) ಶಿಷ್ಯ. ಮಿಥಿಲೆ ಅಥವಾ ನವದ್ವೀಪ ಈತನ ಕಾರ್ಯಕ್ಷೇತ್ರವಾಗಿದ್ದಿರಬಹುದು. ಗಂಗೇಶನ ತತ್ತ್ವ ಚಿಂತಾಮಣಿಯ ಮೇಲೆ ರಘುನಾಥ ತರ್ಕಶಿರೋಮಣಿ ಎಂಬ ಆಚಾರ್ಯ ಬರೆದ ದೀಧಿತಿಯೆಂಬ ಭಾಷ್ಯಕ್ಕೆ ಈತ ತನ್ನ ಭಾಷ್ಯವೊಂದನ್ನು ಬರೆದಿದ್ದಾನೆ. ಇದೇ ಗಾದಾಧರೀ, ಗದಾಧರೀಯ ಎಂದು ಪ್ರಸಿದ್ಧಿ ಪಡೆದಿದೆ. ಇಂದು ಭಾರತದಲ್ಲಿ ನವ್ಯನ್ಯಾಯದಲ್ಲಿ, ತರ್ಕದಲ್ಲಿ ಅಪ್ರತಿಮ ಪಾಂಡಿತ್ಯ ಗಳಿಸಬೇಕೆಂಬ ಯಾರಾದರೂ ಗದಾಧರೀಯವನ್ನು ಉಪೇಕ್ಷಿಸುವಂತಿಲ್ಲ. ತತ್ತ್ವಚಿಂತಾಮಣಿಗೆ ಜಯದೇವನೆಂಬ ತಾರ್ಕಿಕ ಬರೆದ ಮಣ್ಯಾಲೋಕವೆಂಬ ಭಾಷ್ಯಕ್ಕೂ ಗದಾಧರ ಭಾಷ್ಯ ಬರೆದನಲ್ಲದೆ ತತ್ತ್ವಚಿಂತಾಮಣಿಯ ಅರವತ್ತುನಾಲ್ಕು ವಿಷಯಗಳನ್ನು ಕುರಿತು ವ್ಯುತ್ಪತ್ತಿವಾದ, ಶಕ್ತಿವಾದ ಮುಂತಾದ ಅರವತ್ತುನಾಲ್ಕು ಗ್ರಂಥಗಳನ್ನು ಬರೆದನೆಂದು ಪ್ರತೀತಿಯಿದೆ. ಇವುಗಳಲ್ಲಿ ಹಲವು ಇಂದು ಅನುಪಲಬ್ಧ. ಉದಯನಾಚಾರ್ಯನ ಆತ್ಮತತ್ತ್ವವಿವೇಕದ ಭಾಷ್ಯ ಈತನ ಮತ್ತೊಂದು ಕೃತಿ. ಮರಣಶಯ್ಯೆಯಲ್ಲಿದ್ದಾಗ ಈತನನ್ನು ಕುರಿತು 'ನೈಯಾಯಿಕರ ಕರ್ತನನ್ನು ಸ್ಮರಿಸಿಕೋ' ಎಂದಾಗ ಈತ ಅಣುಗಳು, ಅಣುಗಳು, ಅಣುಗಳು (ಪೀಲವಃ, ಪೀಲವಃ, ಪೀಲವಃ)–ಎಂದು ಪ್ರಾಣಬಿಟ್ಟನಂತೆ. ಈತ ಅಂಥ ನಿಷ್ಠುರ ತಾರ್ಕಿಕ ಶಿರೋಮಣಿ. (ಸಿ.ಜಿ.ಪಿ.)

**ಗದಾಧರ ಸಿಂಹ :** 1681–1696. ಅಸ್ಸಾಮನ್ನಾಳಿದ 29ನೆಯ ಅಹೋಂ ದೊರೆ. ಈತ ರಾಜನಾದಮೇಲೆ ಮಾಡಿದ ಮೊದಲನೆಯ ಕೆಲಸವೆಂದರೆ ಗೌಹಾತಿಯನ್ನು ಮೊಗಲರ ಆಕ್ರಮಣದಿಂದ ಬಿಡಿಸಿಕೊಂಡದ್ದು. ಈತ ಬಹಬಾರಿ ಮತ್ತು ಕಾಜಲ್ ಬಳಿ ಮೊಗಲರ ಸೈನ್ಯವನ್ನು ಸೋಲಿಸಿ ಓಡಿಸಿದ. ಮೋನಸ್ ನದಿಯನ್ನು ಮೊಗಲ್ ಮತ್ತು ಅಹೋಂ ರಾಜ್ಯಗಳ ನಡುವಣ ಗಡಿಯೆಂದು ಔರಂಗ್‍ಜ಼ೇಬ್ ಒಪ್ಪಿಕೊಳ್ಳಬೇಕಾಯಿತು. ಆಂತರಿಕ ಭದ್ರತೆಯನ್ನೂ ಈತ ಸ್ಥಾಪಿಸಿದ. ಅಲ್ಲಿಯ ಶ್ರೀಮಂತರು ಅನೇಕ ಬಾರಿ ಗಧಾದರ ಸಿಂಹನ ವಿರುದ್ಧ ದಂಗೆ ಎದ್ದರು. ಆ ವಿರೋಧಗಳನ್ನೆಲ್ಲ ಈತ ಅಡಗಿಸಿದ. ವಿರೋಧಿಗಳಲ್ಲಿ ಅನೇಕರನ್ನು ಕೊಲ್ಲಿಸಿದ. ಮಿರಿ ಮತ್ತು ನಾಗಾ ದಂಗೆಕೋರರನ್ನು ಹತ್ತಿಕ್ಕಿದ.

ಗದಾಧರ ಸಿಂಹ ಅನೇಕ ಸುಧಾರಣೆಗಳನ್ನು ಕೈಗೊಂಡ. ಈತನ ಕಾಲದಲ್ಲಿ ಕೆರೆಗಳ ದುರಸ್ತಿಯಾಯಿತು. ಹೆದ್ದಾರಿಗಳು ನಿರ್ಮಾಣವಾದವು. ಈತ ಭೂಹಿಡುವಳಿಯ ವ್ಯಾಪಕ ಸರ್ವೇಕ್ಷಣೆ ಮಾಡಿಸಿದ.

ಗದಾಧರ ಸಿಂಹ ಶಾಕ್ತೇಯನಾಗಿದ್ದ. ಈತ ವೈಷ್ಣವರಿಗೆ ಕಿರುಕುಳ ಕೊಟ್ಟನೆಂದೂ ವೈಷ್ಣವಗುರುಗಳ ಹಕ್ಕುಗಳನ್ನು ಮೊಟಕುಮಾಡಿದನೆಂದೂ ತಿಳಿದುಬರುತ್ತದೆ. ಗೌಹಾತಿಯ ಕಚೇರಿಘಾಟ್ ಎದುರಿಗೆ ಬ್ರಹ್ಮಪುತ್ರಾ ನದಿಯ ದ್ವೀಪವೊಂದರ ಮೇಲೆ ಈತ ಉಮಾನಂದ ದೇವಸ್ಥಾನವನ್ನು ಕಟ್ಟಿಸಿದ. ಈತ ಬ್ರಾಹ್ಮಣರಿಗೂ ದೇವಸ್ಥಾನಗಳಿಗೂ ಭೂಮಿಯನ್ನು ಕೊಟ್ಟನೆಂದು ಗೊತ್ತಾಗುತ್ತದೆ. (ಎಸ್‍ಎಚ್‍ಐ)

**ಗದಾಫಿ, ಮೌಮರ್ :** 1942–2011. ಲಿಬಿಯ ದೇಶದ ಅಧ್ಯಕ್ಷ (1971–77), ಲಿಬಿಯನ್ ಅರಬ್ ಜಾಮಾಹಿರಿಯ ನಾಯಕ. ಸಾರ್ಟೆ ನಗರದ ಹೊರಭಾಗದಲ್ಲಿರುವ ಹಳ್ಳಿಗಾಡಿನ ಕೃಷಿ ಪ್ರದೇಶದ ಕೈಸ್ರ್ ಅಬು ಹದಿ(ಡಿ) ಎಂಬಲ್ಲಿ 1942ರ ಜೂನ್‍ನಲ್ಲಿ ಜನಿಸಿದ. ಸಾರ್ಟೆ ಹತ್ತಿರ ಇರುವ ಮರುಭೂಮಿಯ ಗುಡಾರದಲ್ಲಿ ಬೆಳೆದ. ಮನೆಯಿಂದ ದೂರವಿದ್ದ ಸಬಾದ ಮುಸ್ಲಿಂ ಪ್ರಾಥಮಿಕ ಶಾಲೆಯಲ್ಲಿ ಅಭ್ಯಾಸ ಮಾಡಿದ. ಆ ಸಮಯದಲ್ಲಿ ಅರಬ್ ದೇಶಗಳಲ್ಲಿ ನಡೆಯುತ್ತಿದ್ದ ಮುಖ್ಯ ಘಟನೆಗಳು ಇವನ ಮೇಲೆ ಪ್ರಭಾವ ಬೀರಿದವು.1911ರಲ್ಲಿ ಇಟಲಿಯು ಲಿಬಿಯವನ್ನು ಸ್ವಾಧೀನ ಪಡಿಸಿಕೊಳ್ಳಲು ನಡೆಸಿದ ಯುದ್ಧದಲ್ಲಿ ಇವನ ತಾತ ಲಿಬಿಯ ಪರ ಹೋರಾಡಿ ಖೋಂನಲ್ಲಿ ಮೊದಲ ಬಲಿಯಾದ. 1948ರಲ್ಲಿ 6ವರ್ಷದ ಬಾಲಕನಾಗಿದ್ದಾಗ ತನ್ನ ಸಂಬಂಧಿಕರ ಮಕ್ಕಳೊಂದಿಗೆ ಆಟವಾಡುವಾಗ ದೂಳು ತುಂಬಿದ ಮಣ್ಣಿನಲ್ಲಿ ಯುದ್ಧದ ಸಮಯದಲ್ಲಿ ಇಟಲಿ ಸೈನ್ಯ ಹುಗಿದಿದ್ದ ಸಿಡಿಮದ್ದು ಸಿಡಿದು ಇಬ್ಬರು ಮಕ್ಕಳು ನಿಧನವಾಗಿ ಇವನಿಗೆ ತೋಳಿನಲ್ಲಿ ಗಾಯವಾಗಿತ್ತು. ಈ ಘಟನೆ ಇವನ ಮನಸ್ಸಿನಲ್ಲಿ ಇಟಲಿಯ ವಿಷಯದಲ್ಲಿ ವಿರೋಧಿ ಭಾವನೆ ಬೆಳೆಯಲು ಅಚ್ಚಳಿಯದ ಪ್ರಭಾವ ಬೀರಿತು.



ಇವನು ಪ್ರಾಥಮಿಕ ಶಿಕ್ಷಣ ಪಡೆಯುತ್ತಿದ್ದಾಗ ಅರಬ್ ದೇಶಗಳಲ್ಲಿ ನಡೆಯುತ್ತಿದ್ದ ಮುಖ್ಯ ಘಟನೆಗಳು ಇವನ ಮೇಲೆ ಪ್ರಭಾವ ಬೀರಿದವು. ಪ್ರಾಥಮಿಕ ಶಿಕ್ಷಣದ ಅನಂತರ ಮಿಸರಾಟದಲ್ಲಿ ಖಾಸಾಗಿಯಾಗಿ ಶಿಕ್ಷಣವನ್ನು ಪಡೆದ. ಶಿಕ್ಷಣದ ಸಮಯದಲ್ಲಿ ಇತಿಹಾಸ ಅಭ್ಯಾಸದಲ್ಲಿ ಆಸಕ್ತಿ ವಹಿಸಿದ. ಬೆಂಗಾಸಿಯ (ಬೆಂಗಾಸಿ) ರಾಯಲ್ ಲಿಬಿಯನ್ ಮಿಲಿಟರಿ ಅಕಾಡೆಮಿಯಲ್ಲಿ ಅಧ್ಯಯನ ಮಾಡಿ (1961–66) ಪದವೀಧರನಾದ. ಅನಂತರ ಗ್ರೇಟ್ ಬ್ರಿಟನ್ನಿನ ಸಾಂಡ್‍ಹರ್ಸ್ಟ್‍ನ ರಾಯಲ್ ಮಿಲಿಟರಿ ಅಕಾಡೆಮಿಯಲ್ಲಿ 4 ತಿಂಗಳು ಸಿಗ್ನಲ್ ಆಫೀಸರ್ ತರಬೇತಿ ಪಡೆದ. ಲಿಬಿಯ ಸೈನ್ಯದಲ್ಲಿ ಲೆಫ್ಟಿನೆಂಟ್ ಆದ. ಲಿಬಿಯ ಸೈನ್ಯದ ಎಂಜನಿಯರ್ ವಿಭಾಗದಲ್ಲಿ ನಿಯೋಜಿತ ಅಧಿಕಾರಿಯಾದ. ಇವನು ಈಜಿಪ್ಟ್ ದೇಶದ ಅಧ್ಯಕ್ಷ ಗಮಾಲ್ ಅಬ್ದುಲ್ ನಾಸೆರ್‍ನ ಅಭಿಮಾನಿ. 1956ರಲ್ಲಿ ಸೂಯೆಜ್ ಕಾಲುವೆ ರಾಷ್ಟ್ರೀಕರಣದ ಸಮಯದಲ್ಲಿ ಈಜಿಪ್ಟ್ ಮೇಲೆ ಬ್ರಿಟನ್, ಫ್ರಾನ್ಸ್, ಅಮೆರಿಕ ಹಾಗೂ ಇಸ್ರೇಲ್ ದೇಶಗಳು ಧಾಳಿ ನಡೆಸಿದಾಗ ಅವುಗಳ ವಿರುದ್ಧ ಈಜಿಪ್ಟ್ ನಡೆಸಿದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ.

1967ರಲ್ಲಿ ಇಸ್ರೇಲ್ ಮತ್ತು ನೆರೆಯ ಅರಬ್ ರಾಷ್ಟ್ರಗಳಿಗೂ ನಡೆದ 6 ದಿನಗಳ ಯುದ್ಧದಲ್ಲಿ ಜೆರೂಸಲೇಂ, ಜೋರ್ಡಾನ್ ನದಿಯ ಪಶ್ಚಿಮ ದಂಡೆಯ ಪ್ರದೇಶ, ಸಿನಾಯ್ ಪ್ರದೇಶ ಮತ್ತು ಗೋಲನ್ ದಿಬ್ಬಗಳು ಇಸ್ರೇಲ್‍ನ ವಶವಾದವು. ಆಗ ಅರಬರು ಸೋಲು ಅನುಭವಿಸಿದ್ದು ಇವನಿಗೆ ಮತ್ತು ಇವನ ಮಿಲಿಟರಿ ಅಕಾಡೆಮಿಯ ಸಹಪಾಠಿಗಳಿಗೆ ಮರೆಯಲಾರದ ಅನುಭವವಾಯಿತು. ಇದರಿಂದಾಗಿ ಈತ ಅರಬರ ಐಕ್ಯತೆಗೆ ಪ್ರಯತ್ನಿಸಲು ದೃಢನಿರ್ಧಾರ ಮಾಡಿದ.

1969ರ ಸೆಪ್ಟೆಂಬರ್ 1ರಂದು ಗದಾಫಿಯ ನಾಯಕತ್ವದಲ್ಲಿ ಮಿಲಿಟರಿ ಅಧಿಕಾರಿಗಳು ರಕ್ತಪಾತವಿಲ್ಲದ ಕ್ಷಿಪ್ರಕ್ರಾಂತಿಯನ್ನು ನಡೆಸಿ ಲಿಬಿಯ ರಾಜನನ್ನು ಪದಚ್ಯುತಿಗೊಳಿಸಿ ಮಿಲಿಟರಿ ಆಡಳಿತ ಸ್ಥಾಪಿಸಿದರು. ಗದಾಫಿ 1970ರಲ್ಲಿ ಮುಖ್ಯಮಂತ್ರಿಯಾದ. ಲಿಬಿಯನ್ ರಿವೆಲ್ಯೂಷನರಿ ಕಮಾಂಡ್ ಕೌನ್ಸಿಲ್‌ನ ಆಣತಿಯಂತೆ ಆಡಳಿತ ನಡೆಯುತ್ತಿತ್ತು. ಇವನು ಅಧಿಕಾರ ವಹಿಸಿಕೊಂಡ ಕೂಡಲೇ ಅಮೆರಿಕ ಮತ್ತು ಬ್ರಿಟಿಷ್ ರಕ್ಷಣ ನೆಲೆಗಳನ್ನು ಮುಚಲು ಆಜ್ಞೆ ಮಾಡಿದ. ಐರೋಪ್ಯ ತೈಲೋದ್ಯಮ ಕಂಪನಿಗಳಿಗೆ ಆದಾಯದಲ್ಲಿ ಅಧಿಕಭಾಗ ಕೊಡದಿದ್ದರೆ ಮುಚ್ಚಿಸುವುದಾಗಿ ಎಚ್ಚರಿಕೆ ನೀಡಿದ. ಇವನ ಆಣತಿಯಂತೆ ಕಂಪನಿಗಳು ಶೇ.50 ರಿಂದ ಶೇ.70 ಭಾಗ ಕೊಡಲು ಒಪ್ಪಿದವು. ಗದಾಫಿ 1972ರಲ್ಲಿ ಅಧ್ಯಕ್ಷನಾದ, ಆಗ ಮೇಜರ್ ಅಬ್ದುಲ್ ಮುಖ್ಯಮಂತ್ರಿಯಾದ. ಇವನು 1971 ರಿಂದ 1977ರ ವರೆಗೆ ಈಜಿಪ್ಟ್ ಮಾದರಿಯಂತೆ ಅರಬ್ ಸೋಷಿಯಲಿಸ್ಟ್ ಯೂನಿಯನ್ ಲಿಬಿಯದ ರಾಜಕೀಯ ಪಕ್ಷವಾಗಿ ಕಾರ್ಯನಿರ್ವಹಿಸಲು ಒಪ್ಪಿಗೆ ನೀಡಿದ. 1977ರಲ್ಲಿ ಅಧಿಕಾರ ತ್ಯಜಿಸಿದ. ಲಿಬಿಯನ್ ಅರಬ್ ಜಮಾಹಿರಿಯ ನೇರವಾಗಿ ದೇಶದ ಆಡಳಿತಕ್ಕೆ ಹೊಣೆಯೆಂದು ತಿಳಿಸಿದ. ಆದರೂ ಲಿಬಿಯನ್ ರೆವೆಲ್ಯೂಷನರಿ ಕಮಾಂಡ್ ಕೌನ್ಸಿಲ್ ಆಣತಿಯಂತೆ ನಡೆಯುತ್ತಿತ್ತು.

ಇವನನ್ನು ಟೀಕೆ ಮಾಡುವವರು ಗದಾಫಿ ನಿರಂಕುಶ ಸರ್ವಾಧಿಕಾರಿ ಎಂದು ಕರೆಯುತ್ತಿದ್ದರು. ಈತ 1980ರ ದಶಕದಲ್ಲಿ ರಸಾಯನಿಕ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿದ. ವಿಶ್ವಸಂಸ್ಥೆಯ ಸದಸ್ಯ ದೇಶಗಳು ಲಿಬಿಯಕ್ಕೆ ನಿರ್ಬಂಧವನ್ನು ವಿಧಿಸಿದವು. 2003ರಲ್ಲಿ ಇರಾಕ್‌ನ ಅಧ್ಯಕ್ಷ ಸದ್ದಾಂ ಹುಸೇನ್‌ನನ್ನು ಬಂಧಿಸಿದ 6 ದಿನಗಳ ಅನಂತರ ಶಸ್ತ್ರಾಸ್ತ್ರಗಳನ್ನು ತ್ಯಜಿಸಿರುವುದಾಗಿ ಗದಾಫಿ ಹೇಳಿದ.

2011ರ ಫೆಬ್ರವರಿಯಲ್ಲಿ ನೆರೆಹೊರೆಯ ದೇಶಗಳಾದ ಈಜಿಪ್ಟ್ ಮತ್ತು ಟ್ಯೂನಿಷಿಯ ದೇಶಗಳಲ್ಲಿ ಕ್ರಾಂತಿಗಳು ನಡೆದಾಗ ಗದಾಫಿ ವಿರುದ್ಧವಾಗಿ ಪ್ರತಿಭಟನೆಗಳು ಪ್ರಾರಂಭವಾಗಿ ದೇಶಾದ್ಯಂತ ಹರಡಿತು. ಗದಾಫಿಗೆ ವಿರೋಧಿಯಾದ ಸೈನ್ಯದ ಭಾಗ ಬೆಂಗಾಜ಼ಿಯಲ್ಲಿ ನ್ಯಾಷನಲ್ ಟ್ರಾನ್ಸಿಷನಲ್ ಕೌನ್ಸಿಲ್ (ಎನ್.ಟಿ.ಸಿ) ಮಧ್ಯಕಾಲಿನ ಸರ್ಕಾರ ಸ್ಥಾಪಿಸಿತು. ದೇಶದಲ್ಲಿ ಹೋರಾಟ ಪ್ರಾರಂಭವಾಗಿ ಅಂತಾರಾಷ್ಟ್ರೀಯ ನ್ಯಾಯಾಲಯ ಗದಾಫಿ ಮತ್ತು ಇವನ ಕುಟುಂಬದವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡು ಜೂನ್ 27ರಂದು ಅವರನ್ನು ಬಂಧಿಸಲು ಆಜ್ಞೆ ಹೊರಡಿಸಿತು. ನ್ಯಾಟೊ ಬಲವು ಎನ್.ಟಿ.ಸಿ.ಗೆ ಬೆಂಬಲವಾಗಿ ಹೋರಾಟ ಪ್ರಾರಂಭಿಸಿತು. ಗದಾಫಿಗೆ ವಿಧೇಯರಾದ ಸೈನ್ಯವು ಟ್ರಿಪೋಲಿ ಮೇಲಿನ ಹತೋಟಿಯನ್ನು ಆಗಸ್ಟ್ 16ರಂದು ಕಳೆದುಕೊಂಡಿತು. ಗದಾಫಿ ಸಾರ್ಟೆ ಪಟ್ಟಣದ ಮೇಲೆ ಮಾತ್ರ ಹತೋಟಿಯನ್ನು ಹೊಂದಿದ್ದ. ಸೆಪ್ಟೆಂಬರ್ 16ರಂದು ಎನ್.ಟಿ.ಸಿ. ವಿಶ್ವಸಂಸ್ಥೆಯಲ್ಲಿ ಸ್ಥಾನವನ್ನು ತುಂಬಿತು. ನ್ಯಾಟೊ ಪಡೆಗಳ ಯುದ್ಧ ವಿಮಾನಗಳು ಇವನ ಬೆಂಗಾವಲು ಪಡೆಗಳ ಮೇಲೆ ಧಾಳಿ ನಡೆಸಿದವು. ಅಕ್ಟೋಬರ್ 20ರಂದು ಸಾರ್ಟೆಯಲ್ಲಿ ಎನ್.ಎಲ್.ಎ. ಹೋರಾಟಗಾರರಿಗೆ ಈತ ಜೀವಂತವಾಗಿ ಕೈವಶವಾದಾಗ ಈತನನ್ನು ಕೊಲ್ಲಲಾಯಿತು. ಇವನ 41 ವರ್ಷಗಳ ಆಡಳಿತ ಮುಕ್ತಾಯವಾಯಿತು. 1900 ಅನಂತರ ದೀರ್ಘಕಾಲ ಆಡಳಿತ ನಡೆಸಿದ ರಾಜವಂಶಕ್ಕೆ ಸೇರಿಲ್ಲದ ನಾಲ್ಕನೆಯ ವ್ಯಕ್ತಿ ಈತ. (ಎನ್.ಎಲ್.)

**ಗದ್ದಗಿಮಠ, ಬಿ.ಎಸ್. :** 1917–1960. ಕನ್ನಡ ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಿದ ಆದ್ಯರಲ್ಲೊಬ್ಬರು. ಬಿಜಾಪುರ ಜಿಲ್ಲೆ ಕೆರೂರಿನಲ್ಲಿ 1917 ಜನವರಿ 17ರಂದು ಜನಿಸಿದರು. ಇವರ ತಂದೆ ಜನಪದ ಗೀತೆಗಳನ್ನು ಹಾಡುವುದರಲ್ಲಿ ಪ್ರಸಿದ್ಧರಾಗಿದ್ದರು. ಇಂಥ ಪರಿಸರದಲ್ಲಿ ಬೆಳೆದ ಇವರನ್ನು ಜಾನಪದ ಕ್ಷೇತ್ರ ಆಕರ್ಷಿಸಿತು. ಕನ್ನಡದಲ್ಲಿ ಎಂ.ಎ. ಪದವಿ ಪಡೆದಮೇಲೆ, ಉತ್ತರ ಕರ್ನಾಟಕದ ನಾನಾ ಭಾಗಗಳಲ್ಲಿ ಸಂಚರಿಸಿ ಜನಪದ ಗೀತೆಗಳನ್ನು ಸಂಶೋಧಿಸಿ, ಸಂಗ್ರಹಿಸಿ ಕನ್ನಡ ಜನಪದ ಗೀತೆಗಳು ಎಂಬ ಪ್ರೌಢ ಪ್ರಬಂಧವನ್ನು ಬರೆದು ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದರು. (1955). ಕರ್ನಾಟಕದಲ್ಲಿ ಜಾನಪದ ಕ್ಷೇತ್ರದಲ್ಲಿ ಪಿಎಚ್.ಡಿ. ಪದವಿ ಪಡೆದ ಪ್ರಥಮರೂ ಇವರೇ. ಜನಪದ ಸಾಹಿತ್ಯ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಲು ಇವರು ಬಹುವಾಗಿ ಶ್ರಮಿಸಿದರು. ಜನಪದ ಗೀತೆಗಳನ್ನು, ನಾಡಪದಗಳನ್ನು ಸಂಗ್ರಹಿಸಿ ಪ್ರಕಟಿಸಿದರು. ಅದಕ್ಕಾಗಿ ಜನಪದ ಕಾವ್ಯಮಾಲೆ ಎಂಬ ಒಂದು ಮಾಲೆಯನ್ನು ಆರಂಭಿಸಿದರು. ಇವರು ಪ್ರಕಟಿಸಿರುವ ಗ್ರಂಥಗಳಿವು: ನಾಲ್ಕು ನಾಡ ಪದಗಳು, ಕಂಬಿಯ ಹಾಡುಗಳು, ಜನತಾಗೀತಗಳು ಲೋಕಗೀತಗಳು, ಕುಮಾರರಾಮನ ದುಂದುಮೆಗಳು. ಇವರು ಸ್ವತಃ ಜನಪದ ದಾಟಿಯಲ್ಲಿ ಗೀತೆಗಳನ್ನು ಸೊಗಸಾಗಿ ಹಾಡುತ್ತಿದ್ದರು.



ಇವರು ಬೆಳಗಾಂವಿಯ ಲಿಂಗರಾಜ ಕಾಲೇಜಿನಲ್ಲಿ ವ್ಯಾಯಾಮ ಶಿಕ್ಷಕರಾಗಿ ಸ್ವಲ್ಪಕಾಲ ಕೆಲಸಮಾಡಿದರು. ಅನಂತರ ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟಣ ವಿಭಾಗದಲ್ಲಿ ಸಹಾಯಕ ನಿರ್ದೇಶಕರಾಗಿ ನೇಮಕಗೊಂಡರು. ಆ ಹುದ್ದೆಯಲ್ಲಿದ್ದಾಗಲೇ 1960ರ ಅಕ್ಟೋಬರ್ 30ರಂದು ಹೃದಯಾಘಾತದಿಂದ ನಿಧನಹೊಂದಿದರು.

ಕನ್ನಡ ಜನಪದ ಗೀತಗಳು ಎಂಬ ಇವರ ಪ್ರೌಢಪ್ರಬಂಧವನ್ನು ಇವರ ನಿಧನಾನಂತರ ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿತು (1963). ತರೀಕೆರೆಯಲ್ಲಿ 1967ರಲ್ಲಿ ನಡೆದ ಅಖಿಲ ಕರ್ನಾಟಕ ಪ್ರಥಮ ಜಾನಪದ ಸಮ್ಮೇಳನದ ಸಭಾಮಂಟಪಕ್ಕೆ ಇವರ ಹೆಸರಿಡಲಾಗಿತ್ತು. (ಸಿ.ಕೆ.ಎನ್.)

**ಗದ್ದರ್ ಪಕ್ಷ :** ಭಾರತದ ಹೋರಾಟದಲ್ಲಿ ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆಯಲು ಬ್ರಿಟಿಷರನ್ನು ಶಸ್ತ್ರಾಸ್ತ್ರ ಬಂಡಾಯದಿಂದ ಕಿತ್ತೊಗೆಯ ಬೇಕೆಂದು ಕ್ರಾಂತಿಕಾರಿಗಳು ಕಾರ್ಯಾಚರಣೆ ನಡೆಸಲು ಪ್ರಾರಂಭಿಸಿದ್ದರು. ಈ ಕ್ರಾಂತಿಕಾರಿಗಳು ಯುರೋಪ್, ಅಮೆರಿಕ, ಮಧ್ಯಏಷ್ಯ ಮತ್ತು ಆಗ್ನೇಯ ಏಷ್ಯಗಳಲ್ಲಿ ತಮ್ಮ ಚಟುವಟಿಕೆಯ ಕೇಂದ್ರಗಳನ್ನು ಸ್ಥಾಪಿಸಿಕೊಂಡಿದ್ದರು. ಇವರುಗಳು ಸಾವನ್ನು ಅಥವಾ ಸೆರೆಯಾಗುವುದರಿಂದ ಎದುರಿಸಲು ಹೆದರಿ ವಿದೇಶಗಳಿಗೆ ಹೋದವರಲ್ಲ. ಇವರು ಆ ದೇಶಗಳಲ್ಲಿ ಭಾರತದ ಸಮಸ್ಯೆಗಳನ್ನು ಪ್ರಚಾರ ಮಾಡಿ, ಹಣ ಮತ್ತು ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಲು ಹೋಗಿದ್ದರು. ಅಮೆರಿಕ ಮತ್ತು ಕೆನಡಾ ದೇಶಗಳಲ್ಲಿ ಸಾವಿರಾರು ಭಾರತೀಯರು ಅದರಲ್ಲೂ ಹೆಚ್ಚಾಗಿ ಪಂಜಾಬಿನ ಸಿಕ್ಕರು ನೆಲೆಸಿದ್ದರು. ಅಲ್ಲಿ ಭಾರತೀಯರನ್ನು ವರ್ಣದ್ವೇಷ ಮತ್ತು ತಾರತಮ್ಯಗಳಿಂದ ಕಾಣುತ್ತಿದ್ದರು. ಇದೇ ಸಮಯದಲ್ಲಿ ತಾರಕನಾಥ್‌ದಾಸ್ ಮತ್ತು ಸೋಹನ್‌ಸಿಂಗ್ ಈ ಪ್ರದೇಶಗಳಲ್ಲಿ ಕ್ರಾಂತಿಕಾರಿ ವಿಚಾರಗಳನ್ನು ಹರಡಿದರು. ಲಾಲ ಹರಿದಯಾಳ್‌ರು ಅಮೆರಿಕಕ್ಕೆ ಹೋಗಿ 1857ರ ಸಿಪಾಯಿದಂಗೆಯ ನೆನಪಿಗಾಗಿ 1913ರ ನವೆಂಬರ್ 1 ರಂದು 'ಗದ್ದರ್' ಎಂಬ ಪತ್ರಿಕೆಯನ್ನು ಪ್ರಕಟಿಸಿದರು. ಪಂಜಾಬಿ ಭಾಷೆಯಲ್ಲಿ 'ಗದ್ದರ್' ಎಂದರೆ ಬಂಡಾಯವೆಂದರ್ಥ. ಈ ಪತ್ರಿಕೆಯು ಇಂಗ್ಲಿಷ್, ಗುರುಮುಖಿ, ಹಿಂದಿ ಮತ್ತು ಉರ್ದು ಭಾಷೆಗಳಲ್ಲಿ ಪ್ರಕಟವಾಗುತ್ತಿತ್ತು. ಈ ಪತ್ರಿಕೆಯಲ್ಲಿ ಅಧಿಕಾರಿಗಳ ಕೊಲೆ, ಕ್ರಾಂತಿಕಾರಿ ಮತ್ತು ಸಾಮ್ರಾಜ್ಯಶಾಹಿ ವಿರೋಧಿ ಸಾಹಿತ್ಯವನ್ನು ಪ್ರಕಟಿಸುತ್ತಿದರು ನಂತರ ಗದ್ದರ್ ಎಂಬ ಪಕ್ಷವನ್ನು ರಚಿಸಿದರು.

ಗದ್ದರ್ ಪತ್ರಿಕೆಯಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ಸಾಹಿತ್ಯವನ್ನು ಪ್ರಕಟಿಸುವುದು, ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸುವುದು, ಸೈನ್ಯದ ನಡುವೆ ವಿರೋಧಿ ಭಾವನೆ ಬೆಳೆಸುವುದು ಮುಂತಾದ ಲೇಖನಗಳನ್ನು ಪ್ರಕಟವಾಗುತ್ತಿತ್ತು. ಅಮೆರಿಕದ ಸ್ಯಾನ್‌ಫ್ರಾನ್ಸಿಸ್ಕೋದಲ್ಲಿ ಇದರ ಕಛೇರಿಯಿತ್ತು. ಒಂದು ಸಲ ಈ ಪತ್ರಿಕೆಯಲ್ಲಿ 'ಧೈರ್ಯಶಾಲಿ ಸೈನಿಕರು ಬೇಕಾಗಿದ್ದಾರೆ, ಉದ್ಯೋಗ– ಭಾರತದಲ್ಲಿ ದಂಗೆ ಏಳಲು ವೇತನ–ಸಾವು ಬೆಲೆ – ವೀರ ಮರಣ; ವಿಶ್ರಾಂತಿ ವೇತನ–ಸ್ವಾತಂತ್ರ್ಯ; ಯುದ್ಧ ನಡೆಯುವ ಸ್ಥಳ–ಭಾರತ' ಎಂದು ಪ್ರಕಟಿಸಲಾಗಿತ್ತು. ಪ್ರಪಂಚದಾದ್ಯಂತ ಇರುವ ಭಾರತೀಯರನ್ನು ಒಟ್ಟುಗೂಡಿಸಿ ಕ್ರಾಂತಿ ಮಾಡಲು ಜನರನ್ನು ಸಂಘಟಿಸುವ ಉದ್ದೇಶವಾಗಿತ್ತು.

ಗದ್ದರ್ ಪಕ್ಷದ ಕೇಂದ್ರ ಕಛೇರಿಯು ಅಮೆರಿಕದ ಸ್ಯಾನ್‌ಫ್ರಾನ್ಸಿಸ್ಕೋದ ನಂ, 436 ಹಿಲ್‌ಸ್ಟ್ರೀಟ್‌ನಲ್ಲಿತ್ತು. ಕಲ್ಕತ್ತದಲ್ಲಿ ಪ್ರಕಟವಾಗುತ್ತಿದ್ದ 'ಯುಗಾಂತರ್' ಪತ್ರಿಕೆಯ ಸ್ಥಾಪನೆಯ ನೆನಪಿನಲ್ಲಿ ಈ ಕೇಂದ್ರಕ್ಕೆ 'ಯುಗಾಂತರ್ ಆಶ್ರಮ'ವೆಂದು ಹೆಸರಿಡಲಾಯಿತು. ಅಮೆರಿಕ, ಕೆನಡ ಮತ್ತಿತರ ಭಾಗಗಳಲ್ಲಿ ಈ ಪಕ್ಷದ ಶಾಖೆಗಳಿದ್ದವು. ಈ ಪಕ್ಷದ ವಿವಿಧ ಶಾಖೆಗಳಿಂದ ಸದಸ್ಯರನ್ನು ಆರಿಸಿ ಕೇಂದ್ರ ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯು ಆಗಾಗ್ಗೆ ಸಭೆ ನಡೆಸಿ ಭಾರತದಲ್ಲಿದ್ದ ತನ್ನ ಬೆಂಬಲಿಗರಿಗೆ ರಾಜಕೀಯ ಶಿಕ್ಷಣ ನೀಡುವ ಮತ್ತು ಅದಕ್ಕೆ ಬೇಕಾಗುವ ಹಣವನ್ನು ಸಂಗ್ರಹಿಸುವ ತೀರ್ಮಾನಗಳನ್ನು ಕೈಗೊಳ್ಳುತ್ತಿತ್ತು. ಇದೇ ಪಕ್ಷದ ರಾಮಚಂದ್ರ ಅವರು ಅಮೆರಿಕದ ಅಧ್ಯಕ್ಷ ವಿಲ್ಸನ್‌ರವರಿಂದ ಭಾರತದ ಸ್ವಾತಂತ್ರ್ಯಕ್ಕೆ ಬೆಂಬಲ ದೊರಕಿಸಲು ಪ್ರಯತ್ನಪಟ್ಟರು. ಫಿಲಡೆಲ್ಫಿಯದಲ್ಲಿ ಗದ್ದರ್ ಸೊಸೈಟಿಯು ಭಾರತೀಯ ಕ್ರಾಂತಿಕಾರಿಗಳು ನಡೆಸಿದ ಮೆರವಣಿಗೆಯಲ್ಲಿ ಸುಮಾರು 10 ಸಾವಿರ ಅಮೆರಿಕನ್ನರು ಭಾಗವಹಿಸಿ ಭಾರತ ಮತ್ತು ಐರ್ಲೆಂಡ್‌ನಲ್ಲಿ ಬ್ರಿಟಿಷರು ನಡೆಸುತ್ತಿರುವ ದೌರ್ಜನ್ಯವನ್ನು ಖಂಡಿಸಿದರು. ಬ್ರಿಟಿಷರು ಆಳ್ವಿಕೆಯಿಂದ ಸ್ವಾತಂತ್ರ್ಯ ಪಡೆಯಲು ಹೋರಾಡುತ್ತಿರುವ ಭಾರತದ ಪ್ರಯತ್ನಕ್ಕೆ ಅಮೆರಿಕನ್ನರು ಬೆಂಬಲ ಘೋಷಿಸಿದರು.

ಅಮೆರಿಕದಲ್ಲಿದ್ದ ಜರ್ಮನಿ ರಾಯಭಾರಿ ಕಛೇರಿಯವರೊಡನೆ ಎಂ.ಎನ್.ರಾಯ್ ರವರು ಮಾತುಕತೆ ನಡೆಸಿ ಶಸ್ತ್ರಾಸ್ತ್ರಗಳನ್ನು ಭಾರತಕ್ಕೆ ಕಳುಹಿಸುವ ದೀರ್ಘಯೋಜನೆ ಯನ್ನು ಮಾಡಿದರು. 1915 ಜನವರಿಯಲ್ಲಿ ಅನಿಲಾರ್ಸನ್ ಎಂಬ ಹಡಗಿನಲ್ಲಿ ಶಸ್ತ್ರಾಸ್ತ್ರಗಳನ್ನು ತುಂಬಿ ಒಂದು ಗುಪ್ತ ಸ್ಥಳದಲ್ಲಿ ಜರ್ಮನಿಯವರ ಸಹಾಯದಿಂದ ಮಾವೆರಿಕ್ ಎಂಬ ಹಡಗಿನಲ್ಲಿ ಶಸ್ತ್ರಾಸ್ತ್ರಗಳನ್ನು ಭರ್ತಿಮಾಡಿ ಕಳುಹಿಸಲಾಯಿತು. ಆದರೆ ಪೆಸಿಫಿಕ್ ಸಾಗರದಲ್ಲಿರುವ ಹವಾಯಿ ದ್ವೀಪದ ಹತ್ತಿರ ಮಾವೆರಿಕ್ ಹಡಗು ನೀರಿನ ತೊಂದರೆಯಿಂದ ಸಿಕ್ಕಿಕೊಂಡಿತು. ಅಲ್ಲಿಂದ ಬರುವ ಶಸ್ತ್ರಾಸ್ತ್ರಗಳನ್ನು ಇಳಿಸಿ ಕೊಳ್ಳಲು ಭಾರತದ ಒರಿಸ್ಸಾರಾಜ್ಯದ ಪೂರ್ವದಲ್ಲಿರುವ ಬಂಗಾಳ ಕೊಲ್ಲಿಯ ತೀರದಲ್ಲಿ ರುವ ಬಾಲಸೂರಿನ ಬಳಿ ಜತೀನ್ ಮುಖರ್ಜಿಯವರ ನೇತೃತ್ವದಲ್ಲಿ ಸಿದ್ಧವಿದ್ದ ಕ್ರಾಂತಿಕಾರಿಗಳು ಪೋಲಿಸ್ ಪಡೆಯೊಂದಿಗೆ ಹೋರಾಡಿ ಮಡಿದರು. ಹೀಗೆ ಕ್ರಾಂತಿಕಾರಿಗಳ ಯೋಜನೆ ಬಿದ್ದು ಹೋಯಿತು.

ಗದ್ದರ್ ಪಕ್ಷದ ಕ್ರಾಂತಿಕಾರಿಗಳು ವಿದೇಶಗಳಲ್ಲಿ ನಡೆಸಿದ ಕೊಲೆಗಳಲ್ಲಿ ಪ್ರಮುಖವಾದುದು ಜಲಿಯನ್ ವಾಲಾಬಾಗ್ ಹತ್ಯಾಕಾಂಡಕ್ಕೆ ಕಾರಣನಾದ ಜನರಲ್ ಸರ್ ಮೈಕೆಲ್ ಓಡ್ವೈಯರನನ್ನು ಲಂಡನ್ನಿನ ಕ್ಯಾಕ್ಸ್‌ಟೌನ್ ಹಾಲ್‌ನಲ್ಲಿ 1940ರ ಮಾರ್ಚ್ 13ರಂದು ಉದಾಮ್‌ಸಿಂಗ್ ಕೊಂದ. ಜಲಿಯನ್ ವಾಲಾಬಾಗ್ ಘಟನೆ 1919ರ ಏಪ್ರಿಲ್ 13ರಂದು ನಡೆಯಿತು. ಆ ಸಮಯದಲ್ಲಿ ಉದಾಮ್‌ಸಿಂಗ್ ಬಾಲಕನಾಗಿದ್ದ ಪಂಜಾಬಿಗಳು ಓಡ್ವೈಯರನನ್ನು ದ್ವೇಷಿಸುತ್ತಿದ್ದರು ನಂತರ ದ್ವೇಷ ತೀರಿಸಲು ಲಂಡನ್‌ಗೆ ಹೋಗಿ ಅವನನ್ನು ಉದಾಮ್‌ಸಿಂಗ್ ಕೊಂದ. ಆಗ ಇವನನ್ನು ಬಂಧಿಸಿ ವಿಚಾರಣೆ ನಡೆಸಿ 1940ರ ಜೂನ್ 12 ರಂದು ಗಲ್ಲಿಗೇರಿಸಲಾಯಿತು.

ಪುಣೆಯಲ್ಲಿ ಪ್ಲೇಗ್ ಬಂದಾಗ ಮನೆಗಳನ್ನು ಖಾಲಿ ಮಾಡಿಸಲು ಬ್ರಿಟಿಷ್ ಅಸಭ್ಯತೆಯ ಮಿತಿ ಮೀರಿದ ಕ್ರಮಗಳಿಂದ ಚಾಪೆಕರ್ ಸೋದರರು ಇಬ್ಬರು ಬ್ರಿಟಿಷ್ ಅಧಿಕಾರಿಗಳನ್ನು ಕೊಲ್ಲಲ್ಲು ಅವರಿಗೆ ಮರಣದಂಡನೆ ಆಯಿತು. ಲಂಡನ್‌ನಲ್ಲಿ ಶ್ಯಾಮಜಿಕೃಷ್ಣವರ್ಮ ಕ್ರಾಂತಿಕಾರಿಗಳ ತರಬೇತಿಗಾಗಿ ಇಂಡಿಯನ್ ಹೌಸ್ ಆರಂಭಿಸಿದರು. ಈ ಚಟುವಟಿಕೆಗಳ ಮೇಲೆ ಕಣ್ಣಿಟ್ಟು ವರದಿ ಮಾಡುತ್ತಿದ್ದ ಕರ್ಜನ್ ವೈಲಿ ಎಂಬ ಅಧಿಕಾರಿಯನ್ನು ಮದನಲಾಲ್ ದಿಂಗ್ರಾ ಎಂಬ ಕ್ರಾಂತಿಕಾರಿ ಲಂಡನ್‌ನ ಒಂದು ಸತ್ಕಾರ ಸಮಾರಂಭದಲ್ಲಿ ಗುಂಡು ಹಾರಿಸಿ ಕೊಂದನು. ದಿಂಗ್ರಾನು ಕೋರ್ಟ್‌ನಲ್ಲಿ 'ಭಾರತೀಯ ಯುವಕರನ್ನು ಅಮಾನುಷವಾಗಿ ಗಲ್ಲಿಗೇರಿಸುತ್ತಿರುವುದಕ್ಕೆ ಅಲ್ಪ ಪ್ರತೀಕಾರವಾಗಿ ನಾನು ಬ್ರಿಟಿಷರ ರಕ್ತವನ್ನು ಸುರಿಸಲು ಯತ್ನಿಸಿದೆ ಎಂದು ಒಪ್ಪಿಕೊಳ್ಳುತ್ತೇನೆ. ನಿಶಸ್ತ್ರಜೀವನ ಬಹಿರಂಗ ಯುದ್ಧಕ್ಕಿಳಿಯುವುದು ಅಸಾಧ್ಯವಾದ ಕಾರಣ ಹಠಾತ್ ಧಾಳಿಗೆ ನನ್ನ ಪಿಸ್ತೂಲಿನಿಂದ ಗುಂಡು ಹಾರಿಸಿದೆ' ಎಂದೂ, 'ನನ್ನ ದೇಶಕ್ಕೆ ಮಾಡುವ ಅನ್ಯಾಯ ಭಗವಂತನಿಗೆ ಮಾಡುವ ಅವಮಾನ ಎಂದು ಭಾವಿಸಿದೆ. ಎಂಬಂತಹ ದೇಶಭಕ್ತಿ ನುಡುಗಳನ್ನಾಡಿದನು. ದಿಂಗ್ರಾನ ದೇಶಾಭಕ್ತಿ ಹೇಳಿಕೆಯನ್ನು ಲಾಯ್ಡ್ ಜಾರ್ಜ್ ಮತ್ತು ವಿನ್‌ಸ್ಟನ್ ಚರ್ಚಿಲರು ದಿಂಗ್ರಾನ ಕೊನೆಯ ವಾಕ್ಯಗಳು ಎಂದೆಂದಿಗೂ ದೇಶಾಭಿಮಾನದ ಹೆಸರಿನಲ್ಲಿ ಮಾಡಿರುವ ಅತ್ಯುನ್ನತ ಹೇಳಿಕೆಯೆಂದು ಶ್ಲಾಘಿಸಿದರು. ಐರ್‌ಲೆಂಡ್‌ನ ಪ್ರಜೆಗಳು ದಿಂಗ್ರಾನನ್ನು ದೇಶಕ್ಕಾಗಿ ಪ್ರಾಣತೆತ್ತ ಮಹಾವೀರನೆಂದು ಗೌರವಿಸಿತು (1909).

1922ರಲ್ಲಿ ಕ್ರಾಂತಿಕಾರಿಗಳಾದ ಯುವಕರು ಬ್ರಿಟಿಷ್ ಸರ್ಕಾರವನ್ನು ಬುಡಮೇಲು ಮಾಡಿ ಅದರ ಧೈರ್ಯ, ಸ್ಥೈರ್ಯ ಕುಂದಿಸಬೇಕೆಂದು ಗುಪ್ತವಾಗಿ ಶ್ರಮಿಸಿದರು. ಲಖನೌ ಬಳಿ ಕಾಕೋರಿ ರೈಲು ನಿಲ್ದಾಣದಲ್ಲಿ ಸರ್ಕಾರಿ ತಿಜೋರಿಯನ್ನು ಅಪಹರಿಸಿದರು. ಈ ಪ್ರಕರಣದಲ್ಲಿ 40 ಜನರ ಬಂಧನವಾಗಿ ಮೂವರಿಗೆ 1927ರಲ್ಲಿ ಮರಣದಂಡನೆ ಆಯಿತು.

1928 ಅಕ್ಟೋಬರ್ 20ರಂದು ಎಲ್ಲೆಡೆ ಸೈಮನ್ ಆಯೋಗದ ವಿರುದ್ಧ ಉಗ್ರ ಪ್ರತಿಭಟನೆಯಲ್ಲಿ ಪಾಲುಗೊಂಡ ಲಾಲಾಲಜಪತ್‌ರಾಯ್ ಮೇಲೆ ಉಗ್ರ ಲಾಠಿ ಪ್ರಹಾರವಾಗಿ ಅದರಿಂದ ಅವರು ಗಾಯಗೊಂಡು 1928ರ ನವೆಂಬರ್ 17ರಂದು ನಿಧನವಾದರು. ಈ ಅನಾಹುತಕ್ಕೆ ಸಾಂಡರ್ಸ್ ಎಂಬ ಅಧಿಕಾರಿಯನ್ನು ಕ್ರಾಂತಿಕಾರಿಗಳಾದ ಭಗತ್‌ಸಿಂಗ್ ಮತ್ತು ರಾಜಗುರು ಗುಂಡಿಕ್ಕಿ ಕೊಂದರು. ಹತ್ಯೆಯ ಅನಂತರ ತಲೆ ತಪ್ಪಿಸಿಕೊಂಡಿದ್ದ ಭಗತ್‌ಸಿಂಗ್ ಬ್ರಿಟಿಷ್ ಸರ್ಕಾರದ ದಬ್ಬಾಳಿಕೆಯ ಆಡಳಿತದ ಬಗ್ಗೆ ಪ್ರಪಂಚದ ಕಣ್ತೆರಿಸಬೇಕೆಂಬ ಉದ್ದೇಶದಿಂದ ದೆಹಲಿಯ ಕೇಂದ್ರ ಶಾಸನ ಸಭೆಯಲ್ಲಿ ಬಿಟುಕೇಶ್ವರದತ್ತನೊಂದಿಗೆ ಸೇರಿ ಬಾಂಬನ್ನೆಸೆದು ಬಂಧಿತನಾದ (1929). ವಿವಿಧ ಕ್ರಾಂತಿಕಾರಿ ಚಟುವಟಿಕೆಗಳಿಗೆ ವಿಚಾರಣೆ ನಡೆದು, ಭಗತ್‌ಸಿಂಗ್, ಸುಖದೇವ್, ಮತ್ತು ರಾಜಗುರು ಈ ಮೂರು ಮಂದಿಗೂ ಮರಣದಂಡನೆ ವಿಧಿಸಲಾಯಿತು. 1931 ಮಾರ್ಚ್ 23ರಂದು ಲಾಹೋರ್ ಸೆಂಟ್ರಲ್ ಜೈಲಿನಲ್ಲಿ ಭಗತ್‌ಸಿಂಗ್‌ನನ್ನೂ ಗಲ್ಲಿಗೇರಿಸಲಾಯಿತು. ಚಂದ್ರಶೇಖರ್ ಆಜಾದ್ ಎಂಬ, ಈ ತಂಡದ ಕ್ರಾಂತಿಕಾರಿ 1931ರಲ್ಲಿ ಪೋಲಿಸರೊಡನೆ ಗುಂಡಿನ ಕಾಳಗದಲ್ಲಿ ಹುತಾತ್ಮನಾದ. ಈ ಕ್ರಾಂತಿಕಾರಿಗಳು ಯುವಕರಿಗೆ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲುಗೊಳ್ಳಲು ಅಪಾರ ಸ್ಫೂರ್ತಿ ನೀಡಿದರು. ಇವರೆಲ್ಲಾ ಒಂದಲ್ಲ ಒಂದು ರೀತಿಯಲ್ಲಿ ಗದ್ದರ್ ಪಕ್ಷದ ಸಂಪರ್ಕದಲ್ಲಿದ್ದರು. (ಎಸ್.ಎಲ್.)

**ಗದ್ದಲ ಮತ್ತು ಅದರ ಪರಿಣಾಮಗಳು :** ಅರ್ಥವಿಲ್ಲದ ಶಬ್ದಕ್ಕೆ, ಗಲಾಟೆಗೆ ಗದ್ದಲವೆನ್ನುತ್ತೇವೆ. ಅರ್ಥವತ್ತಾಗಿ ಹಾರ್ಮೋನಿಯಂ ಮೀಟಿ ನುಡಿಸಿದರೆ ಸಂಗೀತವಾಗುತ್ತದೆ. ಪ್ರತಿಯಾಗಿ ಮನಸ್ಸು ಬಂದಂತೆ ನಾಲ್ಕಾರು ಮನೆಗಳನ್ನೊತ್ತಿದರೆ ಗದ್ದಲವಾಗುತ್ತದೆ. ವರ್ಣಮಾಲೆಯಲ್ಲಿನ ಅಕ್ಷರಗಳನ್ನು ಉಚ್ಚರಿಸಿದಾಗ ವ್ಯವಸ್ಥಿತಶಬ್ದ ಉತ್ಪತ್ತಿಯಾಗುತ್ತದೆ. ಪ್ರತಿಯಾಗಿ ಗುಹಾಧ್ವನಿ, ತೇಗು, ಬಿಕ್ಕಳಿಕೆ, ಅರಚಾಟ ಇವು ಗದ್ದಲವೆನಿಸುತ್ತವೆ. ಸಂತೆಯಲ್ಲಿ ಪ್ರತಿಯೊಬ್ಬನೂ ನಿರಾತಂಕವಾಗಿ ತನ್ನ ತನ್ನ ವ್ಯವಹಾರವನ್ನು ಮಾಡುತ್ತಿರುತ್ತಾನಾದರೂ ಒಟ್ಟು ಸಂತೆಯನ್ನು ದೂರದಿಂದ ನೋಡುವವನಿಗೆ ಅಲ್ಲಿ ಬರೀ ಗದ್ದಲ, ಗಲಾಟೆ ನಡೆಯುತ್ತಿರುವಂತೆ ಭಾಸವಾಗುತ್ತದೆ. ಅಷ್ಟೇ ಅಲ್ಲ. ಪಾಠ ಹೇಳುವ ಉಪಾಧ್ಯಾಯನಿಗೆ ವಿದ್ಯಾರ್ಥಿಗಳ ಗುಸಗುಸ ಮಾತು ಗದ್ದಲ. ಹಾಡುವವನಿಗೆ ಪಕ್ಕದಲ್ಲಿ ಕುಳಿತು ಓದುವವನದು ಗದ್ದಲ. ಓದುವ ವಿದ್ಯಾರ್ಥಿಗೆ ಸಂಗೀತವೇ ಗದ್ದಲ. ಇನ್ನೂ ಸೂಕ್ಷ್ಮವಾಗಿ ನೋಡುವುದಾದರೆ ಒಬ್ಬನಿಗೆ ಈಗ ಸಂಗೀತವೆನಿಸಿದ್ದು ಇನ್ನೊಂದು ಕ್ಷಣಕ್ಕೆ ಗದ್ದಲವೆನಿಸುತ್ತದೆ.

ಮೇಲಿನ ಪರಿಶೀಲನೆಯಲ್ಲಿ ಗದ್ದಲದ ಕೆಲವು ಸ್ತರಗಳನ್ನು ಮಾತ್ರ ಬಣ್ಣಿಸಿದೆ. ನಿಜವಾಗಿ ಗದ್ದಲದ ಕ್ಷೇತ್ರ ಇನ್ನೂ ಹೆಚ್ಚು ವ್ಯಾಪಕವಾದುದಾಗಿದೆ. ಎತ್ತಿನ ಗಾಡಿಯ ಗಾಲಿಗಳು ಉರುಳುವಾಗ, ಬಸ್ಸುಗಳು ಕಾರುಗಳು ಬುಯ್ ಎಂದು ಓಡಾಡುವಾಗ, ರೈಲು ಧಾವಿಸುವಾಗ, ವಿಮಾನ ಗಾಳಿಯನ್ನು ಕತ್ತರಿಸಿ ಹಾರುವಾಗ, ಅಕ್ಕಿ ಗಿರಣಿಯೋ ಡೈನಮೊ ಯಂತ್ರವೋ ಕೆಲಸಮಾಡುವಾಗ, ವಿದ್ಯುಚ್ಚಾಲಿತ ಗರಗಸಗಳು ದೊಡ್ಡ ದಿಮ್ಮಿಗಳನ್ನು ಕತ್ತರಿಸುವಾಗ, ಕಾಯಿಸಿದ ಕಬ್ಬಿಣವನ್ನು ಕಮ್ಮಾರ ದೊಡ್ಡ ಸುತ್ತಿಗೆಯಿಂದ ಕುಟ್ಟಿ ಹದಮಾಡುವಾಗ ಅದೆಷ್ಟು ಬಗೆಯ ಗದ್ದಲ ಕೇಳಿಬರುತ್ತದೆ. ಗಿರಣಿಗಳಲ್ಲಿ, ವಿದ್ಯುದುತ್ಪಾದನಾ ಕೇಂದ್ರಗಳಲ್ಲಿ ಹಗಲಿರುಳೂ ಸುತ್ತುವ ಬೃಹದ್ ಚಕ್ರಗಳಿಂದ ನಿರಂತರ ಹೊರಬರುವ ದೈತ್ಯಶಬ್ದ ಗದ್ದಲದ ಪರಮಾವಧಿಯನ್ನು ಸೂಚಿಸುತ್ತದೆ.

ಗದ್ದಲ ದಿನೇ ದಿನೇ ಹೆಚ್ಚುತ್ತಿದೆ ಎಂಬುದಕ್ಕೆ ಸಂಕೀರ್ಣಗೊಳ್ಳುತ್ತಿರುವ ನಾಗರಿಕ ಜೀವನವೇ ಸಾಕ್ಷಿಯಾಗಿದೆ. ಇಂಥ ಗದ್ದಲವನ್ನು ನಿವಾರಿಸುವುದು ಸಾಧ್ಯವೆ? ಅಥವಾ ಗದ್ದಲ ನಾಗರಿಕ ಜೀವನದ ಒಂದು ಅನಿವಾರ್ಯ ಅಂಶವೇ? ಮನುಷ್ಯನ ಮನಸ್ಸು ಮತ್ತು ದೇಹದ ಮೇಲೆ ಗದ್ದಲದ ಪರಿಣಾಮವೇನು? ಅಶುದ್ಧವಾದ ನೀರು ಗಾಳಿಗಳಂತೆ ಕರ್ಕಶ ಗದ್ದಲವೂ ಪರಿಸರವನ್ನು ಕೆಡಿಸುವುದಿಲ್ಲವೆ? ಊರು ಕೇರಿಗಳಲ್ಲಿ ಜೀವನ ನಡೆಸುತ್ತಿರುವವರಿಗೆ ಗದ್ದಲವಿಲ್ಲದ ಶಾಂತ ವಾತಾವರಣವನ್ನು ಕಲ್ಪಿಸಿಕೊಡುವುದು ಹೇಗೆ? ಗದ್ದಲದ ಮಧ್ಯೆಯೇ ಕೆಲಸ ಮಾಡುವ ಕಾರ್ಮಿಕರ ಪಾಡೇನು? ಇಂಥ ಪ್ರಶ್ನೆಗಳು ಮನಃಶಾಸ್ತ್ರಜ್ಞರನ್ನು, ವಿಜ್ಞಾನಿಗಳನ್ನು, ಸಮಾಜ ಸುಧಾರಕರನ್ನು ಬಹುಕಾಲದಿಂದ ಪೀಡಿಸುತ್ತಿವೆ. ಕಾಲಾನುಕಾಲಕ್ಕೆ ಗದ್ದಲವನ್ನು ನಿವಾರಿಸುವ ಕೆಲವು ವಿಧಾನಗಳನ್ನು ಅವರು ಸೂಚಿಸಿಯೂ ಇದ್ದಾರೆ. ಇ. ಜೆ. ಬೋರಿಂಗ್, ಜೆ. ಜೆ. ಮಾರ್ಗನ್, ಲೈರ್, ಎಮ್. ಎಸ್. ವೈಟಲಿಸ್ ಮೊದಲಾದವರ ಅಧ್ಯಯನಗಳಿಂದ ಹೊರಪಟ್ಟ ಕೆಲವು ಅಂಶಗಳನ್ನು ಇಲ್ಲಿ ಗಮನಿಸಬಹುದು.

1. ಅನೈಚ್ಛಿಕ ದೈಹಿಕ ಕ್ರಿಯೆಗಳಿಗೆ ಗದ್ದಲ ಅಡ್ಡಿಯಾಗುತ್ತದೆಂಬುದಕ್ಕೆ ಯಾವ ಪ್ರಾಯೋಗಿಕ ಪ್ರಮಾಣವೂ ದೊರೆತಿಲ್ಲ. ಆದರೂ ಬಹು ತೀವ್ರವೂ ನಿರಂತರವೂ ಆದ ಕರ್ಕಶ ಶಬ್ದಗಳಿಂದ ಅನೈಚ್ಛಿಕ ಕ್ರಿಯೆಗಳ ಮೇಲೂ ದುಷ್ಪರಿಣಾಮಗಳುಂಟಾಗುತ್ತ ವೆಂದು ಭಾವಿಸಬಹುದು.

2. ಗದ್ದಲ ಯಾವ ಪ್ರಮಾಣದ್ದೇ ಇರಲಿ ಅದರಿಂದ ಮಾನಸಿಕ ದೈಹಿಕ ಚಟುವಟಿಕೆಗಳ ಮೇಲೆ ಕೆಟ್ಟ ಪರಿಣಾಮಗಳು ಇದ್ದೇ ಇವೆ. ಗದ್ದಲವಿದ್ದಾಗ ಮನಸ್ಸು ಚಟುವಟಿಕೆಯಿಂದ ಕೆಲಸ ಮಾಡದು. ಏಕಾಗ್ರತೆ ಕೆಡುತ್ತದೆ. ಕೈ ಓಡುವುದಿಲ್ಲ. ಗದ್ದಲದ ಪ್ರತಿಘಾತವನ್ನು ಮೀರಿ ಕೆಲಸಮಾಡಲು ಮನುಷ್ಯ ಹೆಚ್ಚು ಹೆಚ್ಚು ಹೆಣಗಬೇಕಾಗುತ್ತದೆ.

3. ಓದುವ ಮಕ್ಕಳು, ನರಳುವ ರೋಗಿಗಳು ಗದ್ದಲವನ್ನು ಸಹಿಸರು. ಸೂಕ್ಷ್ಮ ತರವಾದ ಚಿಂತನೆಗಳಲ್ಲಿ ನಿರತರಾಗುವವರಿಗಂತೂ ಅಲ್ಪಸ್ವಲ್ಪ ಗದ್ದಲವೂ ಹಿಡಿಸದು. ಗ್ರಂಥಾಲಯ, ಶಾಲೆ, ಆಸ್ಪತ್ರೆ ಮೊದಲಾದೆಡೆ ವಾತಾವರಣ ಶಾಂತಿಯುತವಾಗಿರಬೇಕೆಂದು ಹೇಳುವುದು ಈ ಉದ್ದೇಶದಿಂದಲೇ.

4. ಈಗೊಮ್ಮೆ ಆಗೊಮ್ಮೆ ಉಂಟಾಗುವ ಗದ್ದಲದಿಂದ ಹೆಚ್ಚಿನ ಕೆಡುಕಾಗುತ್ತದೆ. ಏಕೆಂದರೆ ಯಾರೂ ಇಂಥ ಆಕಸ್ಮಿಕಗಳಿಗೆ ದೈಹಿಕವಾಗಿ ಮಾನಸಿಕವಾಗಿ

ಸಿದ್ಧರಾಗಿರುವುದಿಲ್ಲ. ಗದ್ದಲ ನಿರಂತರವಾಗಿದ್ದಲ್ಲಿ ಅಭ್ಯಾಸಬಲದಿಂದ ಮನುಷ್ಯ ಸ್ವಲ್ಪ ಮಟ್ಟಿಗೆ ಅದಕ್ಕೆ ಹೊಂದಿಕೊಂಡು ಬಿಡುತ್ತಾನೆ.

ಸಾಮಾಜಿಕ ಸ್ವಾಸ್ಥ್ಯದ ದೃಷ್ಟಿಯಿಂದ ಊರು ಕೇರಿಗಳ ವಾತಾವರಣ ಗದ್ದಲ ರಹಿತವಾಗಿರುವಂತೆ ನೋಡಿಕೊಳ್ಳಬೇಕಾದದ್ದು ಅಲ್ಲಲ್ಲಿನ ಸರ್ಕಾರಗಳ ಮತ್ತು ಪುರಸಭೆಯವರ ಕರ್ತವ್ಯ. ಬೆಂಗಳೂರು, ಕೋಲ್ಕತ್ತ ಮೊದಲಾದ ದೊಡ್ಡ ನಗರಗಳಲ್ಲಿ ರಾತ್ರಿ ಇಡೀ ಆಗುವ ವಾಹನ ಸಂಚಾರವನ್ನು ಈ ದೃಷ್ಟಿಯಿಂದ ನಿಯಂತ್ರಿಸುವುದು ಅಗತ್ಯ. ಜರ್ಮನಿಯ ಕೆಲವು ಭಾಗಗಳಲ್ಲಿ ಈ ಪ್ರಯೋಗ ನಡೆಸಿದ್ದಾರೆ. ಪ್ರಚಾರಕ್ಕಾಗಿ ಧ್ವನಿವರ್ಧಕಗಳ ಬಳಕೆ, ಸಂಗೀತದ ಹೆಸರಿನಲ್ಲಿ ರೇಡಿಯೋಗಳನ್ನು ಕೂಗಿಸುವುದು– ಇಂಥ ಪದ್ಧತಿಗಳು ರದ್ದಾದರೊಳ್ಳೆಯದು. ಜನವಸತಿಗಳ ಸನಿಹದಲ್ಲೇ ಸಿನಿಮಾ, ನಾಟಕ, ಮಂದಿರಗಳು, ಕಾರ್ಖಾನೆಗಳು, ಮುದ್ರಣಾಲಯಗಳು, ಕಮ್ಮಾರನ ಕುಲುಮೆಗಳು– ಇತ್ಯಾದಿ ಇರಬಾರದು.

ಗಿರಣಿ, ಕಾರ್ಖಾನೆ, ಸರ್ಕಾರಿ ಕಚೇರಿ ಮುಂತಾದೆಡೆಗಳಲ್ಲಿ ಗದ್ದಲ ನಿಯಂತ್ರಣದಿಂದ ಕೆಲವು ಪ್ರಯೋಜನಗಳನ್ನು ಪಡೆಯಲಾಗಿದೆ. ಕಾರ್ಮಿಕರಿಗೆ ತಲಪುವ ಬಹಳ ಗದ್ದಲ ಯಂತ್ರಗಳಿಂದ ನೇರವಾಗಿ ಬಂದದ್ದಲ್ಲ, ಗೋಡೆ ಮತ್ತು ಒಳ ಮಳಿಗೆಯಿಂದ ಪ್ರತಿಧ್ವನಿತವಾದದ್ದು. ಆದಕಾರಣ ಗೋಡೆಗಳನ್ನು ಸಣ್ಣರಂಧ್ರಗಳಿರುವ ವಸ್ತುವಿನಿಂದ ಮುಚ್ಚಿದರೆ, ಶಬ್ದ ಈ ಸಣ್ಣ ಪುಟ್ಟ ರಂಧ್ರಗಳ ಹೊಕ್ಕು ಹೊರಗೆ ಬರಲಾರದು. ಈ ವಿಧಾನದಿಂದ ಅನೇಕ ಕಾರ್ಖಾನೆಗಳಲ್ಲಿ ಗದ್ದಲವನ್ನು ನಿಯಂತ್ರಿಸಲಾಗಿದೆ. ಈ ವಿಧಾನದಿಂದ ಒಂದು ಟೆಲಿಗ್ರಾಫ್ ಕಚೇರಿಯಲ್ಲಿಯ ದೋಷಗಳು ಶೇ.42 ಕಡಿಮೆಯಾದುವು. ಲೆಕ್ಕಪತ್ರದ ಇಲಾಖೆಯಲ್ಲಿ ಶೇ.24 ದೋಷಗಳು ಕಡಿಮೆಯಾದವು. ಒಂದು ಉಣ್ಣೆ ಗಿರಣಿಯ ನೇಯುವ ಇಲಾಖೆಯಲ್ಲಿ ಶೇಕಡ ಶೇ.3 ಉತ್ಪಾದನೆ ಹೆಚ್ಚಿತು. ಬೆರಳಚ್ಚು ವಿಭಾಗವೊಂದರಲ್ಲಿ ವೇಗ ಶೇ.10 ರಷ್ಟು ಹೆಚ್ಚಿತ್ತಲ್ಲದೆ ದೋಷಗಳು ಶೇ.30 ಕಡಿಮೆಯಾದುವು. (ಎಚ್.ಎಚ್.)

**ಗದ್ದಿಗೆ ಮರುಳಸಿದ್ಧ :** ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕುಪ್ಪೂರು ಗದ್ದಿಗೆಯಲ್ಲಿ ಸಮಾಧಿಸ್ಥನಾಗಿರುವ ಮಹಾತ್ಮ ಮರುಳ ಸಿದ್ಧನನ್ನು ಈ ಹೆಸರಿನಿಂದ ಕರೆಯುತ್ತಾರೆ. ಈತ ಸು. 350 ವರ್ಷಗಳಷ್ಟು ಪ್ರಾಚೀನನೆಂದು ತಿಳಿದು ಬಂದಿದೆ. ಈತ ಈ ಭಾಗದಲ್ಲಿ ಪ್ರಸಿದ್ಧನಾಗಿ ಅನೇಕ ಪವಾಡಗಳನ್ನು ಮೆರೆದನೆಂದು ಹೇಳಲಾಗಿದೆ. ಈತನನ್ನು ಕುರಿತು ಹಲವಾರು ಕೃತಿಗಳನ್ನು ರಚಿಸಿ ಆ ಭಾಗದಲ್ಲಿ ಈಗಲೂ ಹಾಡುತ್ತಾರೆ. ವೀರಶೈವ ಮತ ಚರಿತ್ರೆಯಲ್ಲಿ ಪ್ರಸಿದ್ಧರಾದ ಆಚಾರ್ಯ ಮರುಳುಸಿದ್ಧ, ಹೂಲಿಯ ಮರುಳುಸಿದ್ಧ, ಉಜ್ಜಯನಿಯ ಮರುಳಸಿದ್ಧ ಇವರುಗಳಿಂದ ಈತ ಭಿನ್ನನೆಂದು ಇತಿಹಾಸಜ್ಞರ ಅಭಿಪ್ರಾಯ. (ಬಿ.ಎಸ್.)

**ಗದ್ಯ :** ಗದ್ಯದ ಸ್ವರೂಪವನ್ನು ಇಲ್ಲಿ ಪ್ರಸ್ತಾಪಿಸಿದೆ. ಗದ್ಯ ಸಾಹಿತ್ಯದ ಉಗಮ, ವ್ಯಾಪ್ತಿಗಳನ್ನು ತಿಳಿಯಲು **(ನೋಡಿ– ಗದ್ಯಸಾಹಿತ್ಯ).**

ಪಾಶ್ಚಾತ್ಯ ವಿದ್ವಾಂಸವರ್ಗಕ್ಕೆ ಅನೇಕ ಶತಮಾನಗಳಿಂದ ಪದ್ಯವೆಂದರೇನು ಗದ್ಯವೆಂದರೇನು ಎಂಬುದು ಜಟಿಲ ಸಮಸ್ಯೆಯಾಗಿದೆ. ಅದನ್ನು ಬಿಡಿಸುವುದು ಹೋಗಲಿ, ಅದರ ವಿಚಾರವಾಗಿ ಅಷ್ಟಿಷ್ಟು ತೃಪ್ತಿಕರವಾಗಿ ಬರೆಯುವುದು ಕೂಡ ಅಸಾಧ್ಯವೆಂದು ತೋರಿಬಂದು, ಹಲವರು ಹತಾಶರಾಗಿದ್ದಾರೆ. ಗೊಂದಲಕ್ಕೆ ಮುಖ್ಯ ಕಾರಣ ನಾಲ್ಕು ರೂಪಕ್ಕೆ ಮೂರೇ ನಾಮ ಇರುವ ನಿಜಾಂಶ. ಅದನ್ನು 19ನೆಯ ಶತಮಾನದಲ್ಲೇ ಒಬ್ಬ ಲಾಕ್ಷಣಿಕ ಎತ್ತಿ ತೋರಿಸಿದ. ಈಚಿನ ಕೆಲವರಿಂದಲೂ ಅದಕ್ಕೆ ಅವಧಾರಣೆ ಸಿಕ್ಕಿತು. ಆದರೂ ಆ ವಿಷಯವನ್ನು ಶಾಸ್ತ್ರೀಯವಾಗಿ ವಿಚಾರಿಸಿ, ಖಚಿತಾರ್ಥದ ಪಾರಿಭಾಷಿಕ ಪದಗಳನ್ನು ತಯಾರಿಸಿ, ಅವನ್ನು ಚೆಚ್ಚರದಿಂದ ಉಪಯೋಗಿಸುತ್ತ ಹೋಗಿ, ಅಸ್ಪಷ್ಟ ಚರ್ಚೆಯ ಕೆಟ್ಟ ಪ್ರಭಾವವನ್ನು ಕಡಿಮೆ ಮಾಡುವ ಸಾರಸ್ವತ ವ್ಯಾಪಾರಕ್ಕೆ ಪ್ರಬಲರಾದವರೂ ಮನಗೊಟ್ಟಿಲ್ಲ. ಪೊಎಟ್ರಿ ಎಂಬ ಶಬ್ದದ ಜೊತೆಯಲ್ಲಿ ವರ್ಸ್ ಎಂಬುದು ನಡೆದಾಡುತ್ತದೆ; ಪ್ರೋಸ್ ಎಂಬ ಶಬ್ದವಾದರೊ ಒಂಟಿ. ಅದು ಪೊಎಟ್ರಿಯ ಎದುರಿಗೂ ನಿಲ್ಲಬೇಕು, ವರ್ಸ್ ಎದುರಿಗೂ ನಿಲ್ಲಬೇಕು. ಅಲ್ಲದೆ, ಪೊಎಟ್ರಿಯೇ ಕಾವ್ಯ. ಪ್ರೋಸ್ ಅಲ್ಲ ಎಂಬ ಅಭಿಪ್ರಾಯವೂ ಮನಸ್ಸನ್ನು ಪ್ರವೇಶಿಸಿ ಭ್ರಾಂತಿಯನ್ನು ಹೆಚ್ಚಿಸುತ್ತಿದೆ. ಪ್ರೋಸ್ ನೆಲದ ಮೇಲೆ ಹೆಜ್ಜೆಯಿಕ್ಕುತ್ತ ಹೋಗುವ ಭಾಷೆ; ಪೊಎಟ್ರಿ ಆದರೊ ರಥಾರೂಢವಾಗಿ ದಿಬ್ಬಣ ತೆರಳುವ ಅಥವಾ ಲಂಘಿಸಿ ಬಾನಿಗೇರುವ ಭಾಷೆ ಎಂಬ ತಾತ್ಪರ್ಯದ ವಾಕ್ಯಗಳು ಹೇರಳವಾಗಿವೆ.

ಭಾರತೀಯರಲ್ಲಿ ಮೂರು ರೂಪ, ಮೂರು ನಾಮಗಳು ಇದ್ದದ್ದರಿಂದ ಈ ವಿಷಯ ಎಂದೊ ನಿಷ್ಕರ್ಷಿತವಾಗಿ ವಾದವಿವಾದಕ್ಕೆ ಆಸ್ಪದ ಬಲುಮಟ್ಟಿಗೆ ಇಲ್ಲದಂತಾಯಿತು. ಶಬ್ದಾಕ್ಷರಗಳ ಜೋಡಣೆಯ ಎರಡು ಪ್ರಮುಖ ವಿಧಾನಗಳಿಗೆ ಪದ್ಯ, ಗದ್ಯವೆಂಬುವು ಪಾರಿಭಾಷಿಕ ಅಂಕಿತ. ಛಂದೋಬದ್ಧವಾದ ನುಡಿಗಟ್ಟು ಪದ್ಯ, ಅಲ್ಲದ್ದು ಗದ್ಯ. ಕವಿಯ ಕರ್ಮವಾದ ಕಾವ್ಯ ಪದ್ಯವನ್ನೂ ಬಳಸಿಕೊಳ್ಳುತ್ತದೆ, ಗದ್ಯವನ್ನೂ ಬಳಸಿಕೊಳ್ಳುತ್ತದೆ. ಒಂದೇ ಕಾವ್ಯದಲ್ಲಿ ಎರಡನ್ನೂ ಕಾಣುವುದು ಸಾಧ್ಯ. ಕೇವಲ ಅರ್ಥ ಪ್ರಮುಖವಾದ ವಚನವಿನ್ಯಾಸದಿಂದ ಕೂಡಿದ ಶಾಸ್ತ್ರ, ನಿಘಂಟು ಇತ್ಯಾದಿ ಪ್ರಬಂಧಗಳು ನಿಜವಾಗಿ ಗದ್ಯಗ್ರಂಥಗಳಾದರೂ ಅವನ್ನು ಪದ್ಯರೂಪದಲ್ಲಿ ಬರೆಯುವುದಕ್ಕೆ ಆಕ್ಷೇಪವಿಲ್ಲ. ಎಂದರೆ, ಆ ಪದ್ಯದಿಂದ ವಿಷಯಕ್ಕೆ ಉತ್ಕರ್ಷವಿಲ್ಲ; ವಿಷಯವನ್ನು ನೆನಪಿನಲ್ಲಿ ಇಟ್ಟುಕೊಳ್ಳುದಕ್ಕೆ ಹೆಚ್ಚು ಸೌಕರ್ಯ, ಅಷ್ಟೆ.

ಇಷ್ಟು ಶುಚಿಯಾಗಿ ಇಷ್ಟು ಸುಲಭವಾಗಿ ಇಷ್ಟು ಸರಳವಾಗಿ ವಿಷಯವನ್ನು ನಿಶ್ಚಯಿಸಿಬಿಟ್ಟರೆ, ಎಲ್ಲವನ್ನೂ ಸಂಕೀರ್ಣಗೊಳಿಸುವ ಚಿತ್ತದವರಿಗೂ ಜಿಜ್ಞಾಸೆ ಬಹುಮುಖವಾಗಬೇಕೆಂದು ಹಾತೊರೆಯುವವರಿಗೂ ಪಾಶ್ಚಾತ್ಯ ಕುಶಾಗ್ರಮತಿಗಳಿಗೂ ಸಮಾಧಾನ ಉಂಟಾದೀತೆ? ಪ್ರಶ್ನೆಯ ಮೇಲೆ ಪ್ರಶ್ನೆಯನ್ನು ಅವರು ಕೇಳುತ್ತಲೇ ಇದ್ದಾರೆ. ಉತ್ತರವನ್ನು ಹಿಂಬಾಲಿಸಿಕೊಂಡು ಉತ್ತರ ಬಂದಿದ್ದರೂ ಎಲ್ಲವೂ ಅವರಿಗೆ ಆಯುಕ್ತವಾಗಿ ತೋರಿವೆ. ಯಾವುದು ಕಾವ್ಯ? ಪದ್ಯದಲ್ಲಿ ಬರೆದದ್ದೆಲ್ಲ ಕಾವ್ಯವೆ? ಗದ್ಯದಲ್ಲಿ ಬರೆದದ್ದೂ ಕಾವ್ಯವಾಗಬಹುದೆ? ಗದ್ಯವೂ ಲಯಾತ್ಮಕವಲ್ಲವೆ? ಪದ್ಯಕ್ಕಿರುವಂತೆ ಅಲ್ಲದಿದ್ದರೂ ಅದರದ್ದೇ ಆದ ಛಂದಸ್ಸು ಗದ್ಯಕ್ಕೇಕಿರಬಾರದು? ಪದ್ಯ ಸಾಧಿಸುವ ಸಾಹಸವೇನು? ಗದ್ಯ ನೆರವೇರಿಸುವ ಕಾರ್ಯ ಯಾವುದು? ಕ್ರೈಸ್ತ ಪವಿತ್ರ ಗ್ರಂಥ, ಪ್ಲೇಟೊವಿನ ಸಂವಾದಗಳು ಗದ್ಯದಲ್ಲಿದ್ದರೂ ಎಷ್ಟೋ ಪದ್ಯಕಾವ್ಯಗಳಿಗಿಂತ ಮೇಲ್ಮಟ್ಟದವಲ್ಲವೆ? ಹಾಗಾದರೆ ಪದ್ಯದಲ್ಲಿ ಏನು ಹೆಚ್ಚುಗಾರಿಕೆ ಉಳಿತಿದೆ?

ಗದ್ಯ ಸಾಧಾರಣ, ಕಾವ್ಯ ಅಸಾಧಾರಣವೆಂದು ನಿರ್ಧಾರ ಹೇಳಿ, ಎರಡನ್ನೂ ವಿಂಗಡಿಸಿ ಇಡಬಹುದೆಂದು ಅನೇಕರು ಭಾವಿಸಿದರು. ಇಲ್ಲಿ ಪದ್ಯ ಹಿಂದಕ್ಕೆ ಸರಿದಿರುವ ಸಂಗತಿಯನ್ನು ಲಕ್ಷ್ಯಕ್ಕೆ ತಂದುಕೊಳ್ಳಬೇಕು. ಕಾವ್ಯಕ್ಕೆ ಕಾವ್ಯತ್ವವನ್ನು ತಂದುಕೊಡುವ ಮೂಲಾಂಶ ಅಸಾಧಾರಣತೆ ಎಂದಂತಾಯಿತು. ಇರಲಿ. ಆ ಮೂಲಾಂಶ ಗಮನೀಯವಾದ ಪ್ರಮಾಣದಲ್ಲಿ ಗದ್ಯದಲ್ಲೂ ಕಂಡುಬಂದರೆ ಅದೂ ಕಾವ್ಯವೇ ಆಗುತ್ತದೆ ಅಲ್ಲವೆ?. ತರ್ಕಸಮ್ಮತವಾದ ಈ ಅನುಮೇಯವನ್ನು ಸಕಲರೂ ಸ್ವೀಕರಿಸಬೇಕಾಯಿತು. ಅಲ್ಲೊಬ್ಬ ಇಲ್ಲೊಬ್ಬ ವಿಮರ್ಶಕನಿಗೆ ಅದರಲ್ಲಿ ಏನೊ ಆಭಾಸ. ಮಬ್ಬುಮಬ್ಬಾಗಿ ಕಾಣುತ್ತಿದೆಯೆಂದು ಭಾಸವಾದರೂ ತಲೆಮಾರು ತಲೆಮಾರಿನ ಚರ್ಚೆಯ ಪರಿಣಾಮವಾಗಿ ಕುದುರಿನಿಂತ ಅಭಿಪ್ರಾಯಗಳು ಮೂರು: ಪದ್ಯ (ವರ್ಸ್) ಕಾವ್ಯಕ್ಕೆ ಒಂದು ಭೂಷಣವಾದರೂ ಕಾವ್ಯದ ಮೂಲಕಾರಣವಲ್ಲ; ಕೆಲವು ಗದ್ಯವನ್ನು ಕಾವ್ಯವೆನ್ನದೇ ಗತ್ಯಂತರವಿಲ್ಲ; ಕಾವ್ಯದ ಕಾವ್ಯತ್ವವನ್ನು ಬೇರೆ ಅಂಶದಲ್ಲಿ ಗುರುತಿಸತಕ್ಕದ್ದು. ಅಂತೂ, ಕಾವ್ಯ ಹೇಗೋ ಅಸಾಧಾರಣವೆಂಬುದು ಉಳಿದೇ ಉಳಿಯಿತು; ಹಲವರಲ್ಲಿ ಅದು ಶೋಧನೆಗೆ ನಿಲುಕದ ರಹಸ್ಯವೆಂಬ ಮೂಢನಂಬಿಕೆ ಬೇರೂರಿತು.

ಅಪೂರ್ವವಾದ ಸಾಲಂಕೃತ ವಾಗ್ಯೋರಣೆಯಿಂದ ಕಾವ್ಯ ಹುಟ್ಟುತ್ತದೆ; ಮಹೋನ್ನತ ಶೈಲಿಯೇ (ದಿ ಗ್ರ್ಯಾಂಡ್ ಸ್ಟೈಲ್) ಕಾವ್ಯದ ಪ್ರಧಾನ ಲಕ್ಷಣವೆಂಬ ತತ್ತ್ವ ಪ್ರಾಚೀನ ರೋಮನರ ಕಾಲದಿಂದ ಮಧ್ಯಯುಗ ಪೂರ್ತ ಮಾನ್ಯತೆ ಪಡೆದಿತ್ತು. ಈಗಲೂ ಆ ಭಾವನೆಯ ಪ್ರಭಾವ ಅಳಿಸಿ ಹೋಗಿಲ್ಲ. ಆದರೂ ಶೈಲಿಯನ್ನು ಕಾವ್ಯದ ಆತ್ಮಕ್ಕೆ ಸಂಕೇತವಾಗಿ ಭಾವಿಸುವುದು ಸಕ್ರಮವಲ್ಲವೆಂದು ದೃಢಬುದ್ಧಿಯವರಿಗೆ ಅರಿವಾಯಿತು. ಪದದೊಡನೆ ಪದವನ್ನು ಕೂಡಿಸುವ ಬಾಹ್ಯ ವ್ಯಾಪಾರಕ್ಕೆ ಎಷ್ಟೇ ಗಾಢವಾದ ವ್ಯಂಜಕತೆ ಇದ್ದರೂ ಅದು ಹೆಚ್ಚು ಕಡಿಮೆ ಕಾವ್ಯದ ಶರೀರಕ್ಕೆ ಸಂಬಂಧಿಸಿದುದು, ಕಾವ್ಯದ ಆಂತರ್ಯವನ್ನೂ ತಿರುಳನ್ನೂ ನಿರ್ದೇಶಿಸುವ ಮಹತ್ಕಾರ್ಯ ಅದರಿಂದ ಆಗಲಾರದು. ಸ್ಥೂಲವಾಗಿ ಕಾವ್ಯ ಶೈಲಿ, ಶಾಸ್ತ್ರಶೈಲಿಗಳನ್ನು ಪ್ರತ್ಯೇಕಿಸಬಹುದು. ಮೂಲತಃ ಅವುಗಳ ಉದ್ದೇಶ, ವಿಧಾನ, ಪರಿಣಾಮಗಳು ಬೇರೆ ಬೇರೆ. ಶೈಲಿಯ ಮೂಲಕ ಗದ್ಯಕಾವ್ಯ ಪದ್ಯ ಕಾವ್ಯಗಳನ್ನು ಸ್ವಲ್ಪಮಟ್ಟಿಗೆ ವಿಂಗಡಿಸಬಹುದಾದರೂ ಕಾವ್ಯಕ್ಕೆ ಶೈಲಿಯೂ ಒಂದು ಸಾಧನವಾಯಿತೇ ಹೊರತು ಕಾವ್ಯತ್ವಕ್ಕೆ ಅದು ಇನ್ನೊಂದು ಹೆಸರಾಗಲಿಲ್ಲ.

ಪದ್ಯ, ಗದ್ಯ, ಕಾವ್ಯ ಎಂಬ ಶಬ್ದಗಳನ್ನು ಹೆಚ್ಚು ಸಂದೇಹಕ್ಕೆ ಅವಕಾಶವೀಯದೇ ಉಪಯೋಗಿಸುತ್ತಿದ್ದ ಸಮಯದಲ್ಲಿ, ಕಾವ್ಯಕ್ಕೆ ಮೀಸಲಾದ ಸಹಜ ಪದ ಕೋಶವಿದೆಯಾಗಿ ಆ ಪದಕೋಶ ಸಂಭಾಷಣೆಯಲ್ಲಿ ಮತ್ತು ಗದ್ಯದಲ್ಲಿ ಬರಕೂಡದು–ಎಂಬ ಅಭಿಮತವಿತ್ತು. ಅಲ್ಪಸ್ವಲ್ಪ ಸತ್ಯಾಂಶದ ಮೇಲೆ ನಿಂತ ಅಭಿಮತ ಅದು. ಕಾವ್ಯವೇ ಆದರೂ ಗದ್ಯ ಹಲಕೆಲವು ಪದಗಳ ಗೋಜಿಗೆ ಹೋಗುವುದಿಲ್ಲ; ಅವು ಪದ್ಯಕ್ಕೆ ಅನುರೂಪವಾಗಿ ಕಂಡುಬರುತ್ತವೆ; ಗದ್ಯ ಅವನ್ನು ಉಪಯೋಗಿಸಿದರೆ ಕಿವಿಗೆ ಅಹಿತವಾಗುತ್ತದೆ; ಕಿವಿಗೆ ಮಧುರವಾಗಿ ಕೇಳಿಸಿದರೂ ಅವುಗಳಿಂದ ಏನೊ ರಸಭಂಗ ಆದಂತೆ ತೋರುವುದು ನಿಶ್ಚಯ. ಹೀಗಿದ್ದರೂ ಕೇವಲ ಪದಗಳನ್ನು ಗದ್ಯ ಪದ್ಯಕ್ಕೆ ಒರೆಗಲ್ಲಾಗಿ ಸನ್ಮಾನಿಸುವುದು ಸಮರ್ಪಕವಲ್ಲ. ರೊಮ್ಯಾಂಟಿಕ್ ಚಳವಳಿ ನಡೆದಮೇಲೆ, ಮಾತುಗಳನ್ನು ಧಾರಾಳವಾಗಿ

ಬಳಸಿಕೊಳ್ಳುವ ಸ್ವಾತಂತ್ರ್ಯ ಸಾಹಿತಿಗೆ ಅತ್ಯಗತ್ಯವೆಂಬುದನ್ನೂ ವಿದ್ವಾಂಸರಾದವರು ಅಲಕ್ಷಿಸಿಲ್ಲ. ನವ್ಯಕವಿಗಳಂತೂ ಗ್ರಾಮ್ಯ, ಒರಟು, ಅಶ್ಲೀಲ, ಅನ್ಯದೇಶೀಯ, ಯಂತ್ರತಂತ್ರದ ಪರಿಭಾಷೆ ಎಲ್ಲವನ್ನೂ ನಿರ್ವಂಚನೆಯಿಂದ ಆಡಿಬಿಟ್ಟಿದ್ದಾರೆ.

ಎಂದರೆ, ಪದ್ಯಕ್ಕೂ ಗದ್ಯಕ್ಕೂ ಅಂತರವೇ ಇಲ್ಲವೆ? ಒಂದರಲ್ಲಿ ಇರುವ ಕಾವ್ಯವನ್ನು ಇನ್ನೊಂದಕ್ಕೆ ಬದಲಾಯಿಸಿದರೆ ಎರಡೂ ಒಂದೇ ತೆರದ ರಸಾಸ್ವಾದವನ್ನು ಒದಗಿಸ ಬೇಕಲ್ಲವೆ? ಕವಿ ತನ್ನ ಇಷ್ಟಬಂದಂತೆ ಅದನ್ನೊ ಇದನ್ನೊ ಕೈಹಿಡಿಯಬಹುದಲ್ಲವೆ? ಇದನ್ನು ಯಾರೂ ಒಪ್ಪಲಾರರು. ಹಾಗಾದರೆ ಎಲ್ಲಿದೆ ವ್ಯತ್ಯಾಸ? ಗದ್ಯಕ್ಕಿಂತ ಪದ್ಯ ಹೆಚ್ಚು ಸಂಕ್ಷಿಪ್ತ, ಹೆಚ್ಚು ಬಲಿಷ್ಠ, ಹೆಚ್ಚು ಧ್ವನಿಯುಕ್ತ, ಹೆಚ್ಚು ಸುಂದರ–ಎಂದಿದ್ದಾರೆ. ರಾಗಾವೇಶವೂ ವಿಭಾವನೆಯ ತೀಕ್ಷ್ಣತೆಯೂ ಒಂದು ಮಟ್ಟವನ್ನು ಮೀರಿದರೆ ಆಗ ಭಾವಾರ್ಥ ನಿರೂಪಣೆಗೆ ಪದ್ಯವೇ ಉಚಿತವೆಂದೂ ನುಡಿದಿದ್ದಾರೆ. ಹೀಗೆ ಸೂತ್ರ ಹೇಳುವ ಅಲಂಕಾರಶಾಸ್ತ್ರಜ್ಞರೂ ಎರಡರ ನಡುವೆ ಇರುವುದು ಭೇದಿಸಲಾಗದ ಕಲ್ಲುಗೋಡೆಯಲ್ಲ, ಆಚೆ ಈಚೆ ಎತ್ತಿ ಇಡಬಲ್ಲ ಬಿದಿರು ಬೇಲಿ–ಎಂಬುದಕ್ಕೆ ಸಮ್ಮತಿ ಸೂಚಿಸಿದ್ದಾರೆ.

ಛಂದಸ್ಸು, ಶೈಲಿ, ಶಬ್ದಪುಂಜ–ಮೊದಲಾದುವನ್ನು ಕೈಬಿಟ್ಟಮೇಲೆ, ಕಾವ್ಯಕ್ಕೆ ಕಾವ್ಯತ್ವವನ್ನು ಅನುಗೂಡಿಸುವ ಅಂಶ ಯಾವುದು? ಇದನ್ನು ಕುರಿತ ಮೀಮಾಂಸೆ 19ನೆಯ ಶತಮಾನದ ಎರಡನೆಯ ಅರ್ಧದಲ್ಲಿ ಬೆಳೆಯುತ್ತ ಬಂತು. 20ನೆಯ ಶತಮಾನದಲ್ಲಿ ಅದು ಇನ್ನೂ ಹೆಚ್ಚಾಗಿ, ಮನಶಾಸ್ತ್ರದ ವಿಕಾಸದಿಂದ ಪುಷ್ಟಿಗೊಂಡು, ಗಹನವಾಯಿತು.

ಕವಿ ಮಾಡುವುದು ವಿಶಿಷ್ಟವಾದೊಂದು ಕರ್ಮ; ಅದು ಒಂದು ಬಗೆಯ ಅನುಕರಣೆ ಎಂಬ ಸಿದ್ಧಾಂತ ಪ್ರಾಚೀನ ಗ್ರೀಕರ ಕಾಲದಿಂದ ನಡೆದು ಬಂದು, ಮೆಚ್ಚಿಕೆಗೆ ಪಾತ್ರವಾಗಿತ್ತು. ಅದಕ್ಕೆ ಟಿಪ್ಪಣಿಯಾಗಿ, ಕಾವ್ಯ ನಮಗೆ ಕೊಡುವುದು ವಾಸ್ತವಿಕತೆಯನ್ನಲ್ಲ, ಅದರ ಹೋಲುವೆಯನ್ನು; ಆದ್ದರಿಂದ ಕಲ್ಪಿತಕಥೆಯೇ (ಫಿಕ್ಷನ್) ಕಾವ್ಯದ ಸಾರಸರ್ವಸ್ವ ಎಂಬ ಅನುಸಿದ್ಧಾಂತವೂ ನಡೆದುಬಂತು. ಕವಿಯ ತನ್ನತನದ ಸೃಷ್ಟಿಕಾರ್ಯವನ್ನು ಅನುಕರಣೆಯೆನ್ನುವುದೂ ನಿಜಕ್ಕಿಂತ ನಿಜವೆಂಬುದು ಪ್ರಭಾವ ಬೀರುವ ಕಾವ್ಯ ವಸ್ತುವನ್ನು ಮಿಥ್ಯಾ ಕಲ್ಪನೆಯೆನ್ನುವುದೂ ಸತ್ಯಕ್ಕೆ ದೂರವೆಂದು ನಿಸ್ಸಂದೇಹ. ಕವಿ ಎಸಗುವುದು ಅನುಕರಣವಲ್ಲ, ಪ್ರತಿಚಿತ್ರಣ ಎಂದು ನಿಶ್ಚಯಿಸಿದ್ದ ಕಾಲವಿತ್ತು. ಮಾನವನಿಗೆ ಆದರ್ಶವಾಗಬಲ್ಲ ವ್ಯಕ್ತಿಗಳನ್ನೂ ಧ್ಯೇಯಗಳನ್ನೂ ಪ್ರತಿಬಿಂಬಿಸಿ ಕಾವ್ಯ ಲೋಕೋಪಕಾರ ಮಾಡುತ್ತದೆ ಎಂಬ ನಂಬಿಕೆಯಿತ್ತು. ಕುರೂಪ ಕೀಳ್ತನ ಕೊಳಕುಗಳೂ ಕಾವ್ಯದಲ್ಲಿ ಪ್ರತಿಪಾದಿತವಾಗತೊಡಗಿದ ತರುವಾಯ, ಪ್ರತಿಚಿತ್ರಣವೆಂಬ ವಿವರಣೆಗೆ ಧಕ್ಕೆ ಉಂಟಾಯಿತು.

ಭಾವ, ಭಾವನೆಗಳನ್ನು ಕಾವ್ಯ ಹೊರಗೆಡಹುತ್ತದೆ ಎಂಬುದು ಸರ್ವರಿಗೂ ವೇದ್ಯವಾದ ಸಂಗತಿ. ಅದನ್ನು ಮನನಗೈದು ವಾಕ್ಯವನ್ನು ಹಿಂದುಮುಂದಾಗಿ ತಿರುಗಿಸಿ, ಕ್ರೋಚೆ ಭಾವಪ್ರದರ್ಶನ ಅಥವಾ ಅಭಿವ್ಯಕ್ತಿಯೇ ಕಾವ್ಯ ಎಂದು ಘೋಷಿಸಿದ. ಎಂದರೆ ಅಭಿವ್ಯಂಜಕತೆ ಸಾಕಷ್ಟು ತೀಕ್ಷ್ಣವಾಗಿರಬೇಕು. ಆದರೆ ಆ ತತ್ತ್ವವನ್ನು ವಿವರಿಸುವಾಗ ಆತನೂ ಆತನ ವ್ಯಾಖ್ಯಾನಕಾರರೂ ಪ್ರಕಾಶನವೆಂಬ ವ್ಯವಹಾರಕ್ಕಿಂತಲೂ ಪ್ರಕಾಶಿತ ಪದಾರ್ಥದ ಮೇಲೆ ತಮ್ಮ ಲಕ್ಷ್ಯವನ್ನು ಹೆಚ್ಚು ಹೆಚ್ಚಾಗಿ ಇಡುತ್ತ ಹೋದರು **(ನೋಡಿ– ಕ್ರೋಚೆ, ಬೆನೆಡೆಟೋ)**.

ಐ.ಎ.ರಿಚರ್ಡ್ಸ್ ಮೊದಲಾದವರು ಅಭಿವ್ಯಕ್ತಿಯನ್ನು ಮುಂದಣ ಸ್ಥಾನಕ್ಕೆ ತಂದು ಕೂರಿಸಿದ್ದಾರೆ. ಗಂಭೀರವೂ ಸಂಪೂರ್ಣವೂ ಅನ್ಯೋನ್ಯವೂ ಆದ ಅಭಿವ್ಯಕ್ತಿಯಿಂದ ಉತ್ಪತ್ತಿಯಾಗುತ್ತದೆ, ಕಾವ್ಯ. ಗದ್ಯವೂ ಅಭಿವ್ಯಕ್ತಿಶಕ್ತಿಯುಳ್ಳದ್ದೇ. ಆದರೆ ಅದರ ಅಭಿವ್ಯಕ್ತಿ ದಪ್ಪದಪ್ಪ, ವಿವರ ರಹಿತ, ಅಸ್ಪಷ್ಟ, ಒರಟೊರಟು. ಕಾವ್ಯಕ್ಕಾದರೂ ಅದರ ಬಿಗಿ ಬಿಕ್ಕಟ್ಟು ಕಡುಪು ದ್ಯೋತಕಗಳಿಂದ ನಿಕಟ ಪರಿಚಯವನ್ನು ಏರ್ಪಡಿಸುವ ಶಕ್ತಿಯುಂಟು. ಇಲ್ಲಿಯೂ ವ್ಯಾಖ್ಯಾನಕಾರರು ಅಭಿವ್ಯಕ್ತಿ ಕ್ರಮಕ್ಕಿಂತಲೂ ತಿಳಿಸುವ ವಿಷಯದ ಕಡೆಗೆ ಚಿತ್ತವನ್ನು ಒತ್ತರಿಸಿ, ಅಪ್ರಸಂಗಕ್ಕೆ ಎಡೆಯಿತ್ತಿದ್ದಾರೆ.

ಕೆಲವು ನವೀನರು ಇನ್ನೊಂದು ಮತವನ್ನು ಸಾರಿದ್ದಾರೆ. ಅದರಂತೆ ಒಂದೊಂದು ವಾಕ್ಯವೂ ಒಂದೊಂದು ಸಲಕ್ಷಣ ಸೃಷ್ಟಿ; ಅದರದ್ದೇ ಆದ ಅಸ್ತಿತ್ವವನ್ನು ಬಗೆದು ತೃಪ್ತರಾಗಬೇಕೇ ವಿನಾ ಮತ್ತಾವುದನ್ನೂ ಅದರಿಂದ ನಿರೀಕ್ಷಿಸಲಾಗದು. ಅದರ ಸಾಮೀಪ್ಯದಿಂದ ನಮಗೆ ಒಂದು ಅನೂನ ಅನುಭವ ಲಭ್ಯವಾಗುತ್ತದೆ. ಅಷ್ಟು ಸಾಲದೆ, ಸಾಹಿತ್ಯ ವ್ಯಾಸಂಗಕ್ಕೆ? ಹೀಗೆ, ಗದ್ಯ ಪದ್ಯಗಳನ್ನು ವಿಂಗಡಿಸಲು ಹೊರಟ ಎಷ್ಟೊ ಲೇಖನಗಳು ಕ್ಷಿಪ್ರದಲ್ಲಿ ಕಾವ್ಯ ಶಾಸ್ತ್ರಗಳ ವ್ಯತ್ಯಾಸವನ್ನು ಕುರಿತ ನಿಬಂಧಗಳಾಗಿ ಬಿಡುತ್ತವೆ. ಆ ವ್ಯತ್ಯಾಸ ಸುವ್ಯಕ್ತವಾಗಿದೆ: ಒಂದು ರಾಗಪ್ರಧಾನವಾದದ್ದು, ಇನ್ನೊಂದು ಬುದ್ಧಿಪ್ರಧಾನವಾದದ್ದು; ಒಂದರಲ್ಲಿ ವಿಭಾವನೆಯ ಲೀಲೆಯಿದೆ, ಇನ್ನೊಂದರಲ್ಲಿ ತರ್ಕದ ನಡೆದಾಟವಿದೆ; ಒಂದರಿಂದ ನಮಗೆ ಪರಿತೋಷ, ಇನ್ನೊಂದರಿಂದ ಜ್ಞಾನಾರ್ಜನೆ. ಗದ್ಯವೆಂಬ ಒಂದೇ ಪದವನ್ನು ಉಪಯೋಗಿಸಿದರೂ ಶಾಸ್ತ್ರದ ಗದ್ಯ ಬೇರೆ, ಸಾಹಿತ್ಯದ ಗದ್ಯ ಬೇರೆ.

**ಗದ್ಯಲಯ** : ಗದ್ಯವೂ ಲಯಾತ್ಮಕವೆಂಬ ನಂಬಿಕೆ ಆದಿಯಿಂದಲೂ ಇದೆ. ಪ್ರಾಚೀನ ಗ್ರೀಕ್, ತತ್ತ್ವಬೋಧಕ ಥ್ರಾಸಿಮಕಸ್ ತನ್ನ ಭಾಷಣಗಳಲ್ಲಿ ಲಯದಿಂದ ರಂಜಕವಾದ ಪದಗುಚ್ಛಗಳನ್ನು ಉದ್ದೇಶಪೂರ್ವಕವಾಗಿ ತಂದು ಸೇರಿಸುತ್ತಿದ್ದ. ವಿಮರ್ಶಕ ಶಿರೋಮಣಿ ಅರಿಸ್ಟಾಟಲಿನಿಂದ ಈ ವಿಧಿ ಬಳಕೆಗೆ ಬಂತು: 'ಗದ್ಯ ಲಯಬದ್ಧವಾಗಿರಬೇಕು. ಛಂದೋಬದ್ಧವಾಗಕೂಡದು.' ವಾಗ್ಮಿಯ ಭಾಷಣವನ್ನು ಆಲಿಸುವಾಗ ಗ್ರೀಕ್ ಶ್ರೋತೃಗಳಿಗೆ ಅಂಗೈ ಕುಟ್ಟುತ್ತ ತಾಳಹಾಕುವ ಅಭ್ಯಾಸವಿತ್ತು. ಸಿಸರೊ ಮಾತನಾಡುತ್ತಿದ್ದಾಗ ರೋಮನರೂ ಹಾಗೆಯೇ ಮಾಡುತ್ತಿದ್ದರಂತೆ.

ಗದ್ಯ ಲಯರಹಿತವಲ್ಲವೆಂದು ಒಪ್ಪಿಕೊಂಡದ್ದಷ್ಟೆ ಅಲ್ಲದೆ ಪ್ರಾಚೀನರು ಅದರ ಲಯಕ್ಕೆ ಪ್ರಸ್ತಾರ ನಿಷ್ಕರ್ಷಿಸುವ ಕಾರ್ಯವನ್ನೂ ನೆರವೇರಿಸಿದರು. ಮೊದಲನೆಯದಾಗಿ, ಪದ್ಯ ಛಂದಸ್ಸಿಗೆ ಅನುರೂಪವಾದ ಗಣಗಳು ಗದ್ಯಕ್ಕೆ ಹೊಂದದಿದ್ದುದನ್ನು ಕಂಡುಕೊಂಡರು, ಎರಡನೆಯದಾಗಿ ಒಂದು ಗುರು ಮೂರು ಲಘುವಿನಿಂದಾದ ಪಿಯನ್ ( – UUU ಅಥವಾ UUU –) ಅಕ್ಷರ ನಮೂನೆ ಗದ್ಯಕ್ಕೆ ಅಚ್ಚುಮೆಚ್ಚು ಎಂಬುದನ್ನು ಅರಿತುಕೊಂಡರು. 1ನೆಯ ಪಿಯನ್ (–UUU) ವಾಕ್ಯದ ಪ್ರಾರಂಭದಲ್ಲಿ ಬಂದರೆ ಚೆಲುವು; 4ನೆಯ ಪಿಯನ್‌ಗೆ (UUU –) ವಾಕ್ಯದ ಅಂತ್ಯ ಯುಕ್ತಸ್ಥಾನ– ಎಂದು ಅರಿಸ್ಟಾಟಲ್ ತೀರ್ಪು ಹೇಳಿದ. ವಾಕ್ಯದ ನಡುನಡುವೆ ಬರುವ ಲಯಸೂಚಕವಾದ ಪದಗುಚ್ಛಗಳ ಕಡೆಗೆ ಗ್ರೀಕರ ಗಮನ ಅಷ್ಟೊಂದಾಗಿ ಹೋಗಲಿಲ್ಲ. ಅದು ಆಶ್ಚರ್ಯ. ಏತಕ್ಕೆಂದರೆ ಲಯ ಎದ್ದು ಕಿವಿತಾಕಬೇಕಾದರೆ ಎರಡು ಅಂಶಗಳು ಅವಶ್ಯಕ: ಹಿತವಾದ ಪದಗುಚ್ಛದ ನಮೂನೆ (ಎ ಪ್ಯಾಟರ್ನ್ ಆಫ್ ಸಿಲಬಲ್ಸ್) ಮತ್ತು ಅದರ ಪುನರುಕ್ತಿ. ಪುನರುಕ್ತಿ ಕ್ಲುಪ್ತ ಅಂತರಗಳಲ್ಲಿ ನಿಯಮಿತವಾಗಿ ಬಂದರೆ ವಚನ ವಿನ್ಯಾಸ ಛಂದಸ್ಸಾಗುತ್ತದೆ; ಗದ್ಯದಲ್ಲಿ ಪುನರುಕ್ತಿ ಬರಬೇಕು, ಆದರೆ ವ್ಯತ್ಯಸ್ತ ಅಂತರಗಳಲ್ಲಿ.

ರೋಮನರೂ ತಮ್ಮ ಲ್ಯಾಟಿನ್ ಗದ್ಯವಾಕ್ಯಗಳನ್ನು ಪರಿಶೀಲಿಸುವಾಗ ಅಂತ್ಯದ ನಮೂನೆಗಳನ್ನು ಮಾತ್ರ ಆಸಕ್ತಿಯಿಂದ ವಿಮರ್ಶಿಸಿದರು. ಅವರಿಗೆ ಪ್ರಿಯವಾಗಿ ತೋರಿಬಂದ ನಮೂನೆ – ಎರಡು ಗುರು ಒಂದು ಲಘುವಿನ ಕ್ರೇಟಿಕ್ (–U–) ಗಣವನ್ನು ಅನುಸರಿಸಿ ಒಂದು ಗುರು ಒಂದು ಲಘುವಿನ (–U) ಟ್ರೋಕಿ ಅಥವಾ ಒಂದು ಗುರು ಎರಡು ಲಘುವಿನ ಡ್ಯಾಕ್ಟಿಲ್ (–UU) ಬರುವ ವಿನ್ಯಾಸ. ಆ ನಮೂನೆಯನ್ನು ಕ್ಲಾಸ್ಯುಲ ಅಥವಾ ಕುರ್ಸಸ್ ಎಂದು ಅವರು ಕರೆದರು. ಲ್ಯಾಟಿನ್ ಭಾಷೆಯಲ್ಲಿ ಕೆಲವು ಉಚ್ಚಾರಾಂಶಗಳ ಮೇಲೆ ಕೂರುವ ಒತ್ತಿಗೂ ಸ್ವಲ್ಪ ಸ್ಥಾನವಿತ್ತು. ಕುರ್ಸಸ್ ಯಾವ ಬಗೆಯದೇ ಆದರೂ ಅದರ ಕಡೆಯ ಉಚ್ಚಾರಾಂಶದ ಮೇಲೆ ಒತ್ತನ್ನು ಇಟ್ಟರೆ ಲಯದ ನಾದಗತಿ ಕೆಡುತ್ತದೆಂದು ಅವರ ಭಾವನೆ. ಅದರ ಹಿಂದಣ ಅಂಶದ ಮೇಲೆಯೇ ಒತ್ತು ಕಡ್ಡಾಯವಾಗಿ ಇರಬೇಕೆಂದು ನಿಗದಿಮಾಡಿದರು. ಏತಕ್ಕೆಂದರೆ, ಕುರ್ಸಸಿನ ಶ್ರವ್ಯತೆಗೆ ಅದರಲ್ಲಿರುವ ಎರಡು ಒತ್ತುಗಳ ಧ್ರುವತೆಯೇ (ಪೋಲ್ಯಾರಿಟಿ) ಮುಖ್ಯಕಾರಣವೆಂದು ಅವರ ನಿಶ್ಚಯ.

ಯುರೋಪಿನ ಇತರ ದೇಶಗಳಾದ ಜರ್ಮನಿ, ರಷ್ಯ, ಸ್ಪೇನ್, ಆಧುನಿಕ ಇಟಲಿ ಮುಂತಾದ ಕಡೆಗಳಲ್ಲಿ ಗದ್ಯಲಯದ ವ್ಯಾಸಂಗ ಸಾಕಾದಷ್ಟು ಆಗಿಲ್ಲ. ಫ್ರಾನ್ಸಿನಲ್ಲಿ ಗದ್ಯಕ್ಕೂ ಪದ್ಯಕ್ಕೂ ಏಕಪ್ರಮಾಣದ ಪ್ರಾಧಾನ್ಯ ಇರುವುದರಿಂದ, ಅಲ್ಲಿನ ಪಂಡಿತರು ಗದ್ಯವನ್ನು ನಾನಾಮುಖಗಳಿಂದ ಪರೀಕ್ಷಿಸಿದ್ದಾರೆ. ವಾಕ್ಯವಿನ್ಯಾಸವನ್ನು ಗೀಟುಗಳ ಮೂಲಕ ನಕ್ಷೆ ಮಾಡಿರುವವರೂ ಉಂಟು. ಇಂಗ್ಲಿಷ್ ಗದ್ಯದ ಲಯ ಪರೀಕ್ಷೆ ಸ್ವಲ್ಪಮಟ್ಟಿಗೆ ಜರುಗಿದೆ. ಆದರೆ ಪಂಡಿತರ ದೃಷ್ಟಿ ಭಿನ್ನ ಭಿನ್ನವಾಗಿದೆ. ಒಬ್ಬರ ಅಭಿಮತವನ್ನು ಇನ್ನೊಬ್ಬರು ಒಪ್ಪುವುದು ಅಪರೂಪ. ಛಂದಸ್ಸಿನ ವಿಚಾರದಲ್ಲೇ ನಾಲ್ಕೈದು ಬೇರೆ ಬೇರೆ ಸಿದ್ಧಾಂತಗಳು ತೀವ್ರವಾಗಿ ಹೋರಾಡುತ್ತಿರುವಾಗ ಹೆಚ್ಚು ಸರಾಗವಾದ ಗದ್ಯಲಯವನ್ನು ಕುರಿತು ಒಮ್ಮತವಿರುವುದು ಸಾಧ್ಯವೆ? ಹಾಗೆ ನಿರೀಕ್ಷಿಸಬಹುದೆ, ನಾವು? ಅದೊಂದು ಕೌತುಕ. ಗದ್ಯಲಯದ ವಿಷಯವಾಗಿ ಪಂಡಿತರಲ್ಲಿ ಕಾಣಬರುವ ಹೊಂದಾಣಿಕೆ ಛಂದಸ್ಸಿನ ವಿಷಯವಾಗಿ ಇಲ್ಲ. ಕೆಲವು ಸಂಗತಿಗಳನ್ನು ಸರಿಸುಮಾರಾಗಿ ಎಲ್ಲರೂ ಒಪ್ಪಿಕೊಂಡಿದ್ದಾರೆ. ಅವನ್ನು ಹೀಗೆ ಪಟ್ಟಿಮಾಡಬಹುದು.

1. ಗದ್ಯಲಯವನ್ನು ವಿವೇಚಿಸುವಾಗ ಇಡೀ ಪದವನ್ನು ಒಂದು ಅಂಶವಾಗಿ ತೆಗೆದುಕೊಳ್ಳತಕ್ಕದ್ದು; ಪದ್ಯದಲ್ಲಿ ನಡೆಯಬಹುದಾದಂತೆ ಪದಚ್ಛೇದ ನಡೆಯಕೂಡದು.

2. ಒಂದೇ ಉಚ್ಚಾರಾಂಶದ ಗಣ ಇಂಗ್ಲಿಷಿನಲ್ಲಿ ಹೇರಳವಾಗಿ ಬರುತ್ತದೆ. ಇಂಗ್ಲಿಷ್ ಭಾಷೆ ಸಣ್ಣ ಸಣ್ಣ ಪದಗಳಿಂದ ನಿಬಿಡವಾಗಿದೆ. ಪದ್ಯದ ಛಂದಸ್ಸಿಗೆ ಅದು ನಿಷಿದ್ಧ.

3. ಭಾವಾರ್ಥದ ಅಥವಾ ತರ್ಕದ ವಿನ್ಯಾಸವೂ ಲಯದ ವಿನ್ಯಾಸವೂ ಗದ್ಯದಲ್ಲಿ ಜೊತೆಯಾಗಿ ಓಡುತ್ತವೆ. ಪದ್ಯದಲ್ಲಿ ಅವು ಜೊತೆಗೂಡಬಾರದು.

4. ಪದ್ಯದಲ್ಲಿ ಬಾರದಿರುವ ಎರಡೊ ಮೂರೊ ಒತ್ತುಗಳಿಂದ ಕೂಡಿದ ಐದು ಉಚ್ಚಾರಾಂಶಗಳ ಗಣ ಡಾಕ್ಮಿಯಕ್ ಗದ್ಯದಲ್ಲಿ ಬರುತ್ತದೆ. ಪದ್ಯದಲ್ಲಿ ಅತಿ ವಿರಳವಾದ ನಾಲ್ಕಂಶಗಳ ಪಿಯನ್ ಅನ್ನು ಗದ್ಯಕ್ಕೆ ಅಧಿಷ್ಠಾನವೆನ್ನಬಹುದು.

5. ಗದ್ಯ ವೃತ್ತಗಂಧಿಯಾಗಬಹುದೆ? ಅನೇಕರು ಗದ್ಯಲಯಕ್ಕೆ ಮೀಸಲಾದ ನಾದವಿನ್ಯಾಸಗಳು ಇರುವಾಗ ಅದೇತಕ್ಕೆ ಅಲ್ಲಿಇಲ್ಲಿಯಾದರೂ ಛಂದೋಬದ್ಧವಾಗುವುದಕ್ಕೆ ಪರಿತಪಿಸಬೇಕು–ಎಂದಿದ್ದಾರೆ. ಅಪೂರ್ವವಾಗಿ ಛಂದಸ್ಸಿನ ತುಣುಕು ಬಂದರೆ ಗದ್ಯದ ರುಚಿ ಹೆಚ್ಚುತ್ತದೆಂದು ಕೆಲವರ ನಂಬಿಕೆ. ಲೇಖಕನ ಚಿತ್ತಕ್ಕೆ ಗೋಚರವಾಗದಂತೆ ಎಷ್ಟೋ ಕಡೆ ಛಂದೋಬದ್ಧವೆನ್ನಬಹುದಾದ ಪದುಗುಚ್ಛಗಳು ಹೇಗೊ ಬಂದು ಸೇರಿಬಿಡುತ್ತವೆ. ಆದ್ದರಿಂದ ಅವುಗಳನ್ನು ಪರಿತ್ಯಜಿಸುವುದಕ್ಕೆ ಗದ್ಯಲೇಖಕ ಯಾವಾಗಲೂ ಎಚ್ಚೆತ್ತಿರಬೇಕು.

6. ಲ್ಯಾಟಿನ್ನಿನ ಕುರ್ಸಸ್ಸನ್ನು ಫ್ರೆಂಚ್ ಇಂಗ್ಲಿಷ್ ಗದ್ಯಗಳಲ್ಲೂ ನೋಡಬಹುದು.

7. ಅಲ್ಲದೆ ಕುರ್ಸಸ್ಸಿಗೆ ಸದೃಶವಾದ ದೇಶೀಯ ನಾದಗತಿ (ನೇಟಿವ್ ಕ್ಯಾಡೆನ್ಸ್)ಗಳನ್ನು ಗುರುತಿಸಬಹುದು. ಇಂಗ್ಲಿಷಿನ ಅಂಥ ವಿನ್ಯಾಸಗಳ ಕಡೆಯ ಉಚ್ಚಾರಾಂಶದ ಮೇಲೆ ಒತ್ತು ಇರಬಹುದು.

ಒಟ್ಟಿನಲ್ಲಿ ಗದ್ಯಲಯಕ್ಕೆ ಛಂದಸ್ಸಿಗಿಂತ ಹೆಚ್ಚು ವೈವಿಧ್ಯವಿದೆ. (ಎಸ್.ವಿ.ಆರ್.)

**ಗದ್ಯಸಾಹಿತ್ಯ :** ಗದ್ಯಕಾವ್ಯ ಮತ್ತು ಪದ್ಯಕಾವ್ಯಗಳ ನಡುವಣ ವ್ಯತ್ಯಾಸಗಳು ಬಹು ಸೂಕ್ಷ್ಮ ರೀತಿಯವಾದುದರಿಂದ ಅವನ್ನು ಸ್ಪಷ್ಟವಾಗಿ ಹೇಳುವುದು ಕಷ್ಟ. ಗದ್ಯಕ್ಕೂ ತನ್ನದೇ ಆದ ಲಯವುಂಟು; ಆದರೆ ಅದು ಕಾವ್ಯದ ಲಯದಂತೆ ಪುನರಾವೃತ್ತಿಯನ್ನು ಆಧರಿಸಿದುದಲ್ಲ, ಅಲ್ಲದೆ ಅದನ್ನು ಇಲ್ಲಿ ನಿರೀಕ್ಷಿಸಬಹುದಾದುದೂ ಅಲ್ಲ. ಎರಡನೆಯದಾಗಿ, ಕಾವ್ಯದಲ್ಲಿ ಛಂದಸ್ಸಿಗೂ ಭಾಷೆಗೆ ಸಹಜವಾದ ಲಯಕ್ಕೂ ಎಳೆತವಿರುತ್ತದೆ. ಮೂರನೆಯದಾಗಿ, ಕಾವ್ಯದಲ್ಲಿ ಅರ್ಥಕ್ಕೂ ಛಂದಸ್ಸಿಗೂ ತುಯ್ತವುಂಟು. ಇದೂ ಕವನದ ಸಂಪೂರ್ಣ ಅರ್ಥದ ಸೃಷ್ಟಿಯಲ್ಲಿ ಪಾಲುಗೊಳ್ಳುತ್ತದೆ. ನಾಲ್ಕನೆಯದಾಗಿ, ಭಾಷೆಯ ವ್ಯಾಕರಣದ ನಿಯಮಗಳ ಪಾಲನೆಯಲ್ಲಿ ಕಾವ್ಯ ಹೆಚ್ಚಿನ ಸ್ವಾತಂತ್ರ್ಯ ಪಡೆಯುತ್ತದೆ. ಆದರೆ, ಐದನೆಯದಾಗಿ, ಛಂದಸ್ಸಿನ ಬೇಡಿಕೆಯಿಂದ ಪದಗಳ ಆಯ್ಕೆಯಲ್ಲಿ ಅದರ ಸ್ವಾತಂತ್ರ್ಯ ಮಿತಗೊಳ್ಳುತ್ತದೆ. ಆರನೆಯದಾಗಿ, ಗದ್ಯಕ್ಕಿಂತ ಕಾವ್ಯ ಸೂಚ್ಯಾರ್ಥವನ್ನು ಹೆಚ್ಚಾಗಿ ಬಳಸಿಕೊಳ್ಳುತ್ತದೆ. ಏಳನೆಯದಾಗಿ, ಕಾವ್ಯದಲ್ಲಿ ಭಾಷೆಯ ಹಲವು ಅಂಶಗಳಾದ ನಾದ, ಲಯ, ವಾಕ್ಯಬಂಧ, ಪದಗಳ ಸ್ಪಷ್ಟ ಮತ್ತು ಸೂಚ್ಯ ಅರ್ಥ–ಇಂಥವು ಮತ್ತು ವಿಶೇಷ ಸಾಧನಗಳಾದ ಅಲಂಕಾರಗಳು, ಉಪಮಾನಗಳು, ಪ್ರತಿಮೆಗಳು–ಇಂಥವು ಜಟಿಲವಾದ ರೀತಿಯಲ್ಲಿ ಹೆಣೆದುಕೊಂಡು ಅರ್ಥವನ್ನು ನಿರ್ಮಿಸುತ್ತವೆ (**ನೋಡಿ–ಗದ್ಯ**).

ಯಾವ ದೇಶದಲ್ಲಿಯಾದರೂ ಸಾಹಿತ್ಯವೆನ್ನಿಸಿಕೊಳ್ಳಬಹುದಾದ ಗದ್ಯಸೃಷ್ಟಿ ಕಾಣಿಸಿಕೊಳ್ಳುವುದು ಒಳ್ಳೆಯ ಕಾವ್ಯದ ರಚನೆಯಾದ ಎಷ್ಟೊ ಕಾಲದ ಅನಂತರ. ಕಾವ್ಯಕ್ಕಿಂತ ಗದ್ಯ ಸಾಮಾಜಿಕ ಸ್ಥಿತಿಗತಿಗಳನ್ನು ಹೆಚ್ಚಾಗಿ ಅವಲಂಬಿಸುತ್ತದೆ. ಜನರ ಆಸಕ್ತಿಗಳು ಬೆಳೆದಂತೆ, ಜ್ಞಾನ ವಿಸ್ತಾರವಾದಂತೆ ಗದ್ಯದ ಹರವೂ ಶಬ್ದಸಂಪತ್ತೂ ಬೆಳೆಯುತ್ತವೆ; ವಾಕ್ಯಬಂಧ ಮತ್ತು ಪರಿಣಾಮದ ಸಾಧನೆಗಳು ಬದಲಾಗುತ್ತವೆ. ಸಮಾಜದಲ್ಲಿ ಒಂದು ಹಳೆಯ ವರ್ಗದ ಇಳಿಮುಖ, ಹೊಸ ವರ್ಗದ ಪ್ರಾಬಲ್ಯ, ಶಿಕ್ಷಣದ ಬೆಳವಣಿಗೆ, ಅಚ್ಚುಕೂಟಗಳ ಪ್ರಾರಂಭ ಮತ್ತು ಅಚ್ಚಿನ ತಂತ್ರದ ಪ್ರಗತಿ, ರಾಜಕೀಯ ಪಕ್ಷಗಳ ಸಂಖ್ಯೆ ಮತ್ತು ಸ್ಪರ್ಧೆ, ಜನ ತಮ್ಮ ವಿರಾಮವನ್ನು ಕಳೆಯುವ ರೀತಿ, ಸಾಮಾಜಿಕ ಜೀವನದಲ್ಲಿ ಹೆಂಗಸರ ಪಾತ್ರ–ಇಂಥ ಅಂಶಗಳೆಲ್ಲ ಗದ್ಯ ಸಾಹಿತ್ಯವಾಹಿನಿಯ ದಿಕ್ಕನ್ನು ಪ್ರಭಾವಿಸಬಹುದು. ಇಂಗ್ಲೆಂಡಿನಲ್ಲಿ ಹದಿನೇಳನೆಯ ಶತಮಾನದಲ್ಲಿ ಕಾಫಿ ಹೌಸುಗಳ ಬೆಳವಣಿಗೆ (**ನೋಡಿ– ಕ್ಲಬ್ಬುಗಳು**) ಗದ್ಯ ಸಾಹಿತ್ಯದ ಸೃಷ್ಟಿಗೆ ನೆರವಾಯಿತು ಎಂಬುದನ್ನಿಲ್ಲಿ ನೆನೆಯಬಹುದು. ವಿಜ್ಞಾನದ ಪ್ರಗತಿ ಮತ್ತು ಉಚ್ಚ ವೈಜ್ಞಾನಿಕ ಅಧ್ಯಯನದ ಸಾಧನೆಯನ್ನು ಜನಸಾಮಾನ್ಯಕ್ಕೆ ತಂದುಕೊಡುವ ಅವಶ್ಯಕತೆಗಳು ಸಹ ಗದ್ಯಸಾಹಿತ್ಯದ ಮೇಲೂ ಪ್ರಭಾವ ಬೀರುತ್ತವೆ. ಆರ್ಥರ್ ಸ್ಟ್ಯಾನ್ಲಿ ಎಡಿಂಗ್‌ಟನ್ (1882–1944), ಜೇಮ್ಸ್ ಜೀನ್ಸ್ (1877–1946), ಜೂಲಿಯನ್ ಹಕ್ಸ್ಲಿ (1887) ಮೊದಲಾದ ವಿಜ್ಞಾನಿಗಳೂ ಸೊಗಸಾದ ಗದ್ಯಕೃತಿಗಳನ್ನು ಬರೆದಿದ್ದಾರೆ.

ಪ್ರಾಚೀನ ಗ್ರೀಸಿನಲ್ಲಿ ಗದ್ಯ ಮೊದಲು ಬಳಕೆಯಾದದ್ದು ಶಾಸನಗಳಿಗಾಗಿ; ಆಮೇಲೆ ಪ್ರ.ಶ.ಪೂ. ಆರನೆಯ ಶತಮಾನದಲ್ಲಿ ಜ್ಞಾನ ಸಾಹಿತ್ಯಕ್ಕಾಗಿ ಬಳಕೆಯಾಯಿತು. ಇದರಲ್ಲಿ ಕೆಲವೇ ವಾಕ್ಯಗಳು ಉಳಿದು ಬಂದಿವೆ. ಪ್ರ.ಶ.ಪೂ. ಸು. 500ರಲ್ಲಿದ್ದ ಹಿರಾಕ್ಲಿಟಸನ ಬರೆಹದಲ್ಲಿ ಚಾಟೂಕ್ತಿಗಳ ಸೊಗಸನ್ನು ಕಾಣಬಹುದು. ಪ್ರಾರಂಭದ ಗದ್ಯ ಬರೆಹಗಾರರ ಗುರಿ ಸ್ಫುಟತ್ವ. ಪರ್ಷಿಯದ ಸಂಪರ್ಕವಾದಂತೆಲ್ಲ ಗ್ರೀಕರಿಗೆ ಹೊರದೇಶಗಳ ವಿಷಯದಲ್ಲಿ ಆಸಕ್ತಿ ಬೆಳೆಯಿತು. ಮೊದಲನೆಯ ಚರಿತ್ರಕಾರನಾದ ಹಿರಾಡೊಟಸನ (ಪ್ರ.ಶ.ಪೂ. ಸು. 484–425) ತಿಳಿಯಾದ ಶೈಲಿಯಲ್ಲಿ ವೈಜ್ಞಾನಿಕ ನಿರೂಪಣಾ ವಿಧಾನವನ್ನು ಕಾಣಬಹುದು. ಆದರೆ ಇವನಲ್ಲಿನ ವೃತ್ತಾಂತದ ರೀತಿ, ಮಹಾಪುರುಷರ ಚಿತ್ರಣ, ಭಾಷಣಗಳು, ಚರ್ಚೆಗಳ ಬಳಕೆ, ಕವನಗಳ ವರ್ಣನೆ–ಇವು ಮಹಾಕಾವ್ಯಗಳ ಪ್ರಭಾವಕ್ಕೆ ಸಾಕ್ಷಿಯಾಗಿವೆ. ಇವನ ಖ್ಯಾತ ಶಿಷ್ಯ ಥೂಸಿಡಿಡೀಸ್ (ಪ್ರ.ಶ.ಪೂ. 471–401). ಗುರುವಿನ ಶೈಲಿಯ ಸರಳತೆ, ಲಾಸ್ಯ ಇವನ ಬರೆಹದಲ್ಲಿಲ್ಲವಾದರೂ ವಿಜ್ಞಾನಿಯ ಮನೋಧರ್ಮ, ಕಲಾವಿದನ ರೂಪ ಪ್ರಜ್ಞೆ ಎರಡೂ ಉಂಟು. ಪ್ರಸಿದ್ಧ ತತ್ತ್ವಜ್ಞಾನಿ ಪ್ಲೇಟೊ ಹುಟ್ಟು ಕವಿ. ತನ್ನ ಗುರು ಸಾಕ್ರಟೀಸನನ್ನು ಕುರಿತ ಇವನ ಬರೆಹಗಳಲ್ಲಿ ನಾಟಕದ ಸ್ವಾರಸ್ಯವಿದೆ, ಕಾದಂಬರಿಕಾರನ ಪಾತ್ರಸೃಷ್ಟಿ ಇದೆ. ಗ್ರೀಸಿನಲ್ಲಿ ಗದ್ಯದ ಬೆಳವಣಿಗೆಗೆ ವಾಗ್ಮಿಗಳ ಕೊಡುಗೆ ವಿಶೇಷವಾದದ್ದು. ಆ ದೇಶದಲ್ಲಿ ಸಾರ್ವಜನಿಕ ಜೀವನದಲ್ಲಿ ಭಾಗವಹಿಸ ಬಯಸುವವರು ಭಾಷಣ ಕಲೆಯನ್ನು ಅಭ್ಯಾಸ ಮಾಡಬೇಕಾಗಿತ್ತು. ಥಿಮಿಸ್ಟಾಕ್ಲೀಸ್, ಪೆರಿಕ್ಲೀಸ್ ಮೊದಲಾದವರ ಭಾಷಣಗಳು ಮೂಲದಲ್ಲಿ ಉಳಿದುಬಂದಿಲ್ಲ. ಭಾಷಣ ಕಲೆಯನ್ನು ಹೇಳಿಕೊಟ್ಟ ಗುರುಗಳಲ್ಲಿ ಬಹು ಪ್ರಸಿದ್ಧನಾದವ ಐಸಾಕ್ರಟೀಸ್ (ಪ್ರ.ಶ.ಪೂ. 436–338). ಭಾಷಣಕಾರರಲ್ಲಿ ಅಗ್ರಗಣ್ಯ ಎನಿಸಿಕೊಂಡವ ಡಿಮಾಸ್ಥನೀಸ್ (ಪ್ರ.ಶ.ಪೂ. 384–322). ಶ್ರೋತೃಗಳ ಭಾವಗಳನ್ನು ಉದ್ದೀಪಿಸುವ ಅಸಾಧಾರಣ ವಾಗ್ಮಿತೆ ಇವನದು. ಒಟ್ಟಿನಲ್ಲಿ ಗ್ರೀಸಿನ ಪ್ರಸಿದ್ಧ ಭಾಷಣಕಾರರೆಲ್ಲ ಚೆನ್ನಾಗಿ ಓದಿಕೊಂಡವರು. ಮನುಷ್ಯ ಸ್ವಭಾವವನ್ನು ಅರ್ಥಮಾಡಿಕೊಂಡವರು. ಬೌದ್ಧಿಕ ಶಕ್ತಿ ಇವರಲ್ಲಿ ಎದ್ದು ಕಾಣುತ್ತದೆ.

ರೋಮನ್ ಸಾಹಿತ್ಯದಲ್ಲಿ ಪ್ರಾಯಶಃ ಅಪಿಯಸ್ ಸೀಕಸ್ ಕ್ಲಾಡಿಯಸನ (ಪ್ರ.ಶ.ಪೂ. ಸು. 300) ಭಾಷಣಗಳಲ್ಲಿ ಮೊಟ್ಟಮೊದಲು ಗದ್ಯ ಕಾಣಸಿಗುತ್ತದೆ. ಲ್ಯಾಟಿನ್ ಸಾಹಿತ್ಯದ ಸುವರ್ಣಯುಗದಲ್ಲಿಯೇ (ಪ್ರ.ಶ.ಪೂ. 80–42) ಶ್ರೇಷ್ಠ ಗದ್ಯ ಸಾಹಿತ್ಯವೂ ಸೃಷ್ಟಿಯಾಯಿತು. ಪ್ರಸಿದ್ಧ ಯೋಧ ಹಾಗೂ ಆಡಳಿತಗಾರ ಜೂಲಿಯಸ್ ಸೀಸರನ 'ಕಾಮೆಂಟರಿ'ಗಳಲ್ಲಿ ಭಾಷೆಯ ಪರಿಶುದ್ಧತೆ ಮತ್ತು ಸ್ಫುಟತ್ವ ಅಸಾಧಾರಣವಾದುವು. ಪ್ರಸಿದ್ಧ ವಾಗ್ಮಿ ಸಿಸಿರೊ (ಪ್ರ.ಶ.ಪೂ. 106–43) ಅಮೂರ್ತವೂ ಜಟಿಲವೂ ಆದ ಭಾವನೆಗಳನ್ನು ಸ್ಪಷ್ಟವಾಗಿ ನಿರೂಪಿಸುವ ಲ್ಯಾಟಿನ್ ಶೈಲಿಯನ್ನು ಬೆಳೆಸಿದ. ಚಾತುರ್ಯದಿಂದ ಹೆಣೆದ ದೀರ್ಘವಾಕ್ಯಗಳು, ಹೊಸ ಲಯಗತಿ ಇವು ಸಿಸಿರೋನ ಶೈಲಿಯ ಲಕ್ಷಣಗಳು. ಇವನ ಕಾಲದಿಂದಾಚೆಗಿನ ಗದ್ಯಲೇಖಕರು ಇವನನ್ನು ಅನುಕರಿಸಿದರು ಇಲ್ಲವೇ ಇವನ ಶೈಲಿಯನ್ನು ವಿರೋಧಿಸಿದರು; ಹೀಗೆ ಸಿಸಿರೊ ತನ್ನ ಕಾಲದ ಅನಂತರದ ಎಲ್ಲ ಗದ್ಯ ಲೇಖಕರ ಮೇಲೆ ಪ್ರಭಾವ ಬೀರಿದ.

ಇವನಿಗೆ ವಿರುದ್ಧವಾದ ಪ್ರತಿಕ್ರಿಯೆ ತೋರಿದವರಲ್ಲಿ ಪ್ರಮುಖ ಸ್ಯಾಲಸ್ಟ್ (ಅಥವಾ ಸ್ಯಾಲಿಸ್ಟಿಯಸ್) (ಪ್ರ.ಶ.ಪೂ. 86–34). ಇವನದು ಅಡಕವಾದ, ಚಾಟೂಕ್ತಿಯ ಶೈಲಿ. ಅರಸೊತ್ತಿಗೆಯ ಸ್ಥಾಪನೆಯಿಂದ ಸಾರ್ವಜನಿಕ ಜೀವನದಲ್ಲಿ ವಾಗ್ಮಿತೆಗೆ ಪ್ರಭಾವ ಕಡಿಮೆಯಾದುದು ಈ ಬಗೆಯ ಶೈಲಿಗೆ ನೆರವಾಯಿತು. ಹೊಸ ವಾತಾವರಣದಲ್ಲಿ ಜನರ ಮನಸ್ಸನ್ನಾಕರ್ಷಿಸುವ ಇಲ್ಲವೇ ಭಾವೋದ್ವೇಗವನ್ನುಂಟು ಮಾಡುವ ವಾಗ್ಮಿತೆ ಕಳೆಗುಂದಿ ಬುದ್ಧಿಶಕ್ತಿಗೆ ಪ್ರಾಧಾನ್ಯ ದೊರೆಯಿತು. ಕಿರಿಯ ಸೆನಿಕ (ಪ್ರ.ಶ.ಪೂ. 5–ಪ್ರ.ಶ. 65) ಮತ್ತು ಟ್ಯಾಸಿಟಸ್ (56–120) ಈ ಶೈಲಿಯನ್ನು ಬೆಳೆಸಿದರು. ಟ್ಯಾಸಿಟಸ್ ವೈವಿಧ್ಯವನ್ನೇ ಮುಖ್ಯವಾಗಿ ಗಣಿಸಿ ಆರ್ಷೇಯ ಪದಗಳನ್ನೂ ಬಳಸುತ್ತಾನೆ. ಇವನ ಶೈಲಿಯನ್ನು ಇಂಗ್ಲಿಷ್ ಸಾಹಿತಿ ಕಾರ್ಲೈಲನ ಶೈಲಿಗೆ ಹೋಲಿಸಬಹುದು.

ರೋಮ್ ಸಾಮ್ರಾಜ್ಯದ ಪ್ರಾಬಲ್ಯ ಕಡಿಮೆಯಾಗಿ ರೋಮನರಿಗೆ ತಮ್ಮ ನಾಡುನುಡಿಗಳಲ್ಲಿನ ತೀವ್ರ ಹೆಮ್ಮೆ ಕುಂದಿದಂತೆ ಆ ದೇಶದ ಲೇಖಕರು ಗ್ರೀಕ್ ಭಾಷೆಯಲ್ಲಿ ಬರೆಯುವುದು ಹೆಚ್ಚಿತು. ರೋಮನ್ ಬರೆಹಗಳಲ್ಲಿನ ಅತಿ ಶ್ರೇಷ್ಠ ಗದ್ಯಕೃತಿ, ಮಾರ್ಕಸ್ ಅರೀಲಿಯಸನ ಚಿಂತನೆಗಳು ಗ್ರೀಕ್ ಭಾಷೆಯಲ್ಲಿದೆ.

ಸುಮಾರು 17ನೆಯ ಶತಮಾನದ ಅಂತ್ಯದವರೆಗೆ ಲ್ಯಾಟಿನ್ ಭಾಷೆಗೆ ಪ್ರತಿಷ್ಠೆಯ ಸ್ಥಾನ ದೊರಕಿತ್ತು. ಯುರೋಪಿನಲ್ಲಿ ಅದು ಅಂತಾರಾಷ್ಟ್ರೀಯ ಭಾಷೆಯಾಗಿ, ವಿದ್ವತ್ತಿನ, ಜಗತ್ತಿನ ಭಾಷೆಯಾಗಿ ಮುಂದುವರಿಯಿತು. ಇಂಗ್ಲೆಂಡಿನ ಫ್ರಾನ್ಸಿಸ್ ಬೇಕನ್ (1561–1626) ತಾನು ಮುಖ್ಯ ಎಂದು ಗಣಿಸಿದ ಕೃತಿಗಳನ್ನು ಲ್ಯಾಟಿನ್ ಭಾಷೆಯಲ್ಲಿ ಬರೆದು ಅಮುಖ್ಯ ಎಂದು ಭಾವಿಸಿದ ಪ್ರಬಂಧಗಳನ್ನು ಇಂಗ್ಲಿಷ್ ಭಾಷೆಯಲ್ಲಿ ಬರೆದ.

ಪ್ರಾಚೀನ ಲ್ಯಾಟಿನ್ ಸಾಹಿತ್ಯಕ್ಕೂ ಅರ್ವಾಚೀನ ಲ್ಯಾಟಿನ್ ಸಾಹಿತ್ಯಕ್ಕೂ ನಡುವೆ ವಿಚ್ಛಿನ್ನತೆ ಬರಲಿಲ್ಲ. ಕ್ರೈಸ್ತಮತ ಹಬ್ಬಿದಂತೆ ಹೊಸ ಪದಗಳು ಭಾಷೆಗೆ ಸೇರಿದುವು. ಪ್ರ.ಶ. 6ನೆಯ ಶತಮಾನದಲ್ಲಿ ಬೊಯೀಥೀಯಸ್‌ನ ತತ್ತ್ವಜ್ಞಾನದ ಸಂತೈಕೆಗಳು ಕ್ಯಾಸಿಒಡೊರಸ್‌ನ ಗಾತರ ಚರಿತ್ರೆಗಳಂಥ ಒಳ್ಳೆಯ ಕೃತಿಗಳು ರಚಿತವಾದವು.

ಭಾಷೆ ಮತ್ತು ಸಾಹಿತ್ಯಗಳ ದೃಷ್ಟಿಯಿಂದ ಇಂಗ್ಲಿಷ್ ಗದ್ಯಸಾಹಿತ್ಯ ಗ್ರೀಕ್ ಮತ್ತು ಲ್ಯಾಟಿನ್‌ಗಳ ಪ್ರಭಾವಕ್ಕೆ ಒಳಗಾಗಿದೆ. ಸರಳ ವೃತ್ತಾಂತ, ಐತಿಹಾಸಿಕ ಬರೆಹ, ಅನ್ಯಾರ್ಥ, ಜೀವನಚರಿತ್ರೆ, ಆತ್ಮವೃತ್ತ, ತತ್ತ್ವಶಾಸ್ತ್ರ, ಗದ್ಯ ವಿಡಂಬನ, ವೈಜ್ಞಾನಿಕ ಬರೆಹ, ಸಾಹಿತ್ಯ ವಿಮರ್ಶೆ–ಇವುಗಳಲ್ಲಿ ಪ್ರಾಚೀನಸಾಹಿತ್ಯ ಇಂಗ್ಲಿಷ್, ಗದ್ಯಸಾಹಿತ್ಯದ ಮೇಲೆ ಎಷ್ಟು

ಪ್ರಭಾವ ಬೀರಿದೆ ಎಂದು ವಿಶ್ಲೇಷಿಸುವುದು ಬಹು ಕಷ್ಟದ ಕಾರ್ಯ. ಅಷ್ಟೊಂದು ವ್ಯಾಪಕ, ಸೂಕ್ಷ್ಮ ಈ ಪ್ರಭಾವ. ತಂತ್ರಜ್ಞಾನದ ಭಾಷಾ ಸಂಪತ್ತಿಗೆ ಈ ಭಾಷೆಗಳ ಕೊಡುಗೆಯೂ ಸಮೃದ್ಧ. ಲಾಜಿಕ್ ಫಿಲಾಸಫಿ, ಟ್ರ್ಯಾಜಿಡಿ, ಕಾಮಿಡಿ, ಅಸ್ಟ್ರಾನಮಿ ಮೊದಲಾದ ಪದಗಳೆಲ್ಲ ಗ್ರೀಕ್ ಭಾಷೆಯಿಂದ ಬಂದವು. ಸ್ಯಾಟೈರ್ ಲ್ಯಾಟಿನ್ ಭಾಷೆಯ ಕೊಡುಗೆ. ಪ್ಲೇಟೋ, ಪ್ಲೂಟಾರ್ಕ್ ಮೊದಲಾದ ಗ್ರೀಕ್ ಬರೆಹಗಾರರೂ ಸಿಸಿರೋ, ಸೆನಿಕ, ಕ್ವಿಂಟಿಲಿಯನ್ ಮೊದಲಾದ ಲ್ಯಾಟಿನ್ ಬರೆಹಗಾರರೂ ಇಂಗ್ಲಿಷ್ ಗದ್ಯ ಶೈಲಿಗಳ ಮೇಲೆ ತಮ್ಮ ಪ್ರಭಾವ ಬೀರಿದ್ದಾರೆ.

ಇಂಗ್ಲಿಷ್ ಸಾಹಿತ್ಯದ ಪ್ರಾರಂಭ ಪ್ರ.ಶ. 5ನೆಯ ಶತಮಾನದಲ್ಲಿ ಬ್ರಿಟನ್ನಿಗೆ ಬಂದ ಆಂಗ್ಲೊ–ಸ್ಯಾಕ್ಸನ್ ಧಾಳಿಕಾರರಿಂದಾಯಿತು. ಇವರು ಬರುವಾಗ ಕಾವ್ಯಗಳನ್ನು ತಂದುಕೊಂಡರು. ಆದರೆ ಗದ್ಯಬರೆಹದ ಪರಂಪರೆ ಪ್ರಾರಂಭವಾದದ್ದು ಇಂಗ್ಲೆಂಡಿನಲ್ಲಿಯೇ. ಅಲ್ಲೂ ಬಹುಕಾಲ ಲ್ಯಾಟಿನ್ ಭಾಷೆಯೇ ಬಳಕೆಯಲ್ಲಿತ್ತು. ಇಂಗ್ಲಿಷ್ ಗದ್ಯ ನಿಜವಾಗಿ ಪ್ರಾರಂಭವಾಗುವುದು ಆಲ್ಫ್ರೆಡ್ ರಾಜನ ಕಾಲದಲ್ಲಿ (849–901). ಯುದ್ಧಗಳಲ್ಲಿ ಬಹುಕಾಲ ನಿರತನಾಗಿದ್ದರೂ ಸಂಸ್ಕೃತಿಯ ಬೆಳವಣಿಗೆಯಲ್ಲಿ ವಿಶೇಷ ಆಸಕ್ತಿ ತಳೆದಿದ್ದ ಈ ರಾಜ ಪಾಶ್ಚಾತ್ಯ ಸಂಸ್ಕೃತಿಯ ಫಲ ತನ್ನ ದೇಶದ ತರುಣರಿಗೆ ಲಭ್ಯವಾಗಬೇಕೆಂದು ಬಯಸಿದ. ವಿದ್ವಾಂಸರ ನೆರವಿನಿಂದ ತಾನೇ ಲ್ಯಾಟಿನ್ ಭಾಷೆಯಿಂದ ಹಲವು ಕೃತಿಗಳನ್ನು ಅನುವಾದಿಸಿದ. ಹೀಗೆ ಇಂಗ್ಲಿಷ್ ಭಾಷೆಯಲ್ಲಿ ಗದ್ಯಸಾಹಿತ್ಯ ಮೊಳಕೆ ಇಟ್ಟಿತು. ಅನುವಾದದಲ್ಲಿ ಈತ ಇಂಗ್ಲಿಷ್ ಭಾಷೆಗೆ ಸಹಜವಾದ ಶಬ್ದಜೋಡಣೆಯನ್ನೂ ವಾಕ್ಯರಚನೆಯನ್ನೂ ಧೈರ್ಯವಾಗಿ ಬಳಸಿದ. ಇವನ ಕಾಲದಲ್ಲಿ ಪ್ರಾರಂಭವಾದ ಆಂಗ್ಲೊ–ಸ್ಯಾಕ್ಸನ್ ಕ್ರಾನಿಕಲ್ (ನೋಡಿ) ಮುಖ್ಯವಾದ ಕೃತಿ ಆದರೂ ಒಟ್ಟಿನಲ್ಲಿ ಆಂಗ್ಲೊ–ಸ್ಯಾಕ್ಸನರ ಯುಗದಲ್ಲಿ ಗದ್ಯ ಧಾರ್ಮಿಕ ಉದ್ದೇಶಗಳಿಗೇ ಬಹುಮಟ್ಟಿಗೆ ಬಳಕೆಯಾಗುತ್ತಿತ್ತು.

1066ರಲ್ಲಿ ನಾರ್ಮಂಡಿಯ ವಿಲಿಯಂ ಇಂಗ್ಲೆಂಡನ್ನು ಗೆದ್ದ ಅನಂತರ ಫ್ರೆಂಚು ಆಡಳಿತದ ಭಾಷೆ, ಚರಿತ್ರೆಯ ದಾಖಲೆಗಳ ಭಾಷೆ ಆಯಿತು. ಜನಸಾಮಾನ್ಯಕ್ಕೆ ಉಪದೇಶ ಮಾಡಲು ಇಂಗ್ಲಿಷ್ ಮಾಧ್ಯಮವಾಯಿತು. ಬೈಬಲ್ಲನ್ನು ಮೊಟ್ಟಮೊದಲ ಬಾರಿಗೆ ಇಂಗ್ಲಿಷ್ ಭಾಷೆಗೆ ಅನುವಾದಿಸಿದ ಕೀರ್ತಿ ಜಾನ್ ವಿಕ್ಲಿಫ್‌ನದು (1320 ?–1384). ಧಾರ್ಮಿಕ ಗದ್ಯಸಾಹಿತ್ಯದ ಪ್ರಭಾವದ ಹೊರಕ್ಕೆ ಉಳಿದ ಮುಖ್ಯ ಬರೆಹಗಾರ ಥಾಮಸ್ ಮ್ಯಾಲೊರಿ(1400 ?–1470). ಇವನ ಮಾರ್ಟ್ ಡ ಆರ್ಥರ್‌ನ ಸಂಭಾಷಣೆಯಲ್ಲಿ ಲವಲವಿಕೆಯಿದೆ, ವೃತ್ತಾಂತದಲ್ಲಿ ಗಾಂಭೀರ್ಯವಿದೆ, ಭಾಷೆಯಲ್ಲಿ ವೃತ್ತಾಂತಕ್ಕೆ ಹೊಂದಿಕೊಂಡ ಲಯವಿದೆ.

14ನೆಯ ಶತಮಾನದ ಗದ್ಯಸಾಹಿತ್ಯದಲ್ಲಿ ಆಲ್ಫ್ರೆಡ್‌ನ ಬರೆಹದ ನಿರಾಡಂಬರ ವಾಕ್ಯಬಂಧ ಕಾಣುತ್ತದೆ. ಇದೇ ಕಾಲದಲ್ಲಿ ಫ್ರೆಂಚ್ ಸಾಹಿತ್ಯದ ಪ್ರಭಾವದಿಂದ ಇಂಗ್ಲಿಷ್ ಗದ್ಯದಲ್ಲಿ ಬಿಗಿಯಾದ ಬಂಧವಿಲ್ಲದ, ಉಪವಾಕ್ಯಕ್ಕೆ ಉಪವಾಕ್ಯ ಸೇರಿ ಬೆಳೆದ, ಲಂಬವಾದ ವಾಕ್ಯಗಳೂ ಕಾಣುತ್ತವೆ. ಅಲ್ಫ್ರೆಡ್‌ನ ಗದ್ಯದ ಸಂಪ್ರದಾಯ ಉಳಿಯುವುದೇ ಈ ಹೊಸ ಸಂಪ್ರದಾಯ ಉಳಿಯುವುದೇ ಎಂಬುದು 14ನೆಯ ಶತಮಾನದ ಅಂತ್ಯದಲ್ಲೂ ಪ್ರಶ್ನೆಯಾಗಿಯೇ ಉಳಿಯಿತು.

15ನೆಯ ಶತಮಾನ ಪ್ರಯೋಗಗಳ ಕಾಲ. 1422ರಲ್ಲಿ ಲಂಡನ್ನಿನ ಮದ್ಯವ್ಯಾಪಾರಿಗಳು ತಮ್ಮ ದಾಖಲೆಗಳಲ್ಲಿ ಲ್ಯಾಟಿನ್ ಭಾಷೆಯ ಬದಲು, ಇಂಗ್ಲಿಷ್ ಭಾಷೆಯನ್ನೇ ಬಳಸುತ್ತೇವೆಂದು ತೀರ್ಮಾನಿಸಿದರು. ಇವರು ತಕ್ಕಮಟ್ಟಿಗೆ ವಿದ್ಯಾವಂತರು, ಸಮಾಜದಲ್ಲಿ ಹೊಸದಾಗಿ ಗಣ್ಯತೆ ಪಡೆಯುತ್ತಿದ್ದವರು. ಇವರ ತೀರ್ಮಾನ ಇಂಗ್ಲಿಷಿನ ಬಳಕೆ, ಬೆಳವಣಿಗೆಗಳಿಗೆ ಹೊಸ ಸ್ಫೂರ್ತಿಯನ್ನು ನೀಡಿತು. ವಿದ್ಯೆ ಇಲ್ಲದವರಿಗೆ ಮತ್ತು ಹೆಂಗಸರಿಗೆ ಮಾತ್ರ ಇಂಗ್ಲಿಷ್ ಎನ್ನುವುದು ಹೋಗಿ ಆ ಭಾಷೆಗೆ ಗೌರವ ಪ್ರಾಪ್ತವಾಯಿತು.

15ನೆಯ ಶತಮಾನದ ಗದ್ಯಸಾಹಿತ್ಯದ ಶೈಲಿ ಮೂರು ಬಗೆಯದು. ಒಂದು ನಿತ್ಯಬಳಕೆಯ ಭಾಷೆಗೆ ಸಮೀಪವಾದುದು; ಎರಡನೆಯದು ಲ್ಯಾಟಿನ್ ಮತ್ತು ಫ್ರೆಂಚ್‌ಗಳಿಂದ ಭಾಷಾಂತರ ಮಾಡಿರುವಂತಹುದು; ಇದು ಬಹುಮಟ್ಟಿಗೆ ಯಾಂತ್ರಿಕ. ಮೂರನೆಯದು, ಉದ್ದೇಶಪೂರ್ವಕವಾಗಿ ಪ್ರಯೋಗಗಳನ್ನು ನಡೆಸಿರುವಂತಹುದು. ಇಂಗ್ಲಿಷ್ ಹೆಚ್ಚು ಹೆಚ್ಚಾಗಿ ಲೌಕಿಕ ಬರೆಹಗಳಿಗೆ ಉಪಯೋಗವಾಗಲು ಪ್ರಾರಂಭವಾದದ್ದು ಬಹುಮುಖ್ಯ ಅಂಶ. ವರ್ತಕರು ಮತ್ತು ವೃತ್ತಿಸಂಘಗಳ ಲೆಕ್ಕದ ಭಾಷೆ ಇಂಗ್ಲಿಷ್ ಆಯಿತು. ಬೇಟೆ, ಅಡಿಗೆ, ಶಸ್ತ್ರ ಚಿಕಿತ್ಸೆ, ಶಿಷ್ಟಾಚಾರ–ಹೀಗೆ ಹಲವಾರು ವಿಷಯಗಳನ್ನು ಕುರಿತ ಇಂಗ್ಲಿಷ್ ಪುಸ್ತಕಗಳಿಗೆ ಬೇಡಿಕೆ ಬಂತು. ಬಳಕೆ ಹೆಚ್ಚಾದಂತೆ ಇಂಗ್ಲಿಷ್ ಗದ್ಯಕ್ಕೆ ಬಳುಕು, ಲಾಸ್ಯ, ವೈವಿಧ್ಯ ಲಭ್ಯವಾದುವು.

ಯುರೋಪಿನಲ್ಲಿ ಮೊದಲೇ ಪ್ರಾರಂಭವಾದ ನವೋದಯದ ಅಲೆ ಇಂಗ್ಲೆಂಡಿನ ತೀರವನ್ನು 15ನೆಯ ಶತಮಾನದ ಕಡೆಯ ಭಾಗದಲ್ಲಿ ಮುಟ್ಟಿತು. ಪ್ರಾಚೀನ ಭಾಷೆಗಳಲ್ಲಿನ ಗ್ರಂಥಗಳ ಅಧ್ಯಯನ ಬೆಳೆಯಿತು. ಇದೇ ಕಾಲದಲ್ಲಿ ಯುರೋಪಿನಲ್ಲಿ ಪ್ರಬಲ ಅರಸರು ತಲೆ ಎತ್ತಿದರು. ಆಡಳಿತದ ಸೌಕರ್ಯಕ್ಕಾಗಿ ಲ್ಯಾಟಿನ್ ಭಾಷೆಯಲ್ಲಿ ವಿದ್ವಾಂಸರಾದವರನ್ನು ಅವರು ನೇಮಿಸಿಕೊಂಡರು. 7ನೆಯ ಹೆನ್ರಿ ಯುರೋಪಿನಿಂದ ವಿದ್ವಾಂಸರನ್ನು ಬರಮಾಡಿಕೊಂಡ. ಗಣ್ಯ ಕುಟುಂಬದ ತರುಣನಿಗೆ ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳ ಅಭ್ಯಾಸ ಅಗತ್ಯವಾಯಿತು. ಲ್ಯಾಟಿನ್ ಭಾಷೆಯಿಂದ ಸಾವಿರಾರು ಪದಗಳು ಇಂಗ್ಲಿಷ್ ಭಾಷೆಯನ್ನು ಪ್ರವೇಶಿಸಿದುವು. ಸ್ಕೆಲ್ಟನ್, ಎಡ್ವರ್ಡ್‌ಹಾಲ್ ಮೊದಲಾದವರ ಬರೆಹದಲ್ಲಿ 'ಇಂಕ್‌ಹಾರ್ನ್' ಪದಗಳೇ ಹೆಚ್ಚೆಂಬ ಆಕ್ಷೇಪಣೆಯೂ ಬಂತು. ಸರ್ ಥಾಮಸ್ ಎಲ್ಯಟ್‌ನಂಥವರು ತಮ್ಮ ಭಾಷೆಯ ಶಬ್ದಸಂಪತ್ತಿನ ಕೊರತೆಯನ್ನು ತುಂಬಿಕೊಳ್ಳಲು ಮಾತ್ರ ಲ್ಯಾಟಿನ್ ಪದಗಳನ್ನು ಬಳಸಿದರು. ಹಲವು ಅಕ್ಷರಗಳ ಲ್ಯಾಟಿನ್ ಪದಗಳು ಇಂಗ್ಲಿಷ್ ವಾಕ್ಯಗಳಲ್ಲಿ ಸೇರಿದಂತೆ ಇಂಗ್ಲಿಷಿಗೆ ಸಹಜವಾದ ಲಯದೊಂದಿಗೆ ಈ ಪದಗಳ ಲಯ ಬೆರೆಯಬೇಕಾಯಿತು. ಈ ಹೊಸ ಲಯದ ಶಿಖರವನ್ನು 16ನೆಯ ಶತಮಾನದಲ್ಲಿ ಹುಕರ್ ಮತ್ತು ಇತರ ಉಪದೇಶಕರ ಭಾಷಣಗಳಲ್ಲಿ ಕಾಣಬಹುದು.

ಈ ಯುಗದಲ್ಲಿ ಸಿಸಿರೋನ ಪ್ರಭಾವ ಕಾಣುತ್ತದೆ. ಹಲವು ಉಪವಾಕ್ಯಗಳನ್ನು ಸೇರಿಸಿ ಎಚ್ಚರಿಕೆಯಿಂದ ಹೆಣೆದ ಲಂಬವಾದ ವಾಕ್ಯಗಳು, ವಾಕ್ಯದ ಕಡೆಯಲ್ಲಿ ಕ್ರಿಯಾಪದದ ಬಳಕೆ, ವಾಕ್ಯದ ಕೊನೆಯವರೆಗೆ ಅರ್ಥದ ಬೆಳವಣಿಗೆ–ಇವನ್ನು ಇಂಗ್ಲಿಷ್ ಗದ್ಯದಲ್ಲಿ ಗುರುತಿಸಬಹುದು. ಇನ್ನು ಕೆಲವರು ಬರೆಹಗಾರರ ಮೇಲೆ ಕ್ವಿಂಟಲಿಯನ್ ಪ್ರಭಾವ ಬೀರಿದ್ದಾನೆ. ಹಲವರಿಗೆ ಇಂಥ ಪ್ರಭಾವ ಉಂಟಾದದ್ದು ದಿ ಆರ್ಟ್ ಆಫ್ ರೆಟೊರಿಕ್ ಬರೆದ ಥಾಮಸ್ ವಿಲ್ಸನ್ನನ (1525–81) ಮೂಲಕ. ಪದಗಳ ನಾದ, ಅಲಂಕಾರಗಳ ಬಳಕೆ ಇವುಗಳಲ್ಲೆ ಸಂಭ್ರಮಪಡುವ ಮನೋಧರ್ಮ ಲಿಲಿಯ ಯೂಫುಯಿಸ್‌ನಲ್ಲಿ(1578) ಕಾಣುತ್ತದೆ. ನಾವೀನ್ಯ ಮಾಸಿದಂತೆ ಈ ಶೈಲಿ ಹಾಸ್ಯಕ್ಕೆ ವಸ್ತುವಾಯಿತು. ಲ್ಯಾಟಿನ್ನಿನ ಮಾದರಿಯನ್ನು ಅನುಸರಿಸಿದರೂ ಸೊಗಸಾದ, ಇಂಗ್ಲಿಷಿನ ಸಹಜ ಲಯಕ್ಕೆ ಹೊಂದಿಕೊಂಡ ಗದ್ಯವನ್ನು ಕ್ರ್ಯಾನ್‌ಮರ್, ಹುಕರ್ ಮೊದಲಾದವರು ಬಳಸಿದರು. 16ನೆಯ ಶತಮಾನದಲ್ಲಿಯೇ ಇಂಗ್ಲಿಷ್ ಭಾಷೆಯ ಶ್ರೀಮಂತಿಕೆಯನ್ನೂ ಸೊಗಸನ್ನೂ ಎತ್ತಿ ಹಿಡಿದು ಓದುಗರಿಗೆ ಪರಿಚಿತವಾದ ಶಬ್ದಗಳನ್ನೂ ವಾಕ್ಯಬಂಧಗಳನ್ನೂ ರೋಜರ್ ಆಸ್ಕಮ್, ಹ್ಯೂಲ್ಯಾಟಿಮರ್, ಸರ್ ಥಾಮಸ್ ಮೋರ್ ಮೊದಲಾದವರು ಬಳಸಿದರು. ಈ ಕಾಲದಲ್ಲಿ ಬೈಬಲ್ ಇಂಗ್ಲಿಷ್ ಭಾಷೆಗೆ ಅನುವಾದವಾಯಿತು. ಇವುಗಳಲ್ಲಿ ಟಿಂಡಲ್ ಎಂಬುವನದು ಪ್ರಸಿದ್ಧ. (1611ರಲ್ಲಿ ಬೈಬಲಿನ ಅಧಿಕೃತ ಆವೃತ್ತಿ ಪ್ರಕಟವಾಯಿತು.) ಮುದ್ರಣದ ಸೌಕರ್ಯ ಹೆಚ್ಚಿ ಮನೆಮನೆಯಲ್ಲಿ ಬೈಬಲಿನ ಪ್ರತಿ ಕಂಡುಬಂದಂತೆ, ಅದರಲ್ಲಿನ ಗದ್ಯದ ಪ್ರತಿಮೆಗಳು ಮತ್ತು ಚಿತ್ರಗಳು ಇಂಗ್ಲಿಷ್ ಗದ್ಯದಲ್ಲಿ ಹಾಸುಹೊಕ್ಕಾದವು; ಅದರ ಭಾಷೆ ಮತ್ತು ಲಯಗಳ ಪ್ರಭಾವ ಹೆಚ್ಚಾಯಿತು.

17ನೆಯ ಶತಮಾನದ ಪ್ರಾರಂಭದ ಹೊತ್ತಿಗೆ ಇಂಗ್ಲಿಷ್ ಭಾಷೆ ಗದ್ಯ ಸಾಹಿತ್ಯದ ಮಾಧ್ಯಮ ಎನ್ನಿಸಿಕೊಂಡಿತು. ಬೇಕನ್ನನ ಪ್ರಬಂಧಗಳು ಇಂಗ್ಲಿಷಿಗೆ ಹೊಸದೊಂದು ಸಾಹಿತ್ಯಪ್ರಕಾರವನ್ನು ತಂದುಕೊಟ್ಟವು. 1660ರವರೆಗಿನ ಅವಧಿಯಲ್ಲಿ ಮೂರು ಪಂಥಗಳನ್ನು ಕಾಣುತ್ತೇವೆ. ಮೊದಲನೆಯದು, ಸಿಸಿರೋನ ಪ್ರಭಾವಕ್ಕೆ ಒಳಗಾದವರದು. ಸರ್ ವಾಲ್ಟರ್ ರ್‍ಯಾಲಿ, ಮಿಲ್ಟನ್ ಈ ಪಂಥದವರು. (ಮುಂದಿನ ಶತಮಾನದ ಗಿಬ್ಬನ್, ಬರ್ಕ್ ಮೊದಲಾದವರು ಉದ್ದವಾದ ವಾಕ್ಯಗಳನ್ನು ಉಳಿಸಿಕೊಂಡರು. ಆದರೆ ಅವರ ವಾಕ್ಯಬಂಧ ಬೇರೆ ರೀತಿಯದು.) ಫ್ರಾನ್ಸಿಸ್ ಬೇಕನ್, ಬೆನ್ ಜಾನ್‌ಸನ್, ಜೊಸೆಫ್ ಹಾಲ್ ಮೊದಲಾದವರು ಲ್ಯಾಟಿನ್ ಗದ್ಯದ ಪ್ರಭಾವಕ್ಕೆ ಒಳಗಾದರೂ ಅವರಿಗೆ ಮಾದರಿಗಳು ಟ್ಯಾಸಿಟಸ್ ಮತ್ತು ಸೆನಿಕ. ಸ್ವತಂತ್ರವಾದ ಸಣ್ಣ ಸಣ್ಣ ವಾಕ್ಯಗಳು, ಇಲ್ಲವೆ ಇಂಥ ವಾಕ್ಯಗಳನ್ನು ಸಡಿಲವಾಗಿ ಜೋಡಿಸಿದ ಮತ್ತೊಂದು ವಾಕ್ಯ – ಇವನ್ನು ಇವರ ಬರೆಹಗಳಲ್ಲಿ ಕಾಣುತ್ತೇವೆ. (1612ರಿಂದಾಚೆ ಕೆಲವು ಬರೆಹಗಳಲ್ಲಿ ಬೇಕನ್ ವೈವಿಧ್ಯಕ್ಕಾಗಿ ಬೇರೊಂದು ಶೈಲಿಯನ್ನು ಬಳಸಿದ; ಇದರಲ್ಲಿ ವಾಕ್ಯರಚನೆಯ ಬಂಧಕ್ಕಿಂತ ತಾರ್ಕಿಕ ಬಂಧ ಮುಖ್ಯ. ಉಪಮಾನ ಮತ್ತು ಪ್ರತಿಮೆಗಳ ಬಳಕೆಯುಂಟು. ಇದನ್ನು ಬರೋಕ್ ಶೈಲಿ ಎನ್ನುತ್ತಾರೆ.) ಮೂರನೆಯದು ನಿರಾಡಂಬರವಾದ, ಆಡು ಮಾತಿನ ಆಧಾರ ಪಡೆದ ಗದ್ಯ. ಜಾನ್ ಬನ್ಯನ್, ಐಸಾಕ್ ವಾಲ್ಟನ್ ಮೊದಲಾದವರ ಗದ್ಯ ಈ ರೀತಿಯದು.

ದೇಶಭ್ರಷ್ಟನಾಗಿ ಫ್ರಾನ್ಸ್‌ನಲ್ಲಿದ್ದ ರಾಜಕುಮಾರ ಚಾರ್ಲ್ಸ್ 1660ರಲ್ಲಿ ಹಿಂದಿರುಗಿದ ಅನಂತರದ ಒಂದು ಶತಮಾನದಲ್ಲಿ ಗದ್ಯ ಅಸಾಧಾರಣವಾದ ಬೆಳವಣಿಗೆಯನ್ನೂ ವೈವಿಧ್ಯವನ್ನೂ ಸಾಧಿಸಿತು. ಇದಕ್ಕೆ ಕಾರಣಗಳು ಹಲವಾರು. ಜನಜೀವನದಲ್ಲಿಯೇ ಹೊಸ ಲವಲವಿಕೆ ಮೂಡಿದುದು ಒಂದು. ಅರಸನೂ ಆಸ್ಥಾನಿಕರೂ ನಾಟಕಗಳಲ್ಲಿ ಆಸಕ್ತಿವಹಿಸಿದುದು ಇನ್ನೊಂದು. ಈ ಕಾಲದಲ್ಲಿ ವಿಜ್ಞಾನದಲ್ಲಿ ಆಸಕ್ತಿ ಹೆಚ್ಚಿತು. ರಾಯಲ್ ಸೊಸೈಟಿಯ ಸ್ಥಾಪನೆಯಾಯಿತು. ಇದು ಪ್ರಸಿದ್ಧ ವಿಜ್ಞಾನಿ ಐಸಾಕ್ ನ್ಯೂಟನ್ (1642–1727) ಮತ್ತು ಪ್ರಸಿದ್ಧ ತತ್ತ್ವಶಾಸ್ತ್ರಜ್ಞ ಜಾನ್ ಲಾಕ್‌ರ (1632–1704) ಯುಗ. ವೃತ್ತ

ಪತ್ರಿಕೆಗಳೂ ಬೆಳೆದುವಾಗಿ ಓದುಗರ ಸಂಖ್ಯೆ ಹೆಚ್ಚಿತು. ರಾಜಕೀಯ ಪಕ್ಷಗಳ ಸ್ಪರ್ಧೆ ತೀವ್ರವಾಗಿ, ಜನಕ್ಕೆ ರಾಜಕೀಯ ತತ್ತ್ವಗಳ ಚರ್ಚೆಯಲ್ಲಿ ಆಸಕ್ತಿ ಹೆಚ್ಚಿತು. ಹಲವು ವರ್ಷಗಳಿಂದ ಮುಚ್ಚಿಹೋಗಿದ್ದ ನಾಟಕ ಶಾಲೆಗಳು ಮತ್ತೆ ತೆರೆದು, ಗದ್ಯದಲ್ಲಿ ರಚಿತವಾದ ವಿನೋದನಾಟಕಗಳು ಜನಪ್ರಿಯವಾದವು. ಹಿಂದಿನ ಯುಗದಲ್ಲಿ ವಿದ್ವಾಂಸ ಓದುಗರಿಗಾಗಿ ಬರೆಯುತ್ತಿದ್ದ ಲೇಖಕ ಈ ಯುಗದಲ್ಲಿ ಜನಸಾಮಾನ್ಯರಿಗಾಗಿ ಬರೆಯಲಾರಂಭಿಸಿದ. (ತತ್ತ್ವಜ್ಞಾನವನ್ನು ವಿಶ್ವವಿದ್ಯಾನಿಲಯಗಳಿಂದ ಜನಸಾಮಾನ್ಯರ ಮನೆಗಳಿಗೆ ತಾನು ತಂದುಕೊಟ್ಟೆ ಎಂದು ಹೇಳಿದ–ಜೋಸೆಫ್ ಅಡಿಸನ್.) ಮಧ್ಯವರ್ಗ ಮತ್ತು ವರ್ತಕವರ್ಗಗಳು ಪ್ರಾಮುಖ್ಯಕ್ಕೆ ಬರತೊಡಗಿದುವು. ರೆಸ್ಟೊರೇಷನ್ ಯುಗದಲ್ಲಿ ಫ್ಯಾಷನಬಲ್ ವರ್ಗದ ಗಂಡಸರು ಹೆಂಗಸರು ಗಂಟೆಗಟ್ಟಲೆ ನಡಸುತ್ತಿದ್ದ ಸಂಭಾಷಣೆಗಳಿಂದ ಗದ್ಯಕ್ಕೆ ಅದೆಷ್ಟು ನಯ ನಾಜೂಕು, ಬಳುಕು, ಹೊಳಪು ಲಭ್ಯವಾದುವು ಎಂಬುದು ವಿಸ್ಮಯದ ಸಂಗತಿ. ಸಮತೋಲ, ವಿರೋಧಕಗಳನ್ನು ಬಳಸಿಕೊಂಡು, ಸ್ಫುಟವಾದ ಬಳುಕುಳ್ಳ, ಲವಲವಿಕೆಯ ಗದ್ಯವನ್ನು ಜಾನ್ ಡ್ರೈಡನ್ ಸೃಷ್ಟಿಸಿದ. ನಿಯತಕಾಲಿಕಗಳಲ್ಲಿ ತಮ್ಮ ಪ್ರಬಂಧಗಳನ್ನು ಪ್ರಕಟಿಸಿದ ಅಡಿಸನ್, ಸ್ಟೀಲ್ ಮೊದಲಾದವರ ಗುರಿ ಸಾಮಾನ್ಯ ಓದುಗರನ್ನು ಆಕರ್ಷಿಸುವುದು ಮತ್ತು ಅವರ ಮನಸ್ಸನ್ನು ಒಲಿಸಿ ಉಪದೇಶಿಸುವುದೇ ಆಗಿತ್ತು. ಇವರದು ಸ್ನೇಹಿತರ ಸಂಭಾಷಣೆಯ ಶೈಲಿ. ಕಾದಂಬರಿ ಪ್ರಕಾರ ರೂಪುಗೊಂಡದ್ದು, ಸೊಗಸಾದ ಗದ್ಯದಲ್ಲಿ ಪತ್ರಲೇಖನ ಬೆಳೆದದ್ದು ಈ ಅವಧಿಯಲ್ಲಿಯೇ.

1760ರಿಂದ ಈಚೆಗೆ ಇಂಗ್ಲೀಷ್ ಗದ್ಯ ಶೈಲಿಯಲ್ಲಿ ಮಾರ್ಪಾಡುಗಳಾಗಿರುವುದನ್ನು ನಾವು ಕಾಣುತ್ತೇವೆ. 1761ರಿಂದ ಈಚೆ ಹೊರಬಂದ ಪ್ರಭಾವೀ ವ್ಯಾಕರಣಗ್ರಂಥಗಳು ಕ್ವಿಂಟಿಲಿಯನ್ನನ ಶೈಲಿಯನ್ನು ಹೊಗಳಿದವು. ಗಂಭೀರ ಬರೆಹದ ಮತ್ತು ವೈಚಾರಿಕ ಬರೆಹದ ಶೈಲಿ ನಿತ್ಯದ ಭಾಷೆಯನ್ನು ಶಬ್ದ, ವಾಕ್ಯಬಂಧ, ಲಯಗಳಿಂದ ಭಿನ್ನವಾಗಿರಬೇಕು ಎಂಬ ಅಭಿಪ್ರಾಯವನ್ನು ಬ್ಲೇರ್‌ನಂಥ ವಿದ್ವಾಂಸರು ವ್ಯಕ್ತಪಡಿಸಿದರು. ಸಾಮ್ಯುಯೆಲ್ ಜಾನ್‌ಸನ್, ಗಿಬ್ಬನ್, ಬರ್ಕ್ ಮೊದಲಾದವರು ಈ ಅಭಿಪ್ರಾಯವನ್ನು ಒಪ್ಪಿದರು. ಇವರದು ಪ್ರಾಚೀನ ಸಾಹಿತ್ಯದ ಪ್ರಭಾವಕ್ಕೆ ಒಳಗಾದ, ನಿತ್ಯ ಜೀವನದ ಭಾಷೆಯಿಂದ ದೂರವಾದ ಶೈಲಿ, ಸಾಮಾನ್ಯ ಓದುಗರಿಗೆ ಅಪರಿಚಿತವಾದ ಲ್ಯಾಟಿನ್ ಶಬ್ದಗಳನ್ನೂ ಸಮತೋಲ, ವಿರೋಧ, ಎಪನಫೋರ(ವಾಕ್ಯದ ಹಲವು ಭಾಗಗಳನ್ನು ಒಂದೇ ರೀತಿ ಪ್ರಾರಂಭಿಸುವುದು) ಮೊದಲಾದ ಅಲಂಕಾರಗಳನ್ನೂ ಇವರು ಬಳಸಿದ್ದಾರೆ. ಅಡಿಸನ್, ಸ್ಟೀಲ್, ಲಾಕ್– ಇವರು ಓದುಗರನ್ನು ತಮ್ಮ ತರ್ಕದಿಂದ ಒಲಿಸಿಕೊಂಡರೆ ಬರ್ಕ್ ತನ್ನ ಕೆಲವು ಕೃತಿಗಳಲ್ಲಿ (ಉದಾಹರಣೆಗೆ ಅಮೆರಿಕವನ್ನು ಕುರಿತ ಭಾಷಣಗಳಲ್ಲಿ) ಮತ್ತು ಗೋಲ್ಡ್‌ಸ್ಮಿತ್ ತನ್ನ ಹಲವು ಪ್ರಬಂಧಗಳಲ್ಲಿ ಓದುಗರನ್ನು ತಮ್ಮ ಭಾವಪೂರ್ಣ ಬರೆಹದಿಂದ ಒಲಿಸಿಕೊಂಡಿದ್ದಾರೆ. ಮುಂದಿನ ರಮ್ಯಯುಗದ ಸೂಚನೆಯನ್ನು ಇಲ್ಲಿಯೇ ಕಾಣಬಹುದು.

18ನೆಯ ಶತಮಾನದ ಕಡೆಯ ಭಾಗದ ಹೊತ್ತಿಗೆ ಮೂರು ಬಗೆಯ ಶೈಲಿಗಳು ರೂಪುಗೊಂಡಿದ್ದವು. ಇವು ಮೂರೂ ಮುಂದಿನ ಗದ್ಯಸಾಹಿತ್ಯದ ಮೇಲೆ ಪ್ರಭಾವ ಬೀರಿದವು. ಮೊದಲನೆಯದು ಹೆಚ್ಚು ಉಪಮಾನ, ಅಲಂಕಾರಗಳನ್ನು ಬಳಸದೆ ಇರುವ, ನಿತ್ಯಜೀವನದ ಭಾಷೆಗೆ ಸಮೀಪವಾದ ಶೈಲಿ. ಇದನ್ನು ವಿಮರ್ಶಕರು ಕೇಂದ್ರ ಪರಂಪರೆ ಎಂದು ಗುರುತಿಸುತ್ತಾರೆ. ಮುಂದಿನ ಶತಮಾನದಲ್ಲಿ ಜೇನ್ ಆಸ್ಟಿನ್, ಹ್ಯಾಜ್ಲಿಟ್, ನ್ಯೂಮನ್, ಥ್ಯಾಕರೆ ಮೊದಲಾದವರು ಈ ಶೈಲಿಯನ್ನು ಅನುಸರಿಸಿದರು. ಎರಡನೆಯ ಶೈಲಿಗೆ ಕ್ವಿಂಟಿಲಿಯನ್ನನ ಶೈಲಿಯೇ ಮಾದರಿ. ಜ್ಞಾನ ಸಾಹಿತ್ಯದ ಬರೆಹಗಳು ಬಹುಮಟ್ಟಿಗೆ ಈ ಶೈಲಿಯನ್ನು ಬಳಸಿದುವು; ಸರ್ ವಾಲ್ಟರ್ ಸ್ಕಾಟನ್ ಶೈಲಿಯೂ ಈ ಬಗೆಯದೇ ಆಗಿದ್ದು ಓದುಗರ ಭಾವಗಳನ್ನು ಒಲಿಸುವ ರಮ್ಯ ಪ್ರಕಾರಕ್ಕೆ ಸೇರಿದ್ದಾಗಿದೆ. ಲ್ಯಾಮ್, ಡೆಕ್ವಿನ್ಸಿ, ಪೇಟರ್, ರಸ್ಕಿನ್, ಹಾರ್ಡಿ, ಡಿ.ಎಚ್. ಲಾರೆನ್ಸ್, ಜೇಮ್ಸ್ ಜಾಯ್ಸ್ ಈ ಪಂಥಕ್ಕೆ ಸೇರಿದವರು. ಕಾದಂಬರಿ ಜನಪ್ರಿಯವಾದಂತೆ, ಆ ಪ್ರಕಾರದಲ್ಲಿ ಪ್ರಯೋಗಗಳು ಹೆಚ್ಚಿದಂತೆ, ರಮ್ಯಗದ್ಯದ ವೈವಿಧ್ಯವೂ ಹೆಚ್ಚಿತು.

1870ರಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಇಂಗ್ಲೆಂಡಿನಲ್ಲಿ ಕಡ್ಡಾಯವಾಗಿ ಬಹುವೇಗವಾಗಿ ಹರಡಿತು. ತಂತ್ರಜ್ಞಾನ ಬೆಳೆದಂತೆ ಅಧಿಕ ಸಂಖ್ಯೆಯಲ್ಲಿ ಪುಸ್ತಕಗಳನ್ನೂ ಪತ್ರಿಕೆಗಳನ್ನೂ ಮುದ್ರಿಸಿ ಸುಲಭ ಬೆಲೆಗೆ ಮಾರುವುದು ಸಾಧ್ಯವಾಯಿತು. ಇದರಿಂದ ಓದುಗರ ಸಂಖ್ಯೆ ಏರತೊಡಗಿತು. ಎಡಿನ್‌ಬರ ರೆವ್ಯೂ, ಕ್ವಾರ್ಟರ್ಲಿ ಮುಂತಾದ 19ನೆಯ ಶತಮಾನದ ಪ್ರಭಾವೀ ಪತ್ರಿಕೆಗಳು ಜಾನ್‌ಸನ್ನನ ಸಂಪ್ರದಾಯವನ್ನು ಮುಂದುವರಿಸಿ ಕೊಂಡು ಹೋದವು. ಗಂಭೀರವಾದ ಅಥವಾ ಶಾಸ್ತ್ರೀಯ ಬರೆಹಕ್ಕೆ ಇದೇ ಉಚಿತವಾದ ಶೈಲಿ ಎಂಬ ಅಭಿಪ್ರಾಯ ಬೆಳೆಯಿತು. ಜೆ.ಎಸ್. ಮಿಲ್, ಚಾರ್ಲ್ಸ್ ಡಾರ್ವಿನ್ ಮೊದಲಾದ ಬೌದ್ಧಿಕ ವರ್ಗದ ಮುಖಂಡರು ಬೆಳೆಸಿದ ಶೈಲಿ ಇದು. ರೊಮ್ಯಾಂಟಿಕ್ ಯುಗದಲ್ಲಿ ವ್ಯಕ್ತಿಗೆ ಹೆಚ್ಚು ಪ್ರಾಧಾನ್ಯ ದೊರೆಯಿತು. ಆ ಯುಗ ಕಳೆದ ಅನಂತರವೂ ಕಾರ್ಲೈಲ್, ರಸ್ಕಿನ್ ಮೊದಲಾದವರ ಬರೆಹಗಳಲ್ಲಿ ರಮ್ಯಗದ್ಯ ಕಾಣುತ್ತದೆ. ಮ್ಯಾಥ್ಯೂ ಆರ್ನಲ್ಡ್, ಬರ್ನಾರ್ಡ್ ಷಾ, ಬರ್ಟ್ರಂಡ್ ರಸೆಲ್ ಮೊದಲಾದವರು ಕೇಂದ್ರಪರಂಪರೆಗೆ ಸೇರಿದವರು.

ಗದ್ಯ ಸಾಹಿತ್ಯದ ಚರಿತ್ರೆಯಲ್ಲಿ ಕಾದಂಬರಿಯ ಪಾತ್ರವನ್ನು ವಿಮರ್ಶಿಸಲು ಒಂದು ಇಡೀ ಪುಸ್ತಕವೇ ಬೇಕಾದೀತು. ಭಾಷೆಯನ್ನು ಒಡೆದು ಅದರ ಸ್ವರೂಪವನ್ನೇ ವಿಶ್ಲೇಷಿಸುವ ಅಸಾಧಾರಣ ಪ್ರಯೋಗಗಳು ಕಾದಂಬರಿ ಮತ್ತು ಸಣ್ಣ ಕತೆಗಳಲ್ಲಿ ನಡೆದಿದೆ. ಇಲ್ಲಿ ಗಮನಿಸಬಹುದಾದ ಒಂದು ಅಂಶ ಎಂದರೆ, ಕಾದಂಬರಿಯಲ್ಲಿ ವರ್ಣನೆ, ವೃತ್ತಾಂತ, ಸಂಭಾಷಣೆ, ವ್ಯಾಖ್ಯಾನ –ಎಲ್ಲ ಬೆರೆಯುವುದರಿಂದ ನಿತ್ಯಬಳಕೆಯ ಭಾಷೆಯನ್ನು ಬಳಸುವ ಕಾದಂಬರಿಕಾರನೂ ಅದರಲ್ಲಿ ಹೆಚ್ಚಿನ ವ್ಯಾಪ್ತಿಯನ್ನೂ ವೈವಿಧ್ಯವನ್ನೂ ಸಾಧಿಸಬಲ್ಲ. ಸಂಭಾಷಣೆಗೆ ಉಪಭಾಷೆಗಳನ್ನೂ ವಿದ್ಯಾವಂತ – ಅವಿದ್ಯಾವಂತ, ಶ್ರೀಮಂತ – ಕಾರ್ಮಿಕ ಮೊದಲಾದ ಎಲ್ಲ ವರ್ಗಗಳ ಭಾಷಾರೀತಿಗಳನ್ನೂ ಬಳಸುವುದು ಸಾಮಾನ್ಯವಾಗಿದೆ. ವೃತ್ತಾಂತ ಭಾಗದಲ್ಲಿ ವಿದ್ಯಾವಂತರ ಭಾಷೆಯೇ ಮುಖ್ಯ. ವರ್ಣನೆಯ ಭಾಗದಲ್ಲಿ ಸಾಮಾನ್ಯವಾಗಿ ಬಳಸುವುದು ರಮ್ಯಶೈಲಿ. 19ನೆಯ ಶತಮಾನದಲ್ಲಿ ಕಾದಂಬರಿಕಾರ ನೇರವಾಗಿ ವ್ಯಾಖ್ಯಾನ ಮಾಡುತ್ತಿದ್ದ. ಇದನ್ನು ತ್ಯಜಿಸಿದ ಅನಂತರ ಕಾದಂಬರಿಕಾರರು ತಮ್ಮ ವ್ಯಾಖ್ಯಾನವನ್ನು ವೃತ್ತಾಂತದಲ್ಲಿ ಅಂತರ್ಗತ ಮಾಡುವ ಪ್ರಯತ್ನದಲ್ಲಿ ಪ್ರತಿಮೆಗಳ ಬಳಕೆ, ವಾಕ್ಯಬಂಧ ಇವುಗಳಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡಿದ್ದಾರೆ. ಡಾನ್ ವಾಸ್‌ಪೋಸ್. ಜೇಮ್ಸ್ ಜಾಯ್ಸ್, ವಿಲಿಯಂ ಫಾಕ್‌ನರ್, ವ್ಲಾಡಿಮಿರ್ ನಬಕೊವ್ ಮೊದಲಾದವರ ಪ್ರಯೋಗ ಗಳು– ಇವರಲ್ಲಿ ಕೆಲವರು ಬ್ರಿಟನಿಗೆ ಸೇರಿದವರೇ ಅಲ್ಲ– ಗದ್ಯದ ಮೆಲೆ ಪ್ರಭಾವ ಬೀರದಿರುವುದು ಸಾಧ್ಯವಿರಲಿಲ್ಲ.

20ನೆಯ ಶತಮಾನ ಉಸಿರುಗಟ್ಟಿಸುವ ತಂತ್ರಜ್ಞಾನದ ಯುಗ. ಇದರಿಂದಾಗಿ ಓದುಗರು ಹಲವು ವರ್ಗಗಳಿಗೆ ಸೇರಿದವರು. ಪ್ರಕಾಶಕರು ಹಲವು ಬಗೆಯವರು. ಸಾಹಿತ್ಯದ ವಾಣಿಜ್ಯೀಕರಣವೂ ಗದ್ಯದ ಮೇಲೆ ಪ್ರಭಾವ ಬೀರುವುದು ಅನಿವಾರ್ಯ ವಾಯಿತು. ಎರಡು ಮಹಾಯುದ್ಧಗಳು ಮಾನಸಿಕ ಜಗತ್ತನ್ನು ತಲೆಕೆಳಗೂ ಮಾಡಿಬಿಟ್ಟ ಅನಂತರ ಹೊಸ ಮನೋಧರ್ಮ, ಹೊಸ ಬೇಡಿಕೆಗಳಿಗೆ ಹೊಂದಿಕೊಳ್ಳುವ ಗದ್ಯದ ಬೆಳೆವಣಿಗೆಯೂ ಅನಿವಾರ್ಯವಾಯಿತು. ಜೀವನಚರಿತ್ರೆ, ಆತ್ಮವೃತ್ತಗಳ ಸಂಖ್ಯೆ ಬೆಳೆದುದು ಅರ್ಥವತ್ತಾದ ಸಂಗತಿ. 20ನೆಯ ಶತಮಾನದ ಪ್ರಾರಂಭದಲ್ಲಿಯೇ ವಿಚಾರ ಸಾಹಿತ್ಯದಲ್ಲಿ ರೂಢಿಯಾಗಿದ್ದ ದೀರ್ಘವಾಕ್ಯಗಳು, ಗಂಭೀರ ಲಯ, ಭಾವಗೀತೆಯಲ್ಲಿನಂಥ ಸ್ಫೋಟಕ ಅಭಿವ್ಯಕ್ತಿ– ಇವು ಕಡಿಮೆಯಾಗಿ ಸ್ಫುಟವೂ ನಿಷ್ಕೃಷ್ಟವೂ ಆದ ಬರೆಹಕ್ಕೆ ಪ್ರಾಧಾನ್ಯ ಬಂತು. ಇದನ್ನು ಮೂರನ ಪ್ರಿನ್ಸಿಪಿಯ ಎಥಿಕ (1905)ದಲ್ಲಿಯೇ ಕಾಣಬಹುದು. ಪ್ರಾಮಾಣಿಕತೆ ಸ್ಫುಟತ್ವ, ನಿಷ್ಕೃಷ್ಟತೆ, ಇವು ಇಂದಿನ ಬರೆಹಗಾರನ ಗುರಿಗಳು. ಪ್ರಜಾಪ್ರಭುತ್ವ, ವಿಜ್ಞಾನ ಎರಡರ ಬೆಳೆವಣಿಗೆ ಪ್ರಭಾವವನ್ನೂ ಇಂದಿನ ಶೈಲಿಯಲ್ಲಿ ಕಾಣಬಹುದು. ವಿನ್‌ಸ್ಟನ್ ಚರ್ಚಿಲ್‌ನಂಥ (1874–1965) ಕೆಲವೇ ಬರೆಹಗಾರರಲ್ಲಿ ಉದ್ದೇಶಿತ ವಾಗ್ಮಿತೆ, ದೀರ್ಘವಾಕ್ಯಗಳು, ಜಟಿಲ ವಾಕ್ಯಬಂಧ, ನಾದ ಮತ್ತು ಜಟಿಲ ಲಯಗಳಿಗೆ ಗಮನ– ಇವನ್ನು ಕಾಣುತ್ತೇವೆ. ಚೆಸ್ಟರ್‌ಟನ್, 19ನೆಯ ಶತಮಾನದ ಲ್ಯಾಮ್‌ನಂತೆ, ಬಹು ವೈಯಕ್ತಿಕವಾದ, ವಿರುದ್ಧೋಕ್ತಿಯ ವಿಶೇಷ ಬಳಕೆಯ ಶೈಲಿಯನ್ನು ರೂಪಿಸಿಕೊಂಡ. ಆದರೆ ಬರ್ನಾರ್ಡ್ ಷಾನ ಮುನ್ನುಡಿಗಳು, ಟಾಯ್ನ್‌ಬಿ, ಬರ್ಟ್ರಂಡ್ ರಸಲ್ ಮೊದಲಾದವರ ಬರೆಹಗಳಲ್ಲಿ 20ನೆಯ ಶತಮಾನದ ಗದ್ಯ ಕೇಂದ್ರ ಪರಂಪರೆಗೆ ಹಿಂದಿರುಗಿದೆ. (ಎಲ್.ಎಸ್.ಎಸ್.)

**ಸಂಸ್ಕೃತ ಗದ್ಯ:** ಗದ್ಯ ಎಂಬುದು ಗದ್–ವ್ಯಕ್ತಾಯಾಂ ವಾಚಿ (ಹೇಳುವುದು) ಎಂಬ ಧಾತುವಿಗೆ ಯ (ತ್) ಪ್ರತ್ಯಯ ಸೇರಿಸಿ ಬಂದಿದೆ; ಗದ್ಯವೆಂದರೆ ಹೇಳಲ್ಪಡತಕ್ಕದ್ದು ಎಂದರ್ಥ. ಛಂದೋಬದ್ಧವಾಗಿರುವ ವೃತ್ತರೂಪದ ಪದ್ಯದಿಂದ ಬೇರೆಯಾಗಿರುವು ದೆಂದೂ (ವೃತ್ತಗಂಧೋಜ್ಝಿತಂ ಗದ್ಯಂ) ಪಾದರಹಿತವಾದ ಪದವಿನ್ಯಾಸವೆಂದೂ (ಅಪಾದಃಪದ – ಸಂತಾನೋ ಗದ್ಯಂ) ಹೇಳಲಾಗಿರುವ ಒಂದು ಸಂಸ್ಕೃತಕಾವ್ಯ ಪ್ರಕಾರ; ಅದೇ ಸಂಸ್ಕೃತ ಗದ್ಯ. ಪದ್ಯ, ಚಂಪೂ, ನಾಟಕ ಇವು ಉಳಿದ ಪ್ರಕಾರಗಳು. ನಾಟಕ ದೃಶ್ಯಗಳಲ್ಲೂ ಗದ್ಯ ಪದ್ಯ ಚಂಪೂಗಳು ಶ್ರವ್ಯದಲ್ಲೂ ಸೇರಿವೆ.

ಪುರಾತನವಾಗಿರುವ ವೈದಿಕವಾಙ್ಮಯಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಶ್ರುತಿ ಎನಿಸಿಕೊಂಡಿರುವ ಗ್ರಂಥಗಳಲ್ಲಿ ಮೊದಲನೆಯದಾದ ಋಗ್ವೇದ ಸಂಪೂರ್ಣವಾಗಿ ಛಂದೋಬದ್ಧ ಗ್ರಂಥ; ಸಂಸ್ಕೃತಸಾಹಿತ್ಯದಲ್ಲೇ ಅದು ಪ್ರಾಚೀನತಮ. ಅನಂತರ ಬಂದ ಅಥರ್ವವೇದ, ಕೃಷ್ಣಯಜುರ್ವೇದ, ಬ್ರಾಹ್ಮಣಗಳು, ಉಪನಿಷತ್ತುಗಳು– ಇವುಗಳಲ್ಲಿ ಸರಳವೂ ಹೃದ್ಯವೂ ಆದ ಪ್ರಾಚೀನ ಗದ್ಯವನ್ನು ಕಾಣಬಹುದು. ತರುವಾಯ, ಸ್ಮೃತಿ ಗ್ರಂಥಗಳಲ್ಲಿ ಸೇರಿಸಲ್ಪಟ್ಟಿರುವ ಧರ್ಮಸೂತ್ರಾದಿಗಳು ಬಹುಮಟ್ಟಿಗೆ ಸೂತ್ರರೂಪದ ಗದ್ಯದಲ್ಲಿವೆ. ಅನಂತರ ಮಹಾಭಾರತದಲ್ಲೂ ವಿಷ್ಣುಪುರಾಣ ಮುಂತಾದ ಪುರಾಣ

ಗಳಲ್ಲೂ ಅಲ್ಲಲ್ಲಿ ಗದ್ಯಭಾಗಗಳನ್ನು ಕಾಣಬಹುದು. ಮೇಲ್ಕಂಡ ಗ್ರಂಥಗಳ ಗದ್ಯ ಪ್ರಾಯಶಃ ಕಾವ್ಯನಿಯಮಕ್ಕನುಸಾರವಾಗಿ ರಚಿತವಾಗಿಲ್ಲದಿದ್ದರೂ ಸರಳವೂ ಶಕ್ತಿಯುತವೂ ಆಗಿದೆ.

ಋಗ್ವೇದದ ಛಂದಸ್ಸಿನ ಸಂಪ್ರದಾಯದಿಂದಲೋ ಲೇಖನ ಸೌಕರ್ಯವಿಲ್ಲದೆ ಎಲ್ಲ ಸಾಹಿತ್ಯವನ್ನೂ ಪದ್ಯರೂಪದಲ್ಲಿಟ್ಟು ಸ್ಮರಣೆಗೆ ಸೌಲಭ್ಯವುಂಟುಮಾಡಬೇಕಾಗಿದ್ದ ಕಾರಣದಿಂದಲೋ ಬೇರೆ ಚಾರಿತ್ರಿಕ ಕಾರಣದಿಂದಲೋ ಸಂಸ್ಕೃತ ಗದ್ಯ ರಚನೆ ವಿರಳವಾಗಿ, ಕಷ್ಟವೆಂಬ ಅಭಿಪ್ರಾಯವೂ ಮೂಡಿ ಗದ್ಯಂ ಕವೀನಾಂ ನಿಕಷಂ ವದಂತಿ (ಗದ್ಯವು ಕವಿ ಪರೀಕ್ಷೆಯ ಒರೆಗಲ್ಲು) ಇತ್ಯಾದಿ ಮಾತುಗಳು ರೂಢಿಗೆ ಬಂದಿವೆ. ಅದಕ್ಕೆ ತಕ್ಕಂತೆ ಮುಂದೆ ಸಂಸ್ಕೃತಸಾಹಿತ್ಯದಲ್ಲಿ ಗದ್ಯ ವಿರಳವಾಗಿರುವುದಲ್ಲದೆ, ಅದರ ರಚನೆ ಸುಲಭವಲ್ಲವೆಂಬ ಅಂಶವೂ ಕ್ರಮೇಣ ಬಂದ ಗ್ರಂಥಗಳ ಭಾಷೆ ಶೈಲಿಯಿಂದ ಗೋಚರವಾಗುತ್ತದೆ.


ಸ್ವರೂಪದಲ್ಲಿ ನಿಯಮಿತವಾದ ಸ್ಥಿತಿಯುಳ್ಳ ಗದ್ಯ ಮೊಟ್ಟಮೊದಲು ಪತಂಜಲಿಯ ಮಹಾಭಾಷ್ಯದಲ್ಲಿ (ಪ್ರ.ಶ.ಪೂ.ಸು. 2ನೆಯ ಶತಮಾನ) ಕಂಡುಬರುತ್ತದೆ. ಈ ಗದ್ಯ ಲಲಿತವೂ ಮನೋಹರವೂ ಆಗಿದೆ. ತರುವಾಯ ಬಂದ ಗದ್ಯ ಹಲವಾರು ಉದ್ಗ್ರಂಥಗಳ ಮೇಲಣ ಭಾಷ್ಯಗಳದ್ದು. ಅದರ ರಚನೆಯಲ್ಲಿ ಮನೋಜ್ಞತೆಯ ದೃಷ್ಟಿಯಿಂದ ಗಮನಾರ್ಹ ಪ್ರಗತಿಯನ್ನು ಕಾಣಬಹುದು.

ಸುಮಾರು 2ನೆಯ ಶತಮಾನದಿಂದ ಕಾವ್ಯಸಂದರ್ಭಗಳಲ್ಲಿ ಗದ್ಯದ ಬಳಕೆ ಗೋಚರವಾಗುತ್ತದೆ; ಅದರ ಸಾಧನೆಗಳೆಂದರೆ– ಆ ಕಾಲದ ಕೆಲವು ಶಾಸನಗಳು; ಕ್ರಮೇಣ ಬಂದ ನೀತಿಕಥಾಯುಕ್ತ ಪಂಚತಂತ್ರಾದಿ ಗ್ರಂಥಗಳು; ದಂಡಿಯ ದಶಕುಮಾರ ಚರಿತ, ಸುಬಂಧುವಿನ ವಾಸವದತ್ತಾ, ಬಾಣಭಟ್ಟನ ಕಾದಂಬರಿ ಮತ್ತು ಹರ್ಷಚರಿತ. ಇವುಗಳ ಗದ್ಯದಲ್ಲಿ ಪ್ರಮುಖವಾಗಿ ಎರಡು ಮಾರ್ಗಗಳನ್ನು ಕಾಣಬಹುದು; ಒಂದು, ಹರ್ಷಚರಿತಾದಿ ಅಖ್ಯಾಯಿಕೆಗಳ ಕ್ಲಿಷ್ಟ ಗದ್ಯ; ಮತ್ತೊಂದು, ನೀತಿಕಥೆ ಮುಂತಾದವುಗಳಿಂದ ಕೂಡಿದ ಪಂಚತಂತ್ರಾದಿಗಳ ಸರಳಗದ್ಯ.

ಹೀಗೆ, ಸಂಸ್ಕೃತಗದ್ಯ ವೈದಿಕ ಕಾಲದಷ್ಟು ಪ್ರಾಚೀನ ಅದರ ಬೆಳೆವಣಿಗೆಯಲ್ಲಿ ಪತಂಜಲಿಯ ಮಹಾಭಾಷ್ಯದ ಮನೋಹರ ಗದ್ಯ ಮುಖ್ಯವಾದ ಒಂದು ಹಂತ. ಅನಂತರ ಇದು ಕ್ರಮಬದ್ಧ ಕಾವ್ಯಸ್ವರೂಪಗಳೆನಿಸಿಕೊಂಡ ಅಖ್ಯಾಯಿಕೆ ಮುಂತಾದ ಕ್ಲಿಷ್ಟಪ್ರಕಾರಗಳಲ್ಲೂ ನೀತಿ ಮುಂತಾದ ಸರಳ ಪ್ರಕಾರಗಳಲ್ಲೂ ಮುಂದುವರಿಯುತ್ತ ವಿರಳವಾಗಿದ್ದರೂ ಸಂಸ್ಕೃತ ಸಾಹಿತ್ಯದ ಅತ್ಯುಪಯುಕ್ತ ಹಾಗೂ ಪ್ರಭಾವಶಾಲಿ ಸ್ವರೂಪಗಳಲ್ಲಿ ಒಂದಾಗಿ ನೆಲೆಗೊಂಡಿದೆ (**ನೋಡಿ–ಸಂಸ್ಕೃತ ಗದ್ಯ ಸಾಹಿತ್ಯ**). (ಬಿ.ಕೆ.ಎಸ್.)

**ಕನ್ನಡದಲ್ಲಿ ಗದ್ಯ ಸಾಹಿತ್ಯ:** ಕನ್ನಡ ಗದ್ಯಸಾಹಿತ್ಯದ ಚರಿತ್ರೆ ಹಲ್ಮಿಡಿ ಶಾಸನದಿಂದ (ಸು.450) ಪ್ರಾರಂಭವಾಗುತ್ತದೆ. ಅಲ್ಲಿಂದ 18ನೆಯ ಶತಮಾನದವರೆಗೆ ಅಸಂಖ್ಯ ಗದ್ಯಶಾಸನಗಳು ದೊರೆಯುತ್ತವೆ. 5ನೆಯ ಶತಮಾನಕ್ಕೂ ಹಿಂದೆ ಗದ್ಯ ಇತ್ತೆನ್ನಲು ಉಪಲಬ್ಧ ಆಧಾರಗಳಿಲ್ಲ. ಎಲ್ಲ ಸಾಹಿತ್ಯದಂತೆ ಕನ್ನಡ ಸಾಹಿತ್ಯವೂ ಪದ್ಯಸಾಹಿತ್ಯದಿಂದ ಪ್ರಾರಂಭವಾಗಿರಬಹುದು. 10ನೆಯ ಶತಮಾನವನ್ನು ಚಂಪೂಯುಗದ ಸುವರ್ಣ ಕಾಲವೆನ್ನಲಾಗಿದೆ. ಪಂಪರನ್ನಾದಿಗಳಲ್ಲಿ ಬರುವ ಗದ್ಯ ಕ್ವಚಿತ್ತಾದರೂ ಗಮನಾರ್ಹವಾದುದಾಗಿದೆ. ಉಪಲಬ್ಧ ಗದ್ಯಗ್ರಂಥಗಳಲ್ಲಿ ಮೊದಲನೆಯದು ಪ್ರಮುಖವೂ ಆದದ್ದು ಶಿವಕೋಟ್ಯಾಚಾರ್ಯನ ವಡ್ಡಾರಾಧನೆ (ಸು.920). ಅನಂತರ ಹೆಸರಿಸಬೇಕಾದ ಕೃತಿಯೆಂದರೆ ಚಾವುಂಡರಾಯನ ತ್ರಿಷಷ್ಟಿ ಲಕ್ಷಣ ಮಹಾಪುರಾಣ (ಸು.978). 12ನೆಯ ಶತಮಾನದಲ್ಲಿ ವಿಪುಲವಾಗಿ ನಿರ್ಮಾಣವಾದ ವಚನಸಾಹಿತ್ಯದ ಗದ್ಯ ಕನ್ನಡದಲ್ಲೇ ವಿಶೇಷ ಉಲ್ಲೇಖಕ್ಕೆ ಅರ್ಹವಾದುದಾಗಿದೆ. ಆ ಯುಗದ ಪ್ರಾರಂಭದಲ್ಲಿದ್ದ ಹರಿಹರ ತನ್ನ ರಗಳೆಗಳಲ್ಲಿ ಗದ್ಯಕ್ಕೆ ವಿಚಿತ್ರ ನಿಲುವನ್ನು ತಿರುವನ್ನು ಕೊಟ್ಟಿದ್ದಾನೆ. 17ನೆಯ ಶತಮಾನದಲ್ಲಿ ಗದ್ಯ ಹಿಂದಿಲ್ಲದ ಒಂದು ಪ್ರಾಶಸ್ತ್ಯವನ್ನು ಪಡೆಯಿತು. ಒಡೆಯರ ಕಾಲದ ಸಾಹಿತ್ಯ ಈ ದೃಷ್ಟಿಯಿಂದ ಮುಖ್ಯವೆನಿಸಿದೆ. 17, 18ನೆಯ ಶತಮಾನದ ಬಖೈರುಗಳು, 18, 19ನೆಯ ಶತಮಾನದ ಕಳಲೆ ನಂಜರಾಜ, ದೇವಚಂದ್ರ, ಮುಮ್ಮಡಿ ಕೃಷ್ಣರಾಜ, ಕೆಂಪುನಾರಾಯಣ, ಅಳಿಯ ಲಿಂಗರಾಜ, ಮುದ್ದಣ್ಣ–ಮೊದಲಾದವರ ಕೃತಿಗಳು ಗಮನಾರ್ಹ ಗದ್ಯಕೃತಿಗಳಾಗಿವೆ. 20ನೆಯ ಶತಮಾನ ನಿಜಕ್ಕೂ ಗದ್ಯಸಾಹಿತ್ಯದ ಸುವರ್ಣಯುಗವೇ. ಕಥೆ, ಕಾದಂಬರಿ, ಪ್ರಬಂಧಗಳು, ಜೀವನ ಚರಿತ್ರೆಗಳು, ಪ್ರವಾಸ, ವಿಮರ್ಶೆ–ಹೀಗೆ ವಿವಿಧ ಪ್ರಕಾರಗಳಲ್ಲಿ ಗಣನೀಯ ಕೆಲಸ ನಡೆದಿದೆ. ಟಿ.ಎಸ್. ವೆಂಕಣ್ಣಯ್ಯ, ಎ.ಎನ್.ಮೂರ್ತಿರಾವ್, ಎ.ಆರ್.ಕೃಷ್ಣಶಾಸ್ತ್ರೀ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಶಿವರಾಮ ಕಾರಂತ, ದೇಜಗೌ, ಹಾ.ಮಾ.ನಾಯಕ ಮೊದಲಾದ ಅನೇಕರು ಕನ್ನಡಗದ್ಯಕ್ಕೆ ವಿಪುಲವಾದ ಹೊಸ ತಿರುವುಗಳನ್ನೊದಗಿಸಿ ಒಬ್ಬೊಬ್ಬರೂ ವಿಶಿಷ್ಟವಾದ ಶೈಲಿಯೊಂದನ್ನು ರೂಢಿಸಿದ್ದಾರೆ (**ನೋಡಿ– ಕನ್ನಡದಲ್ಲಿ ಗದ್ಯಸಾಹಿತ್ಯ**).*

**ಗನಾಯ್‌ಡೀ :** ಎಲುಬು ಮೀನುಗಳ ಒಂದು ಗುಂಪು. ಗನಾಯ್ಡ್ ಹುರುಪೆಗಳಿರುವುದು ಈ ಮೀನುಗಳ ಪ್ರಮುಖ ಲಕ್ಷಣ. ಇದು ವೈಜ್ಞಾನಿಕವಾಗಿ ಒಂದು ಸ್ವಾಭಾವಿಕ ಗುಂಪಲ್ಲ. ಈ ಗುಂಪಿನ ಅನೇಕ ಜಾತಿಯ ಮೀನುಗಳು ನಶಿಸಿಹೋಗಿ ಈಗ ಕೆಲವೇ ಜಾತಿಯ ಮೀನುಗಳು ಮಾತ್ರ ಜೀವಂತವಾಗಿವೆ. ಉದಾಹರಣೆಗೆ ಸ್ಟರ್ಜನ್ (ಆಸಿಪೆನ್ಸರ್), ಸ್ಪೂನ್ ಬಿಲ್ (ಪಾಲಿಯೊಡಾನ್), ಬೊಫಿನ್ (ಆಮಿಯ),



ಗಾರ್‌ಪೈಕ್ (ಲೆಪಿಡಾಸ್ಪಿಯಸ್) ಪಾಲಿಪ್ಟೀರಸ್ ಮತ್ತು ಕಾಲೊಮಿಕ್ಥಿಸ್ ಮೀನುಗಳು. ಇವುಗಳಲ್ಲಿ ಪಾಲಿಯೊಡಾನ್ ಮತ್ತು ಆಸಿಪೆನ್ಸರ್ ಜಾತಿಯ ಕೆಲವು ಪ್ರಭೇದಗಳನ್ನುಳಿದು ಮಿಕ್ಕೆಲ್ಲವೂ ಸಿಹಿನೀರಿನ ವಾಸಿಗಳು. ಇವುಗಳ ಗನಾಯ್ಡ್ ಹುರುಪೆಗಳು ಸಮಚೌಕಾಕಾರವುಳ್ಳವು. ಗನಾಯ್ಡ್ ಹುರುಪೆಗಳ ಮೇಲುಪದರದಲ್ಲಿ ಗನಾಯಿನ್ ಎಂಬ ಪದಾರ್ಥವಿರುವುದರಿಂದ ಇವು ಪ್ರಕಾಶಮಾನವಾಗಿರುತ್ತವೆ. ಗನಾಯ್ಡ್ ಮೀನುಗಳು ಕೆಲವು ಲಕ್ಷಣಗಳಲ್ಲಿ ಪ್ರಾಚೀನ ಮೀನುಗಳನ್ನು ಹೋಲುತ್ತವೆ. ಈ ಮೀನುಗಳಲ್ಲಿ ಕಿವಿರುಗಳ ಜೊತೆಗಿರುವ ಗಾಳಿಚೀಲಗಳು ನೀರಿನಲ್ಲಿ ತೇಲಾಡಲು ಸಹಾಯ ಮಾಡುವ ಈಜು ಗಾಯಿ ರೀತಿಯ ಸಹಾಯಕ ಅಂಗವಾಗಿಲ್ಲದೆ ಶ್ವಾಸಾಂಗಗಳಾಗಿವೆ.

ಗನಾಯ್ಡ್ ಹುರುಪೆಗಳನ್ನು ಆಸಿಪೆನ್ಸರ್ ಮತ್ತು ಪಾಲಿಯೊಡಾನ್ ಮೀನುಗಳಲ್ಲಿ ಬಾಲದ ರೆಕ್ಕೆಯಲ್ಲೂ ಆಮಿಯ ಮೀನಿನಲ್ಲಿ ತಲೆಯ ಮೇಲೂ ಕಾಣಬಹುದು.

ಲೆಪಿಡಾಸ್ಪಿಯಸ್ (ಗಾರ್‌ಪೈಕ್) ಮೀನಿನ ಎರಡು ದವಡೆಗಳೂ ಉದ್ದವಾಗಿರುತ್ತವೆ. ಹೀಗೆ ದವಡೆಗಳು ಚಾಚಿ ಉಂಟಾಗಿರುವ ರಚನೆಗೆ ಗಾರ್ ಎಂದು ಹೆಸರು. ಇದನ್ನು ನೀರಿನಿಂದ ಹೊರಕ್ಕೆ ಚಾಚಿ ಗಾಳಿಯನ್ನು ಸೇವಿಸಲು ಬಳಸುತ್ತದೆ. ಗಾರ್‌ಪೈಕ್ ಮೀನು ಉತ್ತರ ಅಮೆರಿಕದ ಸಿಹಿನೀರಿನ ಸರೋವರಗಳಲ್ಲಿ ವಾಸಿಸುತ್ತದೆ.

ಪಾಲಿಪ್ಟೀರಸ್ ಜಾತಿಯ ಮೀನುಗಳು ಆಫ್ರಿಕ ಖಂಡದ ನದಿಗಳಲ್ಲಿ ಕಾಣಬರುತ್ತವೆ. ಈಗ ಜೀವಂತವಾಗಿರುವ ಎಲುಬು ಮೀನುಗಳಲ್ಲೆಲ್ಲ ಬಹುಪ್ರಾಚೀನ ಗುಣಗಳನ್ನು ಇವು ಪ್ರದರ್ಶಿಸುವುದರಿಂದ ಇವನ್ನು ಜೀವಂತ ಪಳೆಯುಳಿಕೆಗಳು ಎನ್ನುವುದುಂಟು. ಇವುಗಳಲ್ಲಿ ಹಾಲೆಗಳ ರೀತಿಯ ಈಜುರೆಕ್ಕೆಗಳಿವೆ. ಬೆನ್ನಿನ ಒಂಟಿ ಈಜುರೆಕ್ಕೆ ಅನೇಕ ಉಪರೆಕ್ಕೆಗಳಾಗಿ ವಿಂಗಡಣೆಯಾಗಿದೆ. ಪಾಲಿಪ್ಟೀರಸ್ ಬಿಚಿರ್ ಪ್ರಭೇದ ನೈಲ್‌ನದಿಯ ಕೆಸರು ಭೂಮಿಯಲ್ಲಿ ಆಳವಾದ ಹೋರು ಮತ್ತು ಸಣ್ಣ ಗುಂಡಿಗಳಲ್ಲಿ ವಾಸಿಸುತ್ತದೆ. ಇತರ ಬಗೆಯ ಸಣ್ಣಮೀನುಗಳು ಮತ್ತು ಕಠಿಣ ಚರ್ಮಿಗಳು ಇದರ ಆಹಾರ.

ಕಾಲೊಮಿಕ್ಥಿ ಮೀನುಗಳೂ ಆಫ್ರಿಕಕ್ಕೇ ಸೀಮಿತವಾಗಿವೆ; ಲಘು ಶರೀರದ ಚುರುಕಾದ ಮೀನುಗಳು ಇವು. ಹಾವಿನ ಹಾಗೆ ಬಳಕುತ್ತ ಈಜುತ್ತವೆ. ಮುಂದಿನ ಜೊತೆ ಈಜುರೆಕ್ಕೆಗಳೂ ಬೆನ್ನಿನ ಒಂಟಿ ಈಜುರೆಕ್ಕೆಯೂ ಉಪರೆಕ್ಕೆಗಳಾಗಿ ವಿಭಾಗವಾಗಿವೆ. ಕೀಟಗಳು ಮತ್ತು ಕಠಿಣಚರ್ಮಿಗಳು ಇವುಗಳ ಆಹಾರ. ತೆಂಗು ಜಾತಿಮರಗಳ ಬುಡಗಳಲ್ಲಿ ಇವು ಹಲವು ವೇಳೆ ಕಾಣಬರುವುದರಿಂದ ಇವನ್ನು ಪಾಮ್‌ಮೀನು ಎಂದೂ ಕರೆಯುವುದುಂಟು. (ಎನ್.ವಿ.ಎ.)

**ಗನ್‌ಚೆರಾಫ್, ಇವ್ಯಾನ್ ಅಲಿಕ್ಸಾನ್‌ಡ್ರವಿಚ್ :** 1812–1891. ರಷ್ಯದ ಪ್ರಸಿದ್ಧ ಕಾದಂಬರಿಕಾರ. ಗಣ್ಯ ವರ್ತಕನೊಬ್ಬನ ಮಗ. ಹುಟ್ಟಿದ್ದು ಸಿಂಬಿರ್ಸ್ಕ್‌ನಲ್ಲಿ. ಮಾಸ್ಕೊ ವಿಶ್ವವಿದ್ಯಾಲಯದ ಪದವೀಧರನಾದ ಈತ ಸಿವಿಲ್ ಪರೀಕ್ಷೆಯನ್ನು ಮುಗಿಸಿ ಸಿಂಬಿರ್ಸ್ಕ್ ನಗರದಲ್ಲಿ ಗವರ್ನರನ ಕಾರ್ಯದರ್ಶಿಯಾದ. ಅನಂತರ ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ (ಈಗಿನ ಲೆನಿನ್‌ಗ್ರಾಡ್) ಅರ್ಥಶಾಖಾ ಸಚಿವಾಲಯದಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡಿದ. 1856ರಲ್ಲಿ ಅಡ್ಮಿರಲ್ ಪುಟಿಯಾಟಿನ್‌ರ ಆಪ್ತಕಾರ್ಯದರ್ಶಿಯಾಗಿ ಜಪಾನ್ ಪ್ರವಾಸಮಾಡಿ ಬಂದ. ಅಲ್ಲಿನ ಅನುಭವಗಳು ದಿ ಫ್ರಿಗಟ್ ಪಲ್ಲಾಡ್ (1858) ಎಂಬ ಪ್ರವಾಸ ಕಥನದಲ್ಲಿವೆ. ನಿವೃತ್ತಿಗೆ ಮುನ್ನ ಈತ ಸಾಹಿತ್ಯದ ದೋಷ ವಿಮರ್ಶಕನಾಗಿ (ಸೆನ್ಸಾರ್) ಸರ್ಕಾರದಿಂದ ನೇಮಕಗೊಂಡಿದ್ದ.

30 ವರ್ಷಗಳ ಸರ್ಕಾರಿ ನೌಕರಿಯ ಅವಧಿಯಲ್ಲಿ ಮೂರು ಶ್ರೇಷ್ಠವಾದ ಕಾದಂಬರಿಗಳನ್ನು ಬರೆದುದೇ ಈತನ ಮಹತ್ತರ ಸಾಧನೆ. ಮೊದಲ ಕಾದಂಬರಿ ಓಬಿಕ್ನೊವೆನ್ನಯ ಇಸ್ಟೋರಿಯಾ (1847) ಪ್ರಕಟವಾದುದು ಈತನ 35ನೆಯ ವಯಸ್ಸಿನಲ್ಲಿ. ಇದು ಈತನ ಉತ್ಕೃಷ್ಟ ಕೃತಿಯಲ್ಲವಾದರೂ ವಿಸ್ಸಾರಿಯೊನ್ ಬೆಲಿನ್‌ಸ್ಕಿ

ಎಂಬ ವಿಮರ್ಶಕನಿಂದ ಮನ್ನಣೆ ಪಡೆದು ಸಾಹಿತ್ಯಲೋಕದಲ್ಲಿ ಈತನ ಕೀರ್ತಿಯನ್ನು ಹೆಚ್ಚಿಸಿತು. ಆದರ್ಶವಾದಿ ಯುವಕನೊಬ್ಬ ಮಧುರವಾದ ಗ್ರಾಮ ಜೀವನವನ್ನು ತ್ಯಜಿಸಿ ನಗರಜೀವನವನ್ನು ಅಪ್ಪುವ ಕಥೆ ಈ ಕಾದಂಬರಿಯ ವಸ್ತು. 1849ರಲ್ಲಿ ಓಬ್ಲಮೊವ್‌ನ ಕನಸು ಎಂಬ ಕವನ ಪ್ರಕಟವಾಯಿತು. ಬಾಲ್ಯದ ಸವಿಯನ್ನೂ ಜಮೀನ್ದಾರಿ ಬದುಕಿನ ಸ್ವರ್ಗವನ್ನೂ ಕಳೆದುಕೊಂಡ ವೇದನೆ ಈ ಕವನದಲ್ಲಿ ವ್ಯಕ್ತವಾಗಿದೆ.

1857ರಲ್ಲಿ ಈತನ ಅಮರಕೃತಿ ಎನಿಸಿದ ಓಬ್ಲಮೊವ್ ಪ್ರಕಟವಾಯಿತು. ಇದೊಂದು ಚಿರಂತನ ಕೃತಿ ಎಂದು ಜನರ ಮೆಚ್ಚಿಕೆ ಪಡೆದು ಪ್ರಖ್ಯಾತವಾಯಿತು. ಈಗಲೂ ಇದು ರಷ್ಯನ್ ಸಾಹಿತ್ಯದ ಅತ್ಯಂತ ಶ್ರೇಷ್ಠವಾದ ಆರು ಕಾದಂಬರಿಗಳಲ್ಲಿ ಒಂದೆನಿಸಿದೆ. ಮರ್ಸ್ಕಿ, ಡೊಬ್ರೊಲುಬೊವ್, ಪೀಸಾರೆವ್ ಮೊದಲಾದ ಹೆಸರಾಂತ ವಿಮರ್ಶಕರು ಈ ಕಾದಂಬರಿಯ ಗುಣವೈಶಿಷ್ಟ್ಯಗಳನ್ನು ಎತ್ತಿಹಿಡಿದು ಕೊಂಡಾಡಿದ್ದಾರೆ. ಇದರಲ್ಲಿ ರಷ್ಯದ ಯಥಾವತ್ತಾದ ಸಾಮಾಜಿಕ ಚಿತ್ರವಿದ್ದು ಗುಣ–ದೋಷಗಳೆರಡರ ಸಹಜ ನಿರೂಪಣೆಯಿದೆ. ಓಬ್ಲಮೊವ್ ಒಬ್ಬ ಸುಸಂಸ್ಕೃತ ಯುವಕ. ಬಹಳ ಬುದ್ಧಿವಂತ. ಸದ್ಭಾವನೆಗಳಿಂದ ಕೂಡಿದ ಉದಾರ ಹೃದಯಿ. ಅಲಸಿಕೆಯೊಂದೆ ಈತನ ದೌರ್ಬಲ್ಯ. ಯಾವುದನ್ನೂ ಸಾಧಿಸಲಾರದ ನಿಷ್ಕ್ರಿಯತೆ, ಸದಾ ಹಾಯಾಗಿ ಮೈಚಾಚಿಕೊಂಡು ಮಲಗಿರುವ ಈತನ ಸುಖಜೀವನದ ವರ್ಣನೆ ಪುಟಗಟ್ಟಲೆ ಬೆಳೆದಿದೆ. ತಾನು ಪ್ರೀತಿಸುತ್ತಿದ್ದ ಚೆಲುವೆಯನ್ನು ಮದುವೆಯಾಗುವುದಕ್ಕೂ ಆಗದಷ್ಟು ಸೋಮಾರಿಯಾಗಿದ್ದ ಈತ ಕ್ರಮೇಣ ಓಬ್ಲಮೊವಿಸಮ್ ಎಂಬ ತನ್ನದೇ ಆದ ಸಿದ್ಧಾಂತದಲ್ಲಿ ಮುಳುಗಿ ಹೋಗುತ್ತಾನೆ. ರಷ್ಯದಲ್ಲಿ ಈ ಸಿದ್ಧಾಂತ ಸೋಮಾರಿತನಕ್ಕೆ ಇನ್ನೊಂದು ಹೆಸರಾಯಿತು. ಸ್ಲಾವೊನಿಕ್ ಸುಖಾಪೇಕ್ಷೆಯ ಸ್ವಭಾವ ಮತ್ತು ರಷ್ಯದ ಸಾಮಾಜಿಕ ವ್ಯವಸ್ಥೆಗಳ ಸಮ್ಮಿಲನದಿಂದ ಜನಿಸಿದ ಜಾಡ್ಯ ಇದು. ಓಬ್ಲಮೊವ್‌ನ ಈ ಸ್ವಭಾವಕ್ಕೆ ಕಾರಣ ಜೀವನ ವಿಮುಖತೆಯೂ ಅಲ್ಲ; ಔದಾಸೀನ್ಯವೂ ಅಲ್ಲ. ಸರಿ ಯಾವುದು ತಪ್ಪು ಯಾವುದು ಎಂದು ನಿಷ್ಕರ್ಷೆಯಾದ ಹೊರತು ಯಾವ ಮಾರ್ಗವನ್ನೂ ಅನುಸರಿಸಬಾರದೆಂಬ ನೀತಿ, ಅಷ್ಟೆ. ಹೀಗೆ ಈ ಕಾದಂಬರಿಯಲ್ಲಿ ಅನಿಶ್ಚತೆಯಲ್ಲಿ ನಿಷ್ಕ್ರಿಯನಾಗಿ ಕೂತ ಓಬ್ಲಮೊವ್ ನಿರಂತರವಾಗಿ ಚಲಿಸುತ್ತ ಹೋಗುವ ಜಗತ್ತಿನ ಸಂಬಂಧವನ್ನು ಕಡಿದುಕೊಂಡ ಚಿತ್ರಣವಿದೆ.




ಈತನ ಮೂರನೆಯ ಕಾದಂಬರಿ ಓಬ್ರಿವ್ (1869). ಇದರ ಇಂಗ್ಲಿಷ್ ಭಾಷಾಂತರ ದಿ ಪ್ರೆಸಿಪಿಸ್ (1915). ಇದು ರಷ್ಯದ ಒಂದು ಹಿರಿಯಮನೆತನದ ಸುಂದರವಾದ ಕಥೆ. ಮನೆಯ ವಹಿವಾಟನ್ನೆಲ್ಲ ದರ್ಪದಿಂದ ನಡೆಸಿಕೊಂಡು ಬರುವ ಸಹೃದಯಿ ಅಜ್ಜಿಯ ಪಾತ್ರ ಇಲ್ಲಿ ಸ್ಮರಣೀಯವಾಗಿ ಮೂಡಿದೆ. ತನ್ನ ಆಧುನಿಕತೆಯನ್ನೂ ರಸವಂತಿಕೆಯನ್ನೂ ಬಿಡಲಾರದೆ ಹಳೆಯ ಮತ್ತು ಹೊಸ ಮೌಲ್ಯಗಳ ದ್ವಂದ್ವದಲ್ಲಿ ಸಿಕ್ಕಿ ಪೇಚಾಡುವ ಯುವಕನ ಬದುಕೂ ಇಲ್ಲಿ ಚಿತ್ರಿತವಾಗಿದೆ. ಸಂಪ್ರದಾಯದ ಸಂಕೇತದಂತಿರುವ ಅಜ್ಜಿಯ ಪಾತ್ರವನ್ನು ಅಭಿಮಾನಪೂರ್ವಕವಾಗಿಯೂ ಆಧುನಿಕ ನೇತಿವಾದಿಯೋರ್ವನನ್ನು ಹೀಯಾಳಿಸಿಯೂ ಚಿತ್ರಿಸಿರುವುದನ್ನು ಹೊಸ ಪೀಳಿಗೆಯ ಹಲವರು ಖಂಡಿಸಿದ್ದಾರೆ.

ಗನ್‌ಚೆರಾಫ್ ಹಲವು ಸಣ್ಣ ಕಥೆಗಳನ್ನು ಬರೆದಿದ್ದಾನೆ. ವಿಶ್ರಾಂತನಾದ ಬಳಿಕ ಹಳೆಯ ನೆನಪುಗಳನ್ನೂ ಕೆಲವು ವಿಮರ್ಶಾ ಲೇಖನಗಳನ್ನೂ ಈತ ಬರೆದ. 1870ರಲ್ಲಿ ಪ್ರಕಟವಾದ ಎನ್ ಅನ್‌ಕಾಮನ್ ಸ್ಟೋರಿ ಸ್ವಲ್ಪ ವಿಚಿತ್ರವಾದುದೆಂದೇ ಹೇಳಬೇಕು.

ತುರ್ಗನ್ಯೆಫ್ ಮೊದಲಾದವರು ತನ್ನ ಬರೆಹಗಳನ್ನು ಕದ್ದಿದ್ದಾರೆಂಬ ಭ್ರಮೆಗೊಳಗಾಗಿ ಈತ ಅವರ ವಿರುದ್ಧ ಅನೇಕ ಆರೋಪಗಳನ್ನು ಮಾಡಿದ್ದಾನೆ. ಈತ 1891ರಲ್ಲಿ ನಿಧನನಾದ ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ.

ಸಾಹಿತ್ಯ ಪ್ರತಿಭೆಯುಳ್ಳ ಈತ ಆಡಳಿತ ಕಾರ್ಯಗಳಲ್ಲೇ ಮಗ್ನನಾಗಿದ್ದುದರಿಂದ ಸಾಮಾಜಿಕ ಸಮಸ್ಯೆಗಳ ಕಡೆ ಅಷ್ಟಾಗಿ ಗಮನ ಹರಿಸಲಿಲ್ಲವೆಂಬುದೂ ಸಮಕಾಲೀನ ಬುದ್ಧಿಜೀವಿಗಳಿಗಿದ್ದಂಥ ಬೌದ್ಧಿಕ ಕುತೂಹಲ ಈತನಲ್ಲಿರಲಿಲ್ಲವೆಂಬುದೂ ಈತನ ಮೇಲಿರುವ ಎರಡು ಮುಖ್ಯ ಆಕ್ಷೇಪಗಳು. (ಕೆ.ಬಿ.ಪಿ.)

**ಗಪ್ಪಿ ಮೀನು :** ಸಿಪ್ರಿನಿಡಾಂಟಿಫಾರ್ಮೀಸ್ ಗಣದ ಪೋಯಿಸಿಲಿಡೀ ಕುಟುಂಬಕ್ಕೆ ಸೇರಿದ ಲೆಬಿಸ್ಟೀಸ್ ರೆಟಿಕ್ಯುಲೇಟಸ್ ಎಂಬ ವೈಜ್ಞಾನಿಕ ಹೆಸರುಳ್ಳ ಮೀನಿನ ಜನಪ್ರಿಯ ಹೆಸರು. ಟ್ರಿನಿಡಾಡ್‌ನಲ್ಲಿದ್ದ ರಾಬರ್ಟ್ ಎಲ್. ಗಪ್ಪಿ ಎಂಬಾತ 1866ರಲ್ಲಿ ಮೊದಲ ಬಾರಿಗೆ ಇದನ್ನು ನೋಡಿ ಇದರ ಬಗ್ಗೆ ವಿಷಯ ಸಂಗ್ರಹಿಸಿ ವರದಿ ಮಾಡಿದ. ಆದ್ದರಿಂದ ಅವನ ಗೌರವಾರ್ಥವಾಗಿ ಇದಕ್ಕೆ ಗಪ್ಪಿ ಎಂದು ಹೆಸರು ಬಂದಿತು.



ವೆನಜುವೇಲ, ಲೆಸ್ಸರ್ ಆಂಟೆಲ್ಲಿಸ್ ಮತ್ತು ದಕ್ಷಿಣ ಅಮೆರಿಕದ ಉತ್ತರ ಭಾಗದ ಸಿಹಿನೀರಿನ ಕೊಳ, ಕೆರೆ, ನದಿಗಳಲ್ಲಿ ಇದು ವಾಸಿಸುತ್ತದೆ. ಜಲೋದ್ಯಾನದ ಕೃತಕ ಪರಿಸರಕ್ಕೂ ಹೊಂದಿಕೊಂಡು ಜೀವಿಸುವುದರಿಂದ ಇದನ್ನು ಜಲೋದ್ಯಾನಗಳಲ್ಲಿ (ಅಕ್ವೇರಿಯಂ) ಸಾಕುವುದುಂಟು.

ಗಾತ್ರದಲ್ಲಿ ಬಲು ಪುಟ್ಟ ಮೀನಿದು. ಗಂಡು ಸುಮಾರು 7.5–10 ಸೆಂ.ಮೀ ಉದ್ದವೂ, ಹೆಣ್ಣು ಮೀನು 2.5–3.25 ಸೆಂ.ಮೀ ಉದ್ದವೂ ಇರುತ್ತದೆ. ಗಂಡು ಮೀನುಗಳು ಅತ್ಯಾಕರ್ಷಕ ಬಣ್ಣಗಳಿಂದ ಕೂಡಿರುತ್ತದೆ. ಅತ್ಯಂತ ವರ್ಣರಂಜಿತ, ಕೆಂಪು, ಕಿತ್ತಳೆ, ಹಳದಿ, ಹಸಿರು, ಊದಾ ಬಣ್ಣಗಳ ಹಿನ್ನೆಲೆಯಲ್ಲಿ ಕಪ್ಪು ಚುಕ್ಕೆಗಳಿಂದ ಕೂಡಿರುತ್ತದೆ. ಗಂಡಿನ ದೇಹದ ಬಣ್ಣ ಅನುವಂಶಿ ಮಾತ್ರವಲ್ಲ ಹಾರ್ಮೋನುಗಳ ನಿಯಂತ್ರಣಕ್ಕೂ ಒಳಪಟ್ಟಿದೆ ಎನ್ನಲಾಗಿದೆ. ಹೀಗಾಗಿ ಈ ಮೀನುಗಳನ್ನು ಅನುವಂಶಿಕ ಅಧ್ಯಯನಗಳಲ್ಲಿ ಹೆಚ್ಚಾಗಿ ಬಳಸಲಾಗುತ್ತಿದೆ. ಈ ಮೀನುಗಳ ಈಜು ರೆಕ್ಕೆಗಳು ಬಹಳ ಆಕರ್ಷಕವಾಗಿದ್ದು ವಿವಿಧ ಆಕಾರದಲ್ಲಿ ಇರುತ್ತವೆ. ಇದರಿಂದಾಗಿ ಈ ಮೀನು ಹೆಚ್ಚು ಜನಪ್ರಿಯವಾಗಿವೆ. ಈ ಮೀನು ಜರಾಯುಜ. ಹೆಣ್ಣು ಮೀನು 3 ತಿಂಗಳು ವಯಸ್ಸಾದ ಅನಂತರ ಪ್ರೌಢಾವಸ್ಥೆ ತಲುಪುತ್ತವೆ. ಗಂಡು ಮೀನು ತನ್ನ ಗುದದ ಈಜುರೆಕ್ಕೆಯ ಮಧ್ಯ ಇರುವ ಗೋನೋಪೋಡಿಯಂನ ಸಹಾಯದಿಂದ ನಿಷೇಚನ ಕ್ರಿಯೆ ನಡೆಸುತ್ತದೆ. ಭ್ರೂಣದ ಬೆಳವಣಿಗೆ ಹೆಣ್ಣಿನ ಅಂಡಾಶಯದ ಫಾಲಿಕಲ್‌ನಲ್ಲಿ ನಡೆಯತ್ತದೆ. ಗರ್ಭಾವಸ್ಥೆಯ ಕಾಲ ಸುಮಾರು 28 ದಿನಗಳು. ಒಂದು ಬಾರಿಗೆ 25–50 ಮರಿಗಳಿಗೆ ಜನ್ಮ ನೀಡುತ್ತವೆ. ಮರಿ ಹಾಕಲು ವರ್ಷದಲ್ಲಿ ನಿರ್ದಿಷ್ಟ ಸಮಯವೇನೂ ಇಲ್ಲ.

ಗಪ್ಪಿ ಮೀನು ಮುಖ್ಯವಾಗಿ ಕೀಟಾಹಾರಿ. ಇತರ ಬಗೆಯ ಆಹಾರವನ್ನು ತಿನ್ನುವುದುಂಟು. ಕೆಲವು ವೇಳೆ ಇದು ಸ್ವಜಾತಿ ಭಕ್ಷಕವೂ ಹೌದು. ಎಷ್ಟೋ ವೇಳೆ ತನ್ನಮರಿಗಳನ್ನೇ ತಿಂದುಬಿಡುತ್ತದೆ. ಸೊಳ್ಳೆ ಮತ್ತು ಸೊಳ್ಳೆ ಮರಿಗಳನ್ನು ತಿನ್ನುವುದರಿಂದ ಸೊಳ್ಳೆ ನಿಯಂತ್ರಣಕ್ಕೆ ಇವುಗಳನ್ನು ಬಳಸುವುದುಂಟು. (ಜಿ.ಎಸ್.ಎಚ್.ಐ.; ಟಿ.ಎಸ್.ವಿ)

**ಗಬೆಲ್ಸ್, ಜೋಸೆಫ್ :** 1897–1945. ಜರ್ಮನಿಯ ಒಬ್ಬ ರಾಜಕಾರಣಿ. ಜರ್ಮನ್ ರಾಷ್ಟ್ರೀಯ ಸಮಾಜವಾದಿ (ನಾಜ಼ಿ) ಪಕ್ಷದ ಪ್ರಮುಖ ಪ್ರಚಾರಕ. ಇವನ ಪೂರ್ಣ ಹೆಸರು ಪಾಲ್ ಜೋಸೆಫ್ ಗಬೆಲ್ಸ್. ಇವನು 1897ರ ಅಕ್ಟೋಬರ್ 29 ರಂದು, ರೈನ್‌ಲ್ಯಾಂಡಿನ ರೆಯ್ಡ್‌ನಲ್ಲಿ ಜನಿಸಿದ. ತಂದೆ ಒಬ್ಬ ಶ್ರಮಜೀವಿ. ಪೋಲಿಯೋ ವ್ಯಾಧಿಯಿಂದಾಗಿ ಗಬೆಲ್ಸ್ ಕುಂಟನಾಗಿದ್ದುದರಿಂದ ಅವನು ಸೈನ್ಯ ಸೇರಲಾಗಲಿಲ್ಲ. ಬಾನ್ ಮತ್ತು ಹೈಡೆಲ್ ಬರ್ಗ್ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡಿ ಡಾಕ್ಟೊರಲ್ ಪದವಿ ಪಡೆದು ಪ್ರತಿಕೋದ್ಯಮಿಯಾದ (1921). ನಾಜ಼ಿ ಮುಖಂಡ ಗ್ರೆಗೊರ್ ಸ್ಟ್ರಾಸರನ ಕಾರ್ಯದರ್ಶಿಯಾಗಿ ಕೆಲಸಮಾಡಿದ (1925). ಹಿಟ್ಲರನಿಗೂ ಸ್ಟ್ರಾಸರನಿಗೂ ವಿರಸ ಬೆಳೆದಾಗ ಗಬೆಲ್ಸ್ ಹಿಟ್ಲರನ ಕಡೆ ಸೇರಿದ (1926). ಇದಕ್ಕಾಗಿ ಅವನಿಗೆ ಬಹುಮಾನ ಕಾದಿತ್ತು. ಬರ್ಲಿನ್ ಜಿಲ್ಲಾ ಪಕ್ಷನಾಯಕನಾಗಿ ಅವನನ್ನು ಹಿಟ್ಲರ್ ನೇಮಿಸಿದ. ಗಬೆಲ್ಸ್‌ನ ಪ್ರಚಾರಶಕ್ತಿ, ಚಳುವಳಿಯ ಸಾಮರ್ಥ್ಯ ಆಗ ಬೆಳಕಿಗೆ ಬಂದುವು. 1928ರಲ್ಲಿ ಗಬೆಲ್ಸ್ ರೀಕ್‌ಸ್ಟ್ಯಾಗ್ ಸಭೆಗೆ ಆಯ್ಕೆ ಹೊಂದಿದ. ಪಕ್ಷ ಪ್ರಚಾರಕಾರ್ಯದ ಹೊಣೆ 1929ರಲ್ಲಿ ಅವನದಾಯಿತು. ನಾಜ಼ಿ ಪಕ್ಷ ಪ್ರಬಲವಾಗಲು ಗಬೆಲ್ಸ್ ಎಲ್ಲ ತಂತ್ರಗಳನ್ನೂ ಬಳಸಿದ. ಹೊಡೆ ದಾಟವೊಂದರಲ್ಲಿ ಮೃತನಾದ ನೀತಿಹೀನನೊಬ್ಬ ಗೀಚಿದ್ದ ಪದ್ಯವನ್ನು ಪಕ್ಷದ ಗೀತೆಯಾಗಿ ಗಬೆಲ್ಸ್ ಆರಿಸಿಕೊಂಡ. ಗಬೆಲ್ಸ್‌ನ ಪ್ರಚಾರದಿಂದಾಗಿ ಪಕ್ಷದ ಸದಸ್ಯರ ಸಂಖ್ಯೆ ಹೆಚ್ಚಿತು. ಅದು ಅತ್ಯಂತ ಪ್ರಬಲವಾಯಿತು. ಹಿಟ್ಲರ್ ಅಧಿಕಾರರೂಢನಾಗಲು ಗಬೆಲ್ಸ್ ಬಹುಮಟ್ಟಿಗೆ ಕಾರಣ. ಅಲ್ಲಿಂದ ಮುಂದೆ ಗಬೆಲ್ಸನ ಪ್ರಭಾವ ಬಹಳ ಹೆಚ್ಚಿತು. ಪ್ರಚಾರ ಕಾರ್ಯಕ್ಕೆ ರಾಷ್ಟ್ರದ ಎಲ್ಲ ಸಾಧನಗಳೂ ಅವನಿಗೆ ಒದಗಿಬಂದವು. ಅವನಿಗೆ

ಯಾವ ನೀತಿ ನಿಯಮಗಳೂ ಇರಲಿಲ್ಲ. ಅವನೊಬ್ಬ ಶೂನ್ಯವಾದಿ. ರೇಡಿಯೋ, ಚಲನಚಿತ್ರ ಮುಂತಾದ ಸಾಧನಗಳನ್ನು ಎಷ್ಟರಮಟ್ಟಿಗೆ ಪಕ್ಷದ ಉದ್ದೇಶ ಸಾಧನೆಗೆ ಬಳಸಿಕೊಳ್ಳಬಹುದೆಂಬುದನ್ನು ಅರಿತುಕೊಂಡ ಗಬೆಲ್ಸ್ ಈ ವಿದ್ಯೆಯಲ್ಲಿ ಎಲ್ಲರನ್ನೂ ಮೀರಿಸಿದ. ಯೆಹೂದ್ಯರ ವಿರುದ್ಧವಾಗಿ ವಿಷಪ್ರಚಾರದ ಹೊಳೆಯೇ ಹರಿಯಿತು.

ಗಬೆಲ್ಸ್ 1931ರಲ್ಲಿ ಮ್ಯಾಗ್ಡ ಕ್ವಾಂಟಳೊಂದಿಗೆ ವಿವಾಹವಾದ. ಅವಳಲ್ಲಿ ಅವನಿಗೆ ಆರು ಮಕ್ಕಳಾದವು. ಆದರೆ ಅನೇಕ ಹೆಂಗಸರೊಂದಿಗೆ ಅವನು ಅಕ್ರಮ ಸಂಬಂಧ ಹೊಂದಿದ್ದನೆಂದೂ ಒಮ್ಮೆ ಪರಿಸ್ಥಿತಿ ತುಂಬ ಕೆಟ್ಟು, ಅವನ ಹೆಂಡತಿ ವಿವಾಹವಿಚ್ಛೇದನ ಮಾಡಿಕೊಳ್ಳಬೇಕೆಂದು ತೀರ್ಮಾನಿಸುವ ಘಟ್ಟ ಮುಟ್ಟಿದಾಗ ಹಿಟ್ಲರ್ ನಡುವೆ ಪ್ರವೇಶಿಸಿ ಅದನ್ನು ತಪ್ಪಿಸಿ ಗಬೆಲ್ಸನಿಗೆ ಬುದ್ಧಿ ಹೇಳಿದನೆಂದೂ ತಿಳಿದುಬರುತ್ತದೆ.



ಎರಡನೆಯ ಮಹಾಯುದ್ಧ ಕಾಲದಲ್ಲಿ ಜರ್ಮನಿಯ ಸಾಧನೆಗಳನ್ನು ಕ್ರೋಡೀಕರಿಸಲು ತೀವ್ರಕ್ರಮಗಳನ್ನು ಕೈಗೊಳ್ಳಬೇಕೆಂದು ಇವನು ಭಾವಿಸಿದ್ದ. ರಷ್ಯದ ವಿರುದ್ಧ ಅತೃಪ್ತಿ ಬೆಳೆಸುವ ಪ್ರಚಾರ ಕೈಗೊಂಡ ಗಬೆಲ್ಸ್ ಕೊನೆಕೊನೆಗೆ ಜರ್ಮನಿಯ ಸ್ಥಿತಿ ಕೆಟ್ಟಾಗ ರಷ್ಯದೊಡನೆ ಒಪ್ಪಂದ ಮಾಡಿಕೊಳ್ಳಲು ಯತ್ನಿಸಿದ. ಅದು ಫಲಿಸದಿದ್ದಾಗ ಅವನು ಇನ್ನೂ ಕಟುವಾದ. ಬರ್ಲಿನ್ ನಗರ ಧಾಳಿಗೆ ಒಳಗಾದಾಗ ಗಬೆಲ್ಸ್ ಅಲ್ಲೇ ಇದ್ದು ನಗರಾಡಳಿತ ಕಾರ್ಯ ಮುಂದುವರಿಸಿದ. ಶರಣಾದರೆ ನಿಮ್ಮ ಗತಿ ತೀರಿತು–ಎಂದು ಜನರನ್ನು ಹೆದರಿಸಿ ಯುದ್ಧಕ್ಕೆ ಪುಸಲಾಯಿಸಿದ. ಜಿನೀವ ಒಡಂಬಡಿಕೆಯನ್ನು ತಿರಸ್ಕರಿಸಿ, ಸೆರೆ ಸಿಕ್ಕ ವೈಮಾನಿಕರನ್ನು ಗುಂಡಿಟ್ಟು ಕೊಲ್ಲಬೇಕೆಂಬುದು ಅವನ ಬೋಧನೆಯಾಗಿತ್ತು. ಹಿಟ್ಲರನ ಪ್ರಾಣ ತೆಗೆಯುವ ಸಂಚು ವಿಫಲವಾದ ಮೇಲೆ (1944ಜುಲೈ 20) ಹಿಟ್ಲರ್ ಗಬೆಲ್ಸನಿಗೆ ಯುದ್ಧಕಾರ್ಯಕ್ಕಾಗಿ ಜನಧನಬಲವನ್ನೆಲ್ಲ ಸಜ್ಜುಗೊಳಿಸುವ ಪೂರ್ಣ ಅಧಿಕಾರ ನೀಡಿದ. 1945ರ ಏಪ್ರಿಲ್ ಬಂತು. ಹಿಟ್ಲರ್ ಬರ್ಲಿನಿನ ತನ್ನ ಕಚೇರಿ ಬಿಟ್ಟು ಹೊರಬರಬಾರದೆಂದು ಗಬೆಲ್ಸ್ ಕೇಳಿಕೊಂಡ. ಏನಾದರೂ ಪವಾಡ ಸಂಭವಿಸಿ ಹಿಟ್ಲರ್ ಅಂತಿಮ ವಿಜಯ ಸಾಧಿಸುವನೆಂಬುದು ಗಬೆಲ್ಸನ ಭ್ರಮೆಯಾಗಿತ್ತು. ಆದರೆ ಅಂಥದೇನೂ ಆಗಲಿಲ್ಲ. ತನ್ನ ಅನಂತರ ಗಬೆಲ್ಸ್ ಚಾನ್ಸಲರ್ ಆಗತಕ್ಕದ್ದೆಂದು ಹಿಟ್ಲರ್ ತನ್ನ ಉಯಿಲಿನಲ್ಲಿ ಸೂಚಿಸಿದ್ದನಾದರೂ ಹಿಟ್ಲರ್ ಸತ್ತ ಮರುದಿನ ಗಬೆಲ್ಸ್ ಮತ್ತು ಅವನ ಪತ್ನಿ ಮ್ಯಾಗ್ಡ ತಮ್ಮ ಮಕ್ಕಳಿಗೂ ವಿಷಹಾಕಿ ಕೊಂದರು. ನಂತರ ಗಬೆಲ್ಸ್ ಸೇವಕ ಇವರಿಬ್ಬರ ಕೋರಿಕೆಯಂತೆ ಇವರಿಗೆ ಗುಂಡು ಹೊಡೆದು ಸಾಯಿಸಿದ (1945ರ ಮೇ 1). ಗಬೆಲ್ಸನ ದಿನಚರಿ 1948ರಲ್ಲಿ ಪ್ರಕಟವಾಯಿತು.

(ಎ.ಎಂ.ಆರ್.)

**ಗಬ್ಬೂರು :** ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನ ಒಂದು ಗ್ರಾಮ, ಐತಿಹಾಸಿಕ ಸ್ಥಳ, ಹೋಬಳಿ ಕೇಂದ್ರ ದೇವದುರ್ಗಕ್ಕೆ ಆಗ್ನೇಯದಲ್ಲಿ, ರಾಯಚೂರು ಮಾರ್ಗದಲ್ಲಿದೆ. ಈ ಗ್ರಾಮಕ್ಕೆ ಗೊಬ್ಬೂರು ಎಂಬ ಹೆಸರೂ ಇದೆ. ಇದು 12–13ನೆಯ ಶತಮಾನಗಳಲ್ಲಿ ಗೋಪುರ ಗ್ರಾಮ ಎಂಬ ಹೆಸರಾಗಿದ್ದ ಅಗ್ರಹಾರ ಮತ್ತು ವಿದ್ಯಾಕ್ಷೇತ್ರವಾಗಿತ್ತು. ಇಲ್ಲಿ ಚಂಡಿ ದರ್ವಾಜ ಎಂಬ ಹಳೆಯ ದ್ವಾರವೂ ಅನೇಕ ದೇವಾಲಯಗಳೂ ಶಿಲಾಶಾಸನಗಳೂ ಇವೆ. ಮಲೇಶಂಕರ, ವೆಂಕಟೇಶ್ವರ, ಈಶ್ವರ, ಬಂಗಾರ ಬಸಪ್ಪ ಮತ್ತು ಹನುಮಂತ ದೇವಾಲಯಗಳು ಮುಖ್ಯವಾದವು. ಮಲೇಶಂಕರ ದೇವಾಲಯದಲ್ಲಿಯ ಹೊರಭಾಗದ ಕೆತ್ತನೆಯ ಕೆಲಸ ಮತ್ತು ಕಲ್ಲಿನಲ್ಲಿ ಕೊರೆದ ಆನೆಗಳು ನೋಡತಕ್ಕವು. ಇದರ ಪೂರ್ವಕ್ಕೆ ಇರುವ ಕಲ್ಯಾಣಿಯನ್ನು ಸಾತ್ ಬಾವಡಿ ಎಂದು ಕರೆಯುತ್ತಾರೆ. ಗಣ್ಣಿಗುಡಿ ಮಠದ ಮಹಾದ್ವಾರದ ಕೆತ್ತನೆ ಕೆಲಸ ಬಹಳ ಸುಂದರವಾಗಿದೆ. ಒಂದು ಕಾಲದಲ್ಲಿ ಊರ ಸುತ್ತಲೂ ಇದ್ದ ಕೋಟೆಯ ಅವಶೇಷಗಳು ಕಾಣಸಿಗುತ್ತವೆ. ಕಲ್ಯಾಣ ಚಾಳುಕ್ಯ 6ನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ್ದ ಸು. 1109ರ ಶಾಸನದ ಪ್ರಕಾರ (ಈ ಶಾಸನ ಈಗ ಹೈದರಾಬಾದಿನಲ್ಲಿರುವ ಪುರಾತತ್ತ್ವ ವಸ್ತು ಸಂಗ್ರಹಾಲಯದಲ್ಲಿದೆ) ಬ್ರಹ್ಮಜಿನಾಲಯವೆಂಬ ಜೈನ ಮಂದಿರವೊಂದು ಇಲ್ಲಿದ್ದಿತ್ತು. ಅಂದು ಈ ಊರಿಗೆ ಹಿರಿಯ ಗೊಬ್ಬೂರು ಎಂಬ ಹೆಸರಿತ್ತೆಂದು ತಿಳಿದು ಬರುತ್ತದೆ. ಬಂಗಾರ ಬಸಪ್ಪನ ಗುಡಿಯಲ್ಲಿ ಒಂದು ಶಾಸನವೂ ಗಣೇಶನ ಮತ್ತು ಎರಡು ನಂದಿಗಳ ವಿಗ್ರಹಗಳೂ ಇವೆ. ಜೇಡರ ದಾಸಿಮಯ್ಯನ ಶಿಷ್ಯ ಮತ್ತು ಪುತ್ರ ಇಲ್ಲಿಯ ಗಣೇಶ್ವರ ದೇವರಿಗೆ ದತ್ತಿ ಕೊಟ್ಟಿರುವ ಉಲ್ಲೇಖ ಇಲ್ಲಿಯ ಇನ್ನೊಂದು ಶಾಸನದಲ್ಲಿದೆ.

(ಜಿ.ಆರ್.ಪಿ.)

**ಗಮಕ ಕಲೆ :** ಸಾಹಿತ್ಯಕ್ಕೆ ಸಂಗೀತವನ್ನು ಬೆರೆಸಿ ಅದರ ಮಾಧುರ್ಯವನ್ನು ಇಮ್ಮಡಿಗೊಳಿಸುವ ಕಲೆ. ಒಂದರ್ಥದಲ್ಲಿ ಕಾವ್ಯರಸ–ಗಾನರಸಗಳ ಮೈತ್ರಿಯುಳ್ಳದ್ದು. ಇದನ್ನರಿತ ಕಲೆಗಾರನೇ ಗಮಕಿ ಅಥವಾ ಕಾವ್ಯವಾಚಕ.

ಗಮಕ ಕಲಾಪ್ರಕಾರವು ಸಾಕಷ್ಟು ಪ್ರಾಚೀನವಾದದ್ದು. ಆದಿಕಾವ್ಯಮಿದಂ ಪ್ರೋಕ್ತಂ ಪುರಾವಾಲ್ಮೀಕಿನಾಕೃತಮ್ ಎನ್ನುವ ರಾಮಾಯಣದ ಕಾವ್ಯ ಕರ್ತೃ ವಾಲ್ಮೀಕಿಯಾದಂತೆ, ಆತ ರಾಮಾಯಣವನ್ನು ಹಾಡಿಸಿದ ಲವಕುಶರು ಆದಿಗಮಕಿಗಳು. ಗ್ರಾಮೀಣ ಪರಿಸರವೇ ಪ್ರಮುಖವಾಗಿ ಇರುವ ಕರ್ನಾಟಕದಲ್ಲಿ ಕಾವ್ಯದ ಜತೆಜತೆಗೇ ಅರಳಿದ ಜಾನಪದ, ಜನಪದ ಸಾಹಿತ್ಯ ಆ ಮೂಲಕ ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್.... ಎಂಬುದಾಗಿ ಕವಿರಾಜಮಾರ್ಗ ಕರ್ತೃ ಅಭಿವ್ಯಕ್ತಿಸಿರುವಂತೆ, ಕೋಲುಹುಯ್ಯೋಪದವೂ, ಗೀಗೀಪದ–ಕಂಸಾಳೆ–ಹರಿಕಥೆ–ಶಿವಕಥೆ, ವೀರರ ಬದುಕಿನ ಗಾಥೆ ಹಾಡುವ ಲಾವಣಿ, ಪ್ರಸಂಗ–ಯಕ್ಷಗಾನ–ತಾಳಮದ್ದಳೆ, ಬಯಲಾಟ ಈ ಎಲ್ಲ ಜನಪದ ಕಾವ್ಯಪ್ರಕಾರಗಳಲ್ಲಿಯೂ ಗಮಕ ಕಲೆ ತನ್ನದೇ ವಿಶಿಷ್ಟ ಶೈಲಿಯಲ್ಲಿ, ಅನನುಕರಣೀಯ ರೀತಿಯಲ್ಲಿ ಹಾಸುಹೊಕ್ಕಾಗಿರುವುದೂ ಗಮನೀಯ. ಅದರಂತೆಯೇ ಆದಿಕವಿ ಪಂಪನಿಂದ ಕುವೆಂಪು ಅವರವರೆಗೆ ಹಾಗೂ ನಮ್ಮ ನಾಡಿನ ಇತಿಹಾಸ–ಸಾಹಿತ್ಯ–ಸಂಸ್ಕೃತಿಗಳ ದಾಖಲೆಗಳಾಗಿ ಇರುವ ಶಾಸನಗಳತನಕ – ಗಮಕದ ವ್ಯಾಪ್ತಿಯನ್ನು ಗುರುತಿಸಬಹುದು. ಹಿನ್ನೆಲೆ :

ಶ್ರೀ ವಾಗ್ದೇವಿ ಚತುರ್ಮುಖಾಸ್ಯ ಕಮಲಶ್ರೀಹಂಸೆ ವೀಣಾರವ

(i) ಸ್ರಾವಾಸಕ್ತೆ ಸಪುಸ್ತಕಾನ್ವಿತೆ ಲಸತ್ ಸಾಹಿತ್ಯ ಸಂಗೀತ ಸ ।
ದ್ಭಾವಸ್ರೂ ಕವಿವಾದಿ ವಾಗ್ಮಿ ಗಮಕ ವ್ಯಾಖ್ಯಾತೃ ಚಿತ್ತೋಲ್ಲಸತ್
ಪ್ರಾವೀಣ್ಯಪ್ರದೆಯಿಂ ಕಲೋದ್ಧರಣಮಕ್ಕೀ ನಾಡಿನೊಳ್ ನಾಡೆಯೂ ॥
(ಪ್ರಾಚೀನಶಾಸನೋಕ್ತ–ಶಾಸನಮಂಜರಿ–ರಾ. ನರಸಿಂಹಾಚಾರ್ಯ)

(ii) ಅವರಗ್ರತನಯನಾತಂ ।
ವಿವೇಕ ಥಥಥ ಸರೋವರ ಹಂಸ ।
ಕವಿಗಮಕಿ ವಾಗ್ಮಿಗಮವನೀತಳದೊಳೊಗೆದಾ ।
ಸುಗಂ ಕಳ್ಪಕುಜಂ ॥

E.I Vol. IX, C.E. 1040 (xxx – ಶಾಸನದ ಕಲ್ಲು ಕೆತ್ತಿಹೋಗಿದೆ–ಲಿಪಿ ಇಲ್ಲ)

(iii) ಕವಿಗಮಕಿ ವಾದಿ ವಾಗ್ಮಿಗ ।
ಳವಿವೇಕದ ದೆಸೆಯನರಿಯರಾಶ್ರಿತ ಜನಮು ॥
ತ್ತವದಿಂ ಬೇಡಲ್ಕೀವರ್ ।
ಸವಿಲಾಸಿಗಳ್ತೆ ಶಿವೆಯಗೇರಿಯನೂರ್ವರ್
(ಶಾಸನ ಪದ್ಯಮಂಜರಿ–ಪುಟ 147, ಪದ್ಯ 862)

(iv) ಸಾಧುಗೆ ಸಾಧು ಮಾಧುರ್ಯನ್ಗೆ ಮಾಧುರ್ಯಂ ।
ಬಾದಿಪ್ಪ ಕಲಿಗೆ ಕಲಿಯುಗ ।
ವಿಪರೀತನ್ ಮಾಧವನೀತನ್ ಪೆರನಲ್ಲ ॥
(ಕಪ್ಪೆಅರಭಟ್ಟನ ಶಾಸನ – ತ್ರಿಪದಿ – ಬಾದಾಮಿ; ಸು. 8ನೆಯ ಶತಮಾನ)

(v) ನುಡಿದು ತಲೆದೂಗಿಸುವಮರೆಗ ।
ನ್ನಡಕೆ ಹಾಹಾಯೆನಿಸಿ ಮೆಚ್ಚನು
ಪಡೆವ ವಾಗ್ಮಿಗಳೋದಿ ಹೊಗಳಿಸಿಕೊಂಬ ಗಮಕಿಗಳು ॥
ಕೊಡುವ ಪದ್ಯಕೆ ಸುಪ್ರಮೇಯದ ।
(ಕುಮಾರವ್ಯಾಸಭಾರತ – ಸಂಧಿ 8 – ಪದ್ಯ 38)

ಪ್ರಾಚೀನ ಸಂಗೀತಶಾಸ್ತ್ರಜ್ಞನಾದ ಶಾರ್ಙ್ಗದೇವನು (1230) ತನ್ನ ಸಂಗೀತರತ್ನಾಕರ ಗ್ರಂಥದಲ್ಲಿ ತಿಳಿಸಿರುವಂತೆ, "ಕೇಳುಗರಿಗೆ ಸುಖವೀಯುವ ರೀತಿಯಲ್ಲಿ ಸ್ವರಗಳನ್ನು ಕಂಪಿಸುವುದೇ ಗಮಕ, ವಾಚಸ್ಪತ್ಯ ಕೋಶದ ಪ್ರಕಾರ, ಸ್ಪಷ್ಟಪಡಿಸುತ್ತ, ಯಾವುದು ಮೂರ್ಛನಾದಿ ಲಕ್ಷಣಗಳಿಂದ ತನ್ನನ್ನೇ ಹೊಂದಿಸುವುದೋ ಅದು ಗಮಕ".

"ಗಮಯತೀತಿ ಗಮಕ, ಗಮಯತಿ=ಪ್ರಾಪಯತಿ, ಬೋಧಯನೆ ವಾ"

(ಇಲ್ಲಿ ಮೂರ್ಛನಾ ಎಂದರೆ ಸಂಗೀತದಲ್ಲಿ ಹಾಡುವಿಕೆಯಲ್ಲಿ ಸಪ್ತಸ್ವರಗಳ ಏರಿಳಿತಗಳ ಆಲಾಪನೆ. ಗಮಕ ಕಲೆಯಲ್ಲಿ ಪದ್ಯಗಳನ್ನು ಹಾಡುವಾಗ, ಆಯಾ ಸನ್ನಿವೇಶ–

ರಸ–ಧ್ವನಿಗಳಿಗೆ ಸಂಬಂಧಿಸಿದಂತೆ ಆಯಾ ರಾಗಗಳಲ್ಲಿ ವಾಚಿಸುವುದರಿಂದ ಅದ್ಭುತ ಪರಿಣಾಮ ಮನದ ಮೇಲಾಗುವುದೆಂಬುವ ಅಂಶ ಕೇಳುವ ಸಹೃದಯರಿಗೆ ಸುವಿದಿತ).

ಗಮಕ ವಿದ್ಯೆಯ ಪ್ರಾಚೀನತೆಯನ್ನು ಸಾರುವ ಮತ್ತಷ್ಟು ವಿಚಾರಗಳಿವು : ಪ್ರ.ಶ.ಪೂ. 1ನೆಯ ಶತಕದ ಲಲಿತ ವಿಸ್ತರ ಎಂಬ ಗ್ರಂಥದಲ್ಲಿ 64 (ಚತುಶ್ಶಷ್ಟಿ) ಕಲೆಗಳನ್ನು ಬಲ್ಲವನಾಗಿದ್ದ ಗೌತಮ ಬುದ್ಧನು 38ನೆಯ ಕಲೆಯಾಗಿ ಗಮಕ ಕಲೆಯನ್ನು ಸೂಚಿಸಿರುವುದು ಗಮನಾರ್ಹ. ಹಾಗೆಯೇ 1ನೆಯ ಶತಮಾನದ ಸುಮಾರಿನಲ್ಲಿದ್ದ ವಾತ್ಸಾಯನನಿಂದ (ಕಾಮಶಾಸ್ತ್ರ ಬರೆದವನಲ್ಲ) ರಚಿತವಾದ ಗೀತಪಠಿತಂ ಎಂಬ ಕೃತಿಯಲ್ಲಿ ಗಮಕವೆಂದರೆ "ಪುಸ್ತಕ ವಾಚನ"ವೆಂದು ತಿಳಿಸಿರುವುದು ಉಲ್ಲೇಖನೀಯ. ಇವೆಲ್ಲವೂ ಗಮಕಕಲೆಯ ಪ್ರಾಚೀನತೆಯನ್ನು ಸಾರುತ್ತವೆ. ಹೀಗೆ ಶಾಸನ, ಕಾವ್ಯಶಾಸ್ತ್ರ ಎಲ್ಲದರಲ್ಲಿಯೂ ಈ ಕಲೆಯ ಪ್ರಾಚೀನತೆಯನ್ನು ಕುರಿತ ಮಾಹಿತಿಯನ್ನು ನಾವು ಗಮನಿಸಬಹುದಾಗಿದೆ. ಒಡೆಯರ ಕಾಲದ ಗೋವಿಂದ ವೈದ್ಯನೆಂಬುವ ಕವಿ ತನ್ನ ಚಂಪೂಕೃತಿ ಕಂಠೀರವನರಸರಾಜವಿಜಯದಲ್ಲಿ ಭಾರತಿಗಳು ರಂಜಿಸಿದರು ಎನ್ನುತ್ತಾನೆ. ಅಂದರೆ, ಅವನ ಕಾಲಕ್ಕೆ ಹಾಡುವ ಗಮಕಿಗಳಿದ್ದರು ಎಂಬುದು ಇದರ ಸೂಚನೆ. ಭಾರತಿನಂಜನ ಮೂಲಕ ರಾಜ ಇಡೀ ಕಾವ್ಯವನ್ನೆ ಹಾಡಿಸಿದನಂತೆ. ಹೀಗೆಯೇ ರತ್ನಾಕರವರ್ಣಿಯ ಭರತೇಶ ವೈಭವದಲ್ಲಿಯೂ ದಂಡಿಗೆ ಮಿಡಿಯುತ್ತ ಗಮಕಿ ಹಾಡಿದಳೆಂಬುವ ಅಂಶವು ಧ್ವನಿತಗೊಂಡಿದೆ. ಬತ್ತೀಸರಾಗದೊಳೋದಿಭೂಪಾಲನ ಚಿತ್ತಕೆ ಬಂದವಳೇಳ್ವೆ ಎಂಬುವ ಪ್ರಶಂಸೆಯೂ ಇದ್ದು, ಬಸವೇಶ್ವರಾದಿ ವಚನಕಾರರಲ್ಲಿಯೂ ಗಮಕ ಕಲೆಯ ಪ್ರಸ್ತಾಪವಿರುವುದು ಗಮನೀಯ:

ತಾಳಮಾನಸರಿಸವ ನಾನರಿಯೆ,
ಓಜೆ ಬಜಾವಣೆ ಲೆಕ್ಕವನರಿಯೆ,
ಅಮೃತಗಣ ದೇವಗಣವನರಿಯೆ
ಕೂಡಲಸಂಗಮದೇವ, ನಿನಗೆ ಕೇಡಿಲ್ಲವಾಗಿ
ಆನು ಒಲಿದಂತೆ ಹಾಡುವೆ – (ಬಸವಣ್ಣ)

ಪ್ರಮುಖವಾಗಿ ಗಮಕವೆಂದರೆ ಕಾವ್ಯವಾಚನ, ಸಾಹಿತ್ಯ ಸಾರವನ್ನು ಬದುಕಿನ ಮೌಲ್ಯಗಳನ್ನು ಜನತೆಗೆ ಮುಟ್ಟಿಸುವ ಸುಲಭ ಮಾಧ್ಯಮ. ಅಂದರೆ, ಕೇಳುಗರಿಗೆ ರಸಾನುಭವ–ಬದುಕಿನ ಬಗ್ಗೆ ಉತ್ತಮಿಕೆಯನ್ನು ಒಡಮೂಡಿಸುವ ಹಾಗೆ ಕಾವ್ಯಗಳನ್ನು ವಾಚಿಸುವ (ಹಾಡುವ)ವರನ್ನು ಗಮಕಿ ಎನ್ನುವುದು ರೂಢಿ. ಹಾಗೆಯೆ ಕಾವ್ಯದ ಅಂತರಾರ್ಥದ ಸೊಗಸು–ಸೊಬಗು–ಸೊಗಡನ್ನು ಅರ್ಥಯಿಸಿ ಬಿತ್ತರಿಸುವವರು ವ್ಯಾಖ್ಯಾತರು ಯಾ ವ್ಯಾಖ್ಯಾನಕಾರರು (ಕಾಮೆಂಟೇಟರ್) ಎಂದು ಕರೆಯಿಸಿಕೊಳ್ಳುತ್ತಾರೆ. ಬಹು ಹಿಂದೆ ರಾಜರ ಆಸ್ಥಾನಗಳಲ್ಲಿ ಕವಿಗಳು, ಸಂಗೀತಗಾರರು, ನೃತ್ಯಕಲಾವಿದರು – ಇಂತಹವರಿಗೆ ಮಾನ್ಯತೆಗಳಿದ್ದಂತೆಯೇ ಗಮಕಿಗಳಿಗೂ ಅತ್ಯುತ್ತಮ ಸ್ಥಾನಗಳಿದ್ದವು.

ಕನ್ನಡ, ತಮಿಳು, ತೆಲುಗು ಮೊದಲಾದ ಅನೇಕ ಭಾಷಾ ಸಾಹಿತ್ಯ ಇತಿಹಾಸದಲ್ಲಿ ಕವಿ, ಗಮಕಿ, ವಾದಿ ಹಾಗೂ ವಾಗ್ಮಿ – ಇಂತಹ ನಾಲ್ಕು ವಿಭಾಗಗಳಲ್ಲಿ ಪಾಂಡಿತ್ಯವನ್ನು ಗುರುತಿಸಿರುವುದನ್ನು ಗಮನಿಸಬಹುದು. ಇದರಿಂದ, ಗಮಕದ ವಿಶೇಷತೆ, ಇದೊಂದು ಸರ್ವಮಾನ್ಯತೆ ಗಳಿಸಿದ್ದ ಕಲೆ ಎಂಬ ಅಂಶ ಮನವರಿಕೆಯಾಗುತ್ತದೆ. ಈ ವಿಚಾರಗಳಿಗೆ ಪೋಷಕವಾಗಿ ಪ್ರಾಚೀನ ಕಾವ್ಯಶಾಸ್ತ್ರಾದಿ ಕೃತಿಗಳಲ್ಲಿ ಈ ಕಲೆಯನ್ನು ಕುರಿತಂತೆ ಕಂಡುಬರುವ ಕೆಲವು ವಿಷಯಗಳನ್ನು ಉಲ್ಲೇಖಿಸಬಹುದು:

ವಾಲ್ಮೀಕಿ ಈ ಕಲೆಯನ್ನು ಲಯ ಸಮನ್ವಿತಾಂ.... ಎಂದೂ ಮಂಗರಾಜ ನಿಘಂಟುಕಾರ ವಾಚಕ, ಲಿಪಿಯನೋದುವಂ.... (ಪದ್ಯ 360) ಎಂದೂ ನಿಜಗುಣಶಿವಯೋಗಿ ತನ್ನ ವಿವೇಕ ಚಿಂತಾಮಣಿ ಕೃತಿಯಲ್ಲಿ ತಾನಮಾನಂದೋಜೆ ವಿಶ್ರಮಣನನಜಿದು ಪದನಂ ವ್ಯಕ್ತಿಗೈದು ಕೇಳ್ವರ ಕಿವಿಗೊಳಿಸಿ ಮೃದುಮಧುರ ವರ್ಣೋಚ್ಚಾರಣಂ ಮಾಳ್ಪರ್ ಗಮಕಿಗಳ್ ಎಂದೂ ತಮಿಳಲ್ಲಿ ಅರುಂಬೊರುಳೈ ಚ್ಚೆಂಬೊರುಳ್ । ನಡ್ಯೆಯಾಯ್‌ಕ್ಕಾಟ್ಟಿಪಾಡುವೋನ್ ಗಮಕನ್ (ಗೂಢವಾದ ಅರ್ಥಗಳನ್ನು ಸ್ಫುಟವಾಗಿ ಗೊತ್ತಾಗುವ ಹಾಗೆ ಬಿಡಿಬಿಡಿಸಿ ಹಾಡುವಾತ ಗಮಕಿ) ಎಂದೂ ನೀತಿಪಾಠದಲ್ಲಿ –

ಎಡರದೆ ತಡೆಯದೆ ತಲೆಯಂ ।
ಕೊಡಹದೆ ಕಡುವಹಿಲ ಜಾಡ್ಯವೆನಿಸದೆ ರಸಮಂ ।
ಕೆಡಿಸದೆ ಸರ್ವರ ಚಿತ್ತ ।
ಕ್ಕೊಡಬಡಮೋದುವನೆಗಮಕಿ ಕನ್ನಡ ಜಾಣಾ॥

ಎಂದರೆ, ಕಾವ್ಯವೋದುವಲ್ಲಿ (ಹಾಡುವಲ್ಲಿ) ಎಡವದಂತೆ, ತೊಡರಿಸದಂತೆ, ಹರಿವ ಸಲಿಲದಂತೆ ನಿರರ್ಗಳವಾಗಿ ಸಾಗುವಂತೆ ತಲೆಕೊಡವದಂತೆ, ರಸ ಕೆಡಿಸದಂತೆ, ಎಲ್ಲರ ಮನರಂಜಿಸುವಂತೆ ವಾಚಿಸಬಲ್ಲವ – ಗಮಕಿ ಎಂದೂ ಹೇಳಿದೆ.

ಕನ್ನಡದ ಆದಿಕವಿ ಪಂಪನ ವಿಕ್ರಮಾರ್ಜುನವಿಜಯ (ಪಂಪಭಾರತ) ಕಾವ್ಯದಲ್ಲಿ:

ಕವಿ ಗಮಕಿ ವಾದಿ ವಾಗ್ಮಿ
ಪ್ರವರರ ಪಂಡಿತರ ನೆಗಟ್ದ ಮಾತಱಿವರ ಸ ।
ಬ್ಬವದವರೊಡನಂತೆಸೆದ
ನ್ನವಾಸದೋಲಗದೊಳಿರ್ಪನಾಗಳ್ ಹರಿಗಂ ॥ ಎಂದು ಹೇಳಿದೆ.

ಪೊನ್ನ ತನ್ನ ಶಾಂತಿಪುರಾಣ ಕಾವ್ಯದಲ್ಲಿ ತನ್ನನ್ನು ಪ್ರಶಂಸೆ ಮಾಡಿಕೊಂಡಿರುವ ಸಂದರ್ಭದ ಪದ್ಯವೊಂದರಲ್ಲಿ ಗಮಕಿಯ ವಿಚಾರ ಹೀಗೆ ನಿರೂಪಣೆಗೊಂಡಿದೆ :

ಇದಿರ್ಗೆ ಬರೆ ಪೊನ್ನಿಗಂ ಕಿಡಿ
ಸದಿರಂ ಕವಿ ಗಮಕಿ ವಾದಿ ವಾಗ್ಮಿಗಳ ಕವಿ
ತ್ವದ ಗಮಕಿತ್ವದ ವಾದಿ
ತ್ವದ ವಾಗ್ಮಿತ್ವದ ಪೊಡರ್ಪುಮಂದರ್ಪಮುಮಂ ॥

ಹರಿಹರ ತನ್ನ ನಂಬಿಯಣ್ಣನ ರಗಳೆಯಲ್ಲಿ ಗೇಯಗೋಷ್ಠಿ, ಗಮಕಿತ್ವದ ವಾಗ್ಮಿವೃಂದದೊಳ್ ನಂಬಿಯಣ್ಣನು ಕವಿಗಮಕಿ ವಾದಿ ವಾಗ್ಮಿಗಳನ್ನು ಉಪಚರಿಸಿ, ಗೌರವಿಸುತ್ತಿದ್ದ ಪರಿ ತಿಳಿಯಬರುತ್ತದೆ. ಇನ್ನು ಲಕ್ಷ್ಮೀಶನಲ್ಲಿ ಸ್ಪಷ್ಟವಾಗಿ ಕವಿಗಮಕಿಗಳ ಕುರಿತ ಚಿತ್ರಣ ನಮಗೆ ದೊರೆಯುತ್ತದೆ. ದುರ್ಗಸಿಂಹ ತನ್ನ ಕನ್ನಡ ಪಂಚತಂತ್ರದಲ್ಲಿಯೂ ಶ್ರೀಮಾದಿರಾಜ ಎಂಬುವ ಮುನಿಯ ಕವಿಗಮಕಿವಾದಿ ವಾಗ್ಮಿ ಪ್ರವರನೆಂದಿದ್ದಾನೆ. ಕಬ್ಬದ ಸೃಜನೆಯಲ್ಲಿ ವಿಶಿಷ್ಟರೆನಿಸುವ ಕನಕದಾಸರಂತೂ ತಮ್ಮ ಮೋಹನತರಂಗಿಣಿ ಹಾಡುಗಬ್ಬದಲ್ಲಿ (3–40) ಶ್ರೀಕೃಷ್ಣನಿದ್ದ ದ್ವಾರಕೆಯನ್ನು ಬಣ್ಣಿಸುವಲ್ಲಿ ಹೀಗೆ ಹಾಡಿದ್ದಾರೆ:

ರವಿ ಸಿದ್ಧಾಂತ ಪಾಠಕರಷ್ಟಭಾಷಾ । ಕವಿ ಗಮಕಿಗಳು ತಾರ್ಕಿಕರು ।
ವಿವಿಧ ವಿದ್ವತ್ಸಭೆ ನೆಱೆದುದು ಲಲಿತಾ ಭಾರ್ಗವಿಯ

ಕಾಂತನ ಪುರದೊಳಗೆ ಎನ್ನುವಲ್ಲಿ ಜ್ಯೋತಿಷಿಗಳ ಕುರಿತ ಅಂಶವೂ ಬಿತ್ತರಗೊಂಡಿದೆ.

ಶಿವ ಪಾರಮ್ಯವನ್ನು ಮೆರೆದ ಭೀಮಕವಿಯ ಬಸವಪುರಾಣದಲ್ಲಿ ಕವಿಗಮಕಿವಾದಿ ವಾಗ್ಮಿಗಳ ಸಂಪೂರ್ಣ ಚಿತ್ರಣ ದೊರೆಯುತ್ತದೆ.

ಗಮಕ ಕಲೆಯ ವಿಷಯವಾಗಿ ಪುರಂದರದಾಸರ ಒಂದು ಕೀರ್ತನೆ ಬಹಳ ಮುಖ್ಯವಾದ ಕೆಲವು ವಿಷಯಗಳನ್ನು ತಿಳಿಸುತ್ತದೆ.

ತಾಳ ಬೇಕು । ತಕ್ಕ ಮೇಳ ಬೇಕು
ಶಾಂತ ವೇಳೆ ಬೇಕು–ಗಾನವ ಕೇಳಬೇಕೆನ್ನುವಗೆ ॥ಪ॥

॥ಚ॥ ಯತಿಪ್ರಾಸವಿರಬೇಕು । ಗತಿಗೆ ನಿಲ್ಲಿಸಬೇಕು
ರತಿಪಿತನೊಳು ಅತಿಪ್ರೇಮವಿರಬೇಕು ॥1॥

ಗಳ ಶುದ್ಧವಿರಬೇಕು–ತಿಳಿದು ಪೇಳಲಿ ಬೇಕು
ಕಳವಳ ಬಿಡಬೇಕು–ಕಳೆ ಮುಖವಿರಬೇಕು ॥2॥

ಅರಿತವರಿರಬೇಕು–ಹರುಷ ಹೆಚ್ಚಲಿ ಬೇಕು
ಪುರಂದರ ವಿಠಲನ–ಪರದೈವವೆನಬೇಕು ॥3॥

ಈ ಎಲ್ಲ ಅಂಶಗಳನ್ನೂ ಗಮನಿಸಿ, ಶ್ರದ್ಧಾಭಕ್ತಿಯಿಂದ ಕವಿಕೃತಿಯನ್ನು ಚೆನ್ನಾಗಿ ಅಭ್ಯಾಸ ಮಾಡಿ ಅದರ ಸಂಪೂರ್ಣ ರಸಭಾವಗಳು ಶ್ರೋತೃಗಳಲ್ಲಿ ಉದ್ಬೋಧವಾಗುವಂತೆ ಮಾಡುವ ಗಮಕಿ ನಿಜವಾಗಿ ಆ ಹೆಸರಿಗೆ ತಕ್ಕವನಾಗುತ್ತಾನೆ. ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ, ಬೀಭತ್ಸ, ಅದ್ಭುತ, ಶಾಂತವೇ ಮೊದಲಾದ ನವರಸಗಳೂ ಮೂಡಿಬರುವಂತೆ ಮಾಡುವುದು ನಿಜವಾದ ವಾಚನ ವೈಖರಿಯ ಅಗ್ಗಳಿಕೆ. ಯತಿ, ಗಣ, ಪ್ರಾಸ ಇತ್ಯಾದಿಗಳನ್ನೂ ಷಟ್ಪದಿ, ಸಾಂಗತ್ಯ, ರಗಳೆ, ಶತಕ, ತ್ರಿಪದಿ, ಕಂದ ಮೊದಲಾದ ಛಂದೋವೈವಿಧ್ಯವನ್ನೂ ಗಮಕಿ ಅರಿತಿರಬೇಕು.

ಸುಶ್ರಾವ್ಯವಾಗಿ ವಾಚನ ಮಾಡಲು ಶ್ರುತಿ, ಗತಿಗಳನ್ನು ಅನುಸರಿಸಬೇಕು. ಸುಕಂಠದಿಂದ ಸ್ಫುಟವಾಗಿ ಕಾವ್ಯದ ನುಡಿಯನ್ನು ನಾಲಗೆಯಲ್ಲಿ ಕುಣಿಸಬೇಕು. ತಾನು ಆನಂದಪಟ್ಟು ವಾಚಿಸಿದಲ್ಲಿ ಕೇಳುವವರಿಗೂ ಆನಂದವಾಗುವುದು. ಅವರ ಹೃದಯವೂ ಮಿಡಿಯುವುದು. ಶ್ರುತಿಭೇದ, ರಾಗಭೇದ, ಸಂಗೀತದ ಸ್ವರಸ್ಥಾಯಿ, ಗಮಕ, ವರ್ಣ, ಕೃತಿಯ ಜೀವಾಳ – ಇವನ್ನು ತಿಳಿದುಕೊಳ್ಳದಿದ್ದರೆ ಗಮಕ ಹಿತವಾಗಿರುವುದಿಲ್ಲ. ಇನ್ನು ತಾಳದ ವಿಷಯ. ಪದ್ಯದ ಸಹಜವಾದ ಗತಿ, ಲಯ, ಏರಿಳಿತಗಳ ಕಡೆ ಗಮನವಿರಬೇಕು. ಎಲ್ಲಿ ಮುರಿಯಬೇಕು, ಎಲ್ಲಿ ನಿಲ್ಲಿಸಬೇಕು, ಎಲ್ಲಿ ನೆರವಲು ಮಾಡಬೇಕು ಎಂಬುದನ್ನರಿತು ಅರ್ಥವಾಗುವಂತೆ ಜಾಗ್ರತಿಯಿಂದ ಪದಗಳ ಜಾಡು ಹಿಡಿಯಬೇಕು. ವಾಚಿಸುವಾಗಲೇ ಅರ್ಥ ಮೂಡಬೇಕು. ಅಭಿನಯದ ಮುದ್ರೆಗಳ ಪರಿಚಯ ಪಡೆದುಕೊಂಡು ಸಮಯವರಿತು ಅವನ್ನು ಪ್ರಯೋಗ ಮಾಡುವುದು ಲೇಸು.

ಸರಾಗದಿಂದ ಸುಮ್ಮನೆ ವಾಚನ ಮಾಡುವುದೂ ಗಮಕವೇ. ಗದ್ಯಕೃತಿಗಳನ್ನು, ನಾಟಕ ಭಾಗಗಳನ್ನು, ಅನೇಕ ಹೊಸಗನ್ನಡ ಕವಿತೆಗಳನ್ನು–ಅದರಲ್ಲೂ ಹೆಚ್ಚಿನ ನವ್ಯಕತೆಗಳನ್ನು ಹಾಡಲಾಗದು. ಅವನ್ನು ಭಾವಪೂರ್ಣವಾಗಿ ಅಭಿನಯ ಸಹಿತವಾಗಿ ಓದುವುದನ್ನು ಅಭ್ಯಾಸ ಮಾಡಬೇಕು.

ಕನ್ನಡ ಸಾಹಿತ್ಯದಲ್ಲಿ ಬಗೆಬಗೆಯ ಕಾವ್ಯ ರಚನೆಯಾಗಿರುವುದರಿಂದ ಅವನ್ನು ಗಮಕಿಸುವ ರೀತಿಯೂ ಬಗೆಬಗೆಯಾಗಿದೆ. ಅದರ ಪ್ರಯೋಗವನ್ನು ಗಮಕಿಯಾದವನು ಸಾಧಿಸಬೇಕಾಗಿದೆ. ಮೊದಲು ಹಳೆಯ ಚಂಪೂಕಾವ್ಯವನ್ನು ನೋಡಬಹುದು. ಅದರಲ್ಲಿ ಗದ್ಯ, ಪದ್ಯ ಮಿಶ್ರವಾಗಿರುತ್ತದೆ; ಕಂದ, ವೃತ್ತಗಳಿರುತ್ತವೆ. ಗದ್ಯವನ್ನು ಸ್ಫುಟವಾಗಿ ಸರಾಗವಾಗಿ ಓದಬೇಕು. ಅನೇಕ ವೃತ್ತಗಳಿಗೆ ಹಾಗೂ ಕಂದಕ್ಕೆ ತಾಳವಿಲ್ಲ. ಲಯವುಂಟು. ಅರ್ಥ ಕೆಡದಂತೆ, ನಿಲುಗಡೆ ಅರಿತು ಸೂಕ್ತ ರಾಗಗಳನ್ನು ಸಂಯೋಜಿಸಿ ಹಾಡಿದಾಗ ಮನರಂಜನೆಯಾಗುವುದು. ಆದಿಕವಿ ಪಂಪನ ಸಮಸ್ತಭಾರತವನ್ನೂ ಮಹಾಕವಿ ರನ್ನನ ಗದಾಯುದ್ಧವನ್ನೂ ವಾಚಿಸುವ ಬಗೆಯನ್ನು ಅರಿತುಕೊಳ್ಳಬೇಕು; ಜನ್ನನ ಯಶೋಧರ ಚರಿತೆ ಬರಿ ಕಂದಗಳಲ್ಲಿ ಬಂದಿದೆಯಾದರೂ ಸುಲಲಿತವಾಗಿದೆ, ಸುನಾದಮಯವಾಗಿದೆ. ವಿವಿಧ ರಾಗಗಳಲ್ಲಿ ಅದನ್ನು ಗಮಕಿಸಬಹುದು.



ಗುರು ದೇಶಪಾಂಡೆ ಅವರ ಜೊತೆ ಭೀಮಸೇನ ಜೋಶಿ


ಷಟ್ಪದಿ ಕಾವ್ಯಗಳಲ್ಲಿ ಕುಮಾರವ್ಯಾಸನ ಮಹಾಭಾರತ ಗಮಕಿಗಳ ಭಾಗ್ಯನಿಧಿ ಎನಿಸಿದೆ. ಕುಮಾರವಾಲ್ಮೀಕಿಯ ತೊರವೆ ರಾಮಾಯಣಕ್ಕೆ ಅನಂತರದ ಸ್ಥಾನ. ಇವೆರಡೂ ತುಂಬ ಜನಪ್ರಿಯವಾಗಿವೆ. ಭಾರತ ಬಿಂದೂರಾಯರು, ಕೃಷ್ಣಗಿರಿ ಕೃಷ್ಣರಾಯರು ವಾಚನ ಮಾಡಿ ನಾಡಿನಾದ್ಯಂತ ಇವನ್ನು ಪ್ರಚಾರ ಮಾಡಿದ್ದಾರೆ. ಜನಸಾಮಾನ್ಯರು ಗುರುತಿಸಬಲ್ಲ ನವರಾಗಗಳೇ ಸಾಕು. ಆದ್ದರಿಂದ ಗಮಕಿಗೂ ಸಂಗೀತಾಭ್ಯಾಸ ಬಹಳ ಮುಖ್ಯ. ರಾಗಗಳ ಪರಿಚಯ, ಅವುಗಳನ್ನು ಇಂಪಾಗಿ ಹಾಡುವ ಯೋಗ್ಯತೆ ಅವನಿಗಿರಬೇಕಾಗುತ್ತದೆ. ಸಾಹಿತ್ಯದಲ್ಲಿ ಅಡಗಿರುವ ನವರಸಗಳನ್ನು ಗುರುತಿಸಿ ಅದನ್ನು ಪೋಷಿಸುವ ರಾಗಶಕ್ತಿಯನ್ನು ಗಮಕಿ ಗಳಿಸಿರಬೇಕಾಗುತ್ತದೆ.

ಛಂದಸ್ಸಿನ ವಿಚಾರಕ್ಕೆ ಬಂದರೆ ಕವಿಯು ತನ್ನ ಕೃತಿಯ ಪದ್ಯಗಳನ್ನು ಯಾವ ತಾಳಗತಿಯಲ್ಲಿ ನಡೆಸಿದ್ದಾನೆಂಬ ಅರಿವು ಗಮಕಿಗೆ ಅಗತ್ಯ. ತಾಳಯುತವಾಗಿ ವಾಚಿಸುವುದು ರೂಢಿಯಲಿಲ್ಲದಿದ್ದರೂ ಕವಿಕೃತಿಯನ್ನು ವಾಚಿಸುವಾಗ ತಾಳಕ್ಕೆ ಆಧಾರವಾದ ಗತಿಯನ್ನು ಗುರುತಿಸಿ ಆ ಗತಿಯನ್ನು ಮೆರೆಸಬೇಕು. ಕವಿಗೆ ಸ್ಫೂರ್ತಿ, ಆವೇಶ ಬಂದಾಗ ಅವನ ಮಾತೂ ಲಯಬದ್ಧವಾಗುತ್ತದೆ, ರಾಗಬದ್ಧವಾಗುತ್ತದೆ. ಆಗ ಅವನ ಪದ್ಯಗಳು ಒಂದು ಗತಿಯಲ್ಲಿ ಅಳವಡುವಂತಾಗುತ್ತದೆ. ಅದನ್ನರಿತು ಗಮಕಿ ವಾಚಿಸಿದರೆ ವಾಚನದ ವೈಶಿಷ್ಟ್ಯ ಹೆಚ್ಚಾಗುವುದರೊಂದಿಗೆ ಕೃತಿಯ ಆಸ್ವಾದವೂ ಹೆಚ್ಚುತ್ತದೆ.

ಗಮಕ ಕಲೆಯು ಬಹು ಪ್ರತಿಭೆಗಳನ್ನು ಅಂತರ್ಗತಗೊಳಿಸಿಕೊಂಡಿರುವ ಅದ್ಭುತ ಕಲಾಪ್ರಕಾರ. ಸುಶ್ರಾವ್ಯತೆ, ಕಾವ್ಯದ ಅರ್ಥವಂತಿಕೆ, ರಸಾನುಭವ, ಭಾಷಾಸೌಂದರ್ಯ ಇವೆಲ್ಲದರ ಸಮರ್ಥ ಅಭಿವ್ಯಕ್ತಿಗೆ ಪೂರಕವಾದ ರಾಗ ಭಾವಗಳ ರಹಸ್ಯ ಇತ್ಯಾದಿಗಳೆಲ್ಲವೂ ಈ ಕಲೆಯಲ್ಲಿ ಅಡಗಿದೆ. ಗಮಕಿ ಎಂಬ ಹೆಸರಿಗೆ ಪಾತ್ರನಾದವನು ಕಾವ್ಯ ವಾಚಿಸುವಾಗ ಈ ಎಲ್ಲ ಅಂಶಗಳ ಸಮರ್ಥ ನಿರ್ವಹಣೆಯ ಜವಾಬ್ದಾರಿಯುಳ್ಳವನಾಗಿರಬೇಕು.

ಗಮಕವೆಂದರೆ ಸಂಸ್ಕೃತದಲ್ಲಿ ನಡೆ, ಗತಿ ಎಂದರ್ಥವಾಗುವುದು. ಗಮನದ ಭಾವವೆಂತಲೂ ಅರ್ಥ. ಸಂಗೀತ ಶಾಸ್ತ್ರದ ರೀತಿ ಗಮಕವೆಂದರೆ ಸ್ವರವಿನ್ಯಾಸ, ಧ್ವನಿ ವಿಶೇಷ ಎಂದರ್ಥ. ಆರೋಹಣ, ಅವರೋಹಣ, ಢಾಲು, ಸ್ಫುರಿತ, ಕಂಪನ, ಆಹತ, ಪ್ರತ್ಯಾಹತ, ತ್ರಿಪುಚ್ಛ, ಆಂದೋಳ, ಮೂರ್ಛನಾ ಎಂದು ಹತ್ತು ವಿಧವಾದ ಗಮಕಗಳು ಸಂಗೀತದಲ್ಲಿವೆ. ಗಮಕಿಯ ಗಮಕಕ್ಕೆ ಕಾಕು ಎಂದೂ ಸಂಸ್ಕೃತದಲ್ಲಿ ಕರೆಯುವರು.

19–20ನೆಯ ಶತಮಾನದ ಅವಧಿಯಲ್ಲಿ ಕರ್ನಾಟಕದಲ್ಲಿ ಗಮಕಕಲೆ, ಕಾವ್ಯವಾಚನ ಕ್ಷೇತ್ರದಲ್ಲಿ ಶ್ರಮಿಸುತ್ತ ಈ ಪ್ರಾಚೀನ ಕಲೆಯನ್ನು ನಾಡಿನಾದ್ಯಂತ ಪ್ರಸಾರ ಮಾಡಿದ ಹಿರಿಯರನೇಕರು ಆಗಿಹೋಗಿದ್ದಾರೆ, ಇನ್ನು ಹಲವು ಹಿರಿಯರು ನಮ್ಮೊಡನಿದ್ದು ಗಮಕ ಪ್ರಸಾರ ಕಾರ್ಯವನ್ನು ಮುಂದುವರಿಸುತ್ತಿದ್ದಾರೆ. ಅಭಿನವ ಕಾಳಿದಾಸರೆಂದು ಪ್ರಸಿದ್ಧರಾಗಿದ್ದ ಬಸವಪ್ಪಶಾಸ್ತ್ರಿಗಳು (1843–91) ಗಮಕ ಕಲಾಕ್ಷೇತ್ರದಲ್ಲಿ ಪ್ರಥಮ ಸ್ಮರಣೀಯರು. ಇವರು ಸ್ವತಃ ಕವಿಗಳೂ ವಿದ್ವಾಂಸರೂ ಪಂಡಿತರೂ ಆಗಿದ್ದುದು ಇವರ ಗಮಕ ಕಲೆಗೆ ಅದ್ಭುತವಾಗಿ ವಿಶಿಷ್ಟ ಆಯಾಮಗಳನ್ನು ಒದಗಿಸಿತ್ತು. ಸಂಗೀತ–ಸಾಹಿತ್ಯ–ಭಾಷೆಗಳಲ್ಲಿನ ಪಾಂಡಿತ್ಯಪೂರ್ಣತೆ ಇವರ ಗಮಕ ಕಲೆಯ ಶ್ರೀಮಂತಿಕೆಯಾಗಿತ್ತು. ಇವರ ಗಮಕ ವಾಚನವನ್ನು ಕುರಿತಂತೆ ಹಿರಿಯ ವಿದ್ವಾಂಸರಾದ ಆರ್. ನರಸಿಂಹಾಚಾರ್ಯರ ನುಡಿಗಳು ಇಲ್ಲಿ ಉಲ್ಲೇಖನೀಯ: ನನಗೆ ತಿಳಿದ ಹಾಗೆ ಭಾರತವನ್ನು ಈಚೆಗೆ ಚೆನ್ನಾಗಿ ಓದುತ್ತಿದ್ದವರು ಮೈಸೂರಿನಲ್ಲಿದ್ದ ಸುಪ್ರಸಿದ್ಧ ಬಸವಪ್ಪಶಾಸ್ತ್ರಿಗಳು. ಇವರು ಮೈಸೂರು ಶ್ರೀಮನ್ಮಹಾರಾಜರ ಆಸ್ಥಾನದಲ್ಲಿ ಕವಿಗಳಾಗಿದ್ದು ಅಭಿನವ ಕಾಳಿದಾಸ ಎಂಬುವ ಬಿರುದು ಪಡೆದಿದ್ದವರು. ಇವರಷ್ಟು ಚೆನ್ನಾಗಿ ಭಾರತವನ್ನು ಓದಿದವರನ್ನು ನಾನು ಕಂಡಿಲ್ಲ. ಈ ಮಾತುಗಳಿಂದ ಇವರ ಅವಧಿಯಲ್ಲಿ ಗಮಕಕಲೆ ಸಾಕಷ್ಟು ವ್ಯಾಪ್ತಿಯನ್ನುಳ್ಳದ್ದಾಗಿತ್ತು ಎಂಬುದು ತಿಳಿದುಬರುತ್ತದೆ. ಬಸವಪ್ಪಶಾಸ್ತ್ರಿಗಳ ಸಾಕ್ಷಾತ್ ಶಿಷ್ಯೆ ಹಾಡಿನ ನಾಗಮ್ಮ ಉತ್ತಮ ಗಮಕಿಯೆನಿಸಿಕೊಂಡಿದ್ದರು. ಇನ್ನೂ ಎಷ್ಟು ಶಿಷ್ಯರನ್ನು ಶಾಸ್ತ್ರಿಗಳು ತಯಾರು ಮಾಡಿದ್ದರೆಂಬುದು ಸ್ಪಷ್ಟವಾಗಿ ತಿಳಿಯುವುದಿಲ್ಲ. ಹಿರಿಯರಾಗಿದ್ದ ನಿಟ್ಟೂರು ಶ್ರೀನಿವಾಸರಾಯರೂ ಬಸವಪ್ಪಶಾಸ್ತ್ರಿಗಳನ್ನು ಕಂಡುಕೇಳಿದುದನ್ನು ತಿಳಿಸಿದ್ದಾರೆ (ಸಾಚ್ಯಗಮಕ ಸಂಮೇಳನದ ಗಮಕಮಂದಾರ ಎಂಬುವ ಸ್ಮರಣ ಸಂಚಿಕೆಯಲ್ಲಿ). ಅನಂತರದಲ್ಲಿ ಬೆಳೆದು ಬಂದ ಗಮಕ ಕಲೆಯಲ್ಲಿ ಕೆಲವು ಅಂಶಗಳೇ ಕಾಣಬಂದವು. ಸಾಹಿತ್ಯ ಪ್ರಧಾನವೇ, ಸಂಗೀತವೇ ಕಾವ್ಯವೋದುವಲ್ಲಿ ಗಮಕಿಗೆ ವ್ಯಾಖ್ಯಾನದ ಅಗತ್ಯವಿದೆಯೇ ಎಂಬುವ ಅನಿಸಿಕೆಯೂ ಮೂಡಿತು.



ಮತ್ತೂರು ಕೃಷ್ಣಮೂರ್ತಿ

ಹಿರಿಯ ಗಮಕಿಗಳಲ್ಲಿ ಹೆಸರಾದವರು ಸಂಗೋಬಿಂದೂರಾಯರು (1877–1969) ಅಥವಾ ಭಾರತದ ಬಿಂದೂರಾಯರೆಂದೇ ಪ್ರಸಿದ್ಧರಾದವರು. ಸಾಹಿತ್ಯಕ್ಕೆ ಒತ್ತುಗೊಟ್ಟು ಸಂಗೀತ ರಸಭಾವಕ್ಕಾಗಿ ಮಾತ್ರ ಅಳವಡಿಸಿಕೊಳ್ಳುತ್ತ ಕಾವ್ಯವನ್ನು ಕೇಳುಗರಿಗೆ ಮುಟ್ಟಿಸುತ್ತಿದ್ದ ಬಿಂದೂರಾಯರ ಕುಮಾರವ್ಯಾಸ ಭಾರತ ಸಾರೋದ್ಧಾರ ಎಂಬುವ ಮೇರು ಕೃತಿ ಇಂದು ಆಕರ ಗ್ರಂಥವೆನಿಸಿದೆ. ರಾಯರ ಗಮಕ ಶುದ್ಧಗಮಕಪದ್ಧತಿಯೆಂದೇ ಪ್ರಸಿದ್ಧ. ಅವರ ಶಿಷ್ಯ–ಶಿಷ್ಯೆಯರು – ಮೈಸೂರಿನ ಭಾರತದ ಕೃಷ್ಣರಾಯರು, ಶಕುಂತಲಾಬಾಯಿ, ಪಾಂಡುರಂಗರಾವ್, ಎಂ.ಎಸ್. ಚಂದ್ರಶೇಖರಯ್ಯ, ಧಾರವಾಡದ ಸುಪ್ರಸಿದ್ಧ ಗವಾಯ್ ಗುರುರಾವ್ ದೇಶಪಾಂಡೆ ಮೊದಲಾದವರು.

ಹೀಗೆಯೇ ಮೈಸೂರಿನಲ್ಲಿದ್ದ ತಲಕಾಡು ಮಾಯಿಗೌಡರು, ಜವಳಿ ಅಂಗಡಿ ತಮ್ಮಯ್ಯ – ಇವರ ಸುಪ್ರಸಿದ್ಧ ಶಿಷ್ಯರು. ಅನೇಕ ಗ್ರಂಥ ರಚನೆಯನ್ನು ಮಾಡಿದ ಮೈಸೂರು ರಾಘವೇಂದ್ರರಾಯರು, ಕಳಲೆ ಸಂಪತ್ಕುಮಾರಾಚಾರ್ಯರ ಗಮ್ಮತ್ತಿನ ಗಮಕ ಹಾಗೂ ಅವರ ಶ್ಲೋಕ ಸಂಗೀತ, ಗೌರೀದೇವುಡು ನರಸಿಂಹಶಾಸ್ತ್ರೀ ಅವರು (1878–1933), ಮೈ.ಶೇ. ಅನಂತಪದ್ಮನಾಭರಾವ್ (1903–87), ಜೋಳದರಾಶಿ ದೊಡ್ಡನಗೌಡರು (1919–94), ಅನಂತಪದ್ಮನಾಭಯ್ಯ, ಕೆ.ಎ. ವೆಂಕಟಸುಬ್ಬಯ್ಯ ವ್ಯಾಖ್ಯಾನಕಾರ ಕ.ಲಿ. ವೈದ್ಯನಾಥನ್ (1928–2013), ಮಾಲೂರಿನ ಟಿ. ವೆಂಕಟಪ್ಪನವರು (1915–95), ಗಮಕ ರೂಪಕಗಳೆಂಬುವ ಹೊಸ ಪ್ರಕಾರವನ್ನು ಸೃಜಿಸಿದ ಹು.ಮ. ರಾಮಾರಾಧ್ಯರು (1907–73), ಸರೋಜಮ್ಮ ಅನಂತರಾಮಯ್ಯ (1918–93), ಮತ್ತೂರಿನ ರಾಮಾಶಾಸ್ತ್ರಿಗಳು ಹಾಗೂ ಲಕ್ಷ್ಮೀಕೇಶವಶಾಸ್ತ್ರಿಯವರು, ಮತ್ತೂರು ಕೃಷ್ಣಮೂರ್ತಿಯವರು ಹೀಗೆ ನಮಗೆ ದೊರಕುವ ದಾಖಲೆಗಳಿಂದ 500ಕ್ಕೂ ಹೆಚ್ಚು ಗಮಕಿಗಳು ವ್ಯಾಖ್ಯಾನಕಾರರು ಇದ್ದಾರೆ.

ಎಂ. ರಾಘವೇಂದ್ರರಾಯರು ಕುಮಾರವ್ಯಾಸ ಗುರುಕುಲ, ಕಾವ್ಯರಂಜನೀ ಸಭಾ ಮುಂತಾದ ಗಮಕ ಬೋಧನ ಶಾಲೆಗಳನ್ನು ತೆರೆದು ನೂರಾರು ಶಿಷ್ಯರನ್ನು ತಯಾರು ಮಾಡಿದರು ಹಾಗೂ ಕರ್ನಾಟಕ ಸರ್ಕಾರದಿಂದ ಕನಕಪುರಂದರ ಪ್ರಶಸ್ತಿಗೆ ಭಾಜನರಾದರು.

ಮೈಸೂರಿನಲ್ಲಿದ್ದ ಭಾರತದ ಕೃಷ್ಣರಾಯರೆಂದೇ ಹೆಸರಾದ ಹಿರಿಯ ಕೃಷ್ಣರಾಯರ ಗಮಕ ಶೈಲಿಯೇ ವಿಭಿನ್ನ. ಮಹಾರಾಜ ಕಾಲೇಜಿನ ಪ್ರಾಂಶುಪಾಲರಾಗಿದ್ದ ಜೆ.ಸಿ. ರಾಲೋ ಅವರಿಗೆ ರಾಯರ ಗಮಕ ವಾಚನವೆಂದರೆ ಅತ್ಯಂತ ಪ್ರೀತಿ. ಹಾಗೆಯೆ ರಾಷ್ಟ್ರಕವಿ ಕುವೆಂಪು ಅವರ ಮಹಾ ಛಂದಸ್ಸಿನ ಪ್ರಸಿದ್ಧ ಕಾವ್ಯಗಳಾದ ಶ್ರೀರಾಮಾಯಣದರ್ಶನಂ, ಚಿತ್ರಾಂಗದಾ – ಇವುಗಳನ್ನು ಹಸ್ತಪ್ರತಿಯಲ್ಲೇ ವಾಚಿಸಿ, ಆಚಾರ್ಯ ವೆಂಕಣ್ಣಯ್ಯ, ಕೃಷ್ಣಶಾಸ್ತ್ರೀ ಮೊದಲಾದವರ ಪ್ರೀತಿಯನ್ನು ಗಳಿಸಿದವರು ಕೃಷ್ಣರಾಯರು. ಹಾಡಿದನು ಗಮಕಿ, ನಾಡು ನಲಿದುದು ರಸದ ಕಡಲಿನಲಿ ಧುಮುಕಿ ಎಂದೇ ಕವಿ ಕುವೆಂಪು ಅವರು ರಾಯರ ಗಮಕವನ್ನು ಪ್ರಶಂಸಿಸಿದ್ದಾರೆ. ಗಮಕ ಕಲೆಯನ್ನು ಹಾಗೂ ಕಾವ್ಯ–ಕಾವ್ಯಾಂತರಂಗ ಕುರಿತು ಕೆ.ಟಿ. ರಾಮಸ್ವಾಮೈಯ್ಯಂಗಾರ್ ರಂತಹ ಅನೇಕ ಹಿರಿಯ ಗಮಕಿಗಳೇ ಗಮಕಕಲೆ ಎಂಬಿತ್ಯಾದಿ ಕೃತಿಗಳನ್ನು ರಚಿಸಿದ್ದಾರೆ. ಇಂದಿಗೂ ಮೈಸೂರಿನ ಗಮಕ ಶೈಲಿ, ಧಾರವಾಡ–ಉತ್ತರಕರ್ನಾಟಕದ ಗಮಕಶೈಲಿ, ಶಿವಮೊಗ್ಗ–ಸಾಗರ ಪರಿಸರಗಳ–ಹೊಸಹಳ್ಳಿ ಮತ್ತೂರು ಶೈಲಿ – ಹೀಗೆ ಸ್ವತಂತ್ರ ವಿಭಿನ್ನಶೈಲಿಗಳಲ್ಲಿ ಗಮಕ ಕಲೆ ಬೆಳೆದುಬಂದಿದೆ. ಹೊಸಬರಲ್ಲಿ ಕೃ. ರಾಮಚಂದ್ರರು, ಮತ್ತೂರು ಹೊಸಹಳ್ಳಿಗಳ ಕೇಶವಮೂರ್ತಿಯವರು ಹಾಗೂ ಅವರ ಶಿಷ್ಯ ಪರಂಪರೆ, ನಿರ್ಮಲಾಪ್ರಸನ್ನ, ರಾಘವೇಂದ್ರರಾಯರ ಮಗ ಎಂ.ಆರ್. ಸತ್ಯನಾರಾಯಣ, ಗಂಗಮ್ಮ ಕೇಶವಮೂರ್ತಿ, ಅನ್ನಪೂರ್ಣಮ್ಮ ರಘುಪತಿಶಾಸ್ತ್ರೀ, ಎನ್.ಕೆ. ಶ್ರೀರಂಗಮ್ಮ, ಹೀಗೆ ಅನೇಕ ಗಮಕಿಗಳು ಪ್ರಸಿದ್ಧರಾಗಿದ್ದಾರೆ.

ಕರ್ನಾಟಕ ಸರ್ಕಾರ ಹೊಸದಾಗಿ ಸ್ಥಾಪಿಸಿರುವ ಗಣ್ಯ ಪ್ರಶಸ್ತಿಯೆಂದರೆ ಕುಮಾರವ್ಯಾಸಪ್ರಶಸ್ತಿ. ಹಿರಿಯರಾದ ಹೊಸಹಳ್ಳಿ ಕೇಶವಮೂರ್ತಿಯವರು, ಗಮಕಿ ಬಿ.ಎಸ್.ಎಸ್. ಕೌಶಿಕ್, ವ್ಯಾಖ್ಯಾತರಾದ ರಘುಪತಿಶಾಸ್ತ್ರೀ, ಹಿರಿಯ ಸುಪ್ರಸಿದ್ಧ ಗಮಕಿ ಎಚ್.ಕೆ. ರಾಮಸ್ವಾಮಿ ಮೊದಲಾದ ಗಣ್ಯರು ಈ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಮತ್ತೂರಿನ ಹಿರಿಯ ಮಾರ್ಕಂಡೇಯ ಅವಧಾನಿಗಳು ಸುಪ್ರಸಿದ್ಧ ವ್ಯಾಖ್ಯಾತರಾಗಿರುವಂತೆಯೇ ಗಮಕಿ ಜಯರಾಮರಾವ್, ವ್ಯಾಖ್ಯಾನಕಾರರಾದ ಎ.ವಿ. ಪ್ರಸನ್ನ, ಎನ್.ಕೆ. ರಾಮಶೇಷನ್, ಗಮಕಿ ಹೊಸಬಾಳೆ ಸೀತಾರಾಮರಾವ್ – ಹೀಗೆ ಇನ್ನೂ ಅನೇಕ ಗಣ್ಯರು ಕನ್ನಡ ನಾಡಿನ ವಿಶಿಷ್ಟ ಕಲೆಯಾದ ಗಮಕ ಕಲೆಯ ಪ್ರಸಾರಕಾರ್ಯ ನಡೆಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಗುರುತಿಸಬಹುದಾದ ಸಂಘ–ಸಂಸ್ಥೆಗಳೆಂದರೆ ಕೆಂಗೇರಿ ಉಪನಗರದ ಶ್ರೀ ಹೈಮವತಮ್ಮನವರು ನಡೆಸುತ್ತಿರುವ ಸಂಸ್ಥೆ, ರಾಜಾಜಿನಗರದ ಕುಮಾರವ್ಯಾಸ ಮಂಟಪ, ಹೊಸಹಳ್ಳಿ ಗಮಕಗ್ರಾಮದ ಗಮಕ ಪರಿಷತ್ತು, ಕರ್ನಾಟಕ ಗಮಕ ಕಲಾ ಪರಿಷತ್ತು ಮೊದಲಾದವು. (ಆರ್.)

**ಗಮೆಲ್ಲಿ, ಕರೇರಿ :** 1651–1725. ಇಟಲಿಯ ಕಾನೂನು ಪಂಡಿತ, ಔರಂಗ್‍ಜೇಬನ ಕಾಲದಲ್ಲಿ ಭಾರತಕ್ಕೆ ಭೇಟಿ ಕೊಟ್ಟ ವಿದೇಶಿ ಪ್ರವಾಸಿಗಳಲ್ಲೊಬ್ಬ. ಟ್ಯೂರಿನೋವ್ ನಗರದಲ್ಲಿ 1651ರಲ್ಲಿ ಈತ ಜನಿಸಿದ. ಸಂಸಾರದಲ್ಲಿ ತೊಂದರೆಗಳಿಗೆ ಒಳಗಾಗಿ ಮನೆ ಬಿಟ್ಟು ಪ್ರವಾಸ ಕೈಗೊಂಡ. ತುರ್ಕಿ ಮತ್ತು ಪರ್ಷಿಯಗಳ ಮೂಲಕ 1693ರಲ್ಲಿ ಭಾರತಕ್ಕೆ ಬಂದ ಈತ ಸುಮಾರು ಆರು ತಿಂಗಳು ಇಲ್ಲಿ ಸಂಚರಿಸಿದ. ದಾಮನ್, ಡಿಯೊ, ಸೂರತ್, ಬಸ್ಸೇನ್, ಕನ್ಹೇರಿ, ಸಾಲ್‍ಸೆಟ್ ಮತ್ತು ಗೋವಗಳನ್ನು ಸಂದರ್ಶಿಸಿ, ಬಿಜಾಪುರದ ಬಳಿಯ ಗಲ್‍ಗಲಾ ಎಂಬ ಸ್ಥಳಕ್ಕೆ ಪ್ರಯಾಣ ಹೊರಟು ಅಲ್ಲಿ ತಂಗಿದ್ದ ಔರಂಗ್‍ಜೇಬನ ಶಿಬಿರ ತಲಪಿದ. ಮಾರ್ಚ್ 21ರಂದು ಚಕ್ರವರ್ತಿ ಔರಂಗ್‍ಜೇಬನನ್ನು ಭೇಟಿ ಮಾಡಿದ. ಈತ ಭಾರತಕ್ಕೆ ಬಂದ ಉದ್ದೇಶವೇನೆಂದೂ ಇವನಿಗೆ ಮೊಗಲರ ಸರ್ಕಾರದಲ್ಲಿ ಸೇವೆ ಸಲ್ಲಿಸುವ ಆಸಕ್ತಿಯಿದೆಯೇ ಎಂದೂ ಚಕ್ರವರ್ತಿ ಇವನನ್ನು ಕೇಳಿದ. ತಾನು ಏಷ್ಯದ ಪ್ರಬಲ ಚಕ್ರವರ್ತಿಯನ್ನೂ ಆತನ ವೈಭವವನ್ನೂ ನೋಡಲು ಮಾತ್ರ ಬಂದಿದ್ದುದಾಗಿ ಗಮೆಲ್ಲಿ–ಕರೇರಿ ಔರಂಗ್‍ಜೇಬನಿಗೆ ತಿಳಿಸಿದ. ಹಂಗರಿಯಲ್ಲಿ ತುರ್ಕರಿಗೂ ಐರೋಪ್ಯರಿಗೂ ನಡೆಯುತ್ತಿದ್ದ ಯುದ್ಧದ ಬಗ್ಗೆ ಔರಂಗ್‍ಜೇಬ್ ಅನೇಕ ಪ್ರಶ್ನೆಗಳನ್ನು ಹಾಕಿ ಅವನಿಂದ ಉತ್ತರ ಪಡೆದ. ಅಲ್ಲಿಗೆ ಅವರ ಭೇಟಿ ಮುಕ್ತಾಯವಾಯಿತು. ಗಮೆಲ್ಲಿ–ಕರೇರಿ ಔರಂಗ್‍ಜೇಬನ ಆಸ್ಥಾನದ ವೈಭವವನ್ನು ವರ್ಣಿಸಿದ್ದಾನೆ. ಎಪ್ಪತ್ತೆಂಟು ವರ್ಷಗಳ ವೃದ್ಧನಾದರೂ ಔರಂಗ್‍ಜೇಬ್ ಕನ್ನಡಕದ ಸಹಾಯವಿಲ್ಲದೆ ಎಲ್ಲ ಪತ್ರಗಳನ್ನೂ ನೋಡಿ ಅವಕ್ಕೆ ಸಹಿ ಹಾಕುತ್ತಿದ್ದನೆಂದು ಕರೇರಿ ಬರೆಯುತ್ತಾನೆ. ಉತ್ಸಾಹದಿಂದ ಕೆಲಸ ನಿರ್ವಹಿಸುತ್ತಿದ್ದುದು ಔರಂಗ್‍ಜೇಬನಲ್ಲಿ ಈತ ಕಂಡ ಒಂದು ದೊಡ್ಡ ಗುಣ. ಬಿಜಾಪುರ ರಾಜ್ಯ ಕಳೆದುಕೊಂಡಿದ್ದ ಸಿಕಂದರ್ ಆಲಿಷಾನನ್ನೂ, ಗೋಲ್ಕೊಂಡದ ಮಾಜಿ ಸುಲ್ತಾನ ತಾನಕ್‍ಷಾನನ್ನೂ ಗಮೆಲ್ಲಿ–ಕರೇರಿ ನೋಡಿದ. ಬಹಳ ಕಷ್ಟನಷ್ಟಗಳನ್ನು ಅನುಭವಿಸಿ ಅಲ್ಲಿಂದ ಹೊರಟು, ಏಪ್ರಿಲ್ 5ರಂದು ಗೋವ ತಲುಪಿದ. ಅಲ್ಲಿಂದ ಮೆಕಾವ್‍ಗೆ ಹೋದ. ಅನಂತರ ಚೀನದ ಒಳಭಾಗಕ್ಕೆ ಹೋಗಿ, ಚೀನದ ಚಕ್ರವರ್ತಿಯನ್ನು ಪ್ರತ್ಯಕ್ಷವಾಗಿ ಭೇಟಿ ಮಾಡಿದ. ಏಳು ತಿಂಗಳುಗಳ ಕಾಲ ಅಲ್ಲಿ ಪ್ರವಾಸಮಾಡಿ, ಫಿಲಿಪೀನ್ಸಿನ ಮನಿಲಕ್ಕೆ ಹೋದ. ಅನಂತರ ಪೆಸಿಫಿಕ್ ಸಾಗರದ ಮೇಲೆ ಪ್ರಯಾಣ ಮಾಡಿ ಮೆಕ್ಸಿಕೋ ದೇಶದ ಅಕಾಪೂಲ್ಕೊಗೆ ಹೋಗಿ, 1699ರ ಡಿಸೆಂಬರಿನಲ್ಲಿ ತನ್ನ ದೇಶಕ್ಕೆ ಹಿಂದಿರುಗಿದ. ಈತ 1725ರಲ್ಲಿ ನೇಪಲ್ಸ್‍ನಲ್ಲಿ ನಿಧನವಾದ.

ಗಮೆಲ್ಲಿ–ಕರೇರಿ ಬರೆದ ಪ್ರವಾಸಕಥನದಲ್ಲಿ ಅನೇಕ ವಾಸ್ತವ ಸಂಗತಿಗಳೊಂದಿಗೆ ಅವಾಸ್ತವ ಸಂಗತಿಗಳೂ ಉತ್ಪ್ರೇಕ್ಷೆಗಳೂ ಸೇರಿಕೊಂಡಿವೆ. ಔರಂಗ್‍ಜೇಬ್ ಬೀಡು ಬಿಟ್ಟಿದ್ದ ಸ್ಥಳದಲ್ಲಿ 60,000 ಅಶ್ವಗಳು, 10 ಲಕ್ಷ ಸಿಪಾಯಿಗಳು, 50,000 ಒಂಟೆಗಳು ಮತ್ತು 3,000 ಆನೆಗಳನ್ನು ಒಳಗೊಂಡ ಸೇನೆಯಿತ್ತೆಂದು ಗಮೆಲ್ಲಿ–ಕರೇರಿ ಹೇಳಿರುವುದನ್ನು ನಂಬಲು ಕಷ್ಟವಾಗುತ್ತದೆ. ಅವನ ಶಿಬಿರದ ಸುತ್ತಳತೆ 45 ಕಿಮೀ ಎಂದೂ ಅಲ್ಲಿ 250 ಪ್ರತ್ಯೇಕ ಮಾರುಕಟ್ಟೆಗಳಿದ್ದುವೆಂದೂ ಅತ್ಯಮೂಲ್ಯ ವಸ್ತುಗಳು ಮೊದಲುಗೊಂಡು ಎಲ್ಲ ತರದ ಸರಕುಗಳೂ ಅಲ್ಲಿ ದೊರಕುತ್ತಿದ್ದುವೆಂದೂ ಈತ ಬರೆದಿದ್ದಾನೆ. ಒಟ್ಟಿನಲ್ಲಿ ಇವನ ಗ್ರಂಥ ಸ್ವಾರಸ್ಯವಾಗಿಯೂ ಉಪಯುಕ್ತವಾಗಿಯೂ ಇದೆ. (ಎಸ್.ಕೆ.ಎಸ್.)

**ಗಯಟೆ :** 1749–1832. ಜರ್ಮನಿಯ ಕವಿ. ನಾಟಕಕಾರ, ವಿಮರ್ಶಕ, ಕಾದಂಬರಿಕಾರ, ವಿಜ್ಞಾನಿ, ಚಿಂತಕ, ಆಡಳಿತಗಾರ, ವಿವಿಧ ಪ್ರಕಾರಗಳಲ್ಲಿ ವಿಪುಲ ಸಾಹಿತ್ಯ ರಾಶಿಯನ್ನೇ ಸೃಷ್ಟಿಸಿದ ಮಹಾಸಾಹಿತಿ. ಯುರೋಪಿನ ರೆನೆಸಾನ್ಸ್ ಯುಗದ ಪರಂಪರೆಯ ಕಟ್ಟಕಡೆಯ ಪ್ರತಿನಿಧಿ. ಈತ ಸೃಷ್ಟಿಸಿದ ವಿಶ್ವಸಾಹಿತ್ಯ ಎನ್ನುವ ಮಾತನ್ನು ಈತನಿಗೇ ಅನ್ವಯಿಸಿ ಹೇಳುವುದಾದರೆ ಇವನೊಬ್ಬ ಶ್ರೇಷ್ಠ ವಿಶ್ವಸಾಹಿತಿ. ನೂರಾರು ರಸಮಯ ಘಟನೆಗಳಿಂದ ವೈವಿಧ್ಯಮಯ ಅನುಭವಗಳಿಂದ ತುಂಬಿ ಹರಿಯುವ ಇವನ ಬದುಕೇ ಒಂದು ರೋಮಾಂಚಕ ಇತಿಹಾಸದಂತಿದೆ.

ಗಯಟೆ 1749ರ ಆಗಸ್ಟ್ 28ರಂದು ಜರ್ಮನಿಯ ಫ್ರಾಂಕ್‍ಫರ್ಟ್ ಆನ್–ದಿ–ಮೇಯ್‍ನ್‍ನಲ್ಲಿ ಜನಿಸಿದ. ಶ್ರೀಮಂತ ಕುಟುಂಬಕ್ಕೆ ಸೇರಿದ್ದ ಇವನ ತಂದೆ ಜೋವಾನ್ ಕ್ಯಾಸ್ಪರ್ ಗಯಟೆ ಸುಸಂಸ್ಕೃತ ಗೃಹಸ್ಥ. ತಾಯಿ ಕ್ಯಾಥರೀನ್ ಎಲಿಜಬೆತ್ ಟೆಕ್ಸ್‍ಟರ್ ಉತ್ತಮ ವಂಶಸ್ಥಳು; ಫ್ರಾಂಕ್ ಫರ್ಟಿನ ಪೌರಾಧ್ಯಕ್ಷನ ಮಗಳು. ಸುಖಸಂತೋಷಗಳಿಂದ ತುಂಬಿದ ಶ್ರೀಮಂತ ವಾತಾವರಣದಲ್ಲಿ ಗಯಟೆಗೆ ಒಳ್ಳೆಯ ಶಿಕ್ಷಣ ದೊರೆಯಿತು.



1759 ರಿಂದ ಮೂರು ವರ್ಷಗಳ ಕಾಲ ಫ್ರೆಂಚ್ ಸೈನ್ಯ ಫ್ರಾಂಕ್‍ಫರ್ಟನ್ನು ಮುತ್ತಿ ಆಕ್ರಮಿಸಿಕೊಂಡಿತ್ತು. ಕೋಲಾಹಲಕರವಾದ ಆ ಕಾಲದ ಹಲವು ಘಟನೆಗಳಿಂದಾಗಿ ಗಯಟೆಯ ದೃಷ್ಟಿ ವಿಶಾಲಗೊಂಡು ಮನಸ್ಸು ರಂಗಭೂಮಿಯತ್ತ ತಿರುಗುವಂತಾಯಿತು. ನ್ಯಾಯಶಾಸ್ತ್ರವನ್ನು ಓದಲೆಂದು 1765ರಲ್ಲಿ ಲೀಪ್‍ಜಿಗ್ಗಿಗೆ ಹೋಗಿ ಮೂರು ವರ್ಷದ ಅನಂತರ ಊರಿಗೆ ವಾಪಸಾದ. ಆಗಿನ ಅವನ ಕೆಲವು ಲೇಖನಗಳಲ್ಲಿ ರೊಕೋಕೋ ಯುಗದ ಆಡಂಬರಯುತ ಶೈಲಿ ಮತ್ತು ಅತಿರಂಜಕ ಕಲ್ಪನೆಗಳನ್ನು ಕಾಣಬಹುದು. ದೀರ್ಘಕಾಲದ ಕಾಯಿಲೆಯಿಂದ ಚೇತರಿಸಿಕೊಂಡ ಮೇಲೆ ಶಿಕ್ಷಣ ಮುಂದುವರಿಸಲೆಂದು ಸ್ಟ್ರಾಸ್‍ಬರ್ಗಿಗೆ ಹೋದ (1770). ಅಲ್ಲಿ ವಿದ್ಯಾಭ್ಯಾಸ ಮುಗಿಯಿತು. ಇವನಲ್ಲಿ ಅಡಗಿದ್ದ ಸಾಹಿತ್ಯಶಕ್ತಿಗೆ ಅಲ್ಲಿ ಹೆಚ್ಚಿನ ಸ್ಫೂರ್ತಿ ಸಿಕ್ಕಿತು. ಗಯಟೆ ಅಲ್ಲಿ ಹರ್ಡರ್‍ನನ್ನು ಭೇಟಿಯಾದುದು ನಿಜವಾಗಿ ಧರ್ಮಕರ್ಮ ಸಂಯೋಗವೇ ಸರಿ. ಹರ್ಡರನ ಪ್ರಭಾವದಿಂದಾಗಿ ಗಯಟೆಗೆ ಷೇಕ್ಸ್‍ಪಿಯರನ ಕೃತಿಗಳ ಪರಿಚಯವಾಯಿತು. ಗಾತಿಕ್ ವಾಸ್ತುಶಿಲ್ಪ, ಹೋಮರನ ಮಹಾಕಾವ್ಯ, ಒಸಿಯನ್ ಮುಂತಾದವನ್ನು ಓದಿದ. 1771–75ರವರೆಗಿನ ಅವಧಿಯಲ್ಲಿ ಫ್ರಾಂಕ್‍ಫರ್ಟಿನಲ್ಲಿ ವಕೀಲನಾಗಿ ಕೆಲಸ ಮಾಡಿದ. ಆಗ ಬರೆದ ಗಾಟ್ಸ್‍ಫನ್ ಬರ್ಲಿಷಿಂಗನ್ ಎಂಬ ನಾಟಕ ವಿಶೇಷ ಖ್ಯಾತಿ ತಂದಿತು. ಸಾರೋಸ್ ಆಫ್ ವರ್ದರ್ (ಡೈ ಲೇಡನ್ ಡೇಯ್ ಯಂಗನ್ ವರ್ದರ್) ಎಂಬ ಕಾದಂಬರಿ (1774) ಕವಿಯ ಹೆಸರು ಯುರೋಪಿನಲ್ಲೆಲ್ಲ ಹರಡುವಂತೆ ಮಾಡಿತು. 1775ರಲ್ಲಿ ಗಯಟೆ ವೈಮರ್‍ಗೆ ಹೋದ. ಪ್ರಶಾಂತವಾದ ಆ ಪುಟ್ಟ ಸಂಸ್ಥಾನದ ವಾತಾವರಣದಿಂದಾಗಿ ಆತನ ಬಹುಮುಖ ಪ್ರತಿಭೆ ವಿಕಾಸವಾಯಿತು. ಸುಮಾರು ಹನ್ನೊಂದು ವರ್ಷ ಕಾಲ ಆ ರಾಜ್ಯದ ಮುಖ್ಯಾಧಿಕಾರಿಯಾಗಿ ಕೆಲಸ ಮಾಡಿ, ವೈವಿಧ್ಯಮಯವಾದ ಅಪೂರ್ವ ಅನುಭವಗಳನ್ನು ಆತ ಮೈಗೂಡಿಸಿಕೊಂಡ.

ಚಾರ್ಲೆಟ್ ಫನ್ ಸ್ಟೈನ್ ಎಂಬಾಕೆಯ ಪ್ರಭಾವದಿಂದ ಗಯಟೆ ಸುಸಂಸ್ಕೃತ ವ್ಯಕ್ತಿಯಾದ. ಕಲೆ, ವಿಜ್ಞಾನ ಮೊದಲಾದ ಹಲವು ವಿಷಯಗಳಲ್ಲಿ ಇವನ ಅಭಿರುಚಿ ಬೆಳೆಯಿತು. 1786–88ರವರೆಗೆ ಇಟಲಿಯಲ್ಲಿ ಪ್ರವಾಸ ಮಾಡಿ ಕ್ಲಾಸಿಕಲ್ ಇಟಲಿಯ ಕಲಾವೈಭವವನ್ನು ಕಣ್ಣಾರೆ ಕಂಡುಬಂದ. ಹರ್ಡರನ ಪ್ರಭಾವ, ಷೇಕ್ಸ್‌ಪಿಯರನ ಕಾವ್ಯ ಮತ್ತು ಕ್ಲಾಸಿಕಲ್ ಇಟಲಿಯ ಕಲಾಸಂಪತ್ತು–ಇವು ಇವನ ವ್ಯಕ್ತಿತ್ವದ ಎರಡು ಬೇರೆ ಬೇರೆ ಮುಖಗಳ ವಿಕಸನಕ್ಕೆ ನೆರವಾದವು. 1790ರಲ್ಲಿ (ಅಲ್ಲಿಯವರೆಗೆ ಹದಿನೇಳು ವರ್ಷಗಳು ವಿವಾಹವಿಲ್ಲದೆ



ಗಯಟೆ ಹುಟ್ಟಿದ ಮನೆ, ಫ್ರಾಂಕ್‌ಫರ್ಟ್ ಆನ್–ದಿ–ಮೇಯ್‌ನ್‌ನಲ್ಲಿ

ಯಾರೊಂದಿಗೆ ಸಹಜೀವನ ನಡೆಸುತ್ತಿದ್ದನೋ ಆ ಹೆಂಗಸು) ಕ್ರಿಸ್ಟಿಯಾನ್ ವಲ್ಪಿಯಸ್ ಎಂಬುವಳನ್ನು ಮದುವೆಯಾದ. ವೈಮರ್‌ಗೆ ಹಿಂದಿರುಗಿದ ಮೇಲೆ ರಾಜ್ಯ ಅಧಿಕಾರ ಪದವಿಯನ್ನು ಬಿಟ್ಟುಕೊಟ್ಟ. 1791–1817ವರೆಗೆ ವೈಮರ್ ರಂಗಭೂಮಿಯ ಮೇಲ್ವಿಚಾರಣೆ ವಹಿಸಿಕೊಂಡು ಕೆಲಸ ಮಾಡಿದ. ಆ ಕಾಲದಲ್ಲಿ ಷಿಲ್ಲರನೊಡನೆ ಅತಿ ನಿಕಟವಾದ ಸ್ನೇಹ ಬೆಳೆಯಿತು. 1800–1832ರವರೆಗೆ ಗಯಟೆ ಅಪೂರ್ವ ಕೀರ್ತಿ, ಗೌರವಗಳಿಗೆ ಭಾಜನನಾಗಿ ಯುರೋಪಿನ ಅತ್ಯಂತ ಗಣ್ಯಸಾಹಿತಿ ಎನಿಸಿಕೊಂಡ. ಈ ಸುಮಾರಿನಲ್ಲೇ ತನ್ನ ಮೇರುಕೃತಿ ಫೌಸ್ಟ್ ನಾಟಕದ ಎರಡನೆಯ ಭಾಗವನ್ನು ತಿದ್ದಿ ಬರೆದು, ತಾನು ಸಾಯುವ ಒಂದು ವರ್ಷಕ್ಕೆ ಮೊದಲು ಅದನ್ನು ಮುಗಿಸಿದ, 1832ರಲ್ಲಿ ಈತ ತೀರಿಕೊಂಡಾಗ ಯುರೋಪಿನ ಒಬ್ಬ ಯುಗಪುರುಷ ಕಣ್ಮರೆಯಾದಂತಾಯಿತು.

**ಕೃತಿಗಳು :** ಗಯಟೆಯ ಸಾಹಿತ್ಯಕ ಕೃತಿಗಳನ್ನು ಮೂರು ಮುಖ್ಯ ಭಾಗಗಳಾಗಿ ವಿಭಜಿಸಬಹುದು. ಮೊದಮೊದಲ ಕೃತಿಗಳು ರೊಕೋಕೋ ಯುಗದವು–ಅವು ಅಷ್ಟು ಪಕ್ವವಾಗಿಲ್ಲ. ಅನಂತರದವು ಜರ್ಮನಿಯ ರೊಮ್ಯಾಂಟಿಕ್ ಬಿರುಗಾಳಿಯ ಪ್ರಭಾವವನ್ನು ತೋರುವ ಕೃತಿಗಳು–ಸ್ಟುರ್ಮ್ ಉಂಡ್ ಡ್ರಂಗ್ ಯುಗದವು. ಕೊನೆ ಕೊನೆಯವು ಕ್ಲ್ಯಾಸಿಕ್ ಮತ್ತು ರೊಮ್ಯಾಂಟಿಕ್ ಅಂಶಗಳ ಸಮನ್ವಯವನ್ನು ತೋರುವಂಥವು. ಇವುಗಳಲ್ಲಿ ತಂತ್ರ ಮತ್ತು ಮನೋವೈಜ್ಞಾನಿಕ ಸೂಕ್ಷ್ಮತೆಗಳಿಗೆ ಹೆಚ್ಚು ಪ್ರಾಧಾನ್ಯ. ಇವು ಅತ್ಯಂತ ಆಧುನಿಕ ಅನಿಸುವಂತಿದ್ದು ಹೆನ್ರಿ ಜೇಮ್ಸ್ ಮುಂತಾದವರ ಆಧುನಿಕ ಕೃತಿಗಳಿಗೆ ಪೂರ್ವಸೂಚಿಗಳಂತಿವೆ.

**ಗಾಟ್ಸ್ ಫನ್ ಬರ್ಲಿಷಿಂಗನ್** (1773) : ಇದೊಂದು ಐತಿಹಾಸಿಕ ನಾಟಕ, ಇದನ್ನು ಗಯಟೆ ಎರಡು ವರ್ಷ ಕಾಲ ತಿದ್ದಿ ಹೊಳಪುಗೊಳಿಸಿದ. ಇದರಲ್ಲಿ ರೆಫರ್ಮೇಷನ್ ಕಾಲದ ಸ್ವಾತಂತ್ರ್ಯ ವೀರಯೋಧನೊಬ್ಬನ ಕಥೆಯಿದೆ. ಕಥಾನಾಯಕ ಗಾಟ್ಸ್ ಮತ್ತು ಚಂಚಲಚಿತ್ತ ವೆಸ್ಲಿಂಗನ್ ಇಬ್ಬರೂ ವಿಭಿನ್ನ ಸ್ವಭಾವದವರಾದರೂ ಬಾಲ್ಯಸ್ನೇಹಿತರು. ವೆಸ್ಲಿಂಗನ್ ಗಾಟ್ಸ್ ಸೋದರಿ ಮೇರಿಯಲ್ಲಿ ಅನುರಕ್ತನಾಗಿರುತ್ತಾನೆ. ಗಾಟ್ಸ್ ಸ್ವಾತಂತ್ರ್ಯಪ್ರಿಯ ಶ್ರೀಮಂತ. ಆದರೆ ವೆಸ್ಲಿಂಗನ್ ಬ್ಯಾಂಬರ್ಗ್ ಬಿಷಪ್ಪನ ಅಡಿಯಾಳು. ನಾಟಕದ ಪ್ರಾರಂಭದಲ್ಲಿ ಗಾಟ್ಸ್ ತನ್ನ ಸ್ನೇಹಿತನನ್ನು ತನ್ನ ಹಳೆಯ ಶತ್ರುವಾದ ಬ್ಯಾಂಬರ್ಗಿನ ಬಿಷಪ್ಪಿನ ಸಹವಾಸದಿಂದ ಬೇರ್ಪಡಿಸಿ ಕೈಸೆರೆ ಹಿಡಿದು ತನ್ನ ಅರಮನೆಗೆ ಕರೆತರುತ್ತಾನೆ. ಅಲ್ಲಿ ಮೇರಿಯನ್ನು ಕಂಡಾಗ ವೆಸ್ಲಿಂಗನ್ನನ ಹಳೆಯ ಪ್ರೇಮ ಮರುಕಳಿಸುತ್ತದೆ; ಅವನು ಗಾಟ್ಸ್‌ನ ಪಕ್ಷ ಹಿಡಿಯುತ್ತಾನೆ. ತನ್ನ ಖಾಸಗಿ ಸಮಸ್ಯೆಗಳನ್ನು ಇತ್ಯರ್ಥಗೊಳಿಸಲೆಂದು ಬ್ಯಾಂಬರ್ಗಿಗೆ ಹೋದಾಗ ವೆಸ್ಲಿಂಗನ್ ತನ್ನ ಸ್ನೇಹಿತನಿಗೂ ಪ್ರೇಯಸಿಗೂ ಇತ್ತ ವಚನವನ್ನು ಮರೆತು ಭ್ರಷ್ಟನಾಗುತ್ತಾನೆ; ವಾಲ್‌ಡಾರ್ಫ್ ಎಂಬ ಕುಟಿಲಸ್ವಭಾವದ, ಅರಮನೆಯ ಬಣ್ಣದ ಚಿಟ್ಟೆಯ ಸಹವಾಸಕ್ಕೆ ಬೀಳುತ್ತಾನೆ. ದಬ್ಬಾಳಿಕೆಗೆ ಸಿಕ್ಕಿದ್ದ ರೈತರು ದಂಗೆ ಎದ್ದಾಗ ಗಾಟ್ಸ್ ಅವರ ಮುಖಂಡನಾಗಿ ಹೋರಾಡುತ್ತಾನೆ.



ಗಯಟೆ ವಸ್ತು ಸಂಗ್ರಹಾಲಯದ ಒಂದು ಕೋಣೆ


ವೆಸ್ಲಿಂಗ್‌ನ್ನನ ಕೈಗೆ ಸಿಕ್ಕಿ, ಮರಣದಂಡನೆಗೆ ಗುರಿಯಾಗುತ್ತಾನೆ. ಮೇರಿ ಮಧ್ಯೆ ಪ್ರವೇಶಿಸಿ, ತನ್ನ ಮೇಲಿನ ಹಳೆಯ ಪ್ರೇಮದ ಸಲುವಾಗಿಯಾದರೂ ತನ್ನಣ್ಣನನ್ನು ಬಂಧನದಿಂದ ಬಿಡಿಸಬೇಕೆಂದು ಬೇಡಿಕೊಳ್ಳುತ್ತಾಳೆ. ಅವಳ ಮಾತಿಗೆ ಕರಗಿದ ವೆಸ್ಲಿಂಗನ್ ಮರಣದಂಡನೆಯ ಆಜ್ಞೆಯನ್ನು ಹರಿದುಹಾಕುತ್ತಾನೆ. ಆದರೆ ಅವನ ಹೆಂಡತಿ ವಾಲ್‌ಡಾರ್ಫ್ ಗಂಡನಿಗೆ ವಿಷವೂಡಿಸಿ ಕೊಲ್ಲುತ್ತಾಳೆ. ಅನಂತರ ತಾನೇ ಮರಣ ದಂಡನೆಗೆ ಗುರಿಯಾಗುತ್ತಾಳೆ. ಗಾಟ್ಸ್ ಕಾರಾಗೃಹದಲ್ಲಿ ಗಾಯಗೊಂಡು ಅಸು ನೀಗುತ್ತಾನೆ. ಅತಿ ಭಾವುಕತೆ ತುಂಬಿದ ಈ ನಾಟಕವನ್ನು ಜರ್ಮನ್ ರೊಮ್ಯಾಂಟಿಕ್ ಪಂಥದ ಘೋಷಣೆ ಎನ್ನಬಹುದು. ನಾಟಕದಲ್ಲಿನ ಅತಿರಂಜಕ ಶೈಲಿ, ರಾಗರಂಜಿತ ಪಾತ್ರ ವಿನ್ಯಾಸ–ಇವು ಜರ್ಮನಿಯ ಯುವಕಸ್ತೋಮವನ್ನು ಬಹಳವಾಗಿ ಆಕರ್ಷಿಸಿದವು. ಇದರಲ್ಲಿ ಕವಿ ತನ್ನ ಜೀವನದ ಹಲವು ಘಟನೆಗಳನ್ನೂ ಜೀವಂತ ವ್ಯಕ್ತಿಗಳನ್ನೂ ಸೇರಿಸಿದ್ದಾನೆ. ಈ ನಾಟಕದಲ್ಲಿ ಬಹುಮಟ್ಟಿಗೆ ಷೇಕ್ಸ್‌ಪಿಯರನ ನಾಟಕಗಳ ಹಾಗೂ ಮಾರ್ಟಿನ್ ಲೂಥರ್‌ನ ಬೈಬಲ್ ಅನುವಾದದ ಶೈಲಿಗಳ ಅನುಕರಣ ಇದೆ. ನಿಜವಾದ ಅರ್ಥದಲ್ಲಿ ಇದನ್ನು ಐತಿಹಾಸಿಕ ನಾಟಕ ಎನ್ನುವುದು ಕಷ್ಟ. 16ನೆಯ ಶತಮಾನದ್ದೆಂದು ಹೇಳಲಾದ ನಾಟಕದ ಪರಿಸರ, ಹಿನ್ನೆಲೆ, ಪಾತ್ರಗಳು–ಎಲ್ಲವೂ ಅಸಹಜವಾಗಿವೆ. ಅದೇನೇ ಇರಲಿ, ಈ ನಾಟಕ ಜರ್ಮನಿಯ ರಂಗಭೂಮಿಗೆ ಹೊಸ ತಿರುವನ್ನು ಕೊಟ್ಟ ಕೃತಿ.

**ಡೈಲೇಡನ್ ಡೇಯ್ ಯುಂಗನ್ ವರ್ದರ್** (1774): ಗಯಟೆಯ ಕೀರ್ತಿ ಯುರೋಪಿನಲ್ಲೆಲ್ಲ ಹರಡುವಂತೆ ಮಾಡಿದ ಈ ಕೃತಿ ಒಂದು ದುರಂತ ಕಾದಂಬರಿ. ತನ್ನ ಸಮಕಾಲೀನರಾದ ಇಂಗ್ಲೆಂಡಿನ ಕಾದಂಬರಿಕಾರ ರಿಚರ್ಡ್‌ಸನ್ ಹಾಗೂ ಫ್ರೆಂಚ್ ಸಾಹಿತಿ ರೂಸೋವಿನ ಕೃತಿಗಳಿಂದ ಪ್ರೇರಿತನಾಗಿದ್ದ ಗಯಟೆ ಈ ಕಾದಂಬರಿಯನ್ನು ಪತ್ರಗಳ ರೂಪದಲ್ಲಿ ಬರೆದಿದ್ದಾನೆ. ತನ್ನ ಸ್ವಂತ ಪ್ರಣಯಾನುಭವಗಳನ್ನು ಗಾಟ್ಸ್ ನಾಟಕದಲ್ಲಿ ಎರಕ ಹೊಯ್ದಂತೆ, ಚಾರ್ಲೆಟ್ ಬಫ್‌ಳೊಂದಿಗೆ ವೆಟ್‌ಸ್ಲರ್‌ನಲ್ಲಿ ತನಗಾದ ಪ್ರಣಯಾನುಭವವನ್ನು ಈ ಕಾದಂಬರಿಯಲ್ಲಿ ಪ್ರತಿರೂಪಿಸಿದ್ದಾನೆ. ತನ್ನ ಕಹಿ ಅನುಭವಗಳ ಜೊತೆಗೆ, ಸಹಪಾಠಿಯೊಬ್ಬನ ದುರಂತ ಆತ್ಮಹತ್ಯೆಯ ಪ್ರಕರಣವನ್ನೂ ಸೇರಿಸಿ ಕಥೆ ನೇಯ್ದಿದ್ದಾನೆ. ಕಥಾನಾಯಕ ವರ್ದರ್ ಒಬ್ಬ ಅತಿಭಾವುಕ ಯುವಕ ಲೋಟ್ ಎಂಬ ಸುಂದರಿಯನ್ನು ಗಾಢವಾಗಿ ಪ್ರೀತಿಸಿದ್ದು, ಅವಳು ತಮ್ಮಿಬ್ಬರ ಗೆಳೆಯನಾದ ಆಲ್ಬರ್ಟ್ ಆಗಲೇ ಮದುವೆಯಾಗಲು ನಿಶ್ಚಯಿಸಿರುವ ಹುಡುಗಿಯೆಂದು ತಿಳಿದಾಗ ನಿರಾಶೆಗೊಳಗಾ

ಗುತ್ತಾನೆ. ಅವಳನ್ನು ಮರೆಯಲೆಂದು ದೂರದ ಊರಿಗೆ ಹೋಗಿ ನೆಲಸುತ್ತಾನೆ. ಆದರೆ ಅದಮ್ಯ ಪ್ರೇಮದ ಸೆಳೆತದಿಂದ ತಪ್ಪಿಸಿಕೊಳ್ಳಲಾರದೆ ಹಿಂದಿರುಗಿ ಬರುತ್ತಾನೆ. ಅಷ್ಟು ಹೊತ್ತಿಗೆ ಲೋಟ್ ಆಲ್ಬರ್ಟ್‌ನ ಹೆಂಡತಿಯಾಗಿರುತ್ತಾಳೆ. ಅದನ್ನು ನೋಡಿ ತಾಳಲಾರದೆ ವರ್ದರ್ ಆಲ್ಬರ್ಟ್‌ನ ಪಿಸ್ತೂಲಿನಿಂದಲೇ ತನ್ನ ತಲೆಗೆ ಗುಂಡಿಕ್ಕಿಕೊಂಡು ಸಾಯುತ್ತಾನೆ. ಈ ಕಾದಂಬರಿಯನ್ನು ಕೇವಲ ಅತಿಭಾವನಾಮಯ ಹಳಸಲು ಪ್ರೇಮಕಥೆ ಎನ್ನಲಾಗದು. ದುಗುಡ, ನಿರಾಶೆ, ಅಸಮಾಧಾನಗಳಿಂದ ತುಂಬಿದ ಒಂದು ಯುಗದ ಅಂತರ್ಮುಖಿ ಯುವಕವೃಂದವನ್ನೇ ಈ ಕಾದಂಬರಿ ಪ್ರತೀಕಿಸುತ್ತದೆ–ಎನ್ನುವುದು ವಿಮರ್ಶಕರ ಅಭಿಮತ. ಕಾರ್ಲೈಲ್ ಹೇಳುವಂತೆ ಜರ್ಮನಿಯ ಸ್ಟಾರ್ಮ್ ಉಂಡ್ ಡ್ರಂಗ್ ಯುಗದ ಕುದಿತ, ಮೊರೆತ, ಅಂತರಂಗದ ತಹತಹ–ಮುಂತಾಗಿ ತರುಣ ಜನಾಂಗದ ಉತ್ಕಟ ಮಾನಸಿಕ ಅನುಭವಗಳನ್ನೆಲ್ಲವನ್ನೂ ಈ ಕಾದಂಬರಿ ಪ್ರತಿಧ್ವನಿಸುತ್ತದೆ. ಆದ್ದರಿಂದಲೇ ಈ ಕಾದಂಬರಿಯನ್ನು ಓದಿದಾಗ ಯುರೋಪಿಗೆ ಯುರೋಪೇ ಕಣ್ಣೀರು ಕರೆಯಿತಂತೆ. ಗಯಟೆಯ ಉದ್ದೇಶ ಕೇವಲ ದುರಂತ ಪ್ರೇಮ ಚಿತ್ರಣವಲ್ಲ, 18ನೆಯ ಶತಮಾನದ ಜನರ ಅತಿಭಾವನಾ ಪರವಶತೆಯ ದುರಂತ ಪರಿಣಾಮಗಳ ವಿಶ್ಲೇಷಣೆ, ಸಮಾಜದ ನಡುವೆ ಯಾವ ಮೌಲ್ಯವೂ ನಿರಂಕುಶವಾಗಬಾರದು; ಯಾವುದೊಂದು ಭಾವನೆಯೂ ವಿವೇಕದ ಎಲ್ಲೆ ಮೀರಬಾರದು. ಆದರೆ ಮನುಷ್ಯನ ಬದುಕಿನಲ್ಲಿ ಸಂಘರ್ಷ, ನೋವು, ತೊಳಲಾಟಗಳು ಅನಿವಾರ್ಯ. ಇದನ್ನು ಪ್ರತಿರೂಪಿಸುವುದರ ಜೊತೆಗೆ ತನ್ನ ವೈಯಕ್ತಿಕ ಬದುಕನ್ನು ಶೋಧಿಸುತ್ತ ತನ್ನ ಅಂತರಂಗವನ್ನು ತೋಡಿಕೊಳ್ಳುವುದೇ ಗಯಟೆಯ ಉದ್ದೇಶವೆಂದು ಕಾಣುತ್ತದೆ.

**ಎಗ್ಮಾಂಟ್** (1787) : ಫೌಸ್ಟ್ ನಾಟಕದ ಮೊದಲ ಭಾಗಕ್ಕೆ ಬೀಜಾಂಕುರವಾದಂತೆ ಕಾಣುವ ಒಂದು ಅಪೂರ್ಣ ಕೃತಿಯನ್ನು (ಉರ್ ಫೌಸ್ಟ್) ಬರೆಯುತ್ತಿದ್ದ ಕಾಲದಲ್ಲಿ ಗಯಟೆ ರಚಿಸಿದ ಐತಿಹಾಸಿಕ ನಾಟಕವಿದು. ಇದನ್ನು ಮೊಟ್ಟಮೊದಲು 1775ರಲ್ಲಿ ಪ್ರಾರಂಭಿಸಿದರೂ ಕ್ರಮೇಣ ಪರಿಷ್ಕಾರಗೊಂಡು 1787ರಲ್ಲಿದು ಸಿದ್ಧವಾಯಿತು. ಹಾಲೆಂಡನ್ನು ಆಕ್ರಮಿಸಿದ್ದ ಸ್ಪೇನಿನ ಸರ್ವಾಧಿಕಾರಿಯ ವಿರುದ್ಧ ದಂಗೆ ಎದ್ದ ಗ್ರಾಫ್ ಎಗ್ಮಾಂಟ್ ಎಂಬ ಸ್ವಾತಂತ್ರ್ಯ ವೀರನ ಕಥೆ ಈ ನಾಟಕದ ವಸ್ತು. ಇದರಲ್ಲಿ ಕ್ರಿಯೆಯ ಅಂಶ ತೀರ ವಿರಳ. ಕ್ರಾಂತಿಕಾರರ ನಾಯಕ ಗ್ರಾಫ್ ಎಗ್ಮಾಂಟ್ ಬ್ರಸಲ್ಸ್ ನಗರದಿಂದ ತಕ್ಷಣ ಹೊರಟುಹೋಗಬೇಕೆಂದೂ ಇಲ್ಲದಿದ್ದರೆ ಅವನ ಪ್ರಾಣಕ್ಕೆ ಅಪಾಯವಿದೆ ಯೆಂದೂ ಅವನಿಗೆ ಮೇಲಿಂದ ಮೇಲೆ ಎಚ್ಚರಿಕೆ ಬರುತ್ತದೆ. ಆದರೆ ಅವನು ಅದನ್ನು ಕಡೆಗಣಿಸಿ, ಆಲ್ಬಾದ ಡ್ಯೂಕನಿಗೆ ಸೆರೆಸಿಕ್ಕು ಮರಣದಂಡನೆಗೆ ಗುರಿಯಾಗುತ್ತಾನೆ. ಇದಿಷ್ಟೇ ನಾಟಕದ ಕ್ರಿಯೆ. ಉಳಿದೆಲ್ಲ ಸಂಗತಿಗಳೂ ಪ್ರಾಸಂಗಿಕವಾಗಿ ಬಂದು ಎಗ್ಮಾಂಟನ ಪಾತ್ರವಿನ್ಯಾಸಕ್ಕೆ ನೆರವಾಗುತ್ತವೆ. ಮಾರ್ಗರೆಟ್, ಮ್ಯಾಕಿಯವೆಲ್ಲಿ, ಎಗ್ಮಾಂಟ್ ಪ್ರೀತಿಸುವ ಕ್ಲಾರ್‌ಷೆನ್–ಮುಂತಾದ ಪಾತ್ರಗಳು ಜೀವಂತವಾಗಿ ಹೊಮ್ಮಿವೆ. ಗಾಟ್ಸ್ ಮುಂತಾದ ಮೊಟ್ಟಮೊದಲ ನಾಟಕಗಳಲ್ಲಿರುವ ಪ್ರಕ್ಷುಬ್ಧತೆ ಇಲ್ಲಿಲ್ಲ. ನಾಟಕದಲ್ಲಿ ಎದ್ದು ಕಾಣುವ ಮಾನವೀಯತೆ, ಭಾವುಕತೆ, ಹಾಗೂ ಪ್ರಶಾಂತ ವಾತಾವರಣ–ಇವು ಓದುಗರನ್ನು ಸೆಳೆಯುತ್ತವೆ. ಸ್ಟುರ್ಮ್ ಉಂಡ್ ಡ್ರಂಗ್ ಯುಗದ ಉದ್ರೇಕ, ಕೋಲಾಹಲಗಳ ಹಿನ್ನೆಲೆಯಲ್ಲಿ ಬರೆದ ಕೃತಿಗಳಿಗೂ ವೈಮರ್‌ನ ನೀರವ, ಪ್ರಶಾಂತ, ಜೀವನದ ಹಿನ್ನೆಲೆಯಲ್ಲಿ ಬರೆದ ಇಫಿಜೆನಿ ಮುಂತಾದ ಶ್ರೇಷ್ಠ, ಕಲಾತ್ಮಕ ಕೃತಿಗಳಿಗೂ ನಡುವಣ ತಿರುವನ್ನು ಈ ನಾಟಕ ಸೂಚಿಸುತ್ತದೆ.

**ಇಫಿಜೆನಿ ಆಫ್ ಟಾರಿಸ್** (1787) : ಈ ನಾಟಕ ಗಯಟೆಯ ಕೃತಿಗಳಲ್ಲಿ ಅತ್ಯಂತ ಪರಿಪೂರ್ಣವೂ ದೋಷರಹಿತವೂ ಆದುದೆಂದು ಹೇಳುವುದುಂಟು. ಗ್ರೀಕ್ ಶಿಲ್ಪಕಲೆಯಲ್ಲಿ ತಾನು ಮೆಚ್ಚಿಕೊಂಡ ಸಂಯಮವನ್ನಿಲ್ಲಿ ಕವಿ ಸಾಧಿಸಿದ್ದಾನೆ. ಆದರೂ ನಾವು ಇಲ್ಲಿ ಕಾಣುವುದು ಗ್ರೀಕ್ ಕಲಾತತ್ತ್ವವನ್ನಲ್ಲ, ಗಯಟೆಯ ಮಾನವತಾವಾದದ ದಿವ್ಯ ಸ್ವರೂಪವನ್ನು. ತಂದೆ ಆಗಮೆಮ್ನಾನನ ಕೈಯಿಂದ ದೇವತೆಗಳ ಪ್ರೀತ್ಯರ್ಥವಾಗಿ ಬಲಿಯಾಗುವ ಅವನ ಮಗಳು ಇಫಿಜೀನಿಯಳ ಕಥೆ ಯುರಿಪಿಡೀಸನ ನಾಟಕದ ವಸ್ತು. ಅದನ್ನು ಗಯಟೆ ಮಾರ್ಪಡಿಸಿಕೊಂಡು ತನ್ನ ನಾಟಕಕ್ಕೆ ಅಳವಡಿಸಿಕೊಂಡಿದ್ದಾನೆ. ಕ್ರೂರಿ ತಂದೆಯ ಕೈಯಿಂದ ಅವಳನ್ನು ತಪ್ಪಿಸಲು ಆರ್ಟೆಮಿಸ್ ದೇವತೆ ಅವಳನ್ನು ಸ್ಕಿತಿಯನರೆಂಬ ಅನಾಗರಿಕರ ದೇಶಕ್ಕೆ ಕೊಂಡೊಯ್ದು ಬಿಡುತ್ತಾಳೆ. ಇಫಿಜೆನಿ ತನ್ನ ಅನುಪಮ ರೂಪಲಾವಣ್ಯ, ಧೈರ್ಯಸ್ಥೈರ್ಯಾದಿ ಸದ್ಗುಣಗಳಿಂದ ಅಲ್ಲಿನ ಅನಾಗರಿಕ ಜನರನ್ನು ಸುಧಾರಿಸುವ ಪ್ರಯತ್ನದಲ್ಲಿ ಯಶಸ್ವಿಯಾಗುತ್ತಾಳೆ. ಸ್ಕಿತಿಯನ್ನರ ರಾಜ್ಯದಲ್ಲಿ ದೇವತೆಗಳಿಗೆ ನರಬಲಿ ಅರ್ಪಿಸುವ ಸಂಪ್ರದಾಯವನ್ನು ತಪ್ಪಿಸುತ್ತಾಳೆ. ಅವಳು ಶಾಪಗ್ರಸ್ತ ಟ್ಯಾಂಟಲಸ್ ವಂಶದವಳೆಂದು ತಿಳಿದರೂ ದೊರೆ ಥೊಯಾಸ್ ಅವಳಲ್ಲಿ ಪ್ರೇಮಭಿಕ್ಷೆ ಯಾಚಿಸಿ ಹತಾಶನಾಗುತ್ತಾನೆ. ತನ್ನಲ್ಲಿಗೆ ಬಂದ ಇಬ್ಬರು ಅಗಂತುಕರನ್ನು ಇಫಿಜೆನಿಯ ಬಳಿ ಕಳುಹಿಸಿ ಅನೂಚಾನವಾಗಿ ನಡೆದು ಬಂದ ನರಬಲಿ ಮತ್ತೆ ಪ್ರಾರಂಭವಾಗ ಬೇಕೆಂದು ಆಜ್ಞಾಪಿಸುತ್ತಾನೆ. ಈ ಅಗಂತುಕರಲ್ಲಿ ಒಬ್ಬ ತನ್ನ ಸೋದರ ಓರೆಸ್ಟ್, ಇನ್ನೊಬ್ಬ ಅವನ ಗೆಳೆಯ ಪೈಲೇಡಿಸ್ ಎಂದು ಅವಳಿಗೆ ತಿಳಿಯದು. ರಾಜಾಜ್ಞೆಯ ಪ್ರಕಾರ ಅವರಿಬ್ಬರೂ ಅಲ್ಲಿ ಮೊದಲ ಬಲಿಯಾಗಬೇಕು. ಪೈಲೇಡಿಸ್ ಅವಳಿಗೆ ಟ್ರಾಯ್‌ಪತನ, ಆಗಮೆಮ್ನಾನನ ಕೊಲೆ, ಮಗ ಓರೆಸ್ಟ್ ಪ್ರತೀಕಾರಕ್ಕಾಗಿ ನಡೆಸಿದ ಮಾತೃಹತ್ಯೆ ಎಲ್ಲವನ್ನೂ ಸೂಚ್ಯವಾಗಿ ತಿಳಿಸುತ್ತಾನೆ. ಅಪಾಲೋ ದೇವತೆಯ ಆಜ್ಞೆಯಂತೆ ಓರೆಸ್ಟ್ ತನ್ನ ತಂಗಿಯ ದೇವಾಲಯದಿಂದ ದೇವತೆಯ ವಿಗ್ರಹವನ್ನು ತಂದರೆ ಅವನು ಉಗ್ರ ಕನ್ಯೆಯರ ಕೋಪದಿಂದ ಮುಕ್ತನಾಗುವನಲ್ಲದೇ ಅವನ ಶಾಪ ನಿವಾರಣೆ ಯಾಗುವುದೆಂದು ಪೈಲೇಡಿಸ್ ತಿಳಿಸುತ್ತಾನೆ. ತಾಳ್ಮೆ ತಪ್ಪಿದ ಓರೆಸ್ಟ್ ತನ್ನ ನಿಜರೂಪವನ್ನು ಸೋದರಿಗೆ ತಿಳಿಸಿಬಿಡುತ್ತಾನೆ. ನಿಷ್ಕಳಂಕಳೂ ಪವಿತ್ರ ಹೃದಯಿಯೂ ಆದ ಸೋದರಿಯ ಎದುರು ತನ್ನ ಘೋರ ಅಪರಾಧಗಳನ್ನು ಒಪ್ಪಿಕೊಂಡಾಗ ಅವನ ಉನ್ಮತ್ತಸ್ಥಿತಿ ಹಾಗೂ ಹೃದಯದ ಭಾರ ಇಳಿದಂತಾಗುತ್ತದೆ. ತನ್ನ ಕಣ್ಣಮುಂದೆ ಸುಳಿಯುವ ಅದ್ಭುತ




ದೃಶ್ಯಾವಳಿಯಲ್ಲಿ ತನ್ನ ಪಿತೃಗಳೆಲ್ಲರೂ ಶಾಂತಿಸೌಹಾರ್ದಗಳಿಂದಿರುವುದನ್ನು ನೋಡಿ ಅವನಿಗೆ ತನ್ನ ಶಾಪನಿವಾರಣೆಯ ಬಗ್ಗೆ ಭರವಸೆ ಮೂಡುತ್ತದೆ. ಮೂವರೂ ಅಲ್ಲಿಂದ ತಪ್ಪಿಸಿಕೊಂಡು ದೇವತೆಯ ವಿಗ್ರಹವನ್ನು ರಹಸ್ಯವಾಗಿ ಒಯ್ಯಬೇಕಾದಾಗ ಇಫಿಜೆನಿ ತನ್ನನ್ನು ಪ್ರೀತಿಸಿದ ಥೊಯಾಸನಿಗೆ ಮೋಸಮಾಡಲು ಇಚ್ಛಿಸುವುದಿಲ್ಲ. (ಗ್ರೀಕ್ ನಾಟಕದಲ್ಲಿ ಅವಳು ವಂಚನೆಯಿಂದ ತಪ್ಪಿಸಿಕೊಂಡು ಹೋಗುತ್ತಾಳೆ. ಆರ್ಟೆಮಿಸ್ ದೇವತೆಯೇ ಪ್ರತ್ಯಕ್ಷಳಾಗಿ ಬಂದು ದುರಂತವನ್ನು ತಪ್ಪಿಸುತ್ತಾಳೆಂಬುದು ಗಮನಾರ್ಹ.) ನಡೆದ ಎಲ್ಲ ಸಂಗತಿಯನ್ನು ಅವನ ಮುಂದೆ ಒಪ್ಪಿಸಿ ಅವನು ತನ್ನನ್ನು, ತನ್ನ ಬಂಧುಗಳಿಬ್ಬರನ್ನು ಬಿಡುಗಡೆ ಮಾಡುವಂತೆ ಬೇಡಿಕೊಳ್ಳುತ್ತಾಳೆ. ತಂಗಿಯ ದೇವಾಲಯ ಎನ್ನುವ ದೇವವಾಣಿಯ ದ್ವಂದ್ವಾರ್ಥ ನಿವಾರಣೆಯಾಗಿ ಥೊಯಾಸ್ ಉದಾರ ಹೃದಯದಿಂದ ಅವರನ್ನು ವಿಮುಕ್ತಗೊಳಿಸುತ್ತಾನೆ. ಹೀಗೆ ಈ ನಾಟಕದಲ್ಲಿ ಗಯಟೆ ಮೂಲ ಗ್ರೀಕ್ ನಾಟಕವನ್ನು ತನ್ನ ನೈತಿಕ ಮಾನವೀಯ ದೃಷ್ಟಿಗಳಿಗನುಸಾರವಾಗಿ ಅಳವಡಿಸಿಕೊಂಡು ಒಂದು ಅಸದೃಶ ಕಲಾಕೃತಿ ನಿರ್ಮಿಸಿದ್ದಾನೆ. ಇಂಥ ಪಾತ್ರಗಳನ್ನು ಕುರಿತೇ ಅವನು ಹಲವು ವರ್ಷಗಳ ಅನಂತರ 'ಹೃದಯವಂತಿಕೆಯ ಸಾಕಾರಗಳು' ಎಂದು ನುಡಿದದ್ದು.

**ಟಾರ್‌ಕ್ವಾಟೋ ಟ್ಯಾಸೋ** (1790) : ಐದು ಅಂಕಗಳ ಈ ನಾಟಕದಲ್ಲಿ ಗಯಟೆ ವೈಮರ್ ರಾಜನ ಆಸ್ಥಾನದಲ್ಲಿ ಕಂಡುಂಡ ವೈಯಕ್ತಿಕ ಅನುಭವಗಳನ್ನು ಕಂಡರಿಸಿದ್ದಾನೆನ್ನಬಹುದು. ಇದು 16ನೆಯ ಶತಮಾನದ ಇಟಲಿಯ ಮಹಾಕವಿ

ಟ್ಯಾಸೋವಿನ ಜೀವನಚರಿತ್ರೆಗೆ ಸಂಬಂಧಿಸಿದ ನಾಟಕ. ಇಫಿಜೆನಿ ನಾಟಕದಲ್ಲಿ ಬರುವ ಮಿಂಚಿನಂಥ ಘಟನೆಗಳಾಗಲೀ ಮಾತಿನ ಚಮತ್ಕಾರವಾಗಲೀ ಇಲ್ಲಿಲ್ಲ. ಇದರಲ್ಲಿ ಭಾವಗೀತೆಯ ಸಾಂದ್ರತೆಯೇ ಹೆಚ್ಚು. ಕ್ರಿಯೆ, ಸಂಘರ್ಷಗಳು ಇಲ್ಲವೆಂದರೂ ಇದೊಂದು ಮನೋವಿಶ್ಲೇಷಣಾತ್ಮಕ ನಾಟಕ. ಕೇವಲ ಐದೇ ಪಾತ್ರಗಳಿರುವ ಈ ನಾಟಕದ ಕಥೆಯೆಲ್ಲವೂ ಫೆರ‍್ರಾರ ನಗರದ ಡ್ಯೂಕ್ ಎರಡನೆಯ ಆಲ್‌ಫಾನ್ಸೋವಿನ ಆಸ್ಥಾನದಲ್ಲಿ ನಡೆಯುತ್ತದೆ. ಆತ್ಮಸಂಯಮವನ್ನು ಪರಿಪೂರ್ಣತೆಯನ್ನು ಪಡೆಯಲಾರದೆ ತೊಳಲುವ ಟ್ಯಾಸೋ ಕವಿಯ ವ್ಯಗ್ರ ಅಂತರಂಗದ ಚಿತ್ರಣ ಇಲ್ಲಿದೆ. ನಾಟಕ ಪ್ರಾರಂಭವಾಗುವಾಗ ಕವಿ ತನ್ನ ಮೇರುಕೃತಿ ಜೆರೂಸಲೆಂ ಲಿಬರ್‍ಯಾಟ ಎಂಬ ಭವ್ಯ ಕಾವ್ಯವನ್ನು ಬರೆದು ಅಪೂರ್ವ ಮನ್ನಣೆಗೆ ಪಾತ್ರನಾಗಿದ್ದಾನೆ. ತನ್ನ ಆಶ್ರಯದಾತ ಡ್ಯೂಕ್ ಆಲ್‌ಫಾನ್ಸೋವಿನ ಸೋದರಿ ಲಿಯೋನೋರ್ ದ ಎಸ್ತ ಕವಿಯನ್ನು ಬಹುವಾಗಿ ಮೆಚ್ಚಿ ಅವನಿಗೆ ಜಯಮಾಲೆ ಅರ್ಪಿಸಿದ್ದಾಳೆ. ಇದರಿಂದ ಆಗತಾನೇ ರೋಮಿನಿಂದ ಹಿಂದಿರುಗಿರುವ, ಡ್ಯೂಕನ ಕಾರ್ಯದರ್ಶಿ ಆಂಟೋನಿಯೋ ಮಾಂಟಿಕ್ಯಾಟಿನೋವಿಗೆ ಕವಿ ಟ್ಯಾಸೋವಿನ ವಿಷಯದಲ್ಲಿ ಅಸೂಯೆ, ಅನಾದರಗಳು ಹುಟ್ಟಿವೆ. ಕವಿ ತನ್ನ ಯಶಸ್ಸಿನ ಬಗ್ಗೆ ಇಲ್ಲಸಲ್ಲದ ಪ್ರಚಾರ ಮಾಡಿಕೊಂಡು, ತಾನು ವರ್ಜಿಲ್, ಆರಿಯೋಸ್ಟೊ ಮುಂತಾದ ಮಹಾಕವಿಗಳ ಸಾಲಿಗೆ ಸೇರಿದವನೆಂದು ಹೇಳಿಕೊಳ್ಳುತ್ತಿದ್ದಾನೆಂದು ಭಾವಿಸಿ ಆಂಟೋನಿಯೋವಿಗೆ ಸಿಟ್ಟು ಬರುತ್ತದೆ. ಕವಿ ರಾಜಕಾರಣಿಗಳಿಬ್ಬರ ನಡುವೆ ಬಿರುಕು ಹುಟ್ಟುತ್ತದೆ. ಟ್ಯಾಸೋವಿನ ಮೇಲೆ ದೇಶದ್ರೋಹದ ಆಪಾದನೆ ಬರುತ್ತದೆ. ಅವನನ್ನು ಕಾರಾಗೃಹಕ್ಕೆ ಕಳುಹಿಸಲಾಗುತ್ತದೆ. ಅನಂತರ ಡ್ಯೂಕನ ಆಜ್ಞೆಯಂತೆ ಆಂಟೋನಿಯೋ ಭಗ್ನ ಹೃದಯದ ಕವಿಯನ್ನು ಬಿಡುಗಡೆ ಮಾಡುತ್ತಾನೆ. ಟ್ಯಾಸೋ ಫೆರ‍್ರಾರ ನಗರವನ್ನು ಬಿಟ್ಟು ಹೊರಡಲು ತನಗೆ ಡ್ಯೂಕನ ಅಪ್ಪಣೆ ದೊರಕುವಂತೆ ಮಾಡಬೇಕೆಂದು ಆಂಟೋನಿಯೋನನ್ನು ಪ್ರಾರ್ಥಿಸುತ್ತಾನೆ. ಕೊನೆಯ ಗಳಿಗೆಯಲ್ಲಿ ನತದೃಷ್ಟ ಟ್ಯಾಸೋ ರಾಜಕುಮಾರಿ ಲಿಯೋನಾರಳಲ್ಲಿ ತನಗಿರುವ ಗಾಢ ರಹಸ್ಯಪ್ರೇಮವನ್ನು ತೋಡಿಕೊಂಡು ಅವಳಿಂದ ತಿರಸ್ಕೃತನಾಗುತ್ತಾನೆ. ಎಲ್ಲ ಕಡೆಯೂ ನಿರಾಶೆಯನ್ನು ಕಾಣುತ್ತಿರುವ ಕವಿಗೆ ರಾಜಕಾರಣಿ ಆಂಟೋನಿಯೋವಿನ ಗೆಳೆತನವೇ ಅಮೃತಸೇಚನವಾಗುತ್ತದೆ. ಹೀಗೆ ಇದ್ದಕ್ಕಿದ್ದಹಾಗೆ ಮುಗಿಯುವ ಈ ನಾಟಕ ಅಪೂರ್ಣವೆನಿಸಿದರೂ ಅಲ್ಲಲ್ಲಿ ಕಾವ್ಯಾತ್ಮಕವಾದ ಹೊಳಪಿನಿಂದ ಕೂಡಿದೆ. ಆದರೆ ಆಂಟೋನಿಯೋ ಪಾತ್ರ ವಿನ್ಯಾಸ ಅಸಹಜವೆನಿಸುವಷ್ಟು ವಿರೋಧಾಭಾಸಗಳಿಂದ ತುಂಬಿದೆ. ಕುಟಿಲ ರಾಜಕಾರಣಿ ಇದ್ದಕ್ಕಿದ್ದ ಹಾಗೆ ಕವಿಯ ಆತ್ಮೀಯ ಗೆಳೆಯನಾಗುವ ಸಂಗತಿಯಲ್ಲಿ ನಾಟ್ಯಾಂಶವೇ ಇಲ್ಲ. ಆದರೆ ಕವಿಯ ಅಂತರಂಗದ ತುಮುಲವನ್ನೂ ಆಸೆ ನಿರಾಸೆಗಳ ಏರಿಳಿತಗಳನ್ನೂ ಗಯಟೆ ಅತ್ಯಂತ ಹೃದಯಸ್ಪರ್ಶಿಯಾಗಿ ವಿಶ್ಲೇಷಿಸಿದ್ದಾನೆ. ಇಂಗ್ಲಿಷ್ ಕವಿ ಕೀಟ್ಸ್, ಟ್ಯಾಸೋನ ಅಂತರಂಗದ ಸ್ವರೂಪವನ್ನು ವಿವರಿಸುತ್ತ ಆತ ಗೋಸುಂಬೆಯಂಥವನು, ಅವನಿಗೆ ವಿಶಿಷ್ಟ ವ್ಯಕ್ತಿತ್ವವೆಂಬುದೇ ಇಲ್ಲ, ಅವನಿಗೆ ತಾನೆಂಬುದೇ ಇಲ್ಲ–ಎನ್ನುತ್ತಾನೆ. ಹೀಗೆ ಗೋಸುಂಬೆಯಂತೆ ಏನೊಂದೂ ವಿಶಿಷ್ಟ ವ್ಯಕ್ತಿತ್ವವಿಲ್ಲದ, ಆದರೆ ಮಾನವಕೋಟಿಯನ್ನೇ ಪ್ರತೀಕಿಸುವಂಥ ಸ್ವರೂಪವುಳ್ಳ ಕವಿಯ ಸಂಕೀರ್ಣ ಅಂತರಂಗವನ್ನು ಗಯಟೆ ಈ ನಾಟಕದಲ್ಲಿ ತುಂಬ ಅರ್ಥವತ್ತಾಗಿ ಪ್ರತಿರೂಪಿಸಿದ್ದಾನೆ.

**ವಿಲ್‌ಹೆಲ್ಮ್ ಮೈಸ್ಟರ್ಸ್ ಅಪ್ರೆಂಟಿಸ್‌ಷಿಪ್** (1795–96) : ಇಟಲಿಯ ಪ್ರವಾಸದಿಂದ ಗಯಟೆ ವೈಮರ್‌ಗೆ ಹಿಂದಿರುಗಿದ ಮೇಲೆ ಸುಮಾರು 25 ವರ್ಷ ವೈಮರ್ ಥಿಯೇಟರಿನ ನಿರ್ದೇಶನಕ್ಕಾಗಿ ಕೆಲಸಮಾಡಿದ. ಥಿಯೇಟರಿನ ಆಡಳಿತದಲ್ಲಿ ತನಗೆ ಲಭಿಸಿದ ಗಾಢ ಅನುಭವಗಳನ್ನು ಈ ಕಾದಂಬರಿಯಲ್ಲಿ ರೂಪಿಸಿದ್ದಾನೆ. ಕವಿ ಇದರಲ್ಲಿ ಇಂಗ್ಲಿಷ್ ಕಾದಂಬರಿಕಾರ ರಿಚರ್ಡ್‌ಸನ್ನನ ಪ್ರಭಾವದಿಂದ ತಪ್ಪಿಸಿಕೊಂಡು ಹೊಸ ಸಂವೇದನೆಯ ನ್ನೊಳಗೊಂಡ, ಆತ್ಮಕಥನೀಯ ಕಾದಂಬರಿ ಎನ್ನಬಹುದಾದ ಒಂದು ಹೊಸ ಪ್ರಕಾರವನ್ನೇ ಸೃಷ್ಟಿಸಿದ್ದಾನೆ. ಈ ಕಾದಂಬರಿಯ ರಚನೆ ತೀರ ಶಿಥಿಲವಾಗಿದ್ದು, ಕಥಾವಸ್ತು ಹಾಗೂ ಪಾತ್ರಗಳು ಕೇವಲ ಒಂದು ನೀತಿಪಾಠದ ಅಥವಾ ತತ್ತ್ವನಿರೂಪಣೆಯ ಸಾಧನವಾಗಿವೆಯೆಂದು ತೋರುತ್ತದೆ. ಒಬ್ಬ ಯುವಕನ ವ್ಯಕ್ತಿತ್ವ ಸಂಪೂರ್ಣವಾಗಿ ವಿಕಾಸವಾಗುವುದಕ್ಕೆ ಮುಂಚೆ ಅವನಿಗೆ ಎಂಥ ಅನುಭವಗಳು ಲಭಿಸಬಹುದೆಂಬುದನ್ನು ಇಲ್ಲಿ ಕಾಣಬಹುದು. ವಿಲ್‌ಹೆಲ್ಮ್ ಪ್ರೀತಿಸುವ ಮಾರಿಯಾನಿ, ಮೇನಾ, ನಟಾಲಿ, ಥೆರೆಸಾ ಮುಂತಾದ ಹೆಣ್ಣುಗಳು, ವಿಲ್‌ಹೆಲ್ಮ್‌ನ ಸಾಕುಮಗಳು ಮಿಗ್ನಾನ್, ಚಿತ್ರ ವಿಚಿತ್ರ ಅಲೌಕಿಕ ಅದ್ಭುತ ವ್ಯಕ್ತಿ ಹಾರ್ಪರ್–ಇವರು ಕಾದಂಬರಿಯ ಹಾಸು ಹೊಕ್ಕಾಗಿ ಬರುತ್ತಾರೆ. ಕಥೆ ಎಂಟು ಘಟ್ಟಗಳಾಗಿ ವಿನ್ಯಾಸಗೊಂಡು ಒಂದಕ್ಕೊಂದು ಸಂಬಂಧವಿಲ್ಲದಂತೆ ಬೆಳೆಯುತ್ತದೆ. ವ್ಯಾಪಾರಿಯಾಗಿದ್ದ ವಿಲ್‌ಹೆಲ್ಮ್‌ನ ಅನುಭವಗಳು, ರಂಗಭೂಮಿಯ ಜೀವನದ ವಾಸ್ತವ ಘಟನೆಗಳು, ಲೋಥಾರಿಯೋವಿನ ದುರ್ಗದಲ್ಲಿ ನಡೆಯುವ ಅದ್ಭುತ ಪ್ರಸಂಗಗಳು–ಇವು ಕಾದಂಬರಿಯ ಮುಖ್ಯಾಂಶಗಳು. ವ್ಯಕ್ತಿ ಸಮಾಜದ ಅಂಗವಾಗಿ ಬದುಕುವುದರ ಜೊತೆಗೆ ಬದುಕಿನ ನಾನಾ ಅನುಭವಗಳ ಸಾರವನ್ನು ರಕ್ತಗತ ಮಾಡಿಕೊಳ್ಳಬೇಕು, ತನ್ನ ಅರಿವನ್ನು ಕಲ್ಪನೆಯ ಕಣ್ಣನ್ನು ನಕ್ಷತ್ರಲೋಕದಿಂದಾಚೆಗೆ ಕೊಂಡೊಯ್ಯಲೆತ್ನಿಸಬೇಕು–ಎಂಬ ಮಾತು ಇಲ್ಲಿ ಮುಖ್ಯವೆಂದು ತೋರುತ್ತದೆ. ಕಾದಂಬರಿಯ ಕೊನೆಯಲ್ಲಿ ವಿಲ್‌ಹೆಲ್ಮ್‌ನ ಸಾಕುಮಗಳು ಮಿಗ್ನಾನ್ ಸತ್ತಾಗ ಅವಳ ಶವದ ಬಳಿ ನಾಲ್ವರು ತರುಣರು ಶೋಕಗೀತೆ ಹಾಡುತ್ತಾರೆ. ಈ ಗೀತೆಯಲ್ಲಿ ಇಡೀ ಕಾದಂಬರಿಯ ತತ್ತ್ವವೇ ಅಡಗಿದೆ ಎನ್ನುವುದುಂಟು. 'ನಿನ್ನ ಜೀವನದಲ್ಲಿ ಯಾವುದು ನಿನ್ನ ಪಾಲಿಗೆ ಒದಗುತ್ತದೆಯೋ ಅದನ್ನು ನಿಷ್ಠೆಯಿಂದ, ನಿನ್ನ ಶಕ್ತಿಮೀರಿ ನೆರವೇರಿಸು' ಎನ್ನುವುದು ಗಯಟೆಗೆ ಪ್ರಿಯವಾಗಿದ್ದ ಆದರ್ಶ. ಕಾದಂಬರಿಯ ಪಾತ್ರ ಘಟನೆಗಳೆಲ್ಲವೂ ಈ ಆದರ್ಶಕ್ಕೆ ವಸ್ತುಪ್ರತಿರೂಪಗಳಾಗಿ ಬಂದಿವೆ ಎನ್ನುವುದು ವಿಮರ್ಶಕರ ಅಭಿಪ್ರಾಯ.




**ಹರ್ಮನ್ ಮತ್ತು ಡೊರೋತಿಯ** (1798) : ಈ ನೀಳ್ಗವನದಲ್ಲಿ ಗಯಟೆ ಗ್ರೀಕ್ ಕಲೆಯನ್ನು ಆಧುನಿಕ ಕಲ್ಪನೆಯೊಂದಿಗೆ ಹೇಗೆ ಸಮನ್ವಯಗೊಳಿಸಬಹುದೆಂದು ತೋರಿಸಿದ್ದಾನೆ. ಅತಿ ಸಾಮಾನ್ಯ ಹಳ್ಳಿಗಾಡಿನ ಪ್ರೇಮಕಥೆಯನ್ನು ಹೋಮರನ ಭವ್ಯಕಾವ್ಯದ ಶೈಲಿಯಲ್ಲಿ (ಹೆಕ್ಸಾಮೀಟರ್) ನಿರೂಪಿಸುತ್ತಾನಾದರೂ ಕವನ ದೋಷರಹಿತವಾಗಿದೆ. ಅದರಲ್ಲಿ ಒಂದಿಷ್ಟೂ ಅತಿಭಾವುಕತೆ ಕಂಡುಬರುವುದಿಲ್ಲ. ಇಲ್ಲಿ ಬರುವ ಪ್ರೇಮಿಗಳು, ತರುಣ ತರುಣಿಯರು, ತಂದೆತಾಯಂದಿರು, ಗ್ರಾಮವಾಸಿಗಳು ಮೊದಲಾದ ಎಲ್ಲ ಪಾತ್ರಗಳೂ ಅಚ್ಚಿನಲ್ಲಿ ಎರಕ ಹೊಯ್ದಂತಿದ್ದರೂ ಕಥೆಯ ನಿರೂಪಣೆಯಲ್ಲಿ ಕವಿ ಸಾಧಿಸಿರುವ ನಿರ್ಲಿಪ್ತತೆ, ವಸ್ತುನಿಷ್ಠೆ ಬೆರಗುಗೊಳಿಸುವಂಥವು. ರೈನ್ ನದೀತೀರದ ಜರ್ಮನ್ ಶ್ರೀಮಂತ ಕುಟುಂಬಕ್ಕೆ ಸೇರಿದ ಹರ್ಮನ್ ಎಂಬ ತರುಣ ಪ್ಯಾಲೆಸ್ಟೈನಿನಿಂದ ಬಂದ ನಿರಾಶ್ರಿತರಿಗೆ ಅನ್ನ ಬಟ್ಟೆ ಹಂಚಲು ಹೋದಾಗ ಆ ಗುಂಪಿನಲ್ಲಿದ್ದ ಡೊರೋತಿಯ ಎಂಬ ಹುಡುಗಿಯನ್ನು ಕಂಡು ಪ್ರೀತಿಸುತ್ತಾನೆ. ತಾನು ಹಂಚಲು ತಂದಿದ್ದ ವಸ್ತುಗಳನ್ನೆಲ್ಲ ಆ ಹುಡುಗಿಯ ವಶಕ್ಕೆ ಕೊಟ್ಟುಬಿಡುತ್ತಾನೆ. ಶ್ರೀಮಂತ ಕುಟುಂಬದ ಹೆಣ್ಣನ್ನು ತಂದು ಮಗನಿಗೆ ಮದುವೆ ಮಾಡಬೇಕೆಂದಿದ್ದ ಹರ್ಮನ್ನನ ತಂದೆಗೆ ಇದರಿಂದ ನಿರಾಶೆಯಾಗುತ್ತದೆ. ಆದರೆ ಡೊರೋತಿಯಳ ಸಚ್ಚರಿತ್ರೆ, ಸದ್ಗುಣ ಸೌಂದರ್ಯಗಳ ಬಗೆಗೆ ಸಂತೃಪ್ತನಾದ ತಂದೆ ಇಬ್ಬರೂ ಮದುವೆಯಾಗಲು ಅನುಮತಿ ನೀಡುತ್ತಾನೆ. ತನ್ನ ಮನೆಗೆಲಸಕ್ಕಾಗಿ ನೇಮಿಸಿದ ಸೇವಕಿಯೆಂದು ಆ ಮುಗ್ಧ ಹಳ್ಳಿಯ ಹುಡುಗಿಗೆ ಹರ್ಮನ್ ಸುಳ್ಳು ಹೇಳಿ ಮನೆಗೆ ಕರೆತರುತ್ತಾನೆ. ಅವನು ಅವಳಿಗೆ ಅನಿರೀಕ್ಷಿತವಾಗಿ ನಿಜಾಂಶ ತಿಳಿಸಿದಾಗ ಅವಳ ಸಂತೋಷಕ್ಕೆ ಪಾರವಿಲ್ಲದಂತಾಗುತ್ತದೆ. ಮತ್ತೆ ಮತ್ತೆ ಹೋಮರನ ಭವ್ಯ ಪಾತ್ರಗಳನ್ನು ನೆನಪು ಮಾಡುವಂಥ ಈ ಕಥನ ಕವನದ ಸರಳ ಪಾತ್ರಗಳು ಗ್ರೀಕ್ ಶಿಲ್ಪಾಕೃತಿಗಳನ್ನು ಹೋಲುತ್ತವೆ. ಕ್ಲಾಸಿಕಲ್ ಗ್ರೀಕ್ ಸಾಹಿತ್ಯ ಮತ್ತು ಶಿಲ್ಪಕಲೆಗಳಿಂದ ತಾನು ಗ್ರಹಿಸಿದ ಕಲಾಪ್ರಜ್ಞೆಯನ್ನು ಗಯಟೆ ಇಲ್ಲಿ ತುಂಬ ಸೊಗಸಾಗಿ ಬಳಸಿದ್ದಾನೆ. ಜರ್ಮನಿಯ ಕ್ಲಾಸಿಕಲ್ ಸಾಹಿತ್ಯದಲ್ಲಿ ಇದನ್ನು ಮೀರಿಸಿದ ಪರಿಪೂರ್ಣ ಕವನ ಇನ್ನೊಂದಿಲ್ಲ.

**ದಿ ಎಲೆಕ್ಟಿವ್ ಅಫಿನಿಟೀಸ್** (1809) : ಈ ಕಾದಂಬರಿಯಲ್ಲಿ ಗಯಟೆ ವ್ಯಕ್ತಿವ್ಯಕ್ತಿಗಳ ನಡುವಣ ಸಂಬಂಧ ಎಷ್ಟು ಅವ್ಯಕ್ತವೂ ವಿಚಿತ್ರವೂ ಆದುದೆಂಬುದನ್ನು ಚಿತ್ರಿಸಿದ್ದಾನೆ. ಕಥಾನಾಯಕ ಎಡ್ವರ್ಡ್, ಅವನ ಹೆಂಡತಿ ಚಾರ್ಲೆಟ್, ಆಕೆ ಪ್ರೀತಿಸುವ ಕ್ಯಾಪ್ಟನ್, ಎಡ್ವರ್ಡ್ ಪ್ರೀತಿಸುವ ಓಟ್ಟಿಲಿ (ಚಾರ್ಲೆಟ್ಟಳ ಸಾಕುಮಗಳು)–ಈ ನಾಲ್ವರ ವಿಷಮ ಸಂಬಂಧವನ್ನು ಗಯಟೆ ಅತ್ಯಂತ ವಸ್ತುನಿಷ್ಠ ಶೈಲಿಯಲ್ಲಿ ನಿರೂಪಿಸಿದ್ದಾನೆ. ಕೆಲವು ಧಾತುಗಳು ಕೆಲವನ್ನು ಬಿಟ್ಟು ಉಳಿದ ಕೆಲವು ಪದಾರ್ಥಗಳೊಡನೆ ಸಂಯೋಗ ಹೊಂದುವ ಪ್ರವೃತ್ತಿ ಪಡೆದಿರುತ್ತವೆ. ಇದು ರಸಾಯನಶಾಸ್ತ್ರದಲ್ಲಿನ ಒಂದು ನೈಸರ್ಗಿಕ ವ್ಯಾಪಾರ. ಸಸ್ಯ ಹಾಗೂ ಪ್ರಾಣಿಲೋಕದ ನೈಸರ್ಗಿಕ ವ್ಯಾಪಾರಗಳನ್ನು ಬಿಡುಗಣ್ಣಿನಿಂದ

ವೀಕ್ಷಿಸುತ್ತಿದ್ದ ವಿಜ್ಞಾನಿ ಗಯಟೆ ಈ ರಾಸಾಯನಿಕ ಕ್ರಿಯೆಯನ್ನು ಮಾನವಸಂಬಂಧ ಹಾಗೂ ವ್ಯಕ್ತಿವ್ಯಕ್ತಿಗಳ ನಡುವಣ ಆಕರ್ಷಣೆಗಳಿಗೆ ಅನ್ವಯಿಸಿ ಈ ಕಾದಂಬರಿಯನ್ನು ರಚಿಸಿದ್ದಾನೆ. ಪೂರ್ವಸಿದ್ಧ ತಾತ್ತ್ವಿಕ ಸೂತ್ರಗಳ ಚೌಕಟ್ಟಿನಲ್ಲಿ ಚಲಿಸುವುದರಿಂದ ಇಲ್ಲಿನ ಪಾತ್ರಗಳ ನಿಯೋಜನೆ ತೀರ ಯಾಂತ್ರಿಕವಾಗಿದೆಯಾದರೂ ಕತೆ ಮಾತ್ರ ಕವಿ ಗಯಟೆಯ ವೈಚಾರಿಕತೆಯ ವಿವಿಧ ಸ್ತರಗಳನ್ನು ನವಿರಾಗಿ ಪ್ರತೀಕಿಸುತ್ತದೆ.

**ಡಿಷ್ಟಂಗ್ ಅಂಡ್ ವಾಹ್ರ್ ಹೈಟ್** (1811–14) : ಇದು ಗಯಟೆಯ ಜೀವನದ ಮೊದಲ ಭಾಗವನ್ನು ರೂಪಿಸುವ ಆತ್ಮಕಥೆ. 1811ರಿಂದ 1814ರವರೆಗಿನ ಅವಧಿಯಲ್ಲಿ ಗಯಟೆ ಆತ್ಮಕತೆಯ ಮೂರುಭಾಗಗಳನ್ನು ಬರೆದರೂ ಕೊನೆಯಭಾಗ, ಅಂದರೆ ಅವನು ವೈಮರ್‌ಗೆ ಬರುವವರೆಗಿನ ಜೀವನದ ಇತಿಹಾಸದ ಭಾಗ, ಆತ ತೀರಿಹೋದ ಅನಂತರ, 1833ರಲ್ಲಿ ಪ್ರಕಟವಾಯಿತು. ಇಳಿವಯಸ್ಸಿನ ಕವಿ ತನ್ನ ವಿಸ್ತೃತ ಜೀವನದ ಏರಿಯ ಮೇಲೆ ನಿಂತು, ಕಳೆದುಹೋದ ತನ್ನ ತಾರುಣ್ಯದ ವಿವಿಧ ಅನುಭವಗಳನ್ನು ಇಲ್ಲಿ ಸಮೀಕ್ಷಿಸಿದ್ದಾನೆ. ಫ್ರಾಂಕ್‌ಫರ್ಟಿನಲ್ಲಿನ ಬಾಲ್ಯ ಮತ್ತು ಲೀಪ್‌ಜಿಗ್ ಘಟನೆಗಳು ಇಲ್ಲಿ ಜೀವ ತಳೆದು ಸ್ಫುಟವಾಗಿ ಹೊಮ್ಮಿವೆ. ತಾನು ಪ್ರೀತಿಸಿದ್ದ ಫ್ರೆಡ್ರಿಕ್ ಬ್ರಯಾನ್ ಮತ್ತು ಸೀಸನ್‌ಹ್ಯಾಮ್ ಹಳ್ಳಿಗಳ ವರ್ಣನೆ ಅತ್ಯಂತ ಕಾವ್ಯಾತ್ಮಕವಾಗಿ ಅರಳಿ ಬಂದಿದೆ. ಜರ್ಮನಿಯಲ್ಲಿ ಚಂಡಮಾರುತದಂತೆ ಬೀಸಿದ ಸ್ಟುರ್ಮ್ ಉಂಡ್ ಡ್ರಂಗ್ ಚಳವಳಿಯ ನಡುವೆ ಗಯಟೆ ತನ್ನ ಯೌವ್ವನವನ್ನು ಕಳೆದರೂ ಆ ಪ್ರಕ್ಷುಬ್ಧ ವಾತಾವರಣದ ಪ್ರಭಾವ ಈ ಆತ್ಮಕಥೆಯಲ್ಲಿ ಎಲ್ಲೂ ಸುಳಿದಿಲ್ಲ. ಇಲ್ಲಿನ ವಸ್ತುನಿಷ್ಠ ನಿರ್ಲಿಪ್ತಶೈಲಿ ತಾನೇತಾನಾಗಿ, ಅನಿವಾರ್ಯವಾಗಿ ರೂಪ ತಾಳಿ ಬಂದುದಲ್ಲ ಅನಿಸುತ್ತದೆ. ಈ ಆತ್ಮಕಥೆಯ ಶೈಲಿಯನ್ನು ಕುರಿತು ವಿಮರ್ಶಕರು ಅರುವತ್ತು ವರ್ಷದ ವೃದ್ಧ ನಾಲ್ವತ್ತರ ಹರೆಯದ ಕಣ್ಣುಗಳ ಮೂಲಕ ನೋಡಲೆತ್ನಿಸಿದಂತಿದೆ–ಎಂದಿದ್ದಾರೆ.

**ವೆಸ್ಟ್‌ಯೋಸ್ಟ್‌ಲಿಶೆರ್ ಡೀವಾನ್** (1819) : ಈ ಕವನ ಸಂಗ್ರಹದಲ್ಲಿ ಗಯಟೆ ಪರ್ಷಿಯನ್ ಕವಿ ಹಾಫಿಜ಼್‌ನನ್ನು ಅನುಕರಿಸಿ ಬರೆದ ಪ್ರೇಮಗೀತೆಗಳಿವೆ. ಪ್ರಸಿದ್ಧ ಪೌರಸ್ತ್ಯ ಭಾಷಾಪಂಡಿತ ಜೋಸೆಫ್ ಹ್ಯಾಮರ್‌ನ ವಿಪುಲ ಗ್ರಂಥಗಳಿಂದ ಪರ್ಷಿಯನ್ ಸಾಹಿತ್ಯದ ಪರಿಚಯ ಪಡೆದಿದ್ದ ಗಯಟೆಗೆ ಹಾಫಿಜ಼್‌ನ ಪ್ರೇಮಗೀತೆಗಳಲ್ಲಿ ಬರುವ ಮೇಳಗೀತಾ ಛಂದಸ್ಸು ಬಹಳ ಮೆಚ್ಚಾಯಿತು. ತನ್ನ ಇಳಿವಯಸ್ಸಿನಲ್ಲೂ ಮೇರಿಯಾನ ವಿಲ್ಲೆಮರ್ ಎಂಬ ಹುಡುಗಿಯನ್ನು ಅಪಾರವಾಗಿ ಪ್ರೀತಿಸಿದ ಗಯಟೆ ತನ್ನ ಉತ್ಕಟ ಭಾವನೆಗಳನ್ನು ಈ ಕವನಗಳಲ್ಲಿ ಹರಿಯಬಿಟ್ಟಿದ್ದಾನೆ. ಸಂಗ್ರಹದಲ್ಲಿನ ಹನ್ನೆರಡು ಭಾಗಗಳಲ್ಲಿ ನೆಪೋಲಿಯನನನ್ನು ಕುರಿತ ಕವನ ಚಿತ್ರಗಳಿವೆ. ಉದ್ದನೆಯ ಸೂಕ್ತಿಗಳಂತೆ ಕಾಣುವ ಈ ಸುಂದರ ಕವನಗಳಲ್ಲಿ ಗಾಢ ಚಿಂತನೆ ಇದೆ. ಚಿತ್ರಯುಕ್ತವಾದ ಸಂಯುಕ್ತ ಪದಗಳನ್ನು ಗಯಟೆ ಈ ಕವನಗಳಲ್ಲಿ ಅನನ್ಯವಾಗಿ ಬಳಸಿದ್ದಾನೆ.

**ವಿಲ್‌ಹೆಲ್ಮ್ ಮೈಸ್ಟರ್ಸ್ ವಾಂಡರ್‌ಜಾಹ್ರ್** (1821–29) : ವಿಲ್‌ಹೆಲ್ಮ್ ಮೈಸ್ಟರ್ಸ್ ಅಪ್ರೆಂಟಿಸ್‌ಶಿಪ್ ಎಂಬ ಕಾದಂಬರಿಯ ಮುಂದಿನ ಭಾಗವಾದ ಇದನ್ನು ಗಯಟೆ 1829ರಲ್ಲಿ ಮುಗಿಸಿದ. ಮೊದಲ ಭಾಗದ ಭಾವಸಾಂದ್ರತೆಯಾಗಲೀ ಚೆಲುವಾದ ನಿರೂಪಣೆಯಾಗಲೀ ಇಲ್ಲಿಲ್ಲ. ಕಥಾನಾಯಕನ ಆತ್ಮಕಥನ ಅಲ್ಲಲ್ಲಿ ನೀರಸವಾಗಿದೆ. ಮೊದಲ ಭಾಗದಲ್ಲಿ ಬರುವ ಪಾತ್ರಗಳೇ ಮತ್ತೆ ಇಲ್ಲಿ ಕಾಣಿಸಿಕೊಂಡರೂ ಅವುಗಳ ಕಲ್ಪನೆ ಶಿಥಿಲವಾಗಿದೆ. ಅವು ಕೆಲವು ವಿಶಿಷ್ಟ ಆದರ್ಶ ರೀತಿಗಳನ್ನು ಮೈಗೆ ಮೆತ್ತಿಕೊಂಡು ಬರುವ ಆಕೃತಿಗಳಂತೆ ಸುಳಿಯುತ್ತವೆ. ಮೊದಲ ಭಾಗದಲ್ಲಿ ಕಥಾನಾಯಕ, (ಫೌಸ್ಟ್ ನಾಟಕದ ಮೊದಲ ಭಾಗದ ನಾಯಕನ ಹಾಗೆ) ಸ್ವಂತ ಜೀವನದ ಎಡರುತೊಡರುಗಳನ್ನು ಎದುರಿಸಿ ಕಟ್ಟಕಡೆಯಲ್ಲಿ ಅನುಭವಗಳನ್ನು ರೂಢಿಸಿಕೊಂಡು ಜೀವನದ ರಹಸ್ಯವನ್ನು ಅರಿಯಲು ಯತ್ನಿಸುವಂತೆ ಕಾದಂಬರಿಯ ಎರಡನೆಯ ಭಾಗದಲ್ಲಿ ವ್ಯಕ್ತಿ ಹಾಗೂ ಸಮಾಜದ ಸಂಬಂಧವೇನೆಂದು ಅರ್ಥ ಮಾಡಿಕೊಳ್ಳಲು ಹೆಣಗುತ್ತಾನೆ. ಬದುಕಿನ ಶಿಕ್ಷಣಶಾಲೆಯಲ್ಲಿ ಕಲಿತ ಆದರ್ಶವನ್ನು ಇಲ್ಲಿ ವಾಸ್ತವ ಜೀವನಕ್ಕೆ ಅನ್ವಯಿಸಲು ಪ್ರಯತ್ನಿಸುತ್ತಾನೆ. ಕಥೆಯ ಸ್ವಾರಸ್ಯಕ್ಕಿಂತ ಹೆಚ್ಚಾಗಿ ಇಲ್ಲಿ ಗಯಟೆಯ ವೈಚಾರಿಕತೆ ತುಂಬಿ ಹೊನಲಾಗಿ ಹರಿಯುತ್ತದೆ. ಶಿಕ್ಷಣ, ಧರ್ಮ, ಕೈಗಾರಿಕೆಯ ಸಮಸ್ಯೆಗಳು, ಕಾರ್ಮಿಕರ ಹಕ್ಕು ಬಾಧ್ಯತೆಗಳು–ಮುಂತಾದ ಸಮಾಜ ಸಂಬಂಧಿ ತತ್ತ್ವಗಳು ಇಲ್ಲಿ ಗರಿಗೆದರಿಕೊಂಡಿವೆ.

**ಫೌಸ್ಟ್–1ನೆಯ ಮತ್ತು 2ನೆಯ ಭಾಗಗಳು** (1808–32) : ಗಯಟೆ ತನ್ನ ಜೀವನದ ಬೇರೆ ಬೇರೆ ಘಟ್ಟಗಳಲ್ಲಿ, ಕಾಲಾವಧಿಗಳಲ್ಲಿ ಬರೆದ ಈ ಕಾವ್ಯ ನಾಟಕ (ನಾಟಕೀಯ ಕಾವ್ಯವೆಂದರೂ ಸಮಂಜಸವಾದೀತು) ಜಗತ್ತಿನ ಮಹೋನ್ನತ ಸಾಹಿತ್ಯ ಕೃತಿಗಳಲ್ಲಿ ಒಂದು. ತನ್ನ ಭೌತಿಕ ಜಗತ್ತಿನ ಎಲ್ಲೆಕಟ್ಟುಗಳನ್ನು ಮೀರಿ ನಿಲ್ಲಬೇಕೆನ್ನುವ ಮನುಷ್ಯನ ಹಂಬಲವಾಗಲೀ ಬದುಕಿನ ಮೂಲಭೂತ ಸಾರ್ವಕಾಲಿಕ ಸಮಸ್ಯೆಗಳಿಗೆ ಪರಿಹಾರ ಹುಡುಕಬೇಕೆನ್ನುವ ಮನುಷ್ಯನ ತುಡಿತ ತೊಳಲಾಟಗಳಾಗಲೀ ಹೊಸ ವಿಚಾರಗಳೇನಲ್ಲ. ಆದರೆ ಈ ವಿಶ್ವವ್ಯಾಪಕ ಸಮಸ್ಯೆಯನ್ನು ಗಯಟೆ ಉನ್ನತ ಕಾವ್ಯಶೈಲಿಯಲ್ಲಿ ರೂಪಿಸಿದ್ದಾನೆ. ಫೌಸ್ಟ್ ನಾಟಕದ ಎರಡನೆಯ ಭಾಗವನ್ನು ಗಯಟೆ 1831ರಲ್ಲಿ ಮುಗಿಸಿದರೂ 1771ರಲ್ಲಿ ಉರ್‌ಫೌಸ್ಟ ಎಂಬ ಅಪೂರ್ಣ ಕೃತಿಯನ್ನು ಬರೆಯಲು ಮೊದಲು ಮಾಡಿದಾಗಲೇ ನಾಟಕದ ಬೀಜಾಂಕುರವಾಯಿತೆನ್ನಬಹುದು. ಕವಿಯ ಅಂತಃಕರಣ ಸಂವೇದನೆಗಳು ಬೆಳೆಯುತ್ತ ಹೋದಂತೆ ಈ ನಾಟಕದ ಕಲ್ಪನೆಯೂ ಹಿಗ್ಗುತ್ತ ಹೋಗಿ ಹೊಸ ಹೊಸ ವಿಚಾರಗಳನ್ನು ಅದು ಒಳಗೊಳ್ಳುವಂತಾಯಿತು. ಎಲ್ಲವನ್ನೂ ಹುಡುಕುತ್ತ ತಡಕುತ್ತ ಬಾಳಿನ ರಹಸ್ಯವನ್ನು ಮುಟ್ಟಿ ಮೇಲೇರಬೇಕೆನ್ನುವ ಫೌಸ್ಟನ ತತ್ತ್ವ ಹಾಗೂ ಫೌಸ್ಟ್‌ಪಾತ್ರದ ಕಲ್ಪನೆಯನ್ನು ನಾಟಕದ ಮೊದಲ ಭಾಗದಲ್ಲಿ ಬರುವ ಸ್ವರ್ಗದಲ್ಲಿನ ಪ್ರಸ್ತಾವನೆಯಲ್ಲಿ ಕಾಣಬಹುದು. ಇಲ್ಲಿ ಸೃಷ್ಟಿಕರ್ತ ಭಗವಂತ ಒಂದು ಕಡೆ, ಎಲ್ಲವನ್ನೂ ಅಲ್ಲಗಳೆದು ಹೀನೈಸುವ ನಿಷೇಧಾತ್ಮಕ ಶಕ್ತಿಯಾದ ಮೆಫಿಸ್ಟಾಫೆಲೀಸ್ ಇನ್ನೊಂದು ಕಡೆ, ಮುಖಾಮುಖಿಯಾಗಿ ನಿಂತು ಮನುಷ್ಯನ ಆತ್ಮದ ವಿಷಯವಾಗಿ ಜಿಜ್ಞಾಸೆ ನಡೆಸುತ್ತಾರೆ. ಮೆಫಿಸ್ಟಾಫೆಲೀಸ್ ಹೇಳುತ್ತಾನೆ: ಮನುಷ್ಯ ಚಿರದುಃಖಿ. ಅವನ ಸ್ಥಿತಿ ಕರುಣಾಜನಕ. ಇನ್ನುಮೇಲೆ ನಾನು ಅವನ ಗೋಜಿಗೆ ಹೋಗುವುದಿಲ್ಲ. ದೇವರೆಂಬ ಬಯಲ ಭ್ರಾಂತಿಯನ್ನು ಕೇವಲ ತೋರಿಕೆಗಾಗಿ ನೆಚ್ಚಿಕೊಂಡಿರುವ ಅವನನ್ನು ದೇವರ ದಾರಿಯಿಂದ ತಪ್ಪಿಸಿ ಸೈತಾನಶಕ್ತಿಯತ್ತ ಒಯ್ಯುವುದು ಅತಿ ಸುಲಭ. ಇದಕ್ಕೆ ಭಗವಂತನ ಉತ್ತರ: ಮನುಷ್ಯ ಚಿರದುಃಖಿಯೆಂಬುದು ದಿಟ. ಭೂಮಿಯ ಮೇಲೆ ಬದುಕಿರುವ ತನಕ ಅವನು ಕಷ್ಟದಲ್ಲಿ ನರಳಬೇಕು, ಹೋರಾಡಬೇಕು. ಹೋರಾಟ ನಡೆಯುವಷ್ಟು ಕಾಲ ಅವನು ತಪ್ಪು ಮಾಡುವುದು ಅನಿವಾರ್ಯ, ಆದರೆ ಅವನು ದೈವಶಕ್ತಿಯ ಪ್ರತೀಕವೂ ಹೌದು. ಅವನು ಎಷ್ಟೇ ತಪ್ಪು ಮಾಡಿದರೂ ಸತ್ಯದ ದಾರಿಗೆ ಮತ್ತೆ ಬಂದೇ ಬರುತ್ತಾನೆ. ಏಕೆಂದರೆ ಅವನಿಗೆ ಎಂದೆಂದಿಗೂ ಸತ್ಯದ ಅರಿವು ಇದ್ದೇ ಇರುತ್ತದೆ. ಮೆಫಿಸ್ಟಾಫೆಲೀಸ್ ಮಹಾಕೆಡುಕಿಯಾದರೂ ದೇವರ ಸೃಷ್ಟಿಯಲ್ಲಿ ತಾನೂ ಒಂದು ಪೂರಕಶಕ್ತಿ, ಈ ಲೋಕದ ಆಗುಹೋಗುಗಳಲ್ಲಿ ತಾನೂ ಭಾಗಿಯೆಂಬುದು ಅವನಿಗೆ ತಿಳಿಯದು. ಆದ್ದರಿಂದ ಮನುಷ್ಯನನ್ನು ಕೆಡಿಸಿ, ಅವನ ಆತ್ಮವನ್ನು ಸಂಪೂರ್ಣವಾಗಿ ವಿನಾಶಗೊಳಿಸುವೆನೆಂದು ದೇವರ ಮುಂದೆ ಪಣ ತೊಡುತ್ತಾನೆ. ಇದು ಅಸಾಧ್ಯವಾದ ಸಾಹಸವೆನ್ನುವುದು ಮೆಫಿಸ್ಟಾಫೆಲೀಸ್ ಮತ್ತು ಫೌಸ್ಟ್ ಪಣ ತೊಡುವ ಇನ್ನೊಂದು ಸನ್ನಿವೇಶದಲ್ಲಿ ವ್ಯಕ್ತವಾಗುತ್ತದೆ. ಫೌಸ್ಟ್‌ನ ಈ ಪಣಕ್ಕನುಸಾರವಾಗಿ ಮೆಫಿಸ್ಟಾಫೆಲೀಸ್ ಫೌಸ್ಟನ ಎಲ್ಲ ಆಸೆ ಆಕಾಂಕ್ಷೆಗಳನ್ನೂ ಸಂಪೂರ್ಣವಾಗಿ ಸಂತೃಪ್ತಿಗೊಳಿಸಬೇಕು. ಮನುಷ್ಯನಿಗೆ ಎಲ್ಲ ಸುಖವೂ ಕೈಗೂಡಿತೆಂದಾಗ ಅವನಿಗೆ ಅದು ಇನ್ನೂ ಇರಲಿ, ಮತ್ತೂ ಇರಲಿ ಎನಿಸುವ ಹಾಗೆ ಮಾಡಬೇಕು. ಈ ಕಠಿಣ ಷರತ್ತನ್ನು ಅವನು ಒಪ್ಪಿಕೊಳ್ಳುತ್ತಾನೆ. ದೇವಮಾನವರಿಬ್ಬರನ್ನೂ ಗೆದ್ದು ತನ್ನ ಏಕೈಕ ಪ್ರಭುತ್ವವನ್ನು ಸ್ಥಾಪಿಸಲು ಹವಣಿಸುತ್ತಾನೆ. ಆದರೆ ಸ್ವರ್ಗದಲ್ಲಿನ ಪ್ರಸ್ತಾವನಾ ಭಾಗದಲ್ಲಿ ಫೌಸ್ಟ್ ಅಜೇಯ ಆತ್ಮಶಕ್ತಿಯುಳ್ಳವನು, ಅಂತಿಮವಾಗಿ ಅವನಿಗೆ ಯಶಸ್ಸು ದೊರೆಯುವುದು ಖಂಡಿತ–ಎನ್ನುವ ಸೂಚನೆ ಇದೆ. ಇಲ್ಲಿ ಗಯಟೆ, ಫೌಸ್ಟ್ ಇಡೀ ಮಾನವ ವರ್ಗದ ಪ್ರತಿನಿಧಿ ಎಂಬ ವಿಚಾರದ ಮೇಲೆ ಒತ್ತು ಹಾಕಿದ್ದಾನೆ. ಮನುಷ್ಯನಿಗೆ ತೃಪ್ತಿಯೆಂಬುದೇ ಇಲ್ಲ. ಅವನ ಆಸೆ ಕೊರೆಬೀಳದ ಗಣಿಯಂತೆ; ಎಷ್ಟು ಮೊಗೆದು ಕುಡಿದರೂ ಬತ್ತದ ಪ್ರವಾಹದಂತೆ. ಇದ್ದುದನ್ನು ಬಿಟ್ಟು ಇಲ್ಲದುದನ್ನು ಹಿಡಿಯಲು ಊರ್ಧ್ವಮುಖಿಯಾಗಿ ಹೊರಟ ಅವನು ನಿರಂತರವಾಗಿ ಗಗನದತ್ತ ಹಾರುತ್ತಿರುವನು. ಇದು ಅವನ ಬದುಕಿನ ರಹಸ್ಯ. ಇಲ್ಲಿ ಗಯಟೆಯ ನಾಟಕದ ಅಂತರಾರ್ಥವಿದೆ. ನಾಟಕದ ಕೊನೆಯಲ್ಲಿ ದೇವತೆಗಳು ಫೌಸ್ಟನ ದೇಹವನ್ನು ಸ್ವರ್ಗದತ್ತ ಒಯ್ಯುವಾಗ, ಕೆಡುಕನ್ನು ಕಳೆದು ಉದ್ಧಾರಗೊಂಡ ಅವನ ದಿವ್ಯಚೇತನವನ್ನು ಕುರಿತು ಅವರು ಹಾಡಿ ಹೊಗಳುತ್ತಾರೆ: ಯಾರು ತಮ್ಮ ಧೀಃಶಕ್ತಿಯಿಂದ ಹೋರಾಡುತ್ತಾರೋ ಅಂಥವರು ದೇವರಿಗೆ ಹತ್ತಿರದವರು. ನಾವು ಅಂಥವರನ್ನು ಒಲಿಯುತ್ತೇವೆ.

ಫೌಸ್ಟ್ ಏರುವ ಯಶಸ್ಸಿನ ಈ ಶಿಖರಕ್ಕೆ ಸುಖದ ಸೋಪಾನಗಳಿಲ್ಲ. ಕೊನೆಯುಸಿರಿರುವ ತನಕ ಅವನು ಕ್ಷಣ ಕ್ಷಣವೂ ಹೋರಾಡಬೇಕು. ಆಸೆ–ನಿರಾಸೆ, ಬಯಕೆ–ನೋವು, ರಾಗ–ದ್ವೇಷ ಎಲ್ಲವನ್ನೂ ಅನುಭವಿಸುತ್ತ ಯಾವುದನ್ನೂ ಅಪ್ಪಿಹಿಡಿಯದೆ, ತಪ್ಪಿನೆಡೆದರೂ ಎಲ್ಲೂ ನಿಲ್ಲದೆ, ಮೇಲೇರುತ್ತ ಸಾಗಬೇಕು. ಈ ಘೋರ ಹೋರಾಟದಲ್ಲಿ ಮಾರ್ಗರೆಟ್ಟಳ (ಗ್ರೆಚೆನ್) ದುರಂತ ಒಂದು ಮುಖ್ಯ ಘಟ್ಟ. ಮೆಫಿಸ್ಟಾಫೆಲೀಸನ ಬಲೆಗೆ ಬಿದ್ದ ಫೌಸ್ಟ್, ತಾನು ಗಾಢವಾಗಿ ಪ್ರೀತಿಸುವ, ನಿಷ್ಕಳಂಕಳಾದ ಮಾರ್ಗರೆಟ್ಟಳನ್ನು ಕೂಡುತ್ತಾನೆ. ಕಾಮತೃಷೆ ತೀರಿಸಿಕೊಳ್ಳುತ್ತಾನೆ. ವಾಲ್ಪುರ್ಗಿಸ್ ಇರುಳಿನ ಕಾಮಕೇಳಿಯಲ್ಲಿ ಸೇರಿ ಸ್ವೈರನಾಗಿ ರಮಿಸುತ್ತಾನೆ. ಕಾಮ ಹೊತ್ತಿ ಉರಿದು ಮತ್ತೆ ತಣ್ಣಗಾದ ಮೇಲೆ ಅವನಿಗೆ ಮಾರ್ಗರೆಟ್ಟಳಿಗೆ ಮಾಡಿದ ಅನ್ಯಾಯದ ಅರಿವಾಗುತ್ತದೆ. ಅವಳ ನಿಷ್ಕಳಂಕ ಪ್ರೇಮ, ಸಹನೆ, ತ್ಯಾಗಗಳ ನೆನಪಾದಾಗ ಪಶ್ಚಾತ್ತಾಪದಿಂದ

ಕುದಿಯುತ್ತಾನೆ. ಆದರೆ ಮೆಫಿಸ್ಟಾಫೆಲೀಸನ ಕೈಗೆ ಸಿಕ್ಕಿದ ಅವನು ಹಿಂದಕ್ಕೆ ಕಾಲ್ದೆಗೆಯುವಂತಿಲ್ಲ. ಏಕೆಂದರೆ ಸೈತಾನನ ವ್ಯವಸ್ಥೆಯಲ್ಲಿ ಅವ್ಯಾಜ ಪ್ರೇಮ, ಬಲಿದಾನಗಳಿಗೆ ಸ್ಥಾನವಿಲ್ಲ, ಅರ್ಥವಿಲ್ಲ. ಹೀಗೆ ಪಿಶಾಚಿಯ ಪ್ರಲೋಭನಗಳಗೆ ಸಿಕ್ಕಿದ ಅವನು ಮಾರ್ಗರೆಟ್ಟಳನ್ನು ತ್ಯಜಿಸಿದ್ದಾನೆ. ತನ್ನ ಪಾಪದ ಫಲವಾಗಿ ಶಿಕ್ಷೆಗೆ ಗುರಿಯಾದ ಮಾರ್ಗರೆಟ್ ಸೆರಮನೆಯಲ್ಲಿ ಕೊಳೆಯುತ್ತಿರುವಾಗ, ನಿರುಪಾಯ ಸ್ಥಿತಿಯಲ್ಲಿರುವ ಫೌಸ್ಟ್ ದುಃಖಿತಪ್ತನಾಗಿ ತನ್ನನ್ನು ತಾನೇ ಅವಹೇಳನ ಮಾಡಿಕೊಳ್ಳುತ್ತಾನೆ. ಇಲ್ಲಿಂದ ಮುಂದಕ್ಕೆ ಮೆಫಿಸ್ಟಾಫೆಲೀಸ್ ಹಾಗೂ ಫೌಸ್ಟರ ನಡುವಣ ಸಂಘರ್ಷ ಹೆಚ್ಚು ಸೂಕ್ಷ್ಮವೂ ಸ್ಪಷ್ಟವೂ ಆಗಿ ತೋರುತ್ತದೆ. ಫೌಸ್ಟನದು ಮೇಲುಗೈಯಾಗಿ ಅವನ ಎಳಸಿಕೆಗಳೆಲ್ಲವನ್ನೂ ಪೂರೈಸುವೆನೆಂದು ವಚನವಿತ್ತ ಮೆಫಿಸ್ಟಾಫೆಲೀಸನದು ಸೋಲುಗೈ ಆಗುತ್ತದೆ. ಏಕೆಂದರೆ ಮೆಫಿಸ್ಟಾಫೆಲೀಸ್ ನೀಡುವ ಕ್ಷುದ್ರವಾದ ಆಸೆ ಆಮಿಷಗಳೆಲ್ಲವನ್ನೂ ಫೌಸ್ಟ್ ಕ್ಷಣದಲ್ಲೇ ಹೀರಿ ಬಿಸುಟು ಆತ್ಮೋನ್ನತಿಯತ್ತ ಏರುತ್ತಾನೆ.

ನಾಟಕದ ಎರಡನೆಯ ಭಾಗದ ಫೌಸ್ಟನ ಎಳಸಿಕೆಗಳು, ಬೇಡಿಕೆಗಳು ಮೆಫಿಸ್ಟಾಫೆಲೀಸನಿಗೆ ತಿಳಿಯದಷ್ಟು ಜಟಿಲವಾಗುತ್ತವೆ. ಭೂಮಿಗೆ ಅಂಟಿಕೊಂಡ ಅವನಿಗೆ ಫೌಸ್ಟನ ಬೌದ್ಧಿಕ ಔನ್ನತ್ಯ, ಅದಮ್ಯ ಸೌಂದರ್ಯಾನ್ವೇಷಣೆಗಳು ಅರ್ಥವಾಗುವುದಾದರೂ ಹೇಗೆ? ಮಾರ್ಗರೆಟ್ಟಳ ಕಥೆ ಮೊದಲ ಭಾಗದಲ್ಲಿ ನಾಟಕದ ರಸಶಿಖರವಾದಂತೆ, ಇಲ್ಲಿ ಹೆಲೆನಳ ಪ್ರಕರಣ ಫೌಸ್ಟನ ವ್ಯಕ್ತಿತ್ವಕ್ಕೆ ಪೋಷಣೆಯಾಗುವ ಅಂಶವಾಗಿ, ವ್ಯಂಜಕತೆಯನ್ನು ಉದ್ದೀಪಿಸುತ್ತದೆ. ಎರಡು ಪ್ರಕರಣಗಳ ರಚನೆಯಲ್ಲಿ ಕಲಾತ್ಮಕವಾದ ಸಾಮ್ಯವಿದ್ದರೂ ಹೆಲೆನ್ ಕಥೆಯ ಸಾಂಕೇತಿಕತೆ ತೀರಾ ವಿಶಿಷ್ಟವಾದದ್ದು. ಹೆಲೆನ್ ಕ್ಲಾಸಿಕಲ್ ತತ್ತ್ವಗಳು ಪ್ರತಿಪಾದಿಸುವ ಸೌಂದರ್ಯದ ಪ್ರತೀಕವಾದರೆ ಫೌಸ್ಟ್ ರೊಮ್ಯಾಂಟಿಕ್ ಶಕ್ತಿಸಾಹಸಗಳ ಪ್ರತಿನಿಧಿ. ಇಬ್ಬರ ಸಂಗದಿಂದ ಹುಟ್ಟುವ ಮಗು ಯುಫೋರಿಯನ್ ಆಧುನಿಕ ಪ್ರತಿಭೆಯ ಸಂಕೇತವಾಗುತ್ತಾನೆ. (ಯುಫೋರಿಯನ್ ಪಾತ್ರ ಕಲ್ಪನೆ ಬೈರನ್ ಕವಿಯ ಬದುಕು ಹಾಗೂ ವ್ಯಕ್ತಿತ್ವದಿಂದ ಪ್ರೇರಿತವಾಯಿತೆಂಬುದು ಗಮನಾರ್ಹ). ಹೀಗೆ ಹುಟ್ಟಿದ ಮಗ ಏನೊಂದೂ ಕಟ್ಟುಪಾಡುಗಳಿಲ್ಲದೆ ಸ್ವೈರನಾಗಿ ಬೆಳೆದು ನಾಶವಾಗುತ್ತಾನೆ. ಹೆಲೆನ್ ಅಧೋಲೋಕಕ್ಕೆ ತೆರಳುತ್ತಾಳೆ. ಹೆಲೆನ್ ಪ್ರಕರಣದಿಂದಾಗಿ ಫೌಸ್ಟನಿಗೆ ಪುರಾತನ ಗ್ರೀಕರ ಕಾಲದಿಂದ ಹಿಡಿದು ತನ್ನ ಕಾಲದವರೆಗೆ ಎಡೆಬಿಡದೆ ಪ್ರವಹಿಸುತ್ತಿರುವ ಇತಿಹಾಸ, ಸಂಸ್ಕೃತಿಗಳ ದರ್ಶನವಾಗುತ್ತದೆ. ಆದರೂ ಅವನ ಎಳಸಿಕೆಗಳಿಗೆ ಮಿತಿಯಿಲ್ಲ. ಅವಳನ್ನು ಸಾಧಿಸಲು ಆತ ಮತ್ತೆ ಹೋರಾಡುತ್ತಾನೆ. ನಾಟಕದ ಕೊನೆಯ ಘಟ್ಟದಲ್ಲಿ ಫೌಸ್ಟ್ ಒಬ್ಬ ಶತಾಯು ಸಾಹಸಿ. ಪ್ರಕೃತಿಯ ಶಕ್ತಿಗಳೆಲ್ಲವನ್ನೂ ನಿಯಂತ್ರಿಸುವ ಅದ್ಭುತ ಸಾಮರ್ಥ್ಯ, ಮನುಷ್ಯ ಲೋಕವನ್ನು ಆಳಬಲ್ಲ ಯೋಗ್ಯತೆಗಳು ಈಗ ಅವನಿಗೆ ದಕ್ಕಿವೆ. ಕೈಸರ್ ದೊರೆಯ ದೇಶದಲ್ಲಿ ಅವನು ಅಸಾಮಾನ್ಯವಾದ ಕೆಲಸಕಾರ್ಯಗಳಲ್ಲಿ ತೊಡಗಿದ್ದಾನೆ. ಒಡ್ಡುಕಟ್ಟಿ ಸಮುದ್ರವನ್ನು ಹಿಂದಕ್ಕೆ ತಳ್ಳಿ, ಲಕ್ಷಾಂತರ ಮಂದಿಗೆ ಮರುವಸತಿ ಒದಗಿಸಲು ಸಮುದ್ರದಿಂದ ಉತ್ಕೃಷ್ಟ ನೆಲವನ್ನು ಆತ ಪಡೆದುಕೊಳ್ಳುತ್ತಾನೆ. ಆತನ ಕಾರ್ಯಕ್ರಮಗಳೆಲ್ಲವೂ ಬೇಗನೆ ಮುಗಿದು ಹೋಗಲೆಂದು ತುಡಿಯುತ್ತಿರುವ ಮೆಫಿಸ್ಟಾಫೆಲೀಸ್ ಫೌಸ್ಟನ ಎಲ್ಲ ಕೆಲಸಗಳಲ್ಲೂ ನೆರವಾಗುತ್ತಾನೆ. ಮೆಫಿಸ್ಟಾಫೆಲೀಸನ ಕ್ಷುದ್ರತನವನ್ನು ಅರಿತ ಫೌಸ್ಟ್ ಅವನ ಸಹಾಯವಿಲ್ಲದೆ ಬದುಕಬೇಕೆಂಬ ನಿರ್ಧಾರಕ್ಕೆ ಬರುತ್ತಾನೆ. ಸಾಯುವ ಕೊನೆಯ ಗಳಿಗೆಯಲ್ಲೂ ಮುಂದಿನ ಸಹಸ್ರಾರು ಯೋಜನೆಗಳನ್ನೂ ತಯಾರಿಸುತ್ತಿರುವ ಫೌಸ್ಟನಿಗೆ ಎಣೆಯೆಲ್ಲಿ, ಕೊನೆಯಲ್ಲಿ? ಅವನ ಆತ್ಮವನ್ನು ವಶಪಡಿಸಿಕೊಳ್ಳಲು ದೇವತೆಗಳಿಗೂ ಪಿಶಾಚಿಗಳಿಗೂ ಪೈಪೋಟಿ. ಮೇಲಿಂದ ಇಳಿದುಬಂದ ದೇವತಾವೃಂದ ಅವನನ್ನು ಸ್ವರ್ಗಾಭಿಮುಖವಾಗಿ ಕೊಂಡೊಯ್ಯುತ್ತದೆ.

ಅತ್ಯದ್ಭುತ ಕಾವ್ಯಸಂಪತ್ತಿನಿಂದ ತುಂಬಿದ ಈ ಮಹಾಕೃತಿಯಲ್ಲಿ ಗಯಟೆ ವೈವಿಧ್ಯಮಯ ಕಾವ್ಯರೂಪಗಳನ್ನು ಬಳಸಿದ್ದಾನೆ. ಹೆಚ್ಚಾಗಿ ಪಾತ್ರ ವಿನ್ಯಾಸಕ್ಕೆ ಗಮನವಿತ್ತಿರುವುದರಿಂದ ನಾಟಕರಚನೆಯಲ್ಲಿ ಸಾವಯವ ಸಮಗ್ರತೆ ಇಲ್ಲ. ಆದರೆ ಫೌಸ್ಟನ ಅನ್ಯಾದೃಶ ಪಾತ್ರವೇ ನಾಟಕದ ಭಾವಗೀತಾತ್ಮಕವಾದ ಬಿಡಿಭಾಗಗಳನ್ನು ಒಂದುಗೂಡಿಸುವ ಸಾಧನವಾಗಿದೆ. ಫೌಸ್ಟ್ ನಾಟಕ ರಂಗಪ್ರದರ್ಶನಕ್ಕಾಗಿ ಉದ್ದೇಶಿಸಿದ ಕೃತಿಯಲ್ಲ. ಆದರೂ ಅದು ನೂರು ವರ್ಷಗಳಿಂದಲೂ ಯುರೋಪಿನ ನಾಟಕಕಾರರನ್ನೂ ನಟರನ್ನೂ ಬೇರೆ ಬೇರೆ ಪ್ರಕಾರಗಳ ಕಲಾವಿದರನ್ನೂ ಆಕರ್ಷಿಸುತ್ತ ಬಂದಿದೆ. ಅವರ ಆತ್ಮಕ್ಕೆ ಚ್ಯುತಿ ಇಲ್ಲ– ಇದು ಗಯಟೆಯ ಜೀವನದ ಮುಖ್ಯ ಸಿದ್ಧಾಂತವಾಗಿತ್ತು. ಇದಕ್ಕೆ ಚಿರಂತನ ಅಭಿವ್ಯಕ್ತಿ ಕೊಟ್ಟ ಫೌಸ್ಟ್, ವಿಶ್ವಸಾಹಿತ್ಯದ ಒಂದು ಅಮೃತ ಕೃತಿ.

**ಗಯಟೆಯ ವೈಜ್ಞಾನಿಕ ಬರೆಹಗಳು** : ಪ್ರಪಂಚದ ಅದ್ವಿತೀಯ ಸಾಹಿತಿಗಳಲ್ಲೊಬ್ಬನಾದ ಗಯಟೆ ತನ್ನ ವೈಜ್ಞಾನಿಕ ಕೃತಿಗಳನ್ನು ಕುರಿತು ಹೆಮ್ಮೆಯಿಂದ ಹೇಳಿಕೊಂಡಿದ್ದಾನೆ. ಅವನ ವೈಜ್ಞಾನಿಕ ವಿಚಾರಗಳೆಲ್ಲವನ್ನೂ ಆಧುನಿಕ ವಿಜ್ಞಾನಿಗಳು ಒಪ್ಪಿಕೊಂಡಿಲ್ಲ. ಆದರೆ ತಾನೇ ನಡೆಸಿದ ಸಂಶೋಧನೆಗಳ ಫಲವಾಗಿ ಅವನು ಪ್ರತಿಪಾದಿಸಿದ ಕೆಲವು ಸಂಶೋಧನಾತ್ಮಕ ವಿಚಾರಗಳನ್ನು ವಿಜ್ಞಾನಿಗಳು ಸ್ವೀಕರಿಸಿ ಅವನಿಗೆ ಸಲ್ಲಬೇಕಾದಷ್ಟು ಅಗ್ರಮಾನ್ಯತೆ ಕೊಟ್ಟಿದ್ದಾರೆ. ಅವನು ಪ್ರತಿಪಾದಿಸಿದ ವಿಚಾರಗಳ ಸ್ವಂತಿಕೆಯ ಮಹತ್ತ್ವಕ್ಕಿಂತ ಹೆಚ್ಚಾಗಿ ಅವನ ವೈಜ್ಞಾನಿಕ ದೃಷ್ಟಿ, ಮನೋಧರ್ಮಗಳನ್ನು ಹಲವು ವಿಜ್ಞಾನಿಗಳು ಮೆಚ್ಚಿಕೊಂಡಿದ್ದಾರೆ. ಅವನ ವೈಜ್ಞಾನಿಕ ಗ್ರಂಥಗಳಲ್ಲಿ ಮುಖ್ಯವಾಗಿ ಬಣ್ಣದ ಸ್ವರೂಪವನ್ನು ಕುರಿತ ಫಾರ್‌ಬೆನ್ ಲೆಹ್ರ್ (1805–10), ಮನೋವಿಜ್ಞಾನ ಹಾಗೂ ದೃಗ್ವಿಜ್ಞಾನಕ್ಕೆ ಸಂಬಂಧಿಸಿದ ಯುಟೋಪಿಶ್ಚೆ ಫಾರ್ ಬೆನ್, ಸಸ್ಯಶಾಸ್ತ್ರ ಹಾಗೂ ರೂಪವಿಜ್ಞಾನವನ್ನು ಕುರಿತ ಮೆಟಮಾರ್ಫೋಸ್ ಡರ್ ಫ್ಲಾಂಜೆನ್–ಇವು ವಿಜ್ಞಾನ ಲೋಕದ ಕಣ್ಣು ಸೆಳೆದಿರುವ ಕೃತಿಗಳು. ಬೆಳಕು ಹಾಗೂ ಬಣ್ಣದ ಸ್ವರೂಪವನ್ನು ವಿಶ್ಲೇಷಿಸುವಾಗ ನ್ಯೂಟನ್ನನ ಸೂತ್ರಗಳನ್ನು ಗಯಟೆ ಅಲ್ಲಗಳೆಯಲು ಪ್ರಯತ್ನಿಸಿ ವಿಫಲನಾಗಿದ್ದಾನೆ. ಗಣಿತವಿಜ್ಞಾನದಲ್ಲಿ ಸಾಕಷ್ಟು ಮಾಹಿತಿ ಇಲ್ಲದ್ದರಿಂದ ಗಯಟೆ ಹಲವು ತಪ್ಪುಗಳನ್ನು ಮಾಡಿದ್ದಾನೆಂದು ಭೌತವಿಜ್ಞಾನಿಗಳು ಸುಲಭವಾಗಿ ತೋರಿಸಿಕೊಟ್ಟಿದ್ದಾರೆ. ಬೆಳಕು ಕಣಗಳ ರೂಪದಲ್ಲಿ ಚಲಿಸುತ್ತದೆಂಬ ಸಿದ್ಧಾಂತ ತಪ್ಪೆಂದು ತೋರಿಸಲು ಪ್ರಯತ್ನಿಸುವ ಇವನ ಗಮನ ಸೂತ್ರಗಳನ್ನು ಅವರು ಒಪ್ಪಿಕೊಂಡಿಲ್ಲ. ಆದರೆ ದೃಗ್ವಿಜ್ಞಾನ ಸೂತ್ರಗಳನ್ನು ಪ್ರತಿಪಾದಿಸುವಾಗ ಬಳಸಿಕೊಂಡಿರುವ ಮನೋವೈಜ್ಞಾನಿಕ ತತ್ತ್ವಗಳು ಸ್ವೀಕಾರಾರ್ಹವೆಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ. ವಿಜ್ಞಾನದ ವಿಕಾಸವನ್ನು ಚರ್ಚಿಸುವ ಇವನ ವಿಚಾರಗಳು ವಿಜ್ಞಾನದ ಇತಿಹಾಸ ರಚಿಸುವವರಿಗೆ ದಾರಿದೀಪವಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ರೂಪವಿಜ್ಞಾನಕ್ಕೆ ಸಂಬಂಧಪಟ್ಟ ಮೂಲಭೂತ ವಿಚಾರಗಳನ್ನು ಪ್ರಪ್ರಥಮವಾಗಿ ಪ್ರತಿಪಾದಿಸಿದ ಹಿರಿಮೆ ಗಯಟೆಗೆ ಸಲ್ಲುತ್ತದೆ. ಮಾರ್ಫಾಲಜಿ ಎಂಬ ಪದ ಇವನೇ ಸೃಷ್ಟಿಸಿದ್ದು. 1790ರಲ್ಲಿ ಈತ ಬರೆದ ಮೆಟಮಾರ್ಫಸಿಸ್ ಆಫ್ ಪ್ಲ್ಯಾಂಟ್ಸ್ ಎಂಬ ಗ್ರಂಥದಲ್ಲಿ ಈತನೇ ರಚಿಸಿರುವ ಚೇತೋಹಾರಿ ಚಿತ್ರಗಳು, ವಿವರಣೆಗಳು, ಸಸ್ಯ ವಿಜ್ಞಾನಿಗಳಿಗೆ ಪ್ರಿಯವೆನಿಸಿವೆ. ಒಂದು ಸಸ್ಯ ದೊಡ್ಡದಾಗಿ ಬೆಳೆಯುವ ಪೂರ್ವದಲ್ಲಿ ಹೊಮ್ಮುವ ಟೈಪ್‌ಲೀಫ್‌ನಲ್ಲಿ ಆ ಗಿಡದ ರಚನೆಯ ಸ್ವರೂಪವೆಲ್ಲವೂ ಅಂತರ್ಗತವಾಗಿರುತ್ತದೆಂಬ ವಿಚಾರವನ್ನು ಆಧುನಿಕ ವಿಜ್ಞಾನ ಒಪ್ಪಿಕೊಂಡರೂ ಈತ ಸೂಚಿಸುವ ಟೈಪ್‌ಪ್ಲಾಂಟ್ ತತ್ತ್ವವನ್ನು ಕೇವಲ ಊಹೆ ಎಂದು ಹೇಳಿ ಕೈಬಿಡಲಾಗಿದೆ. ಗಿಡದ ಬೇರುಗಳನ್ನು ಕುರಿತು ಗಯಟೆ ಏನನ್ನೂ ಹೇಳದಿರುವುದು ಸಸ್ಯ ಸಂಶೋಧನೆಗೆ ಅಗತ್ಯವಾದ ಒಂದು ಆಧಾರ ಸಂಗತಿಯನ್ನೇ ಬಿಟ್ಟಂತಾಗಿದೆ. ಇದನ್ನು ವಿಜ್ಞಾನಿಗಳು ಸ್ಪಷ್ಟವಾಗಿ ಟೀಕಿಸಿದ್ದಾರೆ. ಗಯಟೆ ಕೈಗೊಂಡ ವೈಜ್ಞಾನಿಕ ಸಂಶೋಧನೆಗಳಲ್ಲಿ ಜೀವವಿಜ್ಞಾನಕ್ಕೆ ಸಂಬಂಧಿಸಿದ ಒಂದು ವಿಚಾರ ಉಲ್ಲೇಖಾರ್ಹ. ಕಶೇರುಕಗಳಲ್ಲಿರುವ ಒಳದವಡೆಯ ಹಿಂಭಾಗ (ಇಂಟರ್ ಮ್ಯಾಕ್ಸಿಲೇರ್ ಅಥವಾ ಈಗಿನ ಅರ್ಥದಲ್ಲಿ ಪ್ರೀಮ್ಯಾಕ್ಸಿಲಾ)– ಮನುಷ್ಯನ ದೇಹರಚನೆಯಲ್ಲೂ ಇದೆ ಎಂದು ತನ್ನದೇ ಆದ ಸ್ವಂತ ರೀತಿಯಲ್ಲಿ ಗಯಟೆ ಗುರುತಿಸಿದ್ದು ಒಂದು ವಿಶೇಷ ಸಂಗತಿ. ಈ ಸಂಶೋಧನೆಯ ಮೂಲಕ ವಿಕಾಸ ಸಿದ್ಧಾಂತಕ್ಕೆ ದಾರಿತೋರಿದನೆಂದು ಡಾರ್ವಿನ್ ಗಯಟೆಯನ್ನು ಸ್ತುತಿಸಿದ್ದಾನೆ. ವ್ಯಕ್ತಿ ತನ್ನ ದೈಹಿಕ ಹಾಗೂ ಮಾನಸಿಕ ವ್ಯಾಪಾರ ವಿಶೇಷಗಳನ್ನು ಸೂಕ್ಷ್ಮವಾಗಿ ಗುರುತಿಸುವುದು ಸಾಧ್ಯ ಎಂಬುದು ಗಯಟೆಯ ರೂಪ ವಿಜ್ಞಾನತತ್ತ್ವ. ಈ ವಿಚಾರದ ನಾನಾ ಮುಖಗಳು ಅವನ ವೈಜ್ಞಾನಿಕ ಬರೆಹಗಳಿಗೆ ಪ್ರೇರಣೆ ಒದಗಿಸಿವೆ.

**ಗಯಟೆಯ ಸೌಂದರ್ಯತತ್ತ್ವಗಳು** : ಗಯಟೆಯ ವಿಪುಲ ಸಾಹಿತ್ಯರಾಶಿಯಲ್ಲಿ ಬೆರೆತುಹೋಗಿರುವ ಸೌಂದರ್ಯತತ್ತ್ವಗಳಲ್ಲಿ ಮುಖ್ಯವಾದವನ್ನು ಮಾತ್ರ ಇಲ್ಲಿ ಸೂಚಿಸಲು ಪ್ರಯತ್ನಿಸಿದೆ. ಸಾಮಾನ್ಯವಾಗಿ ಸೌಂದರ್ಯಮೀಮಾಂಸೆಯ ಚರಿತ್ರೆಯಲ್ಲಿ ಗಯಟೆಗೆ ವಿಂಕಲ್ ಮನ್ ಪಂಥವನ್ನು ಜನಪ್ರಿಯಗೊಳಿಸಿದವನು ಎಂದಷ್ಟೇ ಸ್ಥಾನ ಕೊಡಲಾಗಿದೆ. ಕೆಲವು ಶಾಸ್ತ್ರಗ್ರಂಥಗಳಲ್ಲಿ ಇವನನ್ನು ಷಿಲ್ಲರ್‌ನಿಂದ ಪ್ರತ್ಯೇಕಿಸಿ, ಮೆಂಗ್ಸ್ ಹಾಗೂ ವಿಂಕಲ್‌ಮನ್ ಸಮುದಾಯಕ್ಕೆ ಸೇರಿದವನು, ಕ್ಯಾಂಟನಿಗಿಂತ ಹಿಂದಿನ ಪಂಥದವನು ಎಂದು ಹೇಳಲಾಗಿದೆ. ಇದು ಸರಿಯಲ್ಲ ಎಂದು ಬೊಸಾಂಕೆ ಅಭಿಪ್ರಾಯಪಟ್ಟಿದ್ದಾನೆ. ಏಕೆಂದರೆ ಗಯಟೆ ತನ್ನ ಸಮಕಾಲೀನನಾದ ಕಾಂಟನ ತತ್ತ್ವಗಳನ್ನು ಕೂಡ ಅಧ್ಯಯನ ಮಾಡಿ ಅವುಗಳ ಬಗೆಗೆ ತನ್ನ ಸ್ಪಷ್ಟ ಅಭಿಪ್ರಾಯ ಕೊಟ್ಟಿದ್ದಾನೆ. ಗಯಟೆಯ ಸ್ವೋಪಜ್ಞತೆಯನ್ನು ಪ್ರಶ್ನಿಸುವ ಕೆಲವು ಇತಿಹಾಸತಜ್ಞರು ಅರ್ಥಪೂರ್ಣತ್ವ (ದಿ ಡಾಕ್ಟ್ರೀನ್ ಆಫ್ ದಿ ಸಿಗ್ನಿಫಿಕೆಂಟ್ ಆರ್ ದಿ ಕ್ಯಾರೆಕ್ಟರಿಸ್ಟಿಕ್) ಎನ್ನುವ ತತ್ತ್ವವನ್ನು ಪ್ರತಿಪಾದಿಸಿದವನು ವಿಂಕಲ್‌ಮನ್ನನೇ ಹೊರತು ಗಯಟೆ ಅಲ್ಲ ಎನ್ನುತ್ತಾರೆ. ಆದರೆ ವಿಂಕಲ್‌ಮನ್‌ಗೆ ಅದರ ಸ್ಪಷ್ಟವಾದ ಕಲ್ಪನೆ ಇತ್ತೆನ್ನುವುದು ಕಷ್ಟ. ಅದರ ಬಗೆಗೆ ನಿಚ್ಚಳ ವಿಚಾರ ಪರಂಪರೆ ಮೂಡಿಸಿದವ ಗಯಟೆಯೇ ಎನ್ನುವ ಅಭಿಪ್ರಾಯವೂ ಸಾಧಾರವಾಗಿ ವಿಮರ್ಶಕರಿಂದ ಮಂಡಿತವಾಗಿದೆ. ವಿಂಕಲ್‌ಮನ್ ತನ್ನ ಸಮಾಲೋಚನೆಯಲ್ಲಿ ಶಿಲ್ಪ ಮತ್ತು ಚಿತ್ರ ಕಲೆಗಳನ್ನುಳಿದು ಸಂಗೀತ, ಕಾವ್ಯ ಮುಂತಾದ ಲಲಿತಕಲಾಪ್ರಕಾರಗಳನ್ನು ಪ್ರಸ್ತಾಪಿಸಿಲ್ಲ. ಕಲೆಯಲ್ಲಿ ಯಾವುದು ಅರ್ಥಪೂರ್ಣವೋ ಅದೇ ಉತ್ಕೃಷ್ಟ ಸುಂದರ. ಸುಂದರ

ಎನ್ನುವ ಮಾತನ್ನು ಬಾಹ್ಯರೂಪಕ್ಕೆ ಮಾತ್ರ ಅನ್ವಯಿಸಬಾರದು; ಐತಿಹಾಸಿಕ ಹಿನ್ನಲೆಯಲ್ಲಿ ಸಾಪೇಕ್ಷವಾಗಿ ಪರಿಶೀಲಿಸಬೇಕು–ಎಂದಿದ್ದಾನೆ ವಿಂಕಲ್‌ಮನ್. ಸೌಂದರ್ಯಶಾಸ್ತ್ರಕ್ಕೆ ಸಂಬಂಧಿಸಿದ ವಿಚಾರಗಳನ್ನು ಚರ್ಚಿಸುವ ಅವಕಾಶ ಗಯಟೆಗೆ ಒದಗಿದ್ದು ಅವನು ಗಾತಿಕ್ ವಾಸ್ತುಶಿಲ್ಪವನ್ನು ಕುರಿತು ವಿಚಾರ ಮಾಡಿದಾಗ, ಕೃತಕ ಅಭಿಜಾತ ಪರಂಪರೆಯನ್ನು (ಸ್ಯೂಡೊ ಕ್ಲಾಸಿಕಲ್ ಟ್ರೆಡಿಷನ್) ಅನುಕರಿಸುವ ತನ್ನ ಕಾಲದ ವಾಸ್ತುಶಿಲ್ಪಗಳ ಪ್ರವೃತ್ತಿಯನ್ನು ಖಂಡಿಸುತ್ತ ಅವನು ಗಾತಿಕ್‌ಕಲೆಯ ಮಹತ್ತ್ವವನ್ನು ಎತ್ತಿ ತೋರಿಸಿದ. ಈ ಸಂದರ್ಭದಲ್ಲಿ ಅವನು ಚಿತ್ರಕಲೆ, ಸಂಗೀತ, ಕಾವ್ಯಗಳಿಗೆ ಸಂಬಂಧಿಸಿದ ವಿಚಾರಗಳನ್ನೂ ಪ್ರತಿಪಾದಿಸಿದ್ದಾನೆ. ಜರ್ಮನ್ ವಾಸ್ತುಕಲೆಯನ್ನು ಕುರಿತ ಪುಸ್ತಕದಲ್ಲಿ ಆ ಶತಮಾನದ ಸೌಂದರ್ಯಮೀಮಾಂಸೆಗೆ ಸಂಬಂಧಿಸಿದ ಅತಿ ಮುಖ್ಯ ವಿಚಾರಗಳಿವೆ. 84 ವರ್ಷಗಳ ಅನಂತರ ರಸ್ಕಿನ್ ಗಯಟೆಯ ಮೂಲತತ್ತ್ವಗಳನ್ನೇ ವಿಶದವಾಗಿ, ನಿಷ್ಕೃಷ್ಟವಾಗಿ ತನ್ನ ದಿ ಸ್ಟೋನ್ಸ್ ಆಫ್ ವೆನಿಸ್ ಎನ್ನುವ ಗ್ರಂಥದಲ್ಲಿ ಕ್ರೋಡೀಕರಿಸಿ ದ್ದಾನೆಂಬುದು ಗಮನಾರ್ಹ.

ಸ್ಟ್ರಾಸ್‌ಬರ್ಗ್ (ಸೇಂಟ್ ಪೀಟರ್) ಚರ್ಚಿನ ವಾಸ್ತುಶಿಲ್ಪವನ್ನು ವಿಮರ್ಶಿಸುತ್ತ ಪರಂಪರೆಯ ಅಂಧಾನುಕರಣೆ ಮಾಡುತ್ತಿದ್ದ ಸಮಕಾಲೀನರ ಶಿಲ್ಪ ಶೈಲಿಯನ್ನು ಗಯಟೆ ಉಗ್ರವಾಗಿ ಟೀಕಿಸಿದ್ದಾನೆ. ಸೇಂಟ್ ಪೀಟರ್ ಚರ್ಚನ್ನು ನೋಡುವ ಮೊದಲು ಗಾತಿಕ್‌ಕಲೆಯ ಬಗ್ಗೆ ತನ್ನಲ್ಲಿ ವಿಶೇಷ ತಪ್ಪು ಗ್ರಹಿಕೆ ಇತ್ತೆಂದೂ ಆ ಭವ್ಯಮಂದಿರವನ್ನು ಕಂಡಾಗ ಅವೆಲ್ಲ ಕರಗಿಹೋಗಿ ಗಾತಿಕ್‌ಕಲೆಯ ಅರ್ಥಪೂರ್ಣತೆಯ ಅರಿವು ತನಗಾಯಿತೆಂದೂ ತಿಳಿಸಿದ್ದಾನೆ. ಮೇಲುನೋಟಕ್ಕೆ ಭದ್ರವಾಗಿದ್ದು ಯಾವ ನಯ ನುಣುಪುಗಳಿಲ್ಲವೆಂದು ತೋರಿದರೂ ಗಾತಿಕ್‌ಕಲೆಯಲ್ಲಿ ಆಂತರಿಕವಾದ ಸೌಂದರ್ಯವಿದೆ. ಸೌಂದರ್ಯ ಪ್ರಜ್ಞೆ ಇರುವ ಯಾರಿಗಾದರೂ ಅದರಲ್ಲಿ ಲಲಿತಕಲೆಯ ಉತ್ಕೃಷ್ಟ ಗುಣಗಳು ಎದ್ದು ಕಾಣುತ್ತವೆ. ನೈಜರೂಪದ ಕಲಾಕೃತಿಯಲ್ಲೂ ಸೌಂದರ್ಯವಿದೆ ಎಂಬ ಮಾತಿನ ಮೇಲೆ ಗಯಟೆ ಹೀಗೆ ಒತ್ತು ಹಾಕಿರುವುದು ಅವನ ಮತ್ತು ವಿಂಕಲ್‌ಮನ್ನರ ನಡುವಣ ಅಭಿಪ್ರಾಯ ಭಿನ್ನತೆಯನ್ನು ಸೂಚಿಸುತ್ತದೆ. ಸಾಮಾನ್ಯರ ಅಭಿಪ್ರಾಯದಲ್ಲಿ ಸುಂದರ ಎಂದರೆ ಅಚ್ಚುಕಟ್ಟಾಗಿರುವುದು, ಸಮಗ್ರರೂಪ ಉಳ್ಳದ್ದು, ನುಣುಪು ಮಾಡಿದ್ದು ಎನ್ನುವ ಅರ್ಥ. ಆದರೆ ಸೌಂದರ್ಯಶಾಸ್ತ್ರದಲ್ಲಿ ಆ ಅರ್ಥ ಅಪೂರ್ಣವಾಗುತ್ತದೆ. ಕಲೆ ಪರಿಷ್ಕೃತ ಸುಂದರ ರೂಪ ಪಡೆಯುವುದಕ್ಕೆ ಪೂರ್ವಭಾವಿಯಾಗಿ ದೀರ್ಘಕಾಲ ಬೆಳವಣಿಗೆಯ ಸ್ವರೂಪದಲ್ಲಿ ಇರುತ್ತದೆ; ಸಾಮಾನ್ಯರಿಗೆ ಅದು ಅಪೂರ್ಣವೆನಿಸಿದರೂ ನಿಜವಾಗಿ ಅರ್ಥಪೂರ್ಣವಾಗಿರುತ್ತದೆ. ಶ್ರೇಷ್ಠ ಕಲೆ ಎನ್ನುವುದು ಕೇವಲ ನುಣುಪಾದ ನಾಜೂಕಾದ ಸುಂದರ ಕಲೆಗಿಂತ ಉತ್ಕೃಷ್ಟವಾದುದು, ಜೀವಂತವಾದುದು–ಎಂದು ಗಯಟೆ ಅರ್ಥಪೂರ್ಣತ್ವದ ವಿವರಣೆ ಕೊಟ್ಟಿದ್ದಾನೆ. ಅರ್ಥಪೂರ್ಣ ಕಲೆಯಲ್ಲಿ ಆಂತರಿಕವಾದ ಅವಿಭಾಜ್ಯ ಏಕಸೂತ್ರವಿರುತ್ತದೆ. ಸ್ವತಂತ್ರ ಉತ್ಕಟ ಭಾವನೆಯ ಪ್ರೇರಣೆ ಇರುತ್ತದೆ. ಸುತ್ತಲಿನ ಪರಿಸರದ ಕ್ಷಣಿಕತೆಯಿಂದ ಪ್ರಭಾವಿತವಾಗದ, ಸಾರ್ವಕಾಲಿಕ, ಸಾರ್ವತ್ರಿಕ ಮೌಲ್ಯಗಳು ಅದರಲ್ಲಿರುತ್ತವೆ ಎನ್ನುವುದು ಅವನ ಮತ.

ಆದರೆ ಯುವಕ ಗಯಟೆಯಲಿದ್ದ ಈ ವಿಚಾರಗಳು ಸ್ವಲ್ಪಕಾಲ ಬೇರೆ ಜಾಡಿನಲ್ಲಿ ನಡೆದಂತೆ ತೋರಿ ಮತ್ತೆ ಅವನ ವೃದ್ಧಾಪ್ಯದ ಕಾಲದಲ್ಲಿ ಯಥಾಸ್ಥಿತಿಗೆ ಮರುಕಳಿಸಿದವೆನ್ನಬಹುದು. ತನ್ನ ಜೀವನದ ಮಧ್ಯಂತರಕಾಲದಲ್ಲಿ ಸುಂದರ ಗ್ರೀಕ್ ಕಲೆಯ ನಯ, ನಾಜೂಕುಗಳು ತನ್ನನ್ನು ಸೆಳೆದವೆಂದು ಆತ್ಮಕಥೆಯಲ್ಲಿ ಆತ ಹೇಳಿಕೊಂಡಿದ್ದಾನೆ. ತನ್ನ ಅಂತರಂಗದ ಈ ವಿಕಾಸವನ್ನು ಫೌಸ್ಟ್ ನಾಟಕದಲ್ಲಿ ಪ್ರತೀಕಿಸಿದ್ದಾನೆ; ಹೆಲನ್ನಳ ಅನ್ಯಾದೃಶ ಸೌಂದರ್ಯಕ್ಕೆ ಕಥಾನಾಯಕ ಮಾರುಹೋದರೂ ಸಂಪೂರ್ಣವಾಗಿ ಅದರಲ್ಲಿ ತಲ್ಲೀನನಾಗದೆ ಅವಳನ್ನು ತ್ಯಜಿಸಿ ಬಿಡುವುದು ಇದರ ಸಂಕೇತವಾಗಿದೆ.

ಕಲೆ ಮತ್ತು ವಿಜ್ಞಾನಗಳಿಗಿರುವ ಪರಸ್ಪರ ಸಂಬಂಧ ಅವನನ್ನು ಬಹಳವಾಗಿ ಸೆಳೆಯಿತು. ಪ್ರಕೃತಿಯಲ್ಲಿ ಕಾಣಸಿಗುವ ಪೂರ್ವಲಕ್ಷಣಗಳನ್ನುಳ್ಳ ಮಾದರಿಗಳಿಗೂ (ಆರ್ಕಿಟೈಪಲ್) ಆರ್ಷೇಯ ಕಲೆಯ ಅರ್ಥಪೂರ್ಣತ್ವಕ್ಕೂ ನಡುವೆ ಇರುವ ಹೋಲಿಕೆಯನ್ನು ಆತ ಗಮನಿಸಿದ್ದಾನೆ. ಅವನು ಪ್ರಕೃತಿಯಲ್ಲಿ ಆರ್ಷೇಯ ಮಾದರಿಗಳನ್ನು ಹುಡುಕುತ್ತ ಹೊರಟಾಗಲೇ ಅವನಿಗೆ ವಿಜ್ಞಾನದ ಹಲವು ಮುಖಗಳ ದರ್ಶನವಾದದ್ದು. ಕೆಲವು ಜಾತಿಯ ಹೂಗಳಲ್ಲಿ ಅವನು ಅವುಗಳ ಸಂಪೂರ್ಣ ವಿಕಾಸದ ರೂಪವನ್ನು ಗುರುತಿಸಿ ಆ ಮೂಲಕ ಸಸ್ಯಗಳ ಕಾಯಾಂತರಣ (ಮೆಟಮಾರ್ಫಸಿಸ್) ಕುರಿತ ಸಿದ್ಧಾಂತವನ್ನು ಪ್ರತಿಪಾದಿಸಿದ್ದು ಹೀಗೆಯೇ. ಯಾವುದೇ ವಸ್ತು ಅಥವಾ ಕೃತಿಯ ಮಥಿತಾರ್ಥ (ಇಂಪೋರ್ಟ್), ಅದರ ಪ್ರಾತಿನಿಧಿಕ ಗುಣ (ಕ್ಯಾರೆಕ್ಟರ್ ಅಥವಾ ಸಿಗ್ನಿಫಿಕೆನ್ಸ್) ಅದರ ಜೀವಾಳ ಎನ್ನುವುದು ಅವನ ಅಭಿಮತ. ಗಯಟೆ ಹಾಗೂ ಅವನ ಇಬ್ಬರು ಗೆಳೆಯರಾದ ಮೇಯರ್ ಮತ್ತು ಹರ್ಟ್ ಒಟ್ಟಾಗಿ ಪ್ರತಿಪಾದಿಸಿದ ಈ ವಿಚಾರಗಳಲ್ಲಿ ಅಲ್ಪಸ್ವಲ್ಪ ಭಿನ್ನಾಭಿಪ್ರಾಯ ತೋರಿಬಂದರೂ ಹೆಗಲ್ ಹೇಳುವಂತೆ ಅವರ ಸೂತ್ರಗಳು ಮುಖ್ಯವಾಗಿ ವಸ್ತು ಮತ್ತು ರೂಪಗಳಿಗೆ ಸಂಬಂಧಿಸಿದವು; ಕಲೆಯ ಶ್ರೇಷ್ಠತೆ ಅದು ಉಚಿತ ಅರ್ಥವನ್ನು ಅಭಿವ್ಯಕ್ತಿಸುತ್ತದೆಯೋ ಇಲ್ಲವೋ ಎನ್ನುವುದನ್ನು ಹೊಂದಿಕೊಂಡಿದೆ ಎಂಬ ಮಾತನ್ನು ಒತ್ತಿ ಹೇಳುತ್ತದೆ. ಆದರೆ ಕಲೆಯ ಈ ಅರ್ಥದ ಸ್ವರೂಪವೇನೆಂದು ವಿವರಿಸಹೊರಟಾಗ ಮಾತ್ರ ಕಲಾಕೃತಿಯ ಆರ್ಷೇಯ ಗುಣಗಳ ವಿವರಣೆ ಅಮೂರ್ತವೆನಿಸಿ ಬಿಡುತ್ತವೆ. ಆರ್ಷೇಯ ಕಲೆ ವಿಶಿಷ್ಟ ಅರ್ಥವನ್ನು ಪಡೆದಿದ್ದರೂ ಅದು ಕಾಲಕ್ರಮೇಣ ಪರಿಷ್ಕಾರಕ್ಕೆ ಪಕ್ಕಾದಾಗ ವಿಶಿಷ್ಟ ರೂಪ ತಳೆದು ಸುಂದರಕಲೆ ಆಗುತ್ತದೆ ಎನ್ನುತ್ತಾನೆ, ಗಯಟೆ. ಕಲೆಯನ್ನು ಆಸ್ವಾದಿಸಬೇಕಾದರೆ ಅದನ್ನು ಸುಂದರಗೊಳಿಸಿ ವಿಶಿಷ್ಟ ರೂಪಕ್ಕೆ ಇಳಿಸಿ ಅದನ್ನು ಸಾಂಪ್ರದಾಯಿಕಗೊಳಿಸಬೇಕು; ಆದರೆ ರಸಾಭಿಜ್ಞನಾದವ ವಿಶಿಷ್ಟರೂಪದಲ್ಲಿರುವ ಕಲೆಯ ನೆರವೂ ಇಲ್ಲದೆ ಸೌಂದರ್ಯವನ್ನು ಕಾಣಬಲ್ಲ ಎನ್ನುವ ಗಯಟೆಯ ಮಾತುಗಳಲ್ಲಿ ಪರಸ್ಪರ ವಿರೋಧ ಕಾಣಿಸುತ್ತದೆ.

ಗಯಟೆ ಹಾಗೂ ಅವನ ಗೆಳೆಯರು ಕೂಡಿ ನಡೆಸುತ್ತಿದ್ದ ಸೌಂದರ್ಯ ಜಿಜ್ಞಾಸೆಗಳ ಫಲಶ್ರುತಿಯನ್ನು ಅವನ ದಿ ಕಲೆಕ್ಟರ್ ಅಂಡ್ ಹಿಸ್ ಫ್ರೆಂಡ್ಸ್ ಎನ್ನುವ ಒಂದು ಸಂವಾದರೂಪಕದಲ್ಲಿ ಕಾಣಬಹುದು. ಸೌಂದರ್ಯ ಮೀಮಾಂಸೆಯ ಇತಿಹಾಸದಲ್ಲಿ ಇದು ಮಹತ್ತ್ವದ ಕೃತಿ. ಇದರಲ್ಲಿ ಶ್ರೇಷ್ಠ ಕಲೆಯ ವಿವಿಧ ಅಂಶಗಳು ಯಾವುವು ಎನ್ನುವ ವಿಶ್ಲೇಷಣೆ ಇದೆ. ಈ ಪ್ರಸ್ತಾಪ ಸೌಂದರ್ಯಶಾಸ್ತ್ರದ ಇತಿಹಾಸದಲ್ಲೇ ಹೊಸತು ಎನ್ನುತ್ತಾನೆ ಬೊಸಾಂಕೆ. ಗ್ರೀಕ್ ಕಲೆಯಲ್ಲೂ ಆರ್ಷೇಯ ಕಲೆಯ ಅರ್ಥಪೂರ್ಣ ಗುಣಗಳಿವೆ–ಎನ್ನುವ ಮಾತನ್ನು ಚರ್ಚಿಸುತ್ತ ಗ್ರೀಕರ ಭವ್ಯಶೈಲಿ ನಮ್ಮನ್ನು ಆದರ್ಶದ ಔನ್ನತ್ಯಕ್ಕೆ ಏರಿಸುತ್ತದೆ, ಆದರೆ ನಮಗೆ ಅಷ್ಟೇ ಸಾಲದು ಆರ್ಷೇಯ ಕಲೆಯ ವಿಶಿಷ್ಟತೆ, ಗ್ರೀಕರ ಔನ್ನತ್ಯ, ಎರಡೂ ಬೇಕು. ಈ ಉಭಯ ಸಂಕಟವನ್ನು ನಿವಾರಿಸಲು ನಮಗೆ ಸೌಂದರ್ಯದ ನೆರವೇ ಬೇಕು. ಅದು ಗ್ರೀಕರ ಕಲೆಯ ವಸ್ತುನಿಷ್ಠೆಗೆ ಜೀವಂತ ಉತ್ಸಾಹವನ್ನು ಸೇರಿಸಬಲ್ಲದು, ಆರ್ಷೇಯ ಕಲೆಯ ಒರಟುತನವನ್ನು ನಯಗೊಳಿಸಬಲ್ಲದು. ಇದರಿಂದಾಗಿ ಒಂದು ಸುಂದರ ಕಲಾಕೃತಿ ವಿಕಾಸದ ಹಲವು ಹಂತಗಳನ್ನು ಏರಿ ವಿಶಿಷ್ಟತೆಯನ್ನು ಪಡೆಯುತ್ತದೆ. ಆ ವಿಶಿಷ್ಟತೆಯನ್ನು ನಮ್ಮದಾಗಿಸಿಕೊಳ್ಳಲು ಸಾಧ್ಯವಾಗುತ್ತದೆ.– ಗಯಟೆಯ ಈ ಮಾತುಗಳಲ್ಲಿ ಒಂದು ದ್ವಂದ್ವ ಗೋಚರಿಸುತ್ತದೆ. ಸೌಂದರ್ಯ ಸೂತ್ರವೆಂದರೆ ಅನಗತ್ಯವಾದುದನ್ನು ವರ್ಜಿಸುವುದು. ಅಗತ್ಯ ಅಂಶಗಳನ್ನು ಸಮಗ್ರೀಕರಣಗೊಳಿಸುವುದು ಎನ್ನುವುದಾದರೆ ಅದು ವಿಶಿಷ್ಟ ಗಟ್ಟಿಭದ್ರ ವೈಯಕ್ತಿಕ ಗುಣರೇಖೆಗಳನ್ನು ನುಣುಪುಗೊಳಿಸಿ, ನಿರ್ಬಲಗೊಳಿಸಿದಂತಾಗುವುದಲ್ಲವೇ? ಕಲೆಯ ಗಟ್ಟಿಭದ್ರ ಗುಣರೇಖೆಗಳಲ್ಲಿ ಸೌಂದರ್ಯವನ್ನು ಕಾಣುವುದು ರಸಾಭಿಜ್ಞನ ಪ್ರತಿಭೆಯನ್ನು ಅವಲಂಬಿಸಿರುತ್ತದೆಯಲ್ಲವೆ? ಪರಸ್ಪರ ವಿರೋಧವೆನಿಸುವ ಈ ಅಭಿಪ್ರಾಯಗಳನ್ನು ಸಮತೋಲನಗೊಳಿಸಲು ಗಯಟೆ ಪ್ರಯತ್ನಿಸುವುದಿಲ್ಲ.

ಶ್ರೇಷ್ಠ ಕಲೆಯನ್ನು ನಿರ್ಧರಿಸುವ ಕಲೆಗಾರರು ಕಲಾಭಿಜ್ಞರು ಮತ್ತು ಸೌಂದರ್ಯ ವಿಮರ್ಶಕರಲ್ಲಿ ಯಾವ ಯಾವ ಗುಣಗಳಿರಬೇಕು ಎಂದು ಗಯಟೆ ಈ ಚರ್ಚೆಯ ಕೊನೆಯಲ್ಲಿ ಪಟ್ಟಿ ಮಾಡಿದ್ದಾನೆ. ಸೌಂದರ್ಯದ ವಿವಿಧ ಅಂಶಗಳನ್ನು ಸವಿವರವಾಗಿ ಉಲ್ಲೇಖಿಸಿದ್ದಾನೆ. ಶ್ರೇಷ್ಠಕಲೆಯಲ್ಲಿ ಸಹಜತೆ (ಆರ್ಟ್–ಟ್ರುತ್), ಸೌಂದರ್ಯ, ನಯಗಾರಿಕೆ (ಒಪ್ಪ)– ಎಂಬ ಮೂರು ಅಂಶಗಳಿರುತ್ತವೆ. ಇವುಗಳಲ್ಲಿ ಒಂದೊಂದೂ ಪರಸ್ಪರ ವಿರೋಧ ಗುಣ ಅಥವಾ ಪರಸ್ಪರ ವಿರೋಧ ಪ್ರವೃತ್ತಿಗಳಿಂದ ಸಮಾವೇಶಗೊಂಡಿರುತ್ತದೆ. ಆ ಪರಸ್ಪರ ವಿರೋಧ ಗುಣ ಅಥವಾ ಪ್ರವೃತ್ತಿಗಳಲ್ಲಿ ಯಾವುದಾದರೂ ಒಂದು ಮಹತ್ತ್ವ (ಸೀರಿಯಸ್)ದ್ದಾಗಿದ್ದು ಇನ್ನೊಂದು ಲಘುವಾಗಿರುತ್ತದೆ (ಪ್ಲೇಫುಲ್). ಎರಡನ್ನೂ ಪ್ರತ್ಯೇಕವಾಗಿ ಪರಿಗಣಿಸಿದಾಗ ಅವು ಅಪ್ರಬುದ್ಧತೆ, ವಿಲಕ್ಷಣತೆ ಎನಿಸಿಕೊಳ್ಳುತ್ತವೆ. ಆದರೆ ಎರಡೂ ಸುಸಂಘಟಿತವಾದ ಶೈಲಿಯ ನಿರ್ಮಾಣವಾಗುತ್ತದೆ. ಇದನ್ನು ಹೀಗೆ ಸೂಚಿಸಬಹುದು.

1. ಬರಿ ಅನುಕರಣಾತ್ಮಕವಾದ್ದು + ಕಲ್ಪನಾಶಕ್ತಿ = ಕಲಾಸಹಜತೆ

2. ಆರ್ಷೇಯ ಪ್ರಾತಿನಿಧಿಕ ಗುಣವುಳ್ಳದ್ದು + ಕೇವಲ ಅಲಂಕಾರಿಕವಾದ ವಕ್ರರೇಖಾರೂಪ ವಿನ್ಯಾಸ = ಸೌಂದರ್ಯ


3. ಸೂಕ್ಷ್ಮ ನಿಷ್ಕೃಷ್ಟತೆ + ಅರ್ಥಗರ್ಭಿತ ರೇಖಾರೂಪಣೆ = ನಯಗಾರಿಕೆ.

ಇದಲ್ಲದೆ ಶ್ರೇಷ್ಠ ಕಲೆಯ ಆವಿಷ್ಕಾರವಾಗಬೇಕಾದರೆ ಕಲಾಸಹಜತೆ, ಸೌಂದರ್ಯ ಮತ್ತು ನಯಗಾರಿಕೆ– ಈ ಮೂರು ಗುಣಗಳ ಸಂಯೋಗವಿರಬೇಕು.

ಇಲ್ಲಿಯೂ ಗಯಟೆಯ ತತ್ತ್ವದಲ್ಲಿ ಪರಸ್ಪರ ವಿರೋಧಭಾವವಿದೆ. ಸೌಂದರ್ಯ (ಆ ಮಾತಿನ ಸಾಮಾನ್ಯ ಅರ್ಥದಲ್ಲಿ) ಲಲಿತಕಲೆಯ ವೈಶಿಷ್ಟ್ಯವನ್ನು ಹೆಚ್ಚಿಸುತ್ತದೆಂದು ಅವನು ಹೇಳಿದರೂ ವಸ್ತುವಿನ ತಿರುಳಿಲ್ಲದ ಸೌಂದರ್ಯ ಅಥವಾ ವಿಭಜಿಸಲು ಸಾಧ್ಯವಿಲ್ಲದ ಸೌಂದರ್ಯ ಸಾಧ್ಯವೇ ಇಲ್ಲವೆಂದಾಯಿತು. ಗಯಟೆ ಸೌಂದರ್ಯವೆನ್ನುವ ಮಾತಿಗೆ ಕೊಟ್ಟ ವಿವರಣೆಯಿಂದಾಗಿ ಅದು ಅಭಿವ್ಯಕ್ತಿಯನ್ನು ದುರ್ಬಲಗೊಳಿಸುವುದಿಲ್ಲ.

ಏಕೆಂದರೆ ಅದರಲ್ಲಿ ಮೂಲಭೂತವಾದ, ಸಾಂಕೇತಿಕವಾದ ಅಭಿವ್ಯಂಜಕತೆ ಸೇರಿರುತ್ತದೆ ಎಂದು ಅರ್ಥವಾಗುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ ಗಯಟೆ 18ನೆಯ ಶತಮಾನ ದಿಂದೀಚೆಗೆ ಪ್ರಚಲಿತವಾದ ಫಾರ್ಮಲಿಸ್ಟಿಕ್ ಥಿಯೊರಿ ಎನ್ನುವ ಪಂಥಕ್ಕೆ ಜೀವತುಂಬಿದ. 1805ರಲ್ಲಿ ಅವನು ವಿಂಕಲ್‌ಮನ್‌ನನ್ನು ಕುರಿತು ಬರೆದ ಗ್ರಂಥದಲ್ಲಿ ಕಲೆ ಪರಸ್ಪರಾವಲಂಬಿ ಭಾಗಗಳುಳ್ಳ ಒಂದು ಸಮಷ್ಟಿಕ್ರಿಯೆ ಎಂಬುದನ್ನು ಒತ್ತಿ ಹೇಳಿದ್ದಾನೆ. ಈ ಎಲ್ಲ ವಿಚಾರಗಳನ್ನೂ ಗಮನಿಸುವಾಗ ಗಯಟೆ 18ನೆಯ ಶತಮಾನದ ಸೌಂದರ್ಯಶಾಸ್ತ್ರದ ಚಿಂತನೆಗಳಿಗೆ ಒಂದು ಮುಖ್ಯ ತಿರುವುಕೊಟ್ಟನೆಂಬುದು ಖಚಿತವಾಗುತ್ತದೆ. (ಎಚ್.ಕೆ.ಆರ್.)

**ಗಯ :** ಬಿಹಾರ ರಾಜ್ಯದ ಪಾಟ್ನ ವಿಭಾಗದ ಒಂದು ನಗರ. ಅದೇ ಹೆಸರಿನ ಜಿಲ್ಲೆಯ ಕೇಂದ್ರ. ಪೂರ್ವ ರೈಲ್ವೆಯ ಮುಖ್ಯ ಮಾರ್ಗದಲ್ಲಿ ಪಾಟ್ನ ನಗರಕ್ಕೆ 90 ಕಿಮೀ ದೂರದಲ್ಲಿ ಫಲ್ಗು ನದಿಯ ಪಶ್ಚಿಮ ದಂಡೆಯ ಉದ್ದಕ್ಕೂ ಬಹುತೇಕ ಹಬ್ಬಿರುವ ಈ ನಗರದ ವಿಸ್ತೀರ್ಣ 17.24 ಚ.ಕಿಮೀ. ಗಯೆಯ ಸುತ್ತಲೂ ಛೋಟಾನಾಗಪುರ ಪ್ರಸ್ಥಭೂಮಿಯ ಅಂಚಿನ ಬೆಟ್ಟಗಳಿವೆ. ವರ್ಷದಲ್ಲಿ ಬಹುಕಾಲ ಬರಡಾಗಿರುವ ಫಲ್ಗು ನದಿಯ ಮರಳು ಬಿಸಿಲಿನಿಂದ ಕಾಯುವುದರಿಂದ ಗಯ ನಗರ ಬಹಳ ಬಿಸಿ. ಗಯ ನಗರ ಛೋಟಾನಾಗಪುರ ಪ್ರಸ್ಥಭೂಮಿಯೂ ಗಂಗಾ ನದಿಯ ಬಯಲೂ ಕೂಡುವ



ವಿಷ್ಣುಪಾದ ದೇವಸ್ಥಾನ, ಗಯ

ಎಡೆಯಲ್ಲಿರುವುದರಿಂದ ಇದೊಂದು ಮುಖ್ಯ ವ್ಯಾಪಾರ ಕೇಂದ್ರ. ಅಲ್ಲದೆ ಇದೊಂದು ಯಾತ್ರಾಸ್ಥಳ. ಪ್ರತಿ ವರ್ಷವೂ ಲಕ್ಷಗಟ್ಟಲೆ ಯಾತ್ರಾರ್ಥಿಗಳು ಗಯಕ್ಕೆ ಬರುತ್ತಾರೆ. ಗಯ ನಗರದ ಅನೇಕ ದೇವಸ್ಥಾನಗಳಲ್ಲಿ ರಾಣಿ ಅಹಲ್ಯಾಬಾಯಿ ಹೋಳ್ಕರ್ ಕಟ್ಟಿಸಿದ (1787) ವಿಷ್ಣುಪಾದ ದೇವಸ್ಥಾನ ಮುಖ್ಯವಾದದ್ದು. ಈ ಕ್ಷೇತ್ರದ ಒಂದು ಭಾಗವಾದ ಬ್ರಹ್ಮಗಯ ಹಿಂದುಗಳ ಯಾತ್ರಾಸ್ಥಳವಾದರೆ ಇನ್ನೊಂದು ಭಾಗವಾದ ಬೋಧಗಯ ಪ್ರಪಂಚದ ಬೌದ್ಧರ ಯಾತ್ರಾಸ್ಥಳ.

**ಬೋಧಗಯ:** ಬ್ರಹ್ಮಗಯಕ್ಕೆ ಸು.9 ಕಿಮೀ ದೂರದಲ್ಲಿದೆ. ಸಮೀಪದಲ್ಲಿಯೇ ಸು.2,400 ವರ್ಷಗಳಿಗೂ ಹಳೆಯದೆಂದು ಹೇಳಲಾದ ಬೋಧಿವೃಕ್ಷವಿದೆ. ಇಲ್ಲಿಯೇ ಶಾಕ್ಯವಂಶದ ಸಿದ್ಧಾರ್ಥ ಆರು ವರ್ಷಗಳ ಕಾಲ ಕಠಿಣ ತಪಸ್ಸನ್ನಾಚರಿಸಿ ತನ್ನ 35ನೆಯ ವಯಸ್ಸಿನಲ್ಲಿ ಜ್ಞಾನೋದಯ ಪಡೆದು ಬುದ್ಧನಾದದ್ದು. ಬುದ್ಧನ ಸಂದೇಶವನ್ನು ಪಡೆದ ಮೊದಲಿಗರಲ್ಲಿ ಗಯ ನಿವಾಸಿಗಳೂ ಸೇರಿದ್ದಾರೆ. ಗಯ ಪಟ್ಟಣಕ್ಕೆ 24 ಕಿಮೀ ದೂರದಲ್ಲಿರುವ ಬರಾಬರ್ ಬೆಟ್ಟದ ಗುಹೆಯೊಂದರಲ್ಲಿ ಅಶೋಕನ ಮೂರು ಶಾಸನವಿದೆ. ಪ್ರ.ಶ.ಪೂ. 3ನೆಯ ಶತಮಾನದಲ್ಲಿ ಇಲ್ಲಿಯ ಬೋಧಿವೃಕ್ಷದ ಸಮೀಪದಲ್ಲಿ ಅಶೋಕ ಕಟ್ಟಿಸಿದ್ದ ದೊಡ್ಡ ವಿಹಾರವೊಂದರ ಅವಶೇಷಗಳನ್ನು ಇಂದಿಗೂ ಕಾಣಬಹುದು. ಈಗ ಇಲ್ಲಿರುವ ದೇವಮಂದಿರ 48ಮೀ ಚೌಕವಾಗಿದ್ದು 15ಮೀ ಎತ್ತರವಾಗಿದೆ. ಒಳಗಡೆ ಬುದ್ಧನ ದೊಡ್ಡ ವಿಗ್ರಹವಿದೆ. ಮೇಲಿನ ಅಂತಸ್ತಿನಲ್ಲಿ ಸಿದ್ಧಾರ್ಥನ ತಾಯಿ ಮಾಯಾದೇವಿಯ ವಿಗ್ರಹವಿದೆ. 7ನೆಯ ಶತಮಾನದಲ್ಲಿ ಚೀನಿಯಾತ್ರಿಕ ಯುವಾನ್‌ಚಾಂಗ್ ಇಲ್ಲಿಗೆ ಬಂದಿದ್ದನೆಂದು ಹೇಳಲಾಗಿದೆ. (ಸಿ.ಕೆ.ವೈ.ಡಿ.;ಜಿ.ಎಚ್.)



ಮಹಾಬೋಧಿ ದೇವಾಲಯ, ಬೋಧಗಯ

**ತರದಿಹ್ (ಬೋಧಗಯ):** ಇಲ್ಲಿನ ಉತ್ಖನನದಲ್ಲಿ ಅನುಕ್ರಮವಾಗಿ ನವಶಿಲಾಯುಗ ಹಂತದಿಂದ ಪಾಲ ಅರಸು ಮನೆತನದ ಹಂತದವರೆಗೆ ಒಟ್ಟು ಏಳು ಸಾಂಸ್ಕೃತಿಕ ಹಂತಗಳು ಪತ್ತೆಯಾಗಿವೆ. ನವಶಿಲಾಯುಗದ ಆದಿಹಂತದಲ್ಲಿ ಕೈಯಿಂದ ಮಾಡಿದ ಮಣ್ಪಾತ್ರೆಗಳು ಮತ್ತು ಅಂತ್ಯ ಉಪಹಂತದಲ್ಲಿ ಉಜ್ಜಿದ ಹೊಳಪಿನ ಬೂದುಬಣ್ಣದ ಮಡಕೆಗಳು ವಿಶೇಷವಾಗಿವೆ. ಎರಡನೆಯ ಹಂತದಲ್ಲಿ ತಿಗುರಿಯ ಮೇಲೆ ಮಾಡಿದ ಮಡಕೆ, ತಾಮ್ರದ ಉಪಕರಣಗಳು ಹಾಗೂ ಕಪ್ಪು ಮತ್ತು ಬೂದುಬಣ್ಣದ ಮಡಕೆಗಳಿವೆ. ಮೂರನೆಯ ಹಂತದಲ್ಲಿ ಆದಿ ಕಬ್ಬಿಣಯುಗದ ಕಪ್ಪು, ಕೆಂಪು–ಕಪ್ಪು ದ್ವಿವರ್ಣ ಮಡಕೆಗಳು, ಕಬ್ಬಿಣದ ಬಾಣದ ಮೊನೆ, ಈಟಿ ಮೊನೆ, ಉಳಿ, ಮೊಳೆ ಕಲ್ಲಿನ ಮಣಿಗಳು, ಚಿಕ್ಕ ಅಲಗುಗಳು ಮುಂತಾದವು ದೊರೆತಿವೆ. ನಾಲ್ಕನೆಯ ಹಂತದಲ್ಲಿ ಪ್ರಥಮ ಬಾರಿಗೆ ಔತ್ತರೇಯ ಮೆರುಗಿನ ಕಪ್ಪುಬಣ್ಣದ ಮಡಕೆಗಳು, ಎಲುಬು, ಕಲ್ಲಿನ ಉಪಕರಣಗಳು, ಸುಡಾವೆ ಮಣ್ಣಿನ ಗೊಂಬೆಗಳು, ತಾಮ್ರದ ಮಣಿ, ಎರಕ ಹೊಯ್ದ ನಾಣ್ಯಗಳ ಜೊತೆಗೆ ಕಾಣಿಸಿಕೊಳ್ಳುತ್ತವೆ. ಐದನೆಯ ಹಂತದಲ್ಲಿ ಕುಷಾಣರ ಕಾಲದ ಕೆಂಪುವರ್ಣದ ಮಡಕೆ, ಕಲ್ಲಿನ, ಗಾಜಿನ, ಸುಡಾವೆ ಮಣ್ಣಿನ ಹಾಗೂ ತಾಮ್ರದ ಮಣಿಗಳು ಮುಖ್ಯವಾದವು. ಆರನೆಯ ಮತ್ತು ಏಳನೆಯ ಹಂತಗಳಲ್ಲಿ ಕ್ರಮವಾಗಿ ಗುಪ್ತರ ಕಾಲದ ಮತ್ತು ಪಾಲರ ಕಾಲದ ಪ್ರಾಚ್ಯಾವಶೇಷಗಳು ದೊರಕಿವೆ. (ಎ.ಎಸ್.;ಎನ್.ಎಲ್.)

**ಬ್ರಹ್ಮಗಯ:** ಹಿಂದುಗಳ ಪುಣ್ಯಕ್ಷೇತ್ರವಾದ ಇದು ಸು.5ನೆಯ ಶತಮಾನದಿಂದಲೂ ಪ್ರಸಿದ್ಧವಾಗಿದೆ. ಪುರಾಣಗಳಲ್ಲಿ ಗಯದ ಉಲ್ಲೇಖವಿರುವುದಾದರೂ ಋಗ್ವೇದದಲ್ಲಿ ಇದು ಒಬ್ಬ ಋಷಿಯ ಹೆಸರು. ಈ ಕ್ಷೇತ್ರದಲ್ಲಿ ಯಾಗವನ್ನು ಕೈಗೊಂಡ ಧಾರ್ಮಿಕ ದೊರೆಯೊಬ್ಬನ ಪ್ರಸ್ತಾಪ ಮಹಾಭಾರತದಲ್ಲಿ ಬಂದಿದೆ. ಈತ ಚಿನ್ನದಿಂದಲೇ

ಯಜ್ಞವೇದಿಕೆಯನ್ನು ನಿರ್ಮಿಸಿ ಕೊನೆಯಲ್ಲಿ ಆ ವೇದಿಕೆಯನ್ನು ಬ್ರಾಹ್ಮಣರಿಗೆ ಹಂಚಿಕೊಟ್ಟನೆಂದೂ ಈತ ಅಪಾರವಾಗಿ ಶೇಖರಿಸಿದ್ದ ಘೃತ ಮತ್ತು ಮಧುವನ್ನು ಯಜ್ಞ ಮುಗಿದ ಬಳಿಕ ಅಗ್ನಿಯ ಅನುಗ್ರಹದಿಂದ ಘೃತಕುಲ್ಯಾ ಎಂಬ ಹೆಸರಿನಿಂದ ನದಿಗಳ ರೂಪದಲ್ಲಿ ಹರಿಯಬಿಟ್ಟನೆಂದೂ ಹೇಳಲಾಗಿದೆ.

ಹುಟ್ಟಿದ ಮಕ್ಕಳಲ್ಲಿ ಒಬ್ಬನಾದರೂ ಗಯದಲ್ಲಿ ಶ್ರಾದ್ಧಮಾಡಿ ತನ್ನ ತಂದೆಗೆ ಸ್ವರ್ಗ ಪ್ರಾಪ್ತಿಯಾಗುವಂತೆ ಮಾಡಬೇಕೆಂದು ರಾಮಾಯಣದಲ್ಲಿ ಹೇಳಿದೆ. ಈ ಕ್ಷೇತ್ರದಲ್ಲಿ ಶ್ರಾದ್ಧ ನಡೆಸಿದವನ ವಂಶದ ನೂರು ಜನ ಪಿತೃಗಳಿಗಲ್ಲದೆ ಅವನಿಗೂ ಶಾಶ್ವತ ಸ್ವರ್ಗ ಪ್ರಾಪ್ತಿಯಾಗುತ್ತದೆಂದು ಸ್ಥಳಪುರಾಣ ತಿಳಿಸುತ್ತದೆ. ಈ ನಂಬಿಕೆಗೆ ಹಿನ್ನಲೆಯಾಗಿರುವ ಕಥೆ ಗಯ ಮಹಾತ್ಮ್ಯೆಯಲ್ಲಿ ಹೀಗಿದೆ: ವಿಷ್ಣುವಿನ ಪರಮ ಭಕ್ತನಾದ ಗಯನೆಂಬ ಅಸುರ ಒಮ್ಮೆ ಕೋಲಾಹಲ ಪರ್ವತದ ಮೇಲೆ ಕಠಿಣ ತಪಸ್ಸನ್ನಾಚರಿಸಿದ. ಇದರಿಂದ ದೇವತೆಗಳೆಲ್ಲ ಖಿನ್ನರಾಗಿ ವಿಷ್ಣು ಮಹೇಶ್ವರರ ಬಳಿಗೆ ಹೋದರು. ವಿಷ್ಣು ದೇವತೆಗಳೊಡನೆ ಗಯಕ್ಕೆ ಬಂದು ಗಯ ಪರಿಶುದ್ಧನೆಂಬ ವಿಚಾರ ತಿಳಿದು, ಅವನನ್ನು ಸ್ಪರ್ಶಿಸಿದವರು ವೈಕುಂಠವನ್ನು ಸೇರಲಿ ಎಂಬುದಾಗಿ ವರ ನೀಡಿದ. ಅಂದಿನಿಂದ ಜನ ಗಯನನ್ನು ಸ್ಪರ್ಶಿಸಿ ಸ್ವರ್ಗಲಾಭ ಪಡೆಯತೊಡಗಿದರು. ಇದರಿಂದ ಯಮನ ರಾಜ್ಯ ಬರಿದಾಗಿ ಅವನಿಗೆ ಕೆಲಸವಿಲ್ಲದಂತಾಯಿತು. ಅನಂತರ ವಿಷ್ಣುವಿನ ಸಲಹೆಯಂತೆ ಬ್ರಹ್ಮ ಗಯನನ್ನು ಸಮೀಪಿಸಿ ಅವನ ಪವಿತ್ರ ದೇಹದ ಮೇಲೆ ಯಾಗ ಮಾಡಬೇಕೆಂಬ ಸಂಕಲ್ಪವನ್ನು ಅವನಲ್ಲಿ ವಿಜ್ಞಾಪನೆ ಮಾಡಿಕೊಂಡ. ಇದಕ್ಕೆ ಗಯ ಮರುಮಾತನಾಡದೆ ಸಮ್ಮತಿಯನ್ನಿತ್ತ. ಯಾಗಕರ್ಮಗಳನ್ನು ನಡೆಸಲು ಬ್ರಹ್ಮ ಋತ್ವಿಜರಾದ ಮಾನಸಪುತ್ರರನ್ನು ಸೃಷ್ಟಿಸಿದ. ಅವರು ಗಯನ ಶಿರ ಉತ್ತರದ ಕಡೆಗಿರುವಂತೆಯೂ ಪಾದಗಳು ದಕ್ಷಿಣದ ಕಡೆಗಿರುವಂತೆಯೂ ಮಾಡಿ ಅವನ ದೇಹದ ಮೇಲೆ ಯಜ್ಞವನ್ನು ವಿಜೃಂಭಣೆಯಿಂದ ನಡೆಸಿದರು. ಯಜ್ಞಸಮಾರಂಭದ ಕೊನೆಯಲ್ಲಿ ಗಯನ ತಲೆ ಅಲುಗಾಡತೊಡಗಿತು. ವಿಶೇಷವಾದ ಧರ್ಮಶಿಲೆಯೊಂದನ್ನು ತಂದು ಗಯನ ತಲೆಯ ಬಳಿ ಇಡಬೇಕೆಂದು ಆಗ ಬ್ರಹ್ಮ ಯಮನಿಗೆ ಸೂಚಿಸಿದ. ಆದರೂ ಗಯ ನಿಶ್ಚಲನಾಗಲಿಲ್ಲ. ದೇವತೆಗಳೆಲ್ಲ ಶಿಲೆಯ ಬಳಿ ನಿಂತರೂ ತಲೆಯ ಅಲುಗಾಟ ನಿಲ್ಲಲಿಲ್ಲ. ಕೊನೆಗೆ ವಿಷ್ಣುವೇ ಗದಾಧಾರಿಯಾಗಿ ಗಯನ ಶಿರದ ಬಳಿ ಪ್ರತ್ಯಕ್ಷನಾದಾಗ ತಲೆ ಅಲುಗಾಡುವುದು ನಿಂತಿತು. ಮಹಾವಿಷ್ಣುವಿನ ದರ್ಶನ ಲಾಭದಿಂದ ಕೃತಾರ್ಥನಾದ ಗಯ ತನಗೆ ವಿಷ್ಣುವಿನ ಆಜ್ಞೆಯೊಂದೇ ಸಾಕಾಗಿತ್ತೆಂದೂ ಅಷ್ಟು ಜನ ದೇವತೆಗಳು ಚಿತ್ರಹಿಂಸೆ ಕೊಡಬಾರದಾಗಿತ್ತೆಂದು ಭಿನ್ನೈಸಿಕೊಂಡ. ಗಯನ ಭಕ್ತಿಗೆ ಮೆಚ್ಚಿದ ವಿಷ್ಣು ಅವನಿಗೆ ವರಪ್ರಸಾದವನ್ನು ನೀಡಿ ತಾನೇ ಮೊದಲ್ಗೊಂಡು ಸಮಸ್ತ ದೇವತೆಗಳಿಗೂ ಅವನ ಶಿರದ ಬಳಿ ಶಾಶ್ವತವಾಗಿ ನಿಂತಿರುವಂತಾಗಿ ಆ ಸ್ಥಳ ಗಯನ ಹೆಸರಿನಿಂದ ಶೋಭಿಸಲೆಂದು ಅನುಗ್ರಹಿಸಿದ. ಅಂದಿನಿಂದ ಅದು ಗಯ ಕ್ಷೇತ್ರವೆಂದು ಪ್ರಸಿದ್ಧವಾಯಿತು.

ಭಾರತ ಭಾಗವತಾದಿಗಳಲ್ಲೆಲ್ಲಿಯೂ ಕಾಣದ, ಜನಜನಿತವಾದ, ಗಯೋಪಾಖ್ಯಾನ ವೆಂಬ ಹೆಸರಿನ ಒಂದು ಕಥೆಯಿದೆ. ಈ ಕಥೆಯ ವಿವರಗಳು ಹೀಗಿವೆ: ಶಿವಭಕ್ತ ಸಂಪನ್ನನಾದ ಗಯನೆಂಬ ಒಬ್ಬ ಗಂಧರ್ವ ಒಮ್ಮೆ ಶಿವಪೂಜೆಗಾಗಿ ಕೈಲಾಸಕ್ಕೆ ಹೋಗಿ ಮಡದಿಮಕ್ಕಳೊಂದಿಗೆ ಹಿಂದಿರುಗಿ ವಿಮಾನದಲ್ಲಿ ಕುಳಿತು ಬರುವಾಗ ಬಾಯ ತಂಬುಲವನ್ನು ಉಗುಳಿದ. ಸೂರ್ಯನಿಗೆ ಅರ್ಘ್ಯವನ್ನು ಕೊಡುತ್ತ ಕಣ್ಮುಚ್ಚಿ ನಿಂತಿದ್ದ ಶ್ರೀಕೃಷ್ಣನ ಬೊಗಸೆಯಲ್ಲಿ ಅದು ಬಿತ್ತು. ಕೈಲಿದ್ದ ನೀರು ಕೆಂಪಾಗಿದ್ದುದನ್ನು ಕಂಡು ಕೋಪಗೊಂಡ ಕೃಷ್ಣ ಆ ಅಪರಾಧ ಎಸಗಿದವನನ್ನು ಕೊಲ್ಲದೆ ಬಿಡುವುದಿಲ್ಲವೆಂದು ಪ್ರತಿಜ್ಞೆ ಮಾಡಿದ. ಇದರಿಂದ ಭೀತಿಗೊಂಡ ಗಯ ದೇವತೆಗಳಲ್ಲಿ ಮೊರೆಯಿಟ್ಟ. ಯಾರೂ ಅಭಯ ನೀಡಲಿಲ್ಲ. ಕೊನೆಗೆ ನಾರದರ ಸೂಚನೆಯ ಮೇರೆಗೆ ಅರ್ಜುನನ ಮೊರೆಹೊಕ್ಕ. ಅರ್ಜುನ ಹಿಂದುಮುಂದು ನೋಡದೆ ಅಭಯಪ್ರದಾನ ಮಾಡಿದ. ಅನಂತರ ವಿಷಯ ತಿಳಿದು ತನ್ನ ಅವಿವೇಕವನ್ನು ಕಂಡು ವಿಷಾದಿಸಿದ. ಕಡೆಗೆ ಮೊರೆಹೊಕ್ಕವರನ್ನು ಕಾಪಾಡ ಬೇಕೆಂಬ ಧರ್ಮಕ್ಕೆ ಕಟ್ಟುಬಿದ್ದು ಗಯನಿಗಾಗಿ ಅರ್ಜುನ ಕೃಷ್ಣನನ್ನು ಇದಿರಿಸಿ ಯುದ್ಧದಲ್ಲಿ ತೊಡಗಿದ. ಆಗ ದೇವತೆಗಳು ಮಧ್ಯೆ ಪ್ರವೇಶಿಸಿ ಗಯನನ್ನು ಶ್ರೀಕೃಷ್ಣನ ಚರಣಗಳಿಗೆ ಅಡ್ಡಬೀಳಿಸಿ ಕೃಷ್ಣನಿಂದಲೇ ಗಯನಿಗೆ ಅಭಯಪ್ರದಾನ ಮಾಡಿಸಿದರು.

ಭಾರತದ ಎಲ್ಲ ಕಡೆಗಳಿಂದಲೂ ಹಿಂದುಗಳು ಗಯಕ್ಕೆ ಹೋಗಿ ಫಲ್ಗು ನದಿಯಲ್ಲಿ ಸ್ನಾನ ಮಾಡಿ ಪಿತೃಗಳಿಗೆ ತರ್ಪಣವನ್ನೂ ಪಿಂಡವನ್ನೂ ಅರ್ಪಿಸಿ ವಿಷ್ಣುಪಾದೋದಕ ವನ್ನು ಪ್ರೋಕ್ಷಿಸಿಕೊಳ್ಳುವ ಪದ್ಧತಿ ಬಹು ಹಿಂದಿನಿಂದ ನಡೆದುಬಂದಿದೆ. ಈ ಕ್ಷೇತ್ರದ ಮುಖ್ಯಸ್ಥರು ಇಲ್ಲಿ ಸಂಸ್ಕಾರ ನಡೆಸಿದವರ ಹೆಸರು ಕುಲಗೋತ್ರಗಳನ್ನು ಹಿಂದಿನಿಂದಲೂ ಬರೆದು ಇಟ್ಟಿದ್ದಾರೆ. ಈ ಕ್ಷೇತ್ರದ ಯಾತ್ರೆ ಪೂರ್ಣವಾಗಬೇಕಾದರೆ ಸಮೀಪದಲ್ಲಿರುವ ಐದು ಸ್ಥಳಗಳಿಗೆ ಹೋಗಿ ಅಲ್ಲಿಯ ಯಮದೇವತೆಗೂ ಆತನ ದೂತನಿಗೂ ಪೂಜೆ ಸಲ್ಲಿಸಬೇಕು. ಇವುಗಳಲ್ಲಿ ಮುಖ್ಯವಾದವು ರಾಮಶಿಲಾ ಮತ್ತು ಪ್ರೇತಶಿಲಾ ಗುಡ್ಡಗಳು. ಪ್ರೇತಶಿಲಾದಲ್ಲಿ ಯಮನನ್ನು ಪ್ರಾರ್ಥಿಸಿಯಾದ ಮೇಲೆ ಪಿತೃಯಾನದ ಕಾವಲು ನಾಯಿಗಳಿಗೂ ಪೂಜೆ ಸಲ್ಲಿಸುವುದು ವಾಡಿಕೆ. (ಸಿ.ಕೆ.ವೈ.ಡಿ;ಜಿ.ಎಚ್.)

**ಗಯದ ವಾಸ್ತುಶಿಲ್ಪ:** ಗಯ ಪುರಾತನ ಹಿಂದೂ ಕ್ಷೇತ್ರಗಳಲ್ಲೊಂದಾದರೂ ಈಗ ಕಾಣುವ ಇಲ್ಲಿಯ ದೇವಾಲಯಗಳು ಮತ್ತು ಇತರ ಎಲ್ಲ ಪ್ರಾಚೀನ ಕಟ್ಟಡಗಳು ಪ್ರ.ಶ. 8ನೆಯ ಶತಮಾನದ ಅನಂತರ ಆಳಿದ ಪಾಲವಂಶದ ಅರಸರ ಮತ್ತು ಅವರ ಅನಂತರದವರ ಕಾಲಕ್ಕೆ ಸೇರಿದವುಗಳು. ಪ್ರಖ್ಯಾತವಾದ ಅಶ್ವತ್ಥ ವೃಕ್ಷ ಹಿಂದೂಗಳಿಗೂ ಬೌದ್ಧರಿಗೂ ಪವಿತ್ರವಾದ್ದು. ಈ ಬೋಧಿವೃಕ್ಷದ ಅಡಿಯಲ್ಲಿ ಧ್ಯಾನಾಸಕ್ತನಾಗಿದ್ದಾಗಲೇ ಗೌತಮ ಬುದ್ಧನಾದ್ದು. ಇಂದು ಇಲ್ಲಿ ಕಾಣುವ ಬೋಧಿವೃಕ್ಷ ಅಂದಿನದಲ್ಲ. ಅಶೋಕನ ಕಾಲದಲ್ಲಿ ಒಮ್ಮೆ ಒಣಗಿಹೋಗಿದ್ದ ಈ ವೃಕ್ಷವನ್ನು ತೆಗೆಸಿ ಅದೇ ಸ್ಥಳದಲ್ಲಿ ಅದರ



ಪ್ರಾಚೀನ ವಜ್ರಾಸನ, ಗಂಧಕುಟಿ (ಬೋಧಗಯ)

ಬೀಜಗಳನ್ನು ನೆಟ್ಟು ಹೊಸ ವೃಕ್ಷವನ್ನು ಬೆಳೆಸಲಾಯಿತು. ಪ್ರ.ಶ.ಸು. 7ನೆಯ ಶತಮಾನದಲ್ಲಿ ಪುನಃ ಶಶಾಂಕ ಇಲ್ಲಿ ಹೊಸದೊಂದು ಸಸಿಯನ್ನು ನೆಡಿಸಿದ. 1876ರಲ್ಲಿ ಈ ಮರ ಒಣಗಿ ಬಿದ್ದು ಹೋದಾಗ ಪುನಃ ಅದರ ಬೀಜಗಳಿಂದ ಹೊಸದೊಂದು ಮರವನ್ನು ಬೆಳೆಸಲಾಯಿತು. ಇಂದು ಕಾಣುವ ಮರ ಸುಮಾರು ಒಂದು ಶತಮಾನದಷ್ಟು ಹಿಂದಿನದು. 7ನೆಯ ಶತಮಾನದ ಅನಂತರ ಹಲವಾರು ಬಾರಿ ಈ ಮರ ಜೀವದಾನ ಪಡೆದಿರಬೇಕು.

ಮೌರ್ಯ ಅಶೋಕ ಈ ವೃಕ್ಷದ ಹಿಂದೆ ಏಕಶಿಲಾಸ್ತಂಭವೊಂದನ್ನು ನಿಲ್ಲಿಸಿ, ಮರದ ಸುತ್ತಲೂ ಚೌಕಾಕಾರದ ಕಟಾಂಜನವನ್ನು ಕಟ್ಟಿಸಿದ. ಯುವಾನ್‌ಚಾಂಗ್ ಕಂಡಾಗ ಈ ಬೋಧಿವೃಕ್ಷದ ಸುತ್ತಲೂ ಇಟ್ಟಿಗೆಯ ಗೋಡೆಯೊಂದಿತ್ತು. ಮುಖ್ಯದ್ವಾರ ಪೂರ್ವಾಭಿಮುಖ ವಾಗಿತ್ತೆಂದೂ ಉತ್ತರದ್ವಾರದ ಮೂಲಕ ಸಂಘಾರಾಮಕ್ಕೆ ಹೋಗಬಹುದಾಗಿತ್ತೆಂದೂ ಜಂಬೂದ್ವೀಪದ ಅನೇಕ ಅರಸರು ಕಟ್ಟಿಸಿದ ಸ್ತೂಪಗಳೂ ವಿಹಾರಗಳೂ ಇಲ್ಲಿದ್ದುವೆಂದೂ ಆ ಯಾತ್ರಿಕ ಹೇಳಿದ್ದಾನಾದರೂ, ಈಗ ಉಳಿದಿರುವುದೆಲ್ಲ ಕೆಲವು ಅವಶೇಷಗಳು ಮಾತ್ರ. ಅಶೋಕ ನಿಲ್ಲಿಸಿದನೆಂದು ಹೇಳಲಾದ ಶಿಲಾಸ್ತಂಭವನ್ನು ಬಾರ್‌ಹುತ್‌ದಲ್ಲಿಯ ಸ್ತೂಪಗಳಲ್ಲಿ ಕಂಡುಬರುವ ಚಿತ್ರಗಳಲ್ಲಿ ಕಾಣಿಸಿದೆ. ಕಂಬದ ಬೋದಿಗೆಯ ಮೇಲೆ ಆನೆಯೊಂದನ್ನು ಕೆತ್ತಲಾಗಿತ್ತು. ಈಗ ಕಾಣುವುದು ಅರ್ಧ ಮರಳುಗಲ್ಲಿನ, ಇನ್ನರ್ಧ ಬೆಣಚುಕಲ್ಲಿನ ಕಟಾಂಜನ. ಮರಳುಗಲ್ಲಿನ ಕಂಬಗಳಿಂದ ಕೂಡಿದ ಕಟಾಂಜನ ಅಶೋಕನ ಕಾಲದ್ದೆಂದು, ಬೆಣಚುಕಲ್ಲಿನದು ಅನಂತರದ ಕಾಲದ್ದೆಂದು ಹೇಳಲಾಗಿದೆ.

ಬೋಧಗಯಾದಲ್ಲಿ ಕನಿಂಗ್‌ಹ್ಯಾಂ ಕಂಡುಹಿಡಿದ ಇನ್ನೊಂದು ಅವಶೇಷ ಪ್ರಾಚೀನ ವಜ್ರಾಸನ ಗಂಧಕುಟಿ. ಈ ಆಸನದ ಮೇಲೆ ಮೂರು ಪದರಗಳಿದ್ದುವು. ಕೆಳಗಿನ ಪದರ ಹೊಳಪು ಮಾಡಿದ ಮರಳುಕಲ್ಲಿನದು. ಇದರ ಮೇಲೆ ಗಿಲಾಯಿ ಮಾಡಿದ್ದ ಮಣ್ಣನ್ನು ತೆಗೆದಾಗ, ಚಿನ್ನದ ನಾಣ್ಯಗಳು, ಕೆಲವು ಆಭರಣಗಳು, ಬೆಳ್ಳಿಯ ನಾಣ್ಯಗಳು, ಮುತ್ತುಗಳು ಇತ್ಯಾದಿ ಅವಶೇಷಗಳು ದೊರಕಿದ್ದುವು. ಬೋಧಿವೃಕ್ಷದ ಮುಂದಿದ್ದ ಈ ಸಿಂಹಾಸನದ ಮೇಲೆ ಕುಳಿತಾಗಲೇ ಬುದ್ಧನಿಗೆ ಜ್ಞಾನೋದಯವಾಯಿತೆಂದು ಬೌದ್ಧರ ಸಾಂಪ್ರದಾಯಿಕ ಕತೆಗಳು ತಿಳಿಸುತ್ತವೆ. ಇದೇ ಸ್ಥಳದಲ್ಲಿ ಈ ಸಿಂಹಾಸನವನ್ನು ಸೇರಿಸಿದಂತೆ ಒಂದು ಸಣ್ಣ ಕೋಣೆಯನ್ನು ಕಟ್ಟಿಸಿದ್ದರ ಗುರುತುಗಳಿವೆ. ಈ ಒಂದು ವಿಹಾರವನ್ನು ಅಶೋಕ ಕಟ್ಟಿಸಿದನೆಂದು ಯುವಾನ್‌ಚಾಂಗ್ ತಿಳಿಸುತ್ತಾನಾದರೂ, ಅನಂತರ ಪ್ರ.ಶ.ಪೂ. 1ನೆಯ ಶತಮಾನದಲ್ಲಿ ಕೌಶಿಕೀಪುತ್ರನ ಹಿರಿಯರಸಿಯಾದ ಕುರಂಗಿ ಕಟ್ಟಿಸಿದಳೆಂದು ಈಗ ಸಾಮಾನ್ಯವಾಗಿ ಒಪ್ಪಲಾಗಿದೆ.

ಇವೆಲ್ಲಕ್ಕಿಂತ ಪ್ರಖ್ಯಾತವಾದ ಬೋಧಗಯಾ ದೇವಾಲಯವನ್ನು ಆ ಚೀನೀ ಯಾತ್ರಿಕ ಮಹಾಬೋಧಿವಿಹಾರವೆಂದು ಕರೆದಿದ್ದಾನೆ. ಈಗಿರುವ ಕಟ್ಟಡ ಅನೇಕ ಬದಲಾವಣೆಗಳಿಗೆ ಒಳಗಾಗಿದೆ; ಅನೇಕ ಬಾರಿ ಜೀರ್ಣೋದ್ಧಾರಗೊಂಡಿದೆ. ಈಗಿನ ದೇವಾಲಯ ಚೌಕಾಕಾರದ ತಳಹದಿಯ ಮೇಲಿದೆ. ಪಕ್ಕದ ಗೋಡೆಗಳು ಇಳಿಜಾರಾಗಿ, ಮೇಲಕ್ಕೆ ಹೋಗುತ್ತ ಸೂಚ್ಯಗ್ರವಾಗಿದೆ. ಮೇಲೆ ಆಮಲಕವಿದೆ. ಮಹಾದ್ವಾರ ಇರುವುದು ಪೂರ್ವಕ್ಕೆ. ಗೋಪುರದ ಕೆಳಭಾಗದಲ್ಲಿ ನಾಲ್ಕು ದಿಕ್ಕುಗಳಲ್ಲಿ ಅದೇ ಆಕಾರದ ಸಣ್ಣ ಗೋಪುರಗಳಿವೆ. ಗೋಪುರಗಳಲ್ಲಿಯ ಮಾಡಗಳಲ್ಲಿ ಒಮ್ಮೆ ಬುದ್ಧನ ಮೂರ್ತಿಗಳಿದ್ದುವೆಂದು ಯುವಾನ್‌ಚಾಂಗ್‌ನಿಂದ ತಿಳಿಯುತ್ತದೆ. ಇದು ಇಟ್ಟಿಗೆಯಿಂದ ಕಟ್ಟಲಾದ ಕಟ್ಟಡ. ಈ ಆಲಯದ ಮುಖ್ಯಭಾಗ, ಗೋಪುರ ಇತ್ಯಾದಿಗಳು ಪ್ರ.ಶ. 7ನೆಯ ಶತಮಾನದಷ್ಟು ಪ್ರಾಚೀನವೆಂದು ಹೇಳಲಾಗಿದೆ. ಸಿಂಹಳದ ಶ್ರಮಣ ಪ್ರಖ್ಯಾತಕೀರ್ತಿ, ಪಾಗನ್ ಅರಸನಾದ ಕಯಾನ್‌ಜಿತ್ಥ, 12ನೆಯ ಶತಮಾನದಲ್ಲಿ ಆಳಿದ ಅರಕಾನಿನ ಲೆತ್ಯಮಿನ್ನ, ಪೆಗುವಿನ ಧರ್ಮಜೆದಿ ಮುಂತಾದ ವಿದೇಶಿ ಅರಸರು ಸಹ ಈ ದೇವಾಲಯದ ಜೀರ್ಣೋದ್ಧಾರ ಮಾಡಿಸಿದರೆಂದು ಅವರ ಶಾಸನಗಳಿಂದ ತಿಳಿದಿದೆ.

ವಿಷ್ಣುಪಾದ ದೇವಾಲಯದಲ್ಲಿ ಆದಿ ಗದಾಧರನೆಂದು ಹೇಳಲಾದ ಪಾದಗಳ ಗುರುತಿದೆ. ಆದರೆ ಫಾಹಿಯಾನ್ ಇಲ್ಲಿಗೆ ಬಂದಾಗ ಕಂಡದ್ದು ಹಾಳುಬಿದ್ದ ನಗರವನ್ನು ಮಾತ್ರ. ಇದೇ ಪರಿಸ್ಥಿತಿ ಯುವಾನ್‌ಚಾಂಗ್‌ನ ಕಾಲದಲ್ಲೂ ಮುಂದುವರಿದಿತ್ತು. ಹನ್ನೊಂದನೆಯ ಶತಮಾನದಲ್ಲಿ ಆಳಿದ ನಯಪಾಲದೇವ ಮತ್ತು ಅವನ ಅನಂತರದ ಅರಸರ ಕಾಲದಲ್ಲಿ ಈ ಸ್ಥಳದ ಜೀರ್ಣೋದ್ಧಾರ ಕಾರ್ಯಗಳು ಆರಂಭವಾದುವು. ತದನಂತರವೇ ಗಯ ಹಿಂದೂಗಳ ಪವಿತ್ರ ಕ್ಷೇತ್ರಗಳಲ್ಲೊಂದು ಎಂಬ ಖ್ಯಾತಿ ಪಡೆದದ್ದು. ಗಯ ಮಾಹಾತ್ಮ್ಯ 13–14ನೆಯ ಶತಮಾನಕ್ಕೂ ಹಿಂದಿನದಲ್ಲವೆಂದೂ, ಅದರಲ್ಲಿ ಕಂಡುಬರುವ ವಿವರಗಳೆಲ್ಲ ಪಾಲ ಅರಸರು ಕೈಗೊಂಡ ಕಾರ್ಯಗಳ ಫಲವೆಂದೂ ಹೇಳಬಹುದು. ಅಲ್ಲಿ ಹಿರಿಯರಿಗೆ ಶ್ರಾದ್ಧ ಕರ್ಮಾದಿಗಳನ್ನು ನೆರವೇರಿಸಿದರೆ ಅವರಿಗೆ ಮುಕ್ತಿ ಲಭಿಸುತ್ತದೆ ಎಂಬ ಹಿಂದೂಗಳ ನಂಬಿಕೆಯಿಂದಾಗಿ ಮಾತ್ರ, ಅಂಥ ಕರ್ಮಗಳನ್ನು ನಡೆಸಬಹುದಾದ ಪುಣ್ಯಕ್ಷೇತ್ರವೆಂದು ಮಾತ್ರ, ಗಯ ಇದಕ್ಕೆ ಮೊದಲೂ ಪ್ರಸಿದ್ಧವಾಗಿತ್ತು.

**ಗಯದಲ್ಲಿರುವ, ದಕ್ಷಿಣ ಭಾರತದ ಅರಸರ ಶಾಸನಗಳು:** ಗಯೆಯಲ್ಲಿ ದೊರಕಿರುವ ಶಾಸನಗಳು ಬಹುತೇಕ ಆ ಪ್ರಾಂತ್ಯದ ಅರಸು ಮನೆತನಗಳಿಗೆ ಸೇರಿದವಾದರೂ ಅಲ್ಲಿಯ ವಿಷ್ಣುಪಾದ ದೇವಾಲಯದಲ್ಲಿ ದಕ್ಷಿಣಾಪಥದ ಅರಸರ ಕೆಲವು ಶಾಸನಗಳು ದೊರೆತಿವೆ. ಆ ದೇವಾಲಯದ ಮುಂದಿರುವ ಶಿವ ಗುಡಿಯ ಬಲಭಾಗದ ಗೋಡೆಗೆ ಸೇರಿಸಿ ಕಟ್ಟಲಾದ ಕರಿಯ ಕಲ್ಲಿನಲ್ಲಿ ರಾಜನಾದ ಪ್ರತಾಪರುದ್ರನ, 31 ಸಾಲುಗಳುಳ್ಳ ಸಂಸ್ಕೃತ ಶಾಸನ ಒಂದಿದೆ. ಇದನ್ನು ನಂದಿ ನಾಗರೀ ಲಿಪಿಯಲ್ಲಿ ಕೆತ್ತಲಾಗಿದೆ. ಈತನ ಗುರುವಾದ ತ್ರಿಭುವನ ವಿದ್ಯಾಚಕ್ರವರ್ತಿ ಬಿರುದಾಂಕಿತನಾದ ಮಲ್ಲಿಕಾರ್ಜುನ, ವಿಂಧ್ಯಾದ್ರಿಗೆ ದಕ್ಷಿಣದಲ್ಲಿ, ಗೌತಮೀ ಗೋದಾವರೀ ತೀರದ ಮಂತ್ರಕೂಟದಲ್ಲಿ (ಈಗಿನ ಆಂಧ್ರಪ್ರದೇಶದ ಕರೀಂ ನಗರ ಜಿಲ್ಲೆಯ ಮಂಥನಿ) ಅನೇಕ ರಮ್ಯ ಕಟ್ಟಡಗಳನ್ನು ಕಟ್ಟಿಸಿದ್ದ. ಈತ ಪರಮ ಶಿವಭಕ್ತ. ಆದರೆ ಈತನ ಪತ್ನಿಯಾದ ಕಂದಮ್ಮಟ ಮನೆತನಕ್ಕೆ ಸೇರಿದ ಗೌರಿ ಗೋಪೀನಾಥದೇವರ (ವಿಷ್ಣುವಿನ) ಭಕ್ತೆ. ಶಾಸನ ಕಾಲಕ್ಕೆ ಗಯದ ಮಣಿಕರ್ಣಿಕಾ ಘಟ್ಟದಲ್ಲಿ ನೆಲಸಿದ್ದ ಈಕೆ ಗಯಶ್ರಾದ್ಧವನ್ನು ಮಾಡಿಸಿದಳೆಂದು ಶಾಸನ ಹೇಳುತ್ತದೆ. ಈ ಶಾಸನದಲ್ಲಿ ಉಕ್ತನಾದ ಅರಸ ಕಾಕತೀಯ ವಂಶದ ಒಂದನೆಯ ಪ್ರತಾಪರುದ್ರನೆಂದೂ ಆತನ ಗುರುವಾದ ಮಲ್ಲಿಕಾರ್ಜುನನೇ ಸುಪ್ರಸಿದ್ಧ ಶೈವ ಗುರುವಾದ ಮಲ್ಲಿಕಾರ್ಜುನ ಪಂಡಿತಾರಾಧ್ಯನೆಂದೂ ಊಹಿಸಲಾಗಿದೆ. ಶಾಸನದ ಕಾಲಕ್ಕೆ ಆ ಗುರು ದೈವಾಧೀನನಾಗಿ, ಆತನ ಆತ್ಮಶಾಂತಿಗಾಗಿ ಗಯಶ್ರಾದ್ಧವನ್ನು ಅವನ ಧರ್ಮಪತ್ನಿ ಮಾಡಿಸಿದ್ದಿರಬೇಕು. 1163–1195ರ ವರೆಗೆ ಆಳಿದ ಪ್ರತಾಪರುದ್ರ ಇನ್ನೂ ಜೀವಿಸಿದ್ದಾಗಲೇ ಈತನ ಗುರು ಮರಣ ಹೊಂದಿದನೆಂಬುದು ಇದರಿಂದ ಖಚಿತವಾಗುತ್ತದೆ.

ಇದೇ ದೇವಾಲಯದ ಪ್ರಾಂಗಣದಲ್ಲಿರುವ ಮಹದೇವಗುಡಿಯ ಬಾಗಿಲುವಾಡದಲ್ಲಿ ಹೊಯ್ಸಳ ವಂಶದ ಮುಮ್ಮಡಿ ನರಸಿಂಹನ ಶಾಸನವೊಂದಿದೆ. ಇದೂ ನಂದಿ ನಾಗರೀಲಿಪಿಯಲ್ಲಿದೆಯಾದರೂ ಇದರ ಭಾಷೆ ಕನ್ನಡ. ತನ್ನ ರಾಜಧಾನಿಯಾದ ದೋರಸಮುದ್ರದಲ್ಲಿ ಈ ಅರಸ ಬಹುಶಃ ಕಟ್ಟಿಸಿದ್ದ ದೇಹಾರದ (ದೇಗುಲದ) ಗಯವ್ರಜನ ಮಠವನ್ನು ಆಚಾರ್ಯನಾದ ಪದ್ಮನಾಭ ಚಟ್ಟೋಪಾಧ್ಯಾಯರ ಮಗ ಅಪ್ಪಣ್ಣನು ಗಯೆಯಲ್ಲಿ ಮಾಡಿಸಿ ದೇವಋಣಗಳನ್ನು ಕಳೆದನೆಂದು ಶಾಸನ ಹೇಳಿದೆ. ಆತ ಆ ಸ್ಥಳದಲ್ಲಿ ಧರ್ಮಶಾಲೆಯೊಂದನ್ನು ಕಟ್ಟಿಸಿರಬಹುದೆಂದು ಇದರಿಂದ ಸೂಚಿತವಾಗುತ್ತದೆ. ಶಾಸನದ ಕಾಲ ಪ್ರ.ಶ. 1291ರ ಸೆಪ್ಟೆಂಬರ್ 24 ಆಗಿರಬಹುದು. ಈ ಶಾಸನದ ಕೆಳಗಡೆ ಕನ್ನಡ ಲಿಪಿಯ ಇನ್ನೊಂದು ಶಾಸನವಿದೆ. ಇದರ ಕಡೆಯ ಭಾಗ ಒಡೆದಿದೆ. ವೀರನರಸಿಂಹ ದೇವರಸರ ಕಮ್ಮಟದ (ನಾಣ್ಯಗಳನ್ನು ಅಚ್ಚು ಹಾಕುವ ಟಂಕಸಾಲೆಯ) ಜಕ್ಕಂಣನ ಮಗ ದೇವಂಣ ಇದೇ ವರ್ಷದ ಸೆಪ್ಟೆಂಬರ್ 24ರಂದು ಗಯ ಪ್ರವೇಶ ಮಾಡಿದನೆಂದು ಶಾಸನ ಹೇಳುತ್ತದೆ. ಈ ಎರಡೂ ಶಾಸನಗಳನ್ನು ಕೊರೆದವನು ದೇವರಸನೆಂದು ತೋರುತ್ತದೆ.

ಗದಾಧರ ಗುಡಿಯ ಮುಂದೆ ಗದಾಧರ ಘಾಟಿನ ಬಲಗೋಡೆಗೆ ಸೇರಿಸಲಾದ ಕಲ್ಲೊಂದರಲ್ಲಿ ವಿಜಯನಗರದ ಕೃಷ್ಣದೇವರಾಯನ 1521ರ ಶಾಸನವಿದೆ. ತೆಲುಗುಲಿಪಿ ಹಾಗೂ ಭಾಷೆಯ ಈ ಶಾಸನದಲ್ಲಿ ತೆಲುಗಿನ ಸುಪ್ರಸಿದ್ಧ ಸಮಕಾಲೀನ ಕವಿಯಾದ ಮುಕ್ಕುತಿಮ್ಮಯನ (ತಿಮ್ಮಣ) ಪಾರಿಜಾತಾಪಹರಣದಿಂದ ಆರಿಸಲಾದ ಪದ್ಯವೊಂದಿದೆ. ಶಾಸನವನ್ನು ವಿಜಯ ಶಾಸನವೆಂದು ಕರೆದಿರುವುದರಿಂದ ಕೃಷ್ಣದೇವರಾಯ ತನ್ನ ಉತ್ತರ ದಿಗ್ವಿಜಯದ ಸಂದರ್ಭದಲ್ಲಿ ಗಯೆಯವರೆಗೂ ಬಂದು ಈ ಪ್ರದೇಶವನ್ನು ಸ್ವಲ್ಪಕಾಲದ ಮಟ್ಟಿಗಾದರೂ ಆಕ್ರಮಿಸಿದ್ದನೆಂದು ಒಂದಿಬ್ಬರು ವಿದ್ವಾಂಸರು ಊಹಿಸಿದ್ದಾರಾದರೂ ಇದು ಒಂದು ಧರ್ಮಶಾಸನವೇ ಹೊರತು ವಿಜಯಶಾಸನವಲ್ಲ. ಈ ಶಾಸನದ ಕರ್ತೃ ಸಹ ಮುಕ್ಕುತಿಮ್ಮಯನೇ. ಇವನ ಹೆಸರು ಬೇರೆ ಯಾವ ಶಾಸನಗಳಲ್ಲೂ ಉಲ್ಲೇಖವಾದಂತೆ ಇದುವರೆಗೂ ಕಂಡುಬಂದಿಲ್ಲ. ಅಂತೆಯೇ ಇವನ ಕಾವ್ಯದಿಂದ ಉದ್ಧರಿಸಲಾದ

ತಿರುಮಲದೇವೀವಲ್ಲಭ
ಕರುಣಾಮಯಹೃದಯ ರಾಜಕಂಠೀರವ ಈ
ಶ್ವರನರಸ ಭೂಪುರಂದರ
ವರನಂದನ ಬಾಸದಪ್ಪುವರ ಗಂಡ್ಡಾಂಕಾ

ಎಂಬ ಕಂದವೃತ್ತದ ಪದ್ಯ ಸಹ. ತಿಮ್ಮಣನ ಪಾರಿಜಾತಾಪಹರಣ 1521ಕ್ಕೂ ಮೊದಲೇ ರಚಿತವಾಗಿತ್ತೆಂಬ ಅಂಶ ಈ ಶಾಸನದಿಂದ ತಿಳಿದುಬರುತ್ತದೆ. ಕವಿ ತನ್ನ ಆಶ್ರಯದಾತನ ಪ್ರತಿನಿಧಿಯಾಗಿ ಗಯೆಗೆ ಬಂದು, ಆ ಸಂದರ್ಭದಲ್ಲಿ ಈ ಶಾಸನವನ್ನು ಕೆತ್ತಿಸಿದನೆಂದು ಊಹಿಸಲಾಗಿದೆ.


ಮಹಾದೇವ ಗುಡಿಯಲ್ಲಿರುವ ಇನ್ನೊಂದು ಶಾಸನ ವಿಜಯನಗರದ ಅರಸನಾದ ಅಚ್ಯುತರಾಯನದು. 1531ರ ಈ ತೆಲುಗು ಶಾಸನದಲ್ಲಿ ತಿಮ್ಮಣ್ಣನೆಂಬವನು ವಿಜಯನಗರ ಸಿಂಹಾಸನ ಕರ್ತರನ್ನು ಗಯಮುಕ್ತರನ್ನಾಗಿ ಮಾಡಿದನೆಂದು ಹೇಳಿದೆ. ಇದರಲ್ಲಿ ಅಚ್ಯುತರಾಯನವಂಶಾವಳಿ ಅವನ ಮುತ್ತಜ್ಜನಿಂದ ಆರಂಭವಾಗಿದೆ. ತಿಮ್ಮಯ, ಈಶ್ವರ ಮತ್ತು ನಾರಸಿಂಹರನ್ನು ಹೆಸರಿಸಿ ಅನಂತರ ಇದು ಮಂಡಲೇಶ್ವರ ಶ್ರೀವೀರ ಅಚ್ಯುತರಾಯ ಮಹಾರಾಯರ ಧರ್ಮಶಾಸನವೆಂದು ಹೇಳಿದೆ. **(ಜಿ.ಬಿ.ಆರ್.)**

**ಗಯಾನ :** ದಕ್ಷಿಣ ಅಮೆರಿಕದ ಒಂದು ಗಣರಾಜ್ಯ. ಉತ್ತರದಲ್ಲಿ ಅಟ್ಲಾಂಟಿಕ್ ಸಾಗರ, ಪೂರ್ವದಲ್ಲಿ ಸುರಿನಾಂ, ದಕ್ಷಿಣ ನೈರುತ್ಯಗಳಲ್ಲಿ ಬ್ರೆಜಿಲ್, ಪಶ್ಚಿಮದಲ್ಲಿ ವೆನಿಜುವೇಲ – ಇವು ಇದರ ಮೇರೆಗಳು. ವಿಸ್ತೀರ್ಣ 214, 969 ಚ.ಕಿಮೀ. ಜನಸಂಖ್ಯೆ 7,62,000 (20 ಸು.). ರಾಜಧಾನಿ ಜಾರ್ಜ್‌ಟೌನ್.

**ಭೌತಲಕ್ಷಣ, ವಾಯುಗುಣ, ಜನಜೀವನ** : 432 ಕಿಮೀ. ಉದ್ದದ ಕಡಲ ಕರೆ ಇರುವ ಈ ದೇಶದ ಕರಾವಳಿ ತಗ್ಗಿನ ಮೈದಾನ. ದಕ್ಷಿಣ ಭಾಗ ಪ್ರಸ್ಥಭೂಮಿ ಪರ್ವತಗಳಿಂದ ಕೂಡಿದೆ. ಕರಾವಳಿಯ ಮೈದಾನದ ವಿಸ್ತೀರ್ಣ 6,250 ಚಮೈ. ಇದರಲ್ಲಿ ಸು. 700ಕಿಮೀ ಪ್ರದೇಶ ಸಾಗುವಳಿಗೆ ಒಳಪಟ್ಟಿದೆ. ಜನಸಂಖ್ಯೆಯ ಬಹುಭಾಗ ವಾಸಿಸುವುದು ಕರಾವಳಿಯ ಮೈದಾನದಲ್ಲಿ. ದೇಶದ ಶೇ. 85 ಭಾಗ ಕಾಡಿನಿಂದ ಆವೃತವಾಗಿದೆ. ಪೂರ್ವ ಆಗ್ನೇಯಗಳ ಕಾಡು ಈಗಲೂ ಬಹಳ ಮಟ್ಟಿಗೆ ನಿರ್ಜನವಾಗಿದೆ, ಜನಕ್ಕೆ ಅಪರಿಚಿತವಾಗಿದೆ. ಕರಾವಳಿಯ ಪ್ರದೇಶದ ವಾಯುಗುಣ ಉಳಿದ ಭಾಗದದಕ್ಕಿಂತ ಹಿತಕರ. ಏಪ್ರಿಲ್‌ನಿಂದ ಆಗಸ್ಟ್‌ವರೆಗೆ ಹೆಚ್ಚು ಮಳೆ. ಸೆಪ್ಟೆಂಬರ್–ನವೆಂಬರ್‌ಗಳಲ್ಲಿ ಒಣ ಹವೆ. ಒಳನಾಡಿನಲ್ಲಿ ಫೆಬ್ರುವರಿಯ ವರೆಗೂ ಒಣಹವೆ ಇರುತ್ತದೆ. ಸರಾಸರಿ ಉಷ್ಣತೆ 80° ಫ್ಯಾ.

ಗಯಾನದ ಆರ್ಥಿಕತೆ ಕೃಷಿಪ್ರಧಾನವಾದ್ದು, ಕಬ್ಬು, ಬತ್ತ ಮುಖ್ಯ ಬೆಳೆಗಳು. ಬಾಳೆ ಮುಖ್ಯ ನಿರ್ಯಾತ ಬೆಳೆ. ತೆಂಗೂ ಬೆಳೆಯುತ್ತದೆ. ಕಿತ್ತಳೆ ಜಾತಿಯ ಗಿಡಗಳ ವ್ಯವಸಾಯ ಅಧಿಕವಾಗುತ್ತಿದೆ. ಅರಣ್ಯೋತ್ಪನ್ನ ಮುಖ್ಯ ವರಮಾನ ಮೂಲವಾದರೂ ಸಾರಿಗೆ ಸೌಲಭ್ಯಕ್ಕೆ ಪರಿಮಿತವಾಗಿದೆ. ಬಾಕ್ಸೈಟ್, ಚಿನ್ನ, ವಜ್ರ, ತಾಮ್ರ, ಮಾಲಿಬ್ಡಿನಂ–ಇವು ಮುಖ್ಯ ಖನಿಜ ನಿಕ್ಷೇಪಗಳು. 1966ರಲ್ಲಿ ಏಳು ವರ್ಷಗಳ ಅಭಿವೃದ್ಧಿ ಯೋಜನೆಯೊಂದು ಜಾರಿಗೆ ಬಂತು. ಇದರ ವೆಚ್ಚ 30 ಕೋಟಿ ಡಾಲರ್. ಶೇ. 5–6 ವಾರ್ಷಿಕದರದಲ್ಲಿ ಆರ್ಥಿಕ ಬೆಳವಣಿಗೆ ಸಾಧಿಸಬೇಕೆಂಬುದು ಈ ಯೋಜನೆಯ ಉದ್ದೇಶ. ಜಲವಿದ್ಯುತ್ ಕಾಮಗಾರಿಗಳ ಬಗ್ಗೆ ಸಂಶೋಧನೆ ನಡೆಸಲಾಗಿದೆ. ಸಕ್ಕರೆ, ಅಕ್ಕಿ, ಬಾಕ್ಸೈಟ್ ನಿರ್ಯಾತವನ್ನೇ ದೇಶ ಅವಲಂಬಿಸಬೇಕಾಗಿ ಬಂದಿರುವ ಪರಿಸ್ಥಿತಿಯನ್ನು ತಪ್ಪಿಸಲು ಅಲ್ಯೂಮಿನಿಯಂ ಮುಂತಾದ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ.

ತೀರ ಪ್ರದೇಶದಲ್ಲಿ ರಸ್ತೆ ವ್ಯವಸ್ಥೆ ಅಭಿವೃದ್ಧಿಹೊಂದಿದೆ. ಒಟ್ಟು 128 ಕಿಮೀ ದೂರದ ಎರಡು ರೈಲುಮಾರ್ಗಗಳಿವೆ. ಇವು ಸರ್ಕಾರಿ ಒಡೆತನದಲ್ಲಿವೆ. ದಮ್ಮಸು ಮಾಡಿದ ರಸ್ತೆಯ ಉದ್ದ 383 ಕಿಮೀ ಒಟ್ಟು 1760 ಕಿಮೀ ರಸ್ತೆಗಳುಂಟು. ಜಾರ್ಜ್ ಟೌನ್‌ನಿಂದ ಬಾಕ್ಸೈಟ್ ಗಣಿಕೇಂದ್ರವಾದ ಮಕೆನ್‌ಜಿಗೆ 1968ರಲ್ಲಿ ಬಿಟ್ಯೂಮಿನಸ್ ರಸ್ತೆ ನಿರ್ಮಿಸಲಾಯಿತು. ಒಳನಾಡಿನಲ್ಲಿ ನದಿಗಳೇ ಈಗಲೂ ಮುಖ್ಯ ಸಂಪರ್ಕ ಸಾಧನಗಳು. ಮ್ಯಾಜರೂನಿ, ಕೂಯೂನಿ, ಎಸೆಕ್ವೀಬೋ, ಡೆಮೆರೇರ, ಬರ್ಬೀಸ್–ಇವು ಈ ದೃಷ್ಟಿಯಿಂದ ಉಪಯುಕ್ತವಾದ ನದಿಗಳು. ಒಳನಾಡಿನ ಮುಖ್ಯ ವಸತಿಗಳಲ್ಲಿ ವಿಮಾನ ಇಳಿದಾಣಗಳುಂಟು. ಆಟ್ಕಿನ್ಸನ್ ಫೀಲ್ಡ್‌ನಲ್ಲಿ 1968ರಲ್ಲಿ ವಿಮಾನ ನಿಲ್ದಾಣವೊಂದು ನಿರ್ಮಿತವಾಯಿತು.




ಜಾರ್ಜ್‌ಟೌನ್ ರಾಜಧಾನಿ. ಮಕೆನ್‌ಜಿ, ನ್ಯೂ ಆಮ್ಸ್ಟರ್ಡಾಂ ಇತರ ಪಟ್ಟಣಗಳು. ದೇಶದ ಜನಸಂಖ್ಯೆಯ ಅರ್ಧಕ್ಕಿಂತ ಹೆಚ್ಚು ಮಂದಿ ಈಸ್ಟ್ ಇಂಡಿಯನರು. ಅನಂತರ ಬರುವವರು ಆಫ್ರಿಕನರು. ಮಿಶ್ರಬುಡಕಟ್ಟಿನವರೂ ಪೋರ್ಚುಗೀಸರೂ ಚೀನೀಯರೂ ಐರೋಪ್ಯರೂ ಅಮೆರಿಂಡಿಯನರೂ ಇದ್ದಾರೆ. ಕ್ರೈಸ್ತ, ಹಿಂದೂ, ಇಸ್ಲಾಂ ಮುಖ್ಯ ಧರ್ಮಗಳು.

5ರಿಂದ 16ನೆಯ ವಯಸ್ಸಿನವರೆಗೆ ಶಿಕ್ಷಣ ಉಚಿತ; 6ರಿಂದ 14ನೆಯ ವಯಸ್ಸಿನವರೆಗೆ ಕಡ್ಡಾಯ, ಶೇ. 80–85ರಷ್ಟು ಜನ ಅಕ್ಷರಸ್ಥರು. ಜಾರ್ಜ್‌ಟೌನಿನಲ್ಲಿ ಗಯಾನ ವಿಶ್ವವಿದ್ಯಾಲಯವಿದೆ. ದೇಶದ ನಾಣ್ಯ ಗಯಾನನ್ ಡಾಲರ್, ಕ್ರಿಕೆಟ್ ಆಟ ಅತ್ಯಂತ ಜನಪ್ರಿಯ. ಹಾಕಿ, ಬ್ಯಾಸ್ಕೆಟ್‌ಬಾಲ್, ಟೇಬಲ್ ಟೆನಿಸ್, ಲಾನ್ ಟೆನಿಸ್, ಫುಟ್‌ಬಾಲ್ ಇತರ ಕ್ರೀಡೆಗಳು.

**ಆಡಳಿತ**: 1970ರ ಫೆಬ್ರುವರಿಯಿಂದ ಗಯಾನ ಗಣರಾಜ್ಯವಾಗಿದೆ. ಅಧ್ಯಕ್ಷನಿಂದ ನೇಮಕವಾದ ಮಂತ್ರಿ ಸಂಪುಟಕ್ಕೆ ಪ್ರಧಾನ ಮಂತ್ರಿಯೇ ಮುಖ್ಯ. ಇದು ದ್ವಿಸದನ ಸಂಸತ್ತಿನ ಜವಾಬ್ದಾರಿ ಹೊಂದಿದೆ. ರಾಷ್ಟ್ರೀಯ ಸಭೆಯ ಸದಸ್ಯ ಸಂಖ್ಯೆ 53. ನಾಲ್ಕು ವರ್ಷಗಳಿಗೊಮ್ಮೆ ಚುನಾವಣೆ ನಡೆಯುತ್ತದೆ. ಆಡಳಿತಸೌಲಭ್ಯಕ್ಕಾಗಿ ದೇಶವನ್ನು ಒಂಬತ್ತು ಜಿಲ್ಲೆಗಳಾಗಿ ವಿಂಗಡಿಸಲಾಗಿದೆ. ಇಂಗ್ಲಿಷ್ ಅಧಿಕೃತ ಭಾಷೆ. ಇಂಡಿಯನ್ ಭಾಷೆಗಳೂ ಜಾರಿಯಲ್ಲಿವೆ.

*

**ಇತಿಹಾಸ** : ಗಯಾನ ಮೊದಲು ಬ್ರಿಟಿಷ್ ಗಯಾನವಾಗಿತ್ತು. 18ನೆಯ ಶತಮಾನದ ಆದಿಯಲ್ಲಿ ಈ ಪ್ರದೇಶದಲ್ಲಿ ಬ್ರಿಟಿಷರ ವಶದಲ್ಲಿದ್ದ ವಸಾಹತುಗಳಾದ ಬರ್ಬೀಸ್, ಎಸೆಕ್ವೀಬೋ, ಡೆಮೆರೇರ–ಈ ಮೂರನ್ನೂ ಅವರು 1831ರಲ್ಲಿ ಸೇರಿಸಿ ಬ್ರಿಟಿಷ್ ಗಯಾನವನ್ನು ರಚಿಸಿದರು.

ಬ್ರಿಟಿಷ್ ಗಯಾನ ಉದಯವಾದ ಕಾಲದಿಂದಲೂ ಅಲ್ಲಿಯ ಆರ್ಥಿಕಾಭಿವೃದ್ಧಿಗೆ ಪರದೇಶದಿಂದ ಬಂದ ವಿವಿಧ ಜನಾಂಗಗಳವರು ದುಡಿದರು. ಮೊದಲಲ್ಲಿ ಗುಲಾಮರನ್ನು ಆಫ್ರಿಕದಿಂದ ತರಲಾಯಿತು. ಈ ನೀಗ್ರೋ ಗುಲಾಮರು ಬ್ರಿಟಿಷರಿಗೆ ಸೇರಿದ್ದ ಕಬ್ಬಿನ ತೋಟಗಳಲ್ಲಿ ದುಡಿಯಬೇಕಾಗಿತ್ತು. 1807ರಲ್ಲಿ ಬ್ರಿಟಿಷ್ ಸರ್ಕಾರ ಗುಲಾಮರ ವ್ಯಾಪಾರವನ್ನು ರದ್ದುಗೊಳಿಸಿತು. ಆ ವರ್ಷ ಬ್ರಿಟಿಷ್ ಗಯಾನದಲ್ಲಿ ಸುಮಾರು 10,000 ಗುಲಾಮರಿದ್ದರು. ಗುಲಾಮವ್ಯಾಪಾರ ನಿಂತರೂ ಗುಲಾಮಗಿರಿ ಹೋಗಲಿಲ್ಲ. ಕಡೆಗೆ 1839ರಲ್ಲಿ ಗುಲಾಮಗಿರಿಯೂ ಕೊನೆಗೊಂಡಿತು. 1900ರ ಹೊತ್ತಿಗೆ ಚಿನ್ನದ ಮತ್ತು ವಜ್ರದ ಗಣಿಗಳು ತಲೆಯೆತ್ತಿಕೊಂಡು ಆರ್ಥಿಕಾಭಿವೃದ್ಧಿಯಾಗಲು ಸಹಾಯಕವಾದವು.

1928ರವರೆಗೆ ವಸಾಹತುವಿನ ಒಳಾಡಳಿತದಲ್ಲಿ ಅಲ್ಲಿಯ ಜನರಿಗೆ ಬ್ರಿಟಿಷರು ಯಾವ ರೀತಿಯ ಸ್ವಾತಂತ್ರ್ಯವನ್ನಾಗಲಿ ಸೌಲಭ್ಯವನ್ನಾಗಲಿ ಕೊಟ್ಟಿರಲಿಲ್ಲ. 1928ರಲ್ಲಿ ಪರಿಮಿತ ಪ್ರತಿನಿಧಿ ಸರ್ಕಾರವೊಂದನ್ನು ಬ್ರಿಟಿಷರು ಸ್ಥಾಪಿಸಿದರು. 1943ರಲ್ಲಿ ಮತ್ತು 1945ರಲ್ಲಿ ಮತ್ತಷ್ಟು ಸುಧಾರಣೆಗಳನ್ನು ಜಾರಿಗೆ ತರಲಾಯಿತು.

1953–57ರ ಅವಧಿಯಲ್ಲಿ ಬ್ರಿಟಿಷರು ಇನ್ನೂ ಮುಂದೆ ಹೋಗಿ ಅಲ್ಲಿಯ ಜನರಿಗೆ ಒಂದು ಸಂವಿಧಾನವನ್ನು ನೀಡಿದರು. ಇದರ ಪ್ರಕಾರ, ದ್ವಿಸದನ ವಿಧಾನ ಮಂಡಲವನ್ನು ರಚಿಸಲಾಯಿತು. ಅಲ್ಲದೆ ದೇಶದ ಮಂತ್ರಿಗಳು ಶಾಸಕಾಂಗಕ್ಕೆ ಅಧೀನರಾಗಿ, ಅದಕ್ಕೆ ಜವಾಬ್ದಾರಿಯುಳ್ಳವರಾಗಿರಬೇಕೆಂಬ ನಿಯಮವನ್ನು ಜಾರಿಗೆ ತರಲಾಯಿತು. ಸಾರ್ವತ್ರಿಕ ಚುನಾವಣೆಯಲ್ಲಿ ವಯಸ್ಕರ ಮತದಾನಪದ್ಧತಿಯನ್ನು ಬ್ರಿಟಿಷರು ಜಾರಿಗೆ ತಂದರು. ಶಾಸಕಾಂಗಕ್ಕೆ ಹೊಸ ಸಂವಿಧಾನದ ಪ್ರಕಾರ ಚುನಾವಣೆಗಳು ನಡೆದವು. ಚೆಡ್ಡಿ ಜಗನ್ ನಾಯಕತ್ವದಲ್ಲಿ ಪೀಪಲ್ಸ್ ಪ್ರೋಗ್ರೆಸಿವ್ ಪಾರ್ಟಿ ಬಹುಮತ ಪಡೆದು ಸರ್ಕಾರ ರಚಿಸಿತು. ಕಮ್ಯೂನಿಸ್ಟರು ಬ್ರಿಟಿಷ್ ಗಯಾನದ ಸರ್ಕಾರವನ್ನು ಉರುಳಿಸಲು ಒಳಸಂಚನ್ನು ನಡೆಸುತ್ತಿರುವರೆಂಬ ನೆಪದ ಮೇಲೆ 6 ತಿಂಗಳುಗಳಲ್ಲೇ ಬ್ರಿಟಿಷರು ಸಂವಿಧಾನವನ್ನು ತಡೆಹಿಡಿಯಲು ಆಜ್ಞಾಪಿಸಿದರು. ಮಧ್ಯಂತರ ಸರ್ಕಾರವೊಂದನ್ನು ರಚಿಸಲಾಯಿತು.


1960ರಲ್ಲಿ ಬ್ರಿಟಿಷ್ ಗಯಾನದ ಜನತೆಯ ಸ್ವಾತಂತ್ರ್ಯದಾಹ ಅಧಿಕವಾಯಿತು. ಆ ವರ್ಷ ಸೇರಿದ ಸಂವಿಧಾನದ ಸಮ್ಮೇಳನದಲ್ಲಿ ಸ್ವಾತಂತ್ರ್ಯಕ್ಕೆ ತಾತ್ತ್ವಿಕವಾಗಿ ಸಮ್ಮತಿ ದೊರಕಿತು. ಸ್ವಾತಂತ್ರ್ಯಗಳಿಸಿದ ಮೇಲೆ ಗಯಾನ ಬ್ರಿಟಿಷ್ ಕಾಮನ್‌ವೆಲ್ತಿನಲ್ಲೇ ಅಧಿರಾಜ್ಯವಾಗಿ ಮುಂದುವರಿಯತಕ್ಕದ್ದೆಂಬುದು ಇದರ ತೀರ್ಮಾನ. ಮರುವರ್ಷವೇ, ಅಂದರೆ 1961ರಲ್ಲಿ, ಗಯಾನ ಒಳಾಡಳಿತದಲ್ಲಿ ಸಂಪೂರ್ಣ ಸ್ವಾತಂತ್ರ್ಯ ಪಡೆಯಿತು. ಹೊಸ ಸಂವಿಧಾನ ಜಾರಿಗೆ ಬಂದು, ಚುನಾವಣೆಗಳು ನಡೆದವು. ಚೆಡ್ಡಿ ಜಗನ್ ಗಯಾನದ ಪ್ರಧಾನಮಂತ್ರಿಯಾದರು.

1962–64ರ ನಡುವೆ ಪೀಪಲ್ಸ್ ಪ್ರೋಗ್ರೆಸಿವ್ ಪಕ್ಷಕ್ಕೂ, ನೀಗ್ರೋಗಳಿಂದ ಬೆಂಬಲಪಡೆದ ಪೀಪಲ್ಸ್ ನ್ಯಾಷನಲ್ ಕಾಂಗ್ರೆಸ್ ಪಕ್ಷಕ್ಕೂ ಸ್ಪರ್ಧೆ ಏರ್ಪಟ್ಟಿತು. ಇದು ಹಿಂಸಾತ್ಮಕ ಚಳವಳಿಯಲ್ಲಿ ಮುಕ್ತಾಯಗೊಂಡಾಗ, ಗಯಾನದ ಎಲ್ಲ ಪಕ್ಷಗಳೂ ಸೇರಿಕೊಂಡು, ಎಲ್ಲರಿಗೂ ಒಪ್ಪಿಗೆಯಾಗುವಂತೆ, ಸಂಯುಕ್ತರಂಗವೊಂದನ್ನು ಸ್ಥಾಪಿಸಿ, ಮಂತ್ರಿಮಂಡಲವನ್ನು ಅಸ್ತಿತ್ವಕ್ಕೆ ತಂದವು. ಈ ಸರ್ಕಾರದ ಮುಖಂಡರಾಗಿ ಪೀಪಲ್ಸ್ ನ್ಯಾಷನಲ್ ಕಾಂಗ್ರೆಸ್ ಪಕ್ಷದ ಫೋರ್ಬ್ಸ್ ಬರ್ನ್‌ಹ್ಯಾಂ ಆಯ್ಕೆಗೊಂಡರು. ಈ ಮಧ್ಯೆ ಕೋಮುಗಲಭೆಗಳು ಮತ್ತೆ ಸಂಭವಿಸಿದಾಗ ಸರ್ಕಾರ ತುರ್ತುಪರಿಸ್ಥಿತಿಯನ್ನು ಘೋಷಿಸಿ, ಬ್ರಿಟಿಷ್ ಸೇನೆಯ ನೆರವಿನಿಂದ ಪರಿಸ್ಥಿತಿಯನ್ನು ಹತೋಟಿಗೆ ತಂದಿತು.

1966ರಲ್ಲಿ ಗಯಾನ ಅಧಿರಾಜ್ಯವಾಯಿತು. 1968ರ ಸಾರ್ವತ್ರಿಕ ಚುನಾವಣೆಯಲ್ಲಿ ಬರ್ನ್‌ಹ್ಯಾಮರ ಪೀಪಲ್ಸ್ ನ್ಯಾಷನಲ್ ಕಾಂಗ್ರೆಸ್ ಪಕ್ಷ ಬಹುಮತಗಳಿಸಿ ಬರ್ನ್‌ಹ್ಯಾಂ ಮತ್ತೆ ಪ್ರಧಾನಿಯಾದರು. 1970ರ ಫೆಬ್ರುವರಿ 23 ರಂದು ಗಯಾನ ಗಣರಾಜ್ಯವಾಯಿತು. ಬರ್ನ್‌ಹ್ಯಾಂ 1980ರ ವರೆಗೆ ಪ್ರಧಾನಿಯಾಗಿದ್ದರು. ಇವರು ಅಧ್ಯಕ್ಷರಿಗೆ ಹೆಚ್ಚಿನ ಅಧಿಕಾರ ಹೊಂದಿರಬೇಕೆಂದು 1980ರಲ್ಲಿ ಒಂದು ಚಳವಳಿ ನಡೆಸಿ ಅಧ್ಯಕ್ಷ ಪದ್ಧತಿಯನ್ನು ತಂದು 1985ರಲ್ಲಿ ಅವರೇ ನಿಧನರಾಗುವ ತನಕ ಅಧ್ಯಕ್ಷರಾಗಿ ಅಧಿಕಾರದಲ್ಲಿದ್ದರು. 1997ರಲ್ಲಿ ನಡೆದ ಚುನಾವಣೆಯಲ್ಲಿ ಚೆಡ್ಡಿಜಗನ್‌ರವರ ಪತ್ನಿ ಜನೆಟ್ ಜಗನ್ ಅಧ್ಯಕ್ಷೆಯಾದರು.

1999 ಜನೆಟ್ ಜಗನ್ ತಮ್ಮ ದೇಹಸ್ಥಿತಿಯ ಕಾರಣದಿಂದ ಅಧ್ಯಕ್ಷೆ ಹುದ್ದೆಗೆ ರಾಜೀನಾಮೆ ಕೊಟ್ಟರು. ಆಗ ಪ್ರಧಾನ ಮಂತ್ರಿಯಾಗಿದ್ದ ಭರತ್ ಜಗದೇವ್ ಅಧ್ಯಕ್ಷರಾದರು. (ಎಸ್.ಕೆ.ಎಸ್.)

**ಗರಗಸ ಮೀನು** : ಪ್ರಪಂಚದ ಉಷ್ಣವಲಯ ಸಾಗರಗಳಲ್ಲಿ ಕಾಣಸಿಗುವ ಒಂದು ಬಗೆಯ ಮೃದ್ವಸ್ಥಿ ಮೀನು (ಸಾ ಫಿಶ್). ಶಾರ್ಕ್, ರೇ, ಸ್ಕೇಟ್ ಮೀನುಗಳ ವರ್ಗದಲ್ಲಿ ಸ್ಕ್ವಾಲಿಫಾರ್ಮಿಸ್ ಗಣದ ಪ್ರಿಸ್ಟಿಡೆ ಕುಟುಂಬದ ಮೀನು. ಇದರ ಶಾಸ್ತ್ರೀಯ ಹೆಸರು ಪ್ರಿಸ್ಟಿಸ್. ಅಕ್ಕ ಪಕ್ಕದಲ್ಲಿ ಚೂಪಾದ ಹಲ್ಲುಗಳಿರುವ ಮತ್ತು ಬಲು ಉದ್ದವಾಗಿರುವ ಗರಗಸ ದಂಥ ಮೂತಿಯಿರುವುದರಿಂದ ಇದಕ್ಕೆ ಈ ಹೆಸರು. ಇದರಲ್ಲಿ ಆರು ಪ್ರಭೇಧಗಳಿವೆ. ಇವುಗಳಲ್ಲಿ ಅಮೆರಿಕದ ಆಗ್ನೇಯ ಹಾಗೂ ಗಲ್ಫ್ ತೀರ ಪ್ರದೇಶಗಳಲ್ಲಿ ಕಾಣಬರುವ ಪೆಕ್ಟಿನೇಟಸ್ ಪ್ರಭೇದ, ಮೆಡಿಟರೇನಿಯನ್ ಮತ್ತು ಅಟ್ಲಾಂಟಿಕ್ ಸಾಗರಗಳಲ್ಲಿ



ಕಾಣಬರುವ ಆಂಟಿಕೋರಮ್ ಪ್ರಭೇದ ಮತ್ತು ಭಾರತದ ತೀರ ಪ್ರದೇಶಗಳಲ್ಲಿ ಸಿಕ್ಕುವ ಕಸ್ಪಿಡೇಟಸ್ ಮತ್ತು ಮೈಕ್ರೋಡಾನ್ ಪ್ರಭೇದಗಳು ಪ್ರಮುಖವಾದವು.

ಗರಗಸ ಮೀನುಗಳು ತೀರಕ್ಕೆ ಸಮೀಪದಲ್ಲಿ ಮತ್ತು ಅಳಿವೆಗಳಲ್ಲಿ ಜೀವಿಸುವುವು. ಅನೇಕ ಸಂದರ್ಭದಲ್ಲಿ ನದಿಗಳಲ್ಲಿ ಒಳನಾಡಿಗೂ ಹಲವಾರು ಮೈಲಿಗಳಷ್ಟು ದೂರ ಬರುವುದೂ ಉಂಟು. ಇದು ಸು. 6.1 ಮೀ ಗಳವರೆಗೆ ಬೆಳೆಯುತ್ತದೆ. ದೇಹರಚನೆಯಲ್ಲಿ ಶಾರ್ಕ್ ಮೀನನ್ನು ಹೋಲುತ್ತದಾದರೂ ಇದು ರೇ ಮೀನುಗಳ ಹತ್ತಿರದ ಸಂಬಂಧಿ ಅಂದರೆ ಕಿವಿರು ದ್ವಾರಗಳು ದೇಹದ ತಳ ಭಾಗದಲ್ಲಿರುತ್ತವೆ. (ಶಾರ್ಕ್ ಮೀನುಗಳಲ್ಲಿ ಕಿವಿರು ದ್ವಾರಗಳು ದೇಹದ ಪಾರ್ಶ್ವದಲ್ಲಿರುತ್ತವೆ). ಅಗಲವಾದ ಎದೆಯ ಈಜುರೆಕ್ಕೆಗಳು, ಎರಡು ಬೆನ್ನಿನ ಈಜುರೆಕ್ಕೆಗಳು, ಬಾಲದ ಈಜುರೆಕ್ಕೆ, ಗರಗಸದಂತಹ ಮೂತಿ, ತಲೆಯ ಕೆಳಭಾಗದಲ್ಲಿನ ಅರ್ಧಚಂದ್ರಾಕೃತಿಯ ಬಾಯಿ, ಬಾಲದ ಆಚೀಚೆ ದೋಣಿಯ ಆಕಾರದ ಚರ್ಮದ ಮಡಿಕೆ–ಇವು ಗರಗಸ ಮೀನಿನ ಬಾಹ್ಯ ಲಕ್ಷಣಗಳು. ಮೂತಿ ಚಪ್ಪಟೆಯಾಗಿ ಬಲು ಉದ್ದವಾಗಿರುತ್ತದೆ; ಕೆಲವು ಮೀನುಗಳಲ್ಲಿ ಸು. 1.8ಮೀ ಉದ್ದವಿರುತ್ತದೆ. ಅದರ ಒಂದೊಂದು ಅಲುಗಿನಲ್ಲಿ ಚೂಪಾದ ಸುಮಾರು 22–32 ಹಲ್ಲುಗಳಿರುತ್ತವೆ. ಸಾಗರತಳವನ್ನು ಹೆಕ್ಕಿ ಅದರೊಳಗಿರುವ ಹಲವಾರು ಬಗೆಯ ಪ್ರಾಣಿಗಳನ್ನು ತಿನ್ನಲು ಈ ಗರಗಸವನ್ನು ಬಳಸುತ್ತದೆ. ಅಲ್ಲದೆ ಚಲಿಸುವಾಗ ಸಣ್ಣ ಮೀನುಗಳ ಗುಂಪಿನಲ್ಲಿ ಮಧ್ಯೆ ನುಗ್ಗಿ ಗರಗಸ ವನ್ನು ಅತ್ತಿತ್ತ ಬಲವಾಗಿ ಆಡಿಸಿ ಕೆಲವು ಮೀನುಗಳು ಇದರ ಹೊಡೆತಕ್ಕೆ ಸಿಕ್ಕಿ ಸಾಯುವಂತೆ ಮಾಡಿ ತಿನ್ನುವುದೂ ಉಂಟು. ಗರಗಸ ಮೀನು ಜರಾಯುಜ ಪ್ರಾಣಿ. ಹುಟ್ಟುವ ಮುನ್ನವೇ ಮರಿಗಳಿಗೆ ಗರಗಸವಿರುವುದಾದರೂ ಅದು ಬಲು ಮೃದುವಾಗಿಯೂ ಒಂದು ಬಗೆಯ ಹೊದಿಕೆಯಿಂದ ಆವೃತವಾಗಿರುವುದರಿಂದ ತಾಯಿಯ ಹೊಟ್ಟೆಯಲ್ಲಿರುವಾಗ ಅಲ್ಲಿನ ಅಂಗಾಂಶಗಳಿಗೆ ಹಾನಿಯಾಗುವ ಸಂಭವವಿರುವುದಿಲ್ಲ.

ಮಲೇಶಿಯಾ, ಇಂಡೋನೇಶಿಯಾ ಮತ್ತು ಚೀನಾಗಳಲ್ಲಿ ಗರಗಸ ಮೀನನ್ನು ತಿನ್ನುತ್ತಾರೆ. ಇದರ ಮಾಂಸ ಶಾರ್ಕ್ ಮೀನಿನ ಮಾಂಸದಷ್ಟೇ ರುಚಿ ಎಂದು ಹೇಳಲಾಗಿದೆ. ಅಲ್ಲದೆ ಈ ಮೀನಿನ ಚರ್ಮದಿಂದ ಕತ್ತಿಯ ಒರೆಯನ್ನು ಮಾಡುವುದಿದೆ. ಇದರ ಯಕೃತ್ತಿನಿಂದ ಎಣ್ಣೆಯನ್ನು ತೆಗೆಯುತ್ತಾರೆ. (ಎನ್.ವಿ.ಎ.)

**ಗರಡಿ** : ಕುಸ್ತಿ ಮೊದಲಾದ ಅಂಗಸಾಧನೆಗಳಿಗಾಗಿ ಗೊತ್ತಾದ ಸ್ಥಳ, ಆ ಸ್ಥಳವಿರುವ ಮನೆ. ಗರಡಿಗಾಗಿ ಮನೆ ಇರುವುದು ಹೆಚ್ಚಾಗಿ ದಕ್ಷಿಣ ಭಾರತದಲ್ಲೆ. ಉತ್ತರದವರು ಬಯಲಲ್ಲಿಯೇ ಕುಸ್ತಿ ಮುಂತಾದವನ್ನು ಅಭ್ಯಾಸ ಮಾಡುತ್ತಾರೆ. ಗರಡಿ ಮನೆಯೊಳಗೆ ಕುಸ್ತಿ ಕಲಿಯುವ ಸ್ಥಳಕ್ಕೆ ಮಟ್ಟಿ (ಮಣ್ಣು) ಎಂದೂ ಸ್ಪರ್ಧೆಯಲ್ಲಿ ಭಾಗವಹಿಸಿ ಕುಸ್ತಿ ಮಾಡುವ ಸ್ಥಳಕ್ಕೆ ಅಖಾಡ (ಕುಸ್ತಿಯ ಕಣ) ಎಂದೂ ಕರೆಯುತ್ತಾರೆ. ಗರಡಿ ಮಾಡುವುದು ಎಂದರೆ ಸಾಧನೆ ಮಾಡುವುದು, ವ್ಯಾಯಾಮ ಮಾಡುವುದು ಎಂಬುದಷ್ಟೇ ಅಲ್ಲದೆ ಕುಸ್ತಿ ಮಾಡುವುದು ಎಂಬ ಅರ್ಥವೂ ರೂಢಿಯಲ್ಲಿದೆ. ವಿರಾಟಪರ್ವದಲ್ಲಿ ಬರುವ ಮಲ್ಲಯುದ್ಧವನ್ನಿಲ್ಲಿ ನೆನೆಯಬಹುದು. ಹಿಂದಿನ ಕಾಲದಲ್ಲಿ ಕುಸ್ತಿ ಕಲೆಗೆ ಬಹಳ ಪ್ರೋತ್ಸಾಹವಿತ್ತು. ರಾಜಮಹಾರಾಜರುಗಳೇ ಈ ಕಲೆಯಲ್ಲಿ ಪರಿಣತಿ ಹೊಂದಿದ್ದರಲ್ಲದೆ ಪ್ರಖ್ಯಾತ ಪೈಲ್ವಾನರು (ಜಟ್ಟಿ)ಗಳನ್ನು ಸಾಕಿಕೊಂಡು ಈ ಕಲೆಗೆ ಪ್ರೋತ್ಸಾಹವೀಯುತ್ತಿದ್ದರು. ಸಂಗೊಳ್ಳಿ ರಾಯಣ್ಣ, ಮೈಸೂರಿನ ರಣಧೀರ ಕಂಠೀರವ ನರಸರಾಜ ಒಡೆಯರ್ ಮೊದಲಾದವರು ಈ ಕಲೆಯಲ್ಲಿ ಅಸಾಧಾರಣ ಚತುರತೆಯನ್ನು ಸಂಪಾದಿಸಿದ್ದರು. ರಣಧೀರ ಕಂಠೀರವ ನರಸಿಂಹರಾಜ ಒಡೆಯರು ಮಾರುವೇಷದಲ್ಲಿ ಹೋಗಿ ತಿರುಚನಾಪಳ್ಳಿ ಜಟ್ಟಿಯನ್ನು ಸೋಲಿಸಿದ ಕಥೆಯಂತೂ ಇತಿಹಾಸ ಪ್ರಸಿದ್ಧ. ಹಿಂದಿನ ಕಾಲದಲ್ಲಿ ಸೈನಿಕರಿಗೆ ಕಡ್ಡಾಯವಾಗಿ ಈ ಶಿಕ್ಷಣವನ್ನು ಕೊಡಲಾಗುತ್ತಿತ್ತು. ಮದಕರಿ ನಾಯಕರ ಕಾಲದಲ್ಲಿದ್ದ ಗರಡಿ ಮನೆಗಳನ್ನು ಚಿತ್ರದುರ್ಗದ ಕೋಟೆಯಲ್ಲಿ ನಾವು ಇಂದೂ ಕಾಣಬಹುದಾಗಿದೆ. ಹಳ್ಳಿಯಾದರೆ ಒಂದು, ಊರೆಂದರೆ ನಾಲ್ಕೈದು ಗರಡಿ ಮನೆಗಳಿದ್ದ ಕಾಲವೊಂದಿತ್ತು.



ಮಟ್ಟಿ ಪೂಜೆ

ಹಿಂದಿನ ಕಾಲದ ಗರಡಿ ಮನೆಗಳು ವಿಶಾಲವಾಗಿರದೆ ಚಿಕ್ಕವಾಗಿರುತ್ತಿದ್ದುವು. ದೂರದಿಂದ ನೋಡಿಯೇ ಸುಲಭವಾಗಿ ಅವನ್ನು ಪತ್ತೆಮಾಡಬಹುದಾಗಿತ್ತು. ಗರಡಿಯ ಹೊರ ಗೋಡೆಗಳ ಮೇಲೆ ಕೆಮ್ಮಣ್ಣಿನ ದೊಡ್ಡ ದೊಡ್ಡ ಹಾಗೂ ಉದ್ದುದ್ದವಾದ ಪಟ್ಟೆಗಳನ್ನು ಹಾಕಿರುತ್ತಿದ್ದರು. ಹಾಗೂ ಗರಡಿಯ ಮುಂದೆ ದಪ್ಪ ದಪ್ಪ ಕಲ್ಲುಗುಂಡುಗಳನ್ನು ಇಟ್ಟಿರುತ್ತಿದ್ದರು. ಬಾಗಿಲಿನಲ್ಲಿ ಗರುಡನ ಅಥವಾ ಹನುಮಂತನ ಚಿತ್ರಪಟವಿರುತ್ತಿತ್ತು. ಗರಡಿ ಮನೆಗಳಿಗೆ ಎಲ್ಲೋ ಒಂದು ಸಣ್ಣ ಕಿಟಕಿ ಇದ್ದರೆ ಅದೇ ಹೆಚ್ಚು. ಒಳಗಡೆ ಹೆಚ್ಚು ಗಾಳಿ, ಬೆಳಕು ಪ್ರವೇಶ ಮಾಡುತ್ತಿರಲಿಲ್ಲ. ಬಾಗಿಲು ಚಚ್ಚೌಕವಾಗಿದ್ದು ಸುಮಾರು 76 ಸೆಂ.ಮೀ ಅಗಲ ಹಾಗೂ 76 ಸೆಂ.ಮೀ ಎತ್ತರವಿರುತ್ತಿತ್ತು. ಆ ಮನೆಗೆ ಆ ಬಾಗಿಲು ತುಂಬ ಚಿಕ್ಕದೆಂದೇ ಹೇಳಬೇಕು. ಅಲ್ಲದೆ ಅದರ ದಪ್ಪ ಸು. 16 ಸೆಂ.ಮೀ ಇರುತ್ತಿತ್ತಾಗಿ ಅದನ್ನು ತಳ್ಳಿಕೊಂಡು ಒಳಗೆ ಹೋಗಬೇಕಾದರೆ ಸಾಕಷ್ಟು ಶಕ್ತಿ ಇರ ಬೇಕಾಗುತ್ತಿತ್ತು. ಈ ಬಾಗಿಲಿನ ಇನ್ನೊಂದು ವೈಶಿಷ್ಟ್ಯವೆಂದರೆ ಮುಂಭಾಗದಲ್ಲಿ ಬೀಗ ಹಾಕಿಕೊಳ್ಳಲು ಚಿಲಕವಿರುತ್ತಿರಲಿಲ್ಲ. ಆದರೆ ಒಳಗಡೆಯಿಂದ ಬಾಗಿಲನ್ನು ಹಾಕಿಕೊಳ್ಳಲು



ಮಟ್ಟಿಯಲ್ಲಿ ಹುಗಿದ ತೆಂಗಿನಕಾಯನ್ನು ಹುಡುಕುತ್ತಿರುವುದು

ಅಗಳಿ ಇರುತ್ತಿತ್ತು. ಸಾಧಾರಣವಾಗಿ ಒಂದೇ ಊರಿನಲ್ಲಿ 3, 4, ಗರಡಿ ಮನೆಗಳಿದ್ದು ಅವಕ್ಕೆಲ್ಲ ಹೆಸರಾಂತ ಉಸ್ತಾದರ ನಾಮಕರಣವಿರುತ್ತಿತ್ತು. ಅಲ್ಲದೆ ಒಂದು ಗರಡಿಯವರಿಗೂ ಇನ್ನೊಂದು ಗರಡಿಯವರಿಗೂ ಪೈಪೋಟಿಯಲ್ಲದೆ ವಿರೋಧವೂ ಇರುತ್ತಿತ್ತು. ಹೀಗೆ ವಿರೋಧವಿದ್ದುದರಿಂದಲೇ ಗರಡಿ ಮನೆಗಳಿಗೆ ಬಾಗಿಲಿನ ಮುಂಭಾಗದಲ್ಲಿ ಬೀಗ ಹಾಕಿಕೊಳ್ಳಲು ಚಿಲಕವಿರುತ್ತಿರಲಿಲ್ಲ. ಕಾರಣ ಗರಡಿ ಮನೆಯೊಳಗೆ ಸಾಧನೆ ನಡೆಸುವುದನ್ನು ಕಂಡರೆ ಆಗದವರು ಚಿಲಕ ಹಾಕಿ ಹೊರಟು ಬಿಟ್ಟರೆ ಒಳಗಡೆ ಇದ್ದವರು ಗಾಳಿ ಬೆಳಕು ಇಲ್ಲದೆ ಅಲ್ಲಿಯೇ ಸಾಯಬೇಕಾಗುತ್ತಿತ್ತು. ಸಾಧನೆ

ಮಾಡುವಾಗ ಉಸ್ತಾದ್ (ಗುರು) ತನ್ನ ಶಾಗಿರ್ದು (ಶಿಷ್ಯ) ಪೈಲ್ವಾನರುಗಳಿಗೆ ಹೇಳಿಕೊಡುವ ಡಾವುಗಳನ್ನು ಅವನ ಎದುರಾಳಿಗಳು ಯಾರಾದರೂ ಬಂದು ನೋಡಿಕೊಳ್ಳಬಹುದೆಂಬ ಕಾರಣದಿಂದ ಬಹುಶಃ ಒಳಗಡೆಯಿಂದ ಬಾಗಿಲನ್ನು ಹಾಕಿಕೊಳ್ಳಲು ಅಗಳಿ ಇರುತ್ತಿತ್ತು. ಗರಡಿ ಮನೆಯೊಳಗೆ ಪ್ರವೇಶ ಮಾಡಿದ್ದೇ ಆದರೆ ಗುಹೆಯೊಳಗೆ ಪ್ರವೇಶ ಮಾಡಿದ ಅನುಭವವಾಗುತ್ತಿತ್ತು. ಗರಡಿ ಮನೆಗಳು ಚಿಕ್ಕವಾಗಿದ್ದು ಗಾಳಿ ಬೆಳಕು ಪ್ರವೇಶ ಮಾಡದಂತಿದ್ದುದಕ್ಕೆ ಇನ್ನೊಂದು ಕಾರಣ, ಮೈ ಬೆವರು ಶೀಘ್ರವಾಗಿ ಹೊರಬೀಳಬೇಕೆಂಬುದೇ ಆಗಿತ್ತು. ಹೆಣ್ಣುಮಕ್ಕಳಾರೂ ಗರಡಿಮನೆಯನ್ನು ಪ್ರವೇಶಮಾಡಬಾರದು ಎಂಬ ನಿಯಮವಿತ್ತು. ಒಂದು ವೇಳೆ ಪ್ರವೇಶ ಮಾಡಿದರೆ ಅಂಥವರ ತಲೆಗೂದಲೆಲ್ಲ ಉದುರಿಹೋಗುತ್ತದೆ ಎಂಬ ನಂಬಿಕೆಯೂ ಇತ್ತು. ಬಹುಶಃ ಸಾಧನೆ ಮಡುವ ಪೈಲ್ವಾನನಿಗೆ ಹೆಂಗಸಿನ ದೃಷ್ಟಿ ತಗಲಬಾರದು. ಆತ ಆಕೆಯ ಬಲೆಗೆ ಬೀಳಬಾರದು ಎಂಬುವುದು ಈ ಕಟ್ಟಳೆಯ ಉದ್ದೇಶವೆಂದು ತೋರುತ್ತದೆ.

ಹಿಂದೆ ಗರಡಿ ಮನೆಗಳು ಹೊರಗಡೆಯಿಂದ ಬಂದ ಪೈಲ್ವಾನರುಗಳಿಗೆ ಇಳಿದುಕೊಳ್ಳುವ ವಸತಿಗೃಹಗಳೂ ಆಗಿದ್ದುವು. ಕೊಲ್ಹಾಪುರದ ಕಡೆಯ ಗರಡಿಮನೆಗಳಲ್ಲಿಯಂತೂ ವಸತಿ ಸೌಕರ್ಯದ ಜೊತೆ ಊಟದ ಸೌಕರ್ಯವೂ ಇರುತ್ತಿತ್ತು.

ಈಗೀಗ ಕಟ್ಟುತ್ತಿರುವ ಗರಡಿಗಳನ್ನು ವ್ಯಾಯಾಮಶಾಲೆಗಳು ಎಂದು ಕರೆಯುತ್ತಾರೆ. ಇವು ವಿಶಾಲವಾಗಿದ್ದು ಗಾಳಿ ಬೆಳಕು ಹೆಚ್ಚು ಬರುವಂತಿರುತ್ತದೆ. ವ್ಯಾಯಾಮ ಶಾಲೆಯ ಸುತ್ತಲೂ ಎತ್ತರವಾದ ನಿಲುಗನ್ನಡಿಗಳನ್ನು ನಿಲ್ಲಿಸಿರುತ್ತಾರೆ. ಹೀಗಿರುವುದರಿಂದ ಸಾಧನೆ ಮಾಡುವವರಿಗೆ ತಮ್ಮ ದೇಹದ ಅಂಗಾಂಗಗಳನ್ನು ಪೂರ್ಣವಾಗಿ ನೋಡಿಕೊಳ್ಳುವ ಅವಕಾಶವಿರುತ್ತದೆ. ಇಂಥ ವ್ಯಾಯಾಮಶಾಲೆಗಳಲ್ಲಿ ಕುಸ್ತಿಗಿಂತ ದೇಹದ ಅಂಗಸೌಷ್ಠವಕ್ಕೆ ಹೆಚ್ಚು ಪ್ರಾಧಾನ್ಯವಿರುತ್ತದೆ. ಮೈಸೂರು ಮತ್ತು ಮಹಾರಾಷ್ಟ್ರದಲ್ಲಿ ಸುವ್ಯವಸ್ಥಿತವಾದ ಗರಡಿಮನೆಗಳಿವೆ. ಈಗ ವ್ಯಾಯಾಮಶಾಲೆಗೆ ಹೋದರೆ ದೇಹದ ಅಂಗಾಂಗಗಳ ಕಾಂತಿಯನ್ನು ಹೆಚ್ಚಿಸಿಕೊಳ್ಳಲು ವ್ಯಾಯಾಮ ಮಾಡಿಕೊಂಡು ಬರಬಹುದು; ಕುಸ್ತಿ ಮಾಡಬೇಕೆಂಬ ನಿಯಮವೇನಿಲ್ಲ. ಅಂತೆಯೇ ಈಗಿನ ವ್ಯಾಯಾಮ ಶಾಲೆಗಳಲ್ಲಿ ದೇಹದ ಪ್ರತಿ ಅಂಗಾಂಗಗಳನ್ನು ಸುದೃಢವಾಗಿಸಲು ಬೇಕಾದ ವ್ಯಾಯಾಮ ಸಾಮಗ್ರಿಗಳನ್ನು ಕಾಣಬಹುದು.

**ಮಟ್ಟಿ :** ಗರಡಿಮನೆಯಲ್ಲಿ ಅತ್ಯಂತ ಪ್ರಧಾನವಾದ ಭಾಗವೆಂದರೆ ಮಟ್ಟಿ. ಅಂದರೆ ಕುಸ್ತಿ ಮಾಡುವ ಸ್ಥಳ. ಈ ಮಟ್ಟಿ ಕನಿಷ್ಠ ಪಕ್ಷ 4.27 ಮೀ ಇರುವ ಒಂದು ಚೌಕ. ಇಂಥ ಮಟ್ಟಿಯಲ್ಲಿ ಒಂದು ಜೊತೆ ಅಥವಾ ಎರಡು ಜೊತೆ ಜಟ್ಟಿಗಳು ಕುಸ್ತಿ ಮಾಡಬಹುದು. ಕುಸ್ತಿ ಮಾಡುವ ಸ್ಥಳವನ್ನು ಸು. 30.5 ಸೆಂ.ಮೀ ಆಳದವರೆಗೂ ಹುಡಿಮಣ್ಣಿನಿಂದ ತುಂಬಿರಬೇಕು. ಇದಕ್ಕೆ ಕೆಮ್ಮಣ್ಣು ಶ್ರೇಷ್ಠವೆಂದು ಹೇಳಲಾಗಿದೆ. ಉತ್ತಮದರ್ಜೆಯ ಮಣ್ಣನ್ನು ತುಂಬುವುದರಿಂದ ಚರ್ಮಕ್ಕೆ ತಗಲುವ ಅಪಾಯಗಳು ಕಡಿಮೆ. ಮಣ್ಣಿನಲ್ಲಿ ಸಣ್ಣ ಸಣ್ಣ ಮರಳು ಮತ್ತು ನುರುಜುಗಲ್ಲುಗಳಿಲ್ಲದಂತೆ ಮಾಡಲು ಮಣ್ಣನ್ನು ಜರಡಿ ಆಡಿಸಿರುತ್ತಾರೆ.

ಕೆಮ್ಮಣ್ಣು 100 ಚೀಲ, ಜೇಕಿನ ಗೆಡ್ಡೆಯ ಪುಡಿ 10 ಚೀಲ, ಕರ್ಪೂರ, ಕುಂಕುಮ ಸು. 9 ಕಿ.ಗ್ರಾಂಗಳು, ಟಿಂಕ್ಚರ್ ಸು. 20 ಕಿ.ಗ್ರಾಂ, ದೇವದಾರು ಎಣ್ಣೆ ಸು. 9 ಕಿ.ಗ್ರಾಂ, ಗಂಧದ ಹುಡಿ ಸು. 9 ಕಿ.ಗ್ರಾಂ, ಅತ್ತರು 20 ತೊಲ, ಎಳ್ಳೆಣ್ಣೆ 20 ಮಣ–ಇವೇ ಮೊದಲಾದ ಸಾಮಗ್ರಿಗಳನ್ನು ಬೆರೆಸಿದ ಮಟ್ಟಿ ತುಂಬ ಆರೋಗ್ಯದಾಯಕವಾದದ್ದು. ಲಡತ್ ಮಾಡಿ ಮುಗಿದ ಮೇಲೆ ಪೈಲ್ವಾನರು ಈ ಮಟ್ಟಿಯಲ್ಲಿ ಉದ್ದುದ್ದವಾದ ಗುಂಡಿಯನ್ನು ತೆಗೆದು ಅದರಲ್ಲಿ ಕತ್ತನ್ನು ಮಾತ್ರ ಹೊರಗೆ ಬಿಟ್ಟು ಮಲಗಿಕೊಳ್ಳುತ್ತಾರಲ್ಲದೆ ದೇಹದ ತುಂಬ ಮಣ್ಣನ್ನು ಮುಚ್ಚಿಸಿಕೊಳ್ಳುತ್ತಾರೆ. ಹೀಗೆ ಮಟ್ಟಿಯಲ್ಲಿ ಮಲಗಿ ವಿಶ್ರಾಂತಿ ಪಡೆಯುವುದರಿಂದ ದೇಹದ ಕಾವೆಲ್ಲವೂ ಆರಿಹೋಗುತ್ತದೆ. ಅಲ್ಲದೆ ಶರೀರಕ್ಕೆ ತುಂಬ ತಂಪೊದಗಿ, ಒಂದು ರೀತಿಯ ಕಾಂತಿಯುಂಟಾಗುತ್ತದೆ. ಇದಕ್ಕೆ ಮಟ್ಟಿ ತೆಗೆದುಕೊಳ್ಳವುದೆಂದು ಹೇಳುತ್ತಾರೆ. ಮಲ್ಲಾಡಿ ಹಳ್ಳಿಯ ಅನಾಥ ಸೇವಾಶ್ರಮದಲ್ಲಿ ರಾಘವೇಂದ್ರ ಸ್ವಾಮಿಗಳು ಹಲವಾರು ಆಯುರ್ವೇದೀಯ ಔಷಧಿಗಳನ್ನು ಬೆರೆಸಿದ ಮಟ್ಟಿಯನ್ನು ರೋಗ ಚಿಕಿತ್ಸೆಗಾಗಿ ಬಳಸುತ್ತಿದ್ದಾರೆ. ಹೀಗೆ ಮಟ್ಟಿ ತೆಗೆದುಕೊಳ್ಳವುದೂ ಒಂದೇ, ಒಂದು ಸೇರು ಹಾಲು ಕುಡಿಯುವುದೂ ಒಂದೇ ಎಂದು ನಂಬಿಕೆ. ಕುಸ್ತಿ ಮಾಡುವಾಗ ಪೈಲ್ವಾನರಿಗೆ ಅಕಸ್ಮಾತ್ ಗಾಯಗಳೇನಾದರೂ ಆದರೆ ಅವರು ಯಾವ ವೈದ್ಯನ ಬಳಿಗೂ ಹೋಗುವುದಿಲ್ಲ. ಗಾಯದ ಮೇಲೆ ಈ ಮಟ್ಟಿಯ ಮಣ್ಣನ್ನು ಮೆತ್ತುತ್ತಾರೆ. ನವರಾತ್ರಿಯದಿವಸ ಈ ಮಟ್ಟಿಗೆ ಹೊಸ ಮಣ್ಣು ಸೇರಿಸಿ ಉಸ್ತಾದರೆಲ್ಲ ಸೇರಿ ಪೂಜೆ ಮಾಡುತ್ತಾರೆ. ಕುಸ್ತಿಯ ಸ್ಪರ್ಧೆ ಇರುವ ದಿವಸ ಮಟ್ಟಿಯ ಮಣ್ಣನ್ನು ಒಂದೆಡೆ ದೊಡ್ಡ ರಾಶಿಯಾಗಿ ಏರುಹಾಕಿ ಅದರೊಂದಿಗೆ ಸ್ಪರ್ಧೆಯಲ್ಲಿ ಭಾಗವಹಿಸುವ ಪೈಲ್ವಾನರುಗಳು ಕಾಚ, ಹನುಮಾನ್ ಚಡ್ಡಿ, ವ್ಯಾಯಾಮ ಸಾಮಗ್ರಿಗಳೆಲ್ಲವನ್ನೂ ಇಟ್ಟು ಪೂಜೆ ಮಾಡುತ್ತಾರೆ. ಆ ದಿವಸ ಗರಡಿಮನೆಯಲ್ಲಿ ಯಾರೂ ಕುಸ್ತಿ ಮಾಡುವುದಿಲ್ಲ. ಕುಸ್ತಿ ಮುಗಿದ ಮೂರನೆಯ ದಿವಸವೇ ಏರು ಹಾಕಿದ ಮಟ್ಟಿಯ ಮಣ್ಣನ್ನು ಒಡೆದು ದೈನಂದಿನ ಸಾಧನೆ ನಡೆಸುತ್ತಾರೆ.

**ವ್ಯಾಯಾಮಸಾಮಗ್ರಿಗಳು:** ಹಿಂದಿನ ಕಾಲದಲ್ಲಿ ಗರಡಿಮನೆಗಳಲ್ಲಿ ವ್ಯಾಯಾಮ ಸಾಮಗ್ರಿಗಳು ಹೆಚ್ಚು ಇದ್ದಿರಲಿಲ್ಲ. ದಂಡೆ ಒತ್ತುವುದು, ಬಸ್ಕಿ ಹೊಡೆಯುವುದು ಮತ್ತು ಮಟ್ಟಿ ಕುರಾಯಿಸುವುದು–ಇವಿಷ್ಟೇ ಅಂದಿನ ಪ್ರಧಾನ; ವ್ಯಾಯಾಮಗಳಾಗಿದ್ದವು. ಅಲ್ಲಿನ ಸಾಮಾನ್ಯ ವ್ಯಾಯಾಮಸಾಮಗ್ರಿಗಳೆಂದರೆ–ಡಂಬೆಲ್ಸ್, ಲೋಡು (ಗದೆ), ಬಳಪದ ಕಲ್ಲಿನಿಂದ ಮಾಡಿದ್ದು ಕುತ್ತಿಗೆಗೆ ಸಿಕ್ಕಿಸಿಕೊಳ್ಳುವ ಗಾಲಿ, ರಂಧ್ರವಿರುವ ಕಬ್ಬಿಣದ ಗುಂಡು, ಮಲ್ಲಗಂಬ, ದಂಡೆ ಹೊಡೆಯುವಾಗ ಹಿಡಿದುಕೊಳ್ಳಲು ಉಪಯೋಗಿಸುವ ಮರದಿಂದ ಮಾಡಿದ ಕೈಹಿಡಿಗಳು, ಮಣೆ, ಮಟ್ಟಿ ಕುರಾಯಿಸುವ ದೊಡ್ಡ ಗುದ್ದಲಿ ಮೊದಲಾದವು. ಈ ಎಲ್ಲ ವ್ಯಾಯಾಮಸಾಮಗ್ರಿಗಳೂ ಕುಸ್ತಿಕಲೆಗೆ ಸಹಾಯಕವಾಗುವಂಥವು.

ಪೈಲ್ವಾನರುಗಳ ಆರಾಧ್ಯದೈವವೆಂದರೆ ಮೌಲಾಲಿ ಮತ್ತು ಹನುಮಂತ. ಆದ್ದರಿಂದಲೇ ಎಲ್ಲ ಗರಡಿಮನೆಗಳಲ್ಲೂ ಹನುಮಂತ ಮತ್ತು ಮೌಲಾಲಿ ದೇವರುಗಳನ್ನು ಕಾಣಬಹುದು. ಮೌಲಾಲಿ ಆಕಾರವಿಲ್ಲದ ದೇವರು. ಸಾಮಾನ್ಯವಾಗಿ ಗರಡಿಮನೆಗಳಲ್ಲಿ ಕೆಳಗಡೆ ಮೂರು ಗುಂಡು. ಮೇಲ್ಗಡೆ ಒಂದು ಗುಂಡನ್ನು ಇಟ್ಟು ಇದನ್ನೇ ಮೌಲಾಲಿ ದೇವರೆಂದು ಪೂಜಿಸುತ್ತಾರೆ. ಕುಸ್ತಿ ಇರುವ ದಿವಸ ಪೈಲ್ವಾನರು ಅಖಾಡವನ್ನು ಪ್ರವೇಶಿಸುವಾಗ, ಯಾಲಿ ಮೌಲಾಲಿ, ಯಾಲಿ ಮದಾತ್, ಯಾಲಿ ಉಸ್ತಾದ್, ಜೈ ಭಜರಂಗಬಲಿ ಮುಂತಾದ ಘೋಷಣೆಗಳನ್ನು ಮಾಡುತ್ತಾರೆ. ಇತ್ತೀಚೆಗೆ ಇದರ ಜೊತೆಗೆ ಹಿಂಕಣ್ಣು ಮುಂಕಣ್ಣು ಲಾಗ ಹಾಕಿಕೊಂಡು ಬರುವುದೂ ರೂಢಿಯಲ್ಲಿದೆ.



ಮಲ್ಲಕಂಬ ಕಸರತ್ತು

1 ಮಲ್ಲಗಂಬ; ಮಲ್ಲಗಂಬಗಳಲ್ಲಿ ಮೂರು ವಿಧ; 1 ನೇಣು ಮಲ್ಲಗಂಬ 2 ಹುಗಿದಿರುವ ಮಲ್ಲಗಂಬ 3 ಬೆತ್ತದ ಮಲ್ಲಗಂಬ. ಇವುಗಳ ಮೇಲೆ ವ್ಯಾಯಾಮ ಮಾಡುವುದರಿಂದ ತೊಡೆಗಳಿಗೆ ಅಸಾಧಾರಣವಾದ ಶಕ್ತಿ ಹಾಗೂ ಬಿಗಿಬರುತ್ತದಲ್ಲದೆ ದೇಹವನ್ನು ಹೇಗೆ ಬೇಕೋ ಹಾಗೆ ಮಣಿಸುವುದಕ್ಕೆ ಸಾಧ್ಯವಾಗುತ್ತದೆ.

ದಾದಾ ಬಾಲಂಭಟ್ಟ ಎಂಬಾತ ಮಲ್ಲಗಂಬದ ಮೇಲೆ ವ್ಯಾಯಾಮ ಮಾಡುವುದನ್ನು ಕಂಡುಹಿಡಿದ. ಇದಕ್ಕೆ ಸಂಬಂಧಿಸಿದಂತೆ ಕಥೆಯೊಂದಿದೆ. ಪ್ರಖ್ಯಾತ ಜಟ್ಟಿಯೊಬ್ಬನ ಸವಾಲನ್ನು ಎದುರಿಸಿ ಅವನ ಜೊತೆ ಕುಸ್ತಿ ಮಾಡಲುಒಪ್ಪಿಕೊಂಡ ಬಾಲಂಭಟ್ಟ ಅವನನ್ನು ಸೋಲಿಸುವ ಬಗೆಯನ್ನು ಕುರಿತು ತೀವ್ರವಾಗಿ ಯೋಚಿಸತೊಡಗಿದ. ಈ ಯೋಚನೆಯಲ್ಲಿರುವಾಗಲೇ ಒಂದು ದಿವಸ ಅವನಿಗೆ ಒಂದು ಕನಸು ಬಿತ್ತು. ಕನಸಿನಲ್ಲಿ ಕೋತಿಯೊಂದು ಮರದ ಕೊಂಬೆಯ ಮೇಲೆ ಲಾಗ ಹಾಕುತ್ತಾ ಅನೇಕ ರೀತಿಯ ಕಸರತ್ತು ಮಾಡುತ್ತಿರುವುದನ್ನು ಕಂಡ. ಅದು ಅವನಿಗೊಂದು ಸೂಚನೆಯನ್ನೊದಗಿಸಿತು. ಮಾರನೆಯ ದಿನವೇ ನುಣುಪಾದ ಮರದ ಕಂಬವನ್ನು ತಂದು ನೆಲದಲ್ಲಿ ನೆಟ್ಟು ಅದರ ಮೇಲೆ ಕಸರತ್ತು ಮಾಡಲು ಪ್ರಾರಂಭಿಸಿದ. ಅದರಿಂದಾಗಿ ಆತ ತನ್ನ ಎದುರಾಳಿಯನ್ನು ಸುಲಭವಾಗಿ ಸೋಲಿಸಿದ. ಮಲ್ಲಗಂಬದ ಮೇಲೆ ನಡೆಸುವ ವಿವಿಧ ಚಟುವಟಿಕೆಗಳ ಸ್ಪರ್ಧೆಯನ್ನು ಈಗಲೂ ಮಹಾರಾಷ್ಟ್ರದಲ್ಲಿ ನಡೆಸುತ್ತಾರೆ.

ಮಲ್ಲಗಂಬದ ಮೇಲೆ ಮಾಡುವ ಸಾಧನೆಯಲ್ಲಿ ಅನೇಕ ಬಗೆಗಳಿವೆ. ಪವಿತ್ರ : ನೆಲದಲ್ಲಿ ಹುಗಿದಿರುವ ಕಂಬದ ಬದಿಯಲ್ಲಿ ಎಡಗಾಲನ್ನು ಸ್ವಲ್ಪ ಮುಂದೆ ಇಟ್ಟುಕೊಂಡು, ಎಡಮುಂಗೈಯನ್ನು ಕಂಬದ ಮುಂದುಗಡೆಯಲ್ಲಿ ಸೊಂಟದ ಮಟ್ಟದಲ್ಲಿಯೂ ಬಲಗೈಯನ್ನು ಕಂಬದ ಹಿಂಬದಿಯಲ್ಲಿಯೂ ಇಟ್ಟು ಬಲಗೈಯಿಂದ ಕಂಬವನ್ನು ಬಳಸಿ ನಿಲ್ಲುವುದಕ್ಕೆ ಎಡಪವಿತ್ರವೆಂದು ಹೇಳುತ್ತಾರೆ. ಇದಕ್ಕೆ ವಿರುದ್ಧವಾಗಿ ನಿಲ್ಲುವುದು

ಬಲಪವಿತ್ರ. ವ್ಯಾಯಾಮ ಮಾಡುವಾಗ ಮುಂಗೈ ತ್ರಾಣದಿಂದ ಕಂಬವನ್ನು ಹಿಡಿದು ತಲೆಯನ್ನು ಕೆಳಗೆಮಾಡಿ ಕಾಲುಗಳನ್ನು ಮೇಲೆಸೆದು ಎರಡು ತೊಡೆಗಳಿಂದಲೂ ಕಂಬವನ್ನು ಬಳಸಿ ಹಿಡಿದು ಎರಡು ಕೈಗಳನ್ನೂ ಬಿಡಬೇಕು. ತೊಡೆಗಳ ಬಲದಿಂದ ಕಂಬವನ್ನು ಬಿಗಿಹಿಡಿದು ಸ್ವಲ್ಪ ಹೊತ್ತಿನ ಅನಂತರ ತೊಡೆಗಳನ್ನು ಸಡಿಲಿಸಿ ಹಾಗೆಯೇ ನಿಧಾನವಾಗಿ ಕೆಳಗಡೆ ಜಾರಬೇಕು. ನೆಲವನ್ನು ಸಮೀಪಿಸಿದಾಗ ಕೈಗಳಿಂದ ಕಂಬವನ್ನು ಹಿಡಿದು ಕಾಲುಗಳನ್ನು ನೆಲಕ್ಕೆ ಸೋಕಿಸದಂತೆ ಇಳಿಬಿಟ್ಟು ಮತ್ತೆ ಮುಂಗೈ ತ್ರಾಣದಿಂದ ಕಾಲುಗಳನ್ನು ಮೇಲೆಸೆದು ತೊಡೆಗಳಿಂದ ಕಂಬವನ್ನು ಬಿಗಿ ಹಿಡಿಯಬೇಕು. ನೆಲಕ್ಕಿಳಿಯುವಾಗ ತೊಡೆಗಳನ್ನು ಸಡಿಲಿಸಿ ಕಂಬದ ಮೇಲಿನಿಂದ ತಲೆಕೆಳಗಾಗಿಯೇ ಜಾರಿಕೊಂಡು ಬಂದು ಕೈಗಳಿಂದ ಕಂಬವನ್ನು ಹಿಡಿದು ಕಂಬದ ಬದಿಯಲ್ಲಿ ಕಾಲುಗಳನ್ನು ಪೂರ್ತಿಯಾಗಿ ನೆಲದ ಮೇಲೆ ಊರದೆ ಬೆರಳುಗಳ ಸಹಾಯದಿಂದ ನಿಲ್ಲಬೇಕು. ಹೀಗೆಯೇ ಮಲ್ಲಗಂಬದ ಮೇಲೆ ವ್ಯಾಯಾಮ ಮಾಡುವ ಅನೇಕ ರೀತಿಯ ಉಡಿಗಳಿವೆ. ಅವುಗಳಲ್ಲಿ ಕಮಾನಿ ಉಡಿ, ದೋ ಹಾಥಿ ಉಡಿ, ನಕೀಕಸ್ ಸಾದಾ, ಬಗಲ್ ಉಡಿ, ಸಲಾಮಿ, ಸಾದಿತೇಡಿ, ಫಾಡ್ ಉಡಿ, ಬಗಲ್ ತೇಡಿ, ಕತ್ತರ ಪಕ್ಕಡ್, ಕಾನ್‌ಪಕ್ಕಡ್ ಫಾನ ಉಡಿ, ದೋಹಾಥಿ ದಸ್‌ರಂಗ್, ಖಾಂದಾದಸ್‌ರಂಗ್, ಮೊದಲಾದುವು ಪ್ರಖ್ಯಾತವಾದುವು. ಹೀಗೆಯೇ ಬೆತ್ತದ ಕಂಬ ಮತ್ತು ನೇಣುಗಂಬಗಳ ಮೇಲೆ ಆಸನಗಳನ್ನು ಹಾಕುತ್ತಾರೆ.

2 ಡಂಬೆಲ್ಲುಗಳು: ವಿವಿಧ ತೂಕದ ಡಂಬೆಲ್ಲುಗಳನ್ನು ಎರಡೂ ಕೈಯಲ್ಲಿ ಹಿಡಿದುಕೊಂಡು ದೀರ್ಘಶ್ವಾಸ ಎಳೆದುಕೊಂಡು ಕೈಗಳನ್ನು ಒಂದಾದ ಮೇಲೆ ಒಂದರಂತೆ ಮೇಲೆತ್ತಿ, ನಿಧಾನವಾಗಿ ಉಸಿರು ಬಿಡುತ್ತ ಕೆಳಗೆ ಇಳಿಸಬೇಕು. ಈ ವ್ಯಾಯಾಮದಿಂದ ಮುಂಗೈ ಮತ್ತು ತೋಳುಗಳಿಗೆ ಬಲ ಬರುತ್ತದೆ.

3 ಗದೆ ಅಥವಾ ಲೋಡು: ವಿವಿಧ ತೂಕದ ಗದೆಗಳಿರುತ್ತವೆ. ಒಂದೇ ತೂಕವುಳ್ಳ ಎರಡು ಗದೆಗಳನ್ನು ಎರಡೂ ಕೈಗಳಲ್ಲಿ ಹಿಡಿದುಕೊಂಡು ಮೂಗಿನ ನೇರದಲ್ಲಿ ನಿಲ್ಲಿಸಿಕೊಳ್ಳಬೇಕು. ಅನಂತರ ಒಂದು ಕೈಯಲ್ಲಿ ಹಿಡಿದಿರುವ ಗದೆಯನ್ನು ಮೂಗಿನ ನೇರದಲ್ಲಿಯೇ ನಿಲ್ಲಿಸಿಕೊಂಡು, ಇನ್ನೊಂದು ಕೈಯಲ್ಲಿರುವ ಗದೆಯನ್ನು ತಲೆಯ ಮೇಲೆ ಎತ್ತಿ ಬೆನ್ನ ಹಿಂದೆ ಇಳಿಸಿ ಅನಂತರ ಮೊದಲಿದ್ದ ಸ್ಥಾನಕ್ಕೇ ಅಂದರೆ ಮುಂಭಾಗದಿಂದ ಮೇಲೆತ್ತಿ ಮೂಗಿನ ನೇರಕ್ಕೇ ನಿಲ್ಲಿಸಿಕೊಳ್ಳಬೇಕು. ತಕ್ಷಣವೇ ಮತ್ತೊಂದು ಕೈಯಲ್ಲಿರುವ ಗದೆಯನ್ನು ತಲೆಯ ಮೇಲೆ ಎತ್ತಿ ಬೆನ್ನ ಹಿಂದೆ ಇಳಿಸಿ ಮುಂದುಗಡೆಯಿಂದ ಮೂಗಿನ ನೇರಕ್ಕೆ ತಂದು ನಿಲ್ಲಿಸಿಕೊಳ್ಳಬೇಕು. ಹೀಗೆ ಒಂದಾದ ಮೇಲೊಂದರಂತೆ ಗದೆಯನ್ನು ತಿರುಗಿಸಬೇಕು. ಇದರಿಂದ ಮುಂಗೈ ಮತ್ತು ತೋಳುಗಳಿಗೆ ಅಸಾಧಾರಣ ಶಕ್ತಿ ಬರುತ್ತದೆ.

4 ಗಾಲಿ: ಸಿಮೆಂಟಿನ ಈ ಗಾಲಿ 45 ಸೆಂಮೀ ಅಳತೆಯ ಸುತ್ತಳತೆಯದಾಗಿದ್ದು ತುಂಬ ಭಾರವಾಗಿರುತ್ತದೆ. ಇದರ ಮಧ್ಯೆ ತಲೆ ನುಗ್ಗುವಷ್ಟು ರಂಧ್ರವೊಂದಿರುತ್ತದೆ. ಈ ಗಾಲಿಯನ್ನು ನಿಲ್ಲಿಸಿಕೊಂಡು, ಕುಕ್ಕುರುಗಾಲಿನಲ್ಲಿ ಕುಳಿತು ರಂಧ್ರದ ಮಧ್ಯೆ ತಲೆಯನ್ನು ತೂರಿಸಿ ಗಾಲಿಯನ್ನು ಕುತ್ತಿಗೆಗೆ ಸಿಗಿಸಿಕೊಂಡು ಮೇಲೇಳಬೇಕು. ಮೇಲೆದ್ದು ಗರಡಿಮನೆಯ ಒಳಭಾಗದಲ್ಲಿಯೇ ಒಂದೆರಡು ನಿಮಿಷ ಸುತ್ತಾಡಬೇಕು. ಹೀಗೆ ಮಾಡುವುದರಿಂದ ಕುತ್ತಿಗೆಗೆ ಬಲ ಬರುತ್ತದೆ.

5 ಗುಂಡು: ಇದು ಭಾರವಾದ ಕಬ್ಬಿಣದ್ದಾಗಿದ್ದು ಮಧ್ಯೆ ಒಂದು ಅಂಗುಲ ಅಥವಾ ಎರಡು ಅಂಗುಲದಷ್ಟು ಅಗಲವಾದ ರಂಧ್ರವಿರುತ್ತದೆ. ಈ ರಂಧ್ರದ ಮಧ್ಯೆ ದಪ್ಪನಾದ ಕೋಲೊಂದನ್ನು ತಳ್ಳಿ ಕೈಯಿಂದ ಆ ಕೋಲನ್ನು ಹಿಡಿದು ಮುಂಗೈ ತ್ರಾಣದಿಂದ ಆ ಗುಂಡನ್ನು ಮೇಲೆತ್ತಬೇಕು. ಹೀಗೆ ಮಾಡುವುದರಿಂದ ಕೈಗಳಿಗೆ ಬಲ ಬರುತ್ತದೆ.

6 ಗುದ್ದಲಿ: ಇದು ವ್ಯವಸಾಯದ ಗುದ್ದಲಿಗಿಂತ ಆಕಾರದಲ್ಲಿ ದೊಡ್ಡದಾಗಿದ್ದು, ಭಾರವಾಗಿರುತ್ತದೆ. ಪ್ರತಿಯೊಬ್ಬ ಪೈಲ್ವಾನನೂ ಕುಸ್ತಿ ಮಾಡಿಯಾದ ಮೇಲೆ ಈ ಗುದ್ದಲಿಯಿಂದ ಮಟ್ಟಿಯನ್ನು ಪೂರ್ತಿ ಕುರಾಯಿಸುತ್ತಾನೆ. ಇದರಿಂದ ಎದೆ ವಿಶಾಲವಾಗುತ್ತದೆ. ಅಲ್ಲದೆ ಮುಂಗೈಗಳು, ತೋಳುಗಳು ಮತ್ತು ಸೊಂಟಕ್ಕೆ ಹೆಚ್ಚಿನ ಶಕ್ತಿ ಬರುವುದಲ್ಲದೆ ದಮ್ಮುಕಸ್ತು ನಿಲ್ಲುತ್ತದೆ (**ನೋಡಿ: ಅಂಗಸಾಧನೆ: ಕುಸ್ತಿ ವ್ಯಾಯಾಮ ಶಾಲೆ**). (ಎಚ್.ಕೆ.ಎಸ್.)

**ಗರಾಶನಿನ್, ಇಲಿಯ :** 1812–74. ಆಧುನಿಕ ಸರ್ಬಿಯದ ಒಬ್ಬ ರಾಜಕೀಯ ಪ್ರಮುಖ, ದಕ್ಷ ಆಡಳಿತಗಾರ. ಎರಡು ಬಾರಿ ಪ್ರಧಾನಮಂತ್ರಿಯಾಗಿ ಹೆಸರು ಪಡೆದ ಈತ ಧನಿಕ ವ್ಯಾಪಾರಿಯೊಬ್ಬನ ಮಗನಾಗಿ 1812ರ ಜನವರಿ 28ರಂದು ಗರಾಶಿಯಲ್ಲಿ ಜನಿಸಿದ. ಜರ್ಮನ್ ಮತ್ತು ಗ್ರೀಕ್ ಶಾಲೆಗಳಲ್ಲಿ ವಿದ್ಯಾಭ್ಯಾಸ ಪಡೆದ. 1834ರಲ್ಲಿ ಸುಂಕದ ಅಧಿಕಾರಿಯಾದ ಗರಾಶನಿನ್ ಅನಂತರ ಸೈನ್ಯ ಸೇರಿ, ಅದರ ದಳಪತಿಯಾದ. ಮಿಲೋಶ್ ಒಬ್ರೆನೊವಿಚ್ ದೊರೆತನವನ್ನು ತ್ಯಾಗಮಾಡಿದಾಗ (1839) ಗರಾಶನಿನ್ ದೇಶದಿಂದ ಹೊರಹೋಗಿ ತಲೆ ಮರೆಸಿಕೊಂಡಿದ್ದ. 1842ರಲ್ಲಿ ಒಬ್ರೆನೊವಿಚನನ್ನು ಪದಚ್ಯುತಿಗೊಳಿಸಿ ಅಲೆಕ್ಸಾಂಡರ್ ಕಾರಾಜಾರ್ಜೆವಿಚನನ್ನು ದೊರೆಯಾಗಿ ಆಯ್ಕೆ ಮಾಡಿಸುವ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಿದ. ಅನಂತರ ಗೃಹಖಾತೆಯ ಅಧೀನ ಕಾರ್ಯದರ್ಶಿಯಾಗಿಯೂ ಗೃಹಕಾರ್ಯದರ್ಶಿಯಾಗಿಯೂ ನೇಮಕಗೊಂಡ. 1852ರಲ್ಲಿ



ಪ್ರಧಾನಮಂತ್ರಿಯಾದ. ಈತನ ಒಲವು ಪಶ್ಚಿಮ ದೇಶಗಳ ಕಡೆ ಇತ್ತೆಂಬ ಕಾರಣದಿಂದಾಗಿ ಇವನನ್ನು ದೊರೆ ಅಧಿಕಾರದಿಂದ ತೆಗೆದು ಹಾಕಿದ. ಇದಕ್ಕೆ ರಷ್ಯದ ಒತ್ತಡವೇ ಕಾರಣ. ಈತ ಮತ್ತೆ ಗೃಹಕಾರ್ಯದರ್ಶಿಯಾಗಿ ನೇಮಕಗೊಂಡ (1858). ಅಲೆಕ್ಸಾಂಡರನ ಪದತ್ಯಾಗಕ್ಕೆ ಈತನೇ ಕಾರಣ (1858). ದೊರೆ ಮಿಲೋಶ ಒಬ್ರೆನೊವಿಚ್ ಎರಡನೆಯ ಬಾರಿಗೆ ಅಧಿಕಾರಕ್ಕೆ ಬಂದಾಗ ಗರಾಶನಿನ್ ರಾಜಕೀಯದಿಂದ ನಿವೃತ್ತ ನಾದ. 1860ರಲ್ಲಿ ಒಬ್ರೆನೊವಿಚ್ ತೀರಿಕೊಂಡ. ಮೈಕೇಲ್ ಸಿಂಹಾಸನಾರೋಹಣ ಮಾಡಿದ. ಈತ ಗರಾಶನಿನನನ್ನು 1861ರಲ್ಲಿ ಪ್ರಧಾನಮಂತ್ರಿಯಾಗಿ ಮಾಡಿಕೊಂಡ. ಮೈಕೇಲ್ ತನ್ನ ಸೋದರ ಸಂಬಂಧಿ ಕ್ಯಾಟರೀನ ಕಾನ್‌ಸ್ಟಾಂಟಿನೊವಿಚಳನ್ನು ಮದುವೆಯಾಗ ಬಯಸಿದಾಗ ಗರಾಶನಿನ್ ಇದನ್ನು ಒಪ್ಪಲಿಲ್ಲ. ಆದ್ದರಿಂದ ಈತ ಪ್ರಧಾನಿಪದವಿ ಕಳೆದುಕೊಂಡ. 1868ರಲ್ಲಿ ಮೈಕೇಲ್ ಕೊಲೆಯಾದ. ಆಗ ಸರ್ಬಿಯವನ್ನು ಅನಾಯಕತ್ವ ಸ್ಥಿತಿಯಿಂದ ರಕ್ಷಿಸಿದವನು ಗರಾಶನಿನ್. ಮಿಲಾನ್ ಒಬ್ರೆನೊವಿಚ್ ಸಿಂಹಾಸನಾರೋಹಣ ಮಾಡಿದಾಗ ಗರಾಶನಿನ್ ಅಧಿಕಾರದಿಂದ ನಿವೃತ್ತನಾದ. 1874ರ ಜೂನ್ 28ರಂದು ಬೆಲ್‌ಗ್ರೇಡಿನಲ್ಲಿ ನಿಧನನಾದ.

ಗರಾಶನಿನ್ ತನ್ನ ಮೊದಲ ಅಧಿಕಾರಾವಧಿಯಲ್ಲಿ (1843–53) ಸರ್ಬಿಯವನ್ನು ಪ್ರಗತಿಪರವಾಗಿ ಪರಿವರ್ತಿಸಿದ. ದಕ್ಷ ಆಡಳಿತಾಂಗವನ್ನು ಸ್ಥಾಪಿಸಿದ. ಸರ್ಬಿಯದ ಸ್ವಯಮಧಿಕಾರವನ್ನು ರಕ್ಷಿಸುವುದು ಶಕ್ತರಾಷ್ಟ್ರಗಳ ಸಂಯುಕ್ತ ಹೊಣೆಗಾರಿಕೆಯೆಂಬುದಕ್ಕೆ ಪ್ಯಾರಿಸ್ ಒಪ್ಪಂದದಲ್ಲಿ (1856) ಮಾನ್ಯತೆ ದೊರಕಲು ಗರಾಶನಿನ್ ಕಾರಣ. ಗೃಹಾಡಳಿತದಲ್ಲಿ ಈತ ಸಂಪ್ರದಾಯ ನೀತಿ ಅನುಸರಿಸಿದರೂ ವಿದೇಶಾಂಗ ವ್ಯವಹಾರಗಳಲ್ಲಿ ಈತನದು ಧಾರಾಳ ನೀತಿಯಾಗಿತ್ತು. ಗರಾಶನಿನನ ಎರಡನೆಯ ಅಧಿಕಾರಾವಧಿಯಲ್ಲಿ (1861–1867) ಸರ್ಬಿಯದ ಮುಂದಾಳುತನದಲ್ಲಿ ದಕ್ಷಿಣ ಸ್ಲಾವ್ ರಾಜ್ಯಸ್ಥಾಪನೆಗಾಗಿ ಹಲವಾರು ಒಡಂಬಡಿಕೆಗಳನ್ನು ಮಾಡಿಕೊಂಡ.


ಈತನ ಮಗ ಮಿಲ್ಯುಟಿನ್ ಗರಾಶನಿನ್ (1843–1898). ಬೆಲ್‌ಗ್ರೇಡಿನಲ್ಲಿ ಹುಟ್ಟಿದ ಈತ ವಿದ್ಯಾಭ್ಯಾಸ ಮುಗಿಸಿದ ಅನಂತರ 1874ರಲ್ಲಿ ಪಾರ್ಲಿಮೆಂಟ್ ಪ್ರವೇಶಿಸಿದ. 1880–83ರಲ್ಲಿ ಗೃಹಕಾರ್ಯದರ್ಶಿಯಾಗಿ, 1883ರಲ್ಲಿ ವಿಯೆನ್ನದ ಮಂತ್ರಿಯಾಗಿ, 1895–96ರಲ್ಲಿ ಪಾರ್ಲಿಮೆಂಟಿನ ಅಧ್ಯಕ್ಷನಾಗಿದ್ದ. ಮತ್ತೆ ಮಂತ್ರಿಯಾದ. 1898ರಲ್ಲಿ ಮರಣಹೊಂದಿದ. (ಬಿ.ಎಸ್.ಎಚ್.)

**ಗರಿ :** ಹಕ್ಕಿಗಳಲ್ಲಿ ಮಾತ್ರ ಕಾಣಬರುವ ಒಂದು ವಿಶೇಷ ನಿರ್ಜೀವ ರಚನೆ (ಫೆದರ್). ಚರ್ಮದಿಂದ ಉದ್ಭವಿಸುವ ಈ ಕೊಂಬಿನ ರಚನೆ ಹಕ್ಕಿಗಳ ವಾಯುಜೀವನಕ್ಕೆ ಬಲು ಸಹಕಾರಿಯೆನಿಸಿದೆ. ಸರೀಸೃಪಗಳ ದೇಹದಲ್ಲಿ ಕಾಣಬರುವ ಶಲ್ಕೆಗಳಂತೆಯೆ ಗರಿಗಳೂ ಕೂಡ ಕೆರಾಟಿನ್‌ನಿಂದ ಕೂಡಿದ್ದು ಅವುಗಳಂತೆಯೇ ಹುಟ್ಟುತ್ತವೆ. ಇದರಿಂದಾಗಿ ಗರಿಗಳು ಶಲ್ಕೆಗಳಿಂದ ವಿಕಾಸವಾದ ಸಂಕೀರ್ಣ ಬಗೆಯ ರಚನೆಗಳು ಎಂದು ನಂಬಲಾಗಿದೆ. ಆದರೆ ಶಲ್ಕೆಗಳಿಗೂ ಗರಿಗಳಿಗೂ ಸಂಬಂಧ ಕಲ್ಪಿಸುವ ಮಧ್ಯಾಂತರ ಬಗೆಯ ರಚನೆಗಳು ಈವರೆಗೂ ಯಾವುದೇ ಬಗೆಯ ಪ್ರಾಣಿಯಲ್ಲಿ ಕಂಡುಬಂದಿಲ್ಲ. ಜುರಾಸಿಕ್ ಅವಧಿಯಲ್ಲಿ ಜೀವಿಸಿದ್ದು ಆದಿಪಕ್ಷಿಯೆಂದು ಪರಿಗಣಿತವಾಗಿರುವ ಆರ್ಕಿಯಾಪ್ಟರಿಕ್ಸ್ ಹಕ್ಕಿಯ ಗರಿಗಳು ಕೂಡ ಆಧುನಿಕ ಹಕ್ಕಿಗಳ ಗರಿಗಳನ್ನೆ ಹೋಲುತ್ತವೆ.

ಕ್ರಿಯೆ, ರಚನೆ ಮತ್ತು ಸ್ಥಾನಗಳ ಆಧಾರದಮೇಲೆ ಗರಿಗಳನ್ನು ಆರು ಬಗೆಯವಾಗಿ ವಿಂಗಡಿಸಬಹುದು.

1. ಕಾಂಟೂರ್ ಅಥವಾ ಹೊದಿಕೆ ಗರಿಗಳು: ಇವು ಪಕ್ಷಿದೇಹವನ್ನು ಮುಚ್ಚುತ್ತವಲ್ಲದೆ ಪಕ್ಷಿದೇಹಕ್ಕೆ ಹೊರರೂಪರಚನೆಯನ್ನು ಸಹ ಕೊಡುತ್ತವೆ. ಇವುಗಳ ಸಂಖ್ಯೆ ಅಪಾರ, ರಚನೆ ಸಂಕೀರ್ಣ. ಇದನ್ನೇ ಪ್ರರೂಪಿ (ಟಿಪಿಕಲ್) ಗರಿಯೆಂದು ತಿಳಿಯಲಾಗಿದೆ.

ಇಂಥ ಒಂದೊಂದು ಗರಿಯೂ ಎಲೆಯಂತೆ ಚಪ್ಪಟೆಯಾಗಿದ್ದು ಹೊರ ಹಾಗೂ ಒಳ ಮೇಲಾಯಗಳಿಂದ ಕೂಡಿರುತ್ತದೆ. ಪ್ರತಿಯೊಂದು ಗರಿಯಲ್ಲಿಯೂ ಕೇಂದ್ರ ಅಕ್ಷಭಾಗ ಮತ್ತು ವೇನ್ (ವೆಕ್ಸಿಲಮ್) ಎಂಬ ಎರಡು ಭಾಗಗಳನ್ನು ಗುರುತಿಸಬಹುದು. ಅಕ್ಷಕ್ಕೆ ದಂಡ (ಶಾಫ್ಟ್) ಎಂದು ಹೆಸರು. ದಂಡವನ್ನು ದೇಹದ ಕಡೆಗಿನ ಕ್ವಿಲ್ ಅಥವಾ ಕಲೀಮಸ್ ಮತ್ತು ವೇನ್ ಭಾಗದಲ್ಲಿನ ರೇಕಿಸ್ ಎಂದು ಎರಡು ಭಾಗಗಳಾಗಿ ವಿಂಗಡಿಸಬಹುದು. ಕ್ವಿಲ್ ಭಾಗದಿಂದಲೇ ಗರಿ ದೇಹಕ್ಕೆ ಅಂಟಿರುವುದು. ಇದು




ಪ್ರರೂಪಿ ಗರಿಯೊಂದರ ಚಿತ್ರ, ವೃತ್ತವೆಳೆದಿರುವ ಗರಿಯ ಭಾಗವನ್ನು ಬಲಗಡೆಯ ಚಿತ್ರದಲ್ಲಿ ದೊಡ್ಡದು ಮಾಡಿ ತೋರಿಸಿದೆ. 1. ಬಾರ್ಬ್, 2. ಬಾರ್ಬ್ಯೂಲ್, 3. ರೇಕಿಸ್, 4. ವೇನ್, 5. ಕ್ವಿಲ್

ಟೊಳ್ಳಾಗಿದ್ದು ಚರ್ಮದಲ್ಲಿನ ತೋಡಿನಲ್ಲಿ ಹುದುಗಿರುತ್ತದೆ. ಕ್ವಿಲ್‌ನ ತುದಿಯಲ್ಲಿ ಸಣ್ಣ ರಂಧ್ರವೊಂದಿದೆ. ಇದಕ್ಕೆ ನಿಮ್ನಪಿಚ್ಛ ರಂಧ್ರವೆಂದು ಹೆಸರು. ಗರಿ ಕೂತುಕೊಳ್ಳುವ ಚರ್ಮದ ತೋಡಿನಲ್ಲಿ ಸಣ್ಣ ಪ್ಯಾಪಿಲವೊಂದು ಇದ್ದು ನಿಮ್ನ ಪಿಚ್ಛರಂಧ್ರದ ಮೂಲಕ ಕ್ವಿಲ್‌ನ ಒಳಗೆ ಚಾಚಿರುತ್ತದೆ. ವೇನಿನಲ್ಲಿ ದಂಡ ಮುಂದುವರಿದು ರೇಕಿಸ್ ಎನಿಸಿಕೊಳ್ಳುತ್ತದೆ. ರೇಕಿಸ್‌ನ ಒಳಭಾಗ ಕ್ವಿಲ್‌ನಂತೆ ಟೊಳ್ಳಾಗಿರದೆ ಗಟ್ಟಿಯಾಗಿದೆ. ಕ್ವಿಲ್ ಮತ್ತು ರೇಕಿಸ್‌ಗಳು ಸಂಧಿಸುವ ಕಡೆ ತಳಭಾಗದಲ್ಲಿ ಇನ್ನೊಂದು ಸೂಕ್ಷ್ಮ ರಂಧ್ರವಿದೆ. ಇದಕ್ಕೆ ಊರ್ಧ್ವ ಪಿಚ್ಛರಂಧ್ರವೆಂದು ಹೆಸರು. ರೇಕಿಸ್‌ನ ಎಡಬಲಗಳಲ್ಲಿ ದಟ್ಟವಾಗಿ ಹಾಗೂ ಒಂದಕ್ಕೊಂದು ಸಮಾನಾಂತರವಾಗಿ ಜೋಡಿಸಲ್ಪಟ್ಟಿರುವ ಅಸಂಖ್ಯಾತ ಎಳೆಗಳಿವೆ. ಇವೇ ಬಾರ್ಬುಗಳು. ರೇಕಿಸ್‌ನ ಅಕ್ಷಕ್ಕೆ ಕೊಂಚ ಓರೆಯಾಗಿ ಜೋಡಿಸಲ್ಪಟ್ಟಿರುವ ಇವನ್ನು ಪರಸ್ಪರ ಬೇರ್ಪಡಿಸುವುದು ಕಷ್ಟ. ಏಕೆಂದರೆ ಬಾರ್ಬ್‌ಗಳು ಒಂದರೊಡನೊಂದು ಹೆಣೆದುಕೊಂಡಿವೆ. ಈ ಹೆಣಿಕೆಯನ್ನು ನೋಡಲು ಸೂಕ್ಷ್ಮದರ್ಶಿಯ ಸಹಾಯ ಬೇಕು. ಪ್ರತಿ ಬಾರ್ಬ್‌ನ ಹಿಮ್ಮುಖ ಮತ್ತು ಮುಮ್ಮುಖದ ಮೇಲೂ ಓರೆ ಓರೆಯಾಗಿ ಹಾಗೂ ಒತ್ತೊತ್ತಾಗಿ ಅಳವಡಿಸಿರುವ ಅಸಂಖ್ಯಾತ ಬಾರ್ಬ್ಯೂಲ್‌ಗಳೆಂಬ ತಂತುಗಳಿರುತ್ತವೆ. ಕ್ವಿಲ್‌ನ ಕಡೆ ಚಾಚಿರತಕ್ಕವು ಮತ್ತು ಗರಿಯ ತುದಿಯೆಡೆಗೆ ಚಾಚಿರುವಂಥವು. ಎರಡು ಬಗೆಯ ಬಾಬ್ಯೂಲ್‌ಗಳನ್ನು ಗುರುತಿಸಬಹುದು. ಬಾರ್ಬ್ಯೂಲ್‌ಗಳು ಓರೆ ಓರೆಯಾಗಿ ದಟ್ಟವಾಗಿ ಅಳವಡಿಕೆಯಾಗಿರುವುದರಿಂದ ಒಂದು ಬಾರ್ಬ್‌ನ ದೂರಸ್ಥ ಬಾರ್ಬ್ಯೂಲ್‌ಗಳು ಸಮೀಪಸ್ಥ ಬಾರ್ಬ್ಯೂಲ್‌ಗಳನ್ನು ಹಾಯ್ದುಹೋಗುತ್ತವೆ. ಪ್ರತಿ ದೂರಸ್ಥ ಬಾರ್ಬ್ಯೂಲ್‌ನ ಕೊನೆಯ ಕೆಳ ಅಂಚಿನಲ್ಲಿ ಸಣ್ಣ ಸಣ್ಣ ಕೊಕ್ಕೆಗಳಿವೆ. ಇವಕ್ಕೆ ಬಾರ್ಬಿಸೆಲ್‌ಗಳೆಂದು ಹೆಸರು. ಒಂದು ಬಾರ್ಬ್ಯೂಲ್‌ನ ಬಾರ್ಬಿಸೆಲ್‌ಗಳು ಅದರ ಮುಂದಿರುವ ಬಾರ್ಬ್ಯೂಲ್‌ನ ಅಡ್ಡ ಅಂಚುಗಳಿಗೆ ಕೊಂಡಿ ಕೂಡುತ್ತವೆ. ಇದರಿಂದಾಗಿ ಬಾರ್ಬ್ಯೂಲ್‌ಗಳು ಒಂದಕ್ಕೊಂದು ಹೆಣೆದು ಹಿಡಿದು ಕೊಂಡಂತಿರುತ್ತವೆ. ಈ ಬಗೆಯ ಹೆಣಿಗೆಯಿಂದ ವೇನ್ ಮೃದುತ್ವವನ್ನು ಪಡೆಯುತ್ತದೆ. ಈ ಹೆಣಿಗೆಯನ್ನು ಸಡಿಲಿಸುವುದರಿಂದ ಗರಿಜಾಲವನ್ನು ಹರಿಯಬಹುದು. ಸ್ವಾಭಾವಿಕವಾಗಿಯೇ ಹೀಗಾಗಬಹುದು. ಇಂಥ ಸಂದರ್ಭಗಳಲ್ಲಿ ಹರಿದ ಭಾಗವನ್ನು ಪಕ್ಷಿ ತನ್ನ ಕೊಕ್ಕಿನಿಂದ ತೀಡಿ ತೀಡಿ ಬಾಚಿ ಮತ್ತೆ ಹೆಣೆದುಕೊಂಡು ಸರಿಪಡಿಸಿಕೊಳ್ಳ ಬಲ್ಲದು. ಕೆಲವು ಗರಿಗಳಲ್ಲಿ ತಳಭಾಗದ ಬಾರ್ಬ್‌ಗಳು ನೀಳ ಹಾಗೂ ಕೋಮಲ ವಾಗಿರುತ್ತವೆ. ಇವಕ್ಕೆ ನೆರೆಯ ಬಾರ್ಬ್‌ಗಳೊಡನೆ ಸಂಧಿಸುವ ಸಂಯಂತ್ರವಿರುವುದಿಲ್ಲ. ತತ್ಫಲವಾಗಿ ಗರಿಯ ಈ ಭಾಗ ಮೃದುರೋಮೀಯವಾಗಿರುತ್ತವೆ.

ಹಲವು ಹೊದಿಕೆ ಗರಿಗಳ ತಳಭಾಗದಲ್ಲಿ ಕ್ವಿಲ್ ಮತ್ತು ರೇಕಿಸ್‌ಗಳು ಕೂಡುವ ಕಡೆ ಒಂದು ಲೇಶಗರಿ (ಆಫ್ಟರ್ ಶಾಫ್ಟ್) ಅಂಟಿಕೊಂಡಿರುತ್ತವೆ. ಸಾಮಾನ್ಯವಾಗಿ ಇದರಲ್ಲಿ ಕೋಮಲವಾದ ಬಾರ್ಬ್‌ಗಳು ಬಿಡಿಬಿಡಿಯಾಗಿರುತ್ತವೆ. ಲೇಶಗರಿಗಳ ಬೆಳವಣಿಗೆ ವಿವಿಧ ಪಕ್ಷಿಗಳಲ್ಲಿ ಬೇರೆಬೇರೆಯಾಗಿರುವುದೇ ಅಲ್ಲದೆ ಒಂದೇ ಪಕ್ಷಿಯ ಬೇರೆ ಬೇರೆ ಭಾಗದ ಗರಿಗಳಲ್ಲೂ ಭಿನ್ನತೆಯನ್ನು ಪ್ರದರ್ಶಿಸುತ್ತದೆ. ಕ್ಯಾಸೋವರಿ ಮತ್ತು ಈಮ್ಯೂ ಹಕ್ಕಿಗಳಲ್ಲಿ ಲೇಶಗರಿ ಮುಖ್ಯಗರಿಯ ಉದ್ದ ಮತ್ತು ಗಾತ್ರವನ್ನು ಹೋಲುವುದಾದರೂ ಸಾಮಾನ್ಯವಾಗಿ ಪ್ರಧಾನ ಗರಿಗಿಂತ ಇದು ಹೆಚ್ಚು ಕೋಮಲ ಮತ್ತು ಚಿಕ್ಕದು. ಕೆಲವು ಹಾರುವ ಪಕ್ಷಿಗಳ ದೊಡ್ಡ ದೊಡ್ಡ ಗರಿಗಳಲ್ಲಿ ಇದು ಕೆಲವು ಬಾರ್ಬ್‌ಗಳಿಂದ ಕೂಡಿರಬಹುದು ಅಥವಾ ಲೋಪವಾಗಿರಬಹುದು.

ಹಾರುವುದರಲ್ಲಿ ನೆರವಾಗುವ ಪೇನಾಗರಿಗಳು (ಕ್ವಿಲ್ ಫೆದರ್ಸ್) ಇತರ ಹೊದಿಕೆ ಗರಿಗಳಿಗಿಂತ ಬಹು ದೊಡ್ಡವು. ಇವು ರೆಕ್ಕೆ ಮತ್ತು ಬಾಲಗಳಿಗೆ ಮಾತ್ರ ಸೀಮಿತ ವಾಗಿರುತ್ತವೆ. ಈ ಗರಿಗಳ ದಂಡ ಸಾಮಾನ್ಯವಾಗಿ ನೆಟ್ಟಗಿರುತ್ತದೆ. ಆದರೆ ಉಳಿದ ಹೊದಿಕೆ ಗರಿಗಳ ದಂಡ ಸ್ವಲ್ಪ ಬಾಗಿರುತ್ತದೆ. ರೆಕ್ಕೆಯ ಪೇನಾಗರಿಗಳಿಗೆ ರೆಮೀಜೆಸ್ ಎಂದೂ ಬಾಲದ ಪೇನಾಗರಿಗಳಿಗೆ ರೆಟ್ರಿಸಿಸ್ ಎಂದೂ ಹೆಸರು. ರೆಕ್ಕೆಯ ಪೇನಾಗರಿಗಳಲ್ಲಿ ಹಲವು ಬಗೆ. ರೆಕ್ಕೆಯ ಹಿಂಪಾರ್ಶ್ವದಲ್ಲಿ ಅಂಟಿಕೊಂಡು ಹಿಮ್ಮುಖವಾಗಿ ಚಾಚಿರುವ ಗರಿಗಳಲ್ಲಿ ಪ್ರಾಥಮಿಕ ಮತ್ತು ದ್ವಿತೀಯಕ ಗರಿಗಳು ಮುಖ್ಯವಾದವು. ಪ್ರಾಥಮಿಕ ಗರಿಗಳು ಕೈಭಾಗದ ಎಲುಬುಗಳಿಗೂ ದ್ವಿತೀಯಕ ಗರಿಗಳು ಮುಂದೋಳಿನ ಅಲ್ನ ಎಂಬ ಎಲುಬಿಗೂ ಅಂಟಿಕೊಂಡಿರುತ್ತವೆ. ಹೆಬ್ಬೆರಳಿನ ಸ್ಥಳದಲ್ಲಿ ಅಂದರೆ ರೆಕ್ಕೆಯ ಮುಂಭಾಗದ ಕೊನೆಯಲ್ಲಿ ಆಲ ಸ್ಪೂರಿಯ ಎಂಬ ಒಂದು ವಿಶೇಷವಾದ ಚಿಕ್ಕ ಗರಿಗಳ ಗುಂಪು ಇದೆ. ಬಾಲದ ಪೇನಾಗರಿಗಳು ಅರ್ಧವೃತ್ತಾಕಾರದಲ್ಲಿ ಅಳವಡಿಸಿರುತ್ತವೆ. ಇವೇ ಅಲ್ಲದೆ ಬಾಲದ ಹಾಗೂ ರೆಕ್ಕೆಯ ಪೇನಾಗರಿಗಳ ಬುಡದ ಭಾಗವನ್ನು ಮುಚ್ಚುವ ಮೇಲಿನ ಹಾಗೂ ಕೆಳಗಿನ ಬಾಲ ಹಾಗೂ ರೆಕ್ಕೆಯ ಮುಚ್ಚಕ ಗರಿಗಳಿರುತ್ತವೆ (ವಿಂಗ್ ಕವರ್ಟ್ಸ್ ಅಂಡ್ ಟೈಲ್ ಕವರ್ಟ್ಸ್). ಈ ಮುಚ್ಚಕ ಗರಿಗಳಿಗೆ ಟೆಕ್ಟ್ರಿಸೆಸ್ ಎಂದು ಹೆಸರು.

ಹೊದಿಕೆಗರಿಗಳು ಕೆಲವು ಪಕ್ಷಿಗಳಲ್ಲಿ ಬಗೆಬಗೆಯಾಗಿ ಮಾರ್ಪಾಟ್ಟಿವೆ. ಉದಾಹರಣೆಗೆ ನವಿಲಿನ ತಲೆಯ ಮೇಲಿನ ಸುಂದರವಾದ ತುರಾಯಿ ಹಾಗೂ ವರ್ಣರಂಜಿತವಾದ ಬಾಲದ ನೀಳಗರಿಗಳು, ಮರಕುಟಿಕ, ಕೂಕೂಹಕ್ಕಿಗಳ ತಲೆಯ ಮೇಲಿನ ಗರಿಗಳು.

2 ಅರೆಪುಚ್ಛ ಗರಿಗಳು (ಸೆಮಿ ಪ್ಲೂಮ್ ಫೆದರ್ಸ್) : ಈ ಬಗೆಯ ಗರಿಗಳ ಸಂರಚನೆ ಹೊದಿಕೆ ಗರಿ ಹಾಗೂ ತುಪ್ಪಳ ಗರಿಗಳ ನಡುವಣ ರೀತಿಯಂತಿರುತ್ತದೆ. ಈ ಗರಿಯ ವಿವಿಧ ಭಾಗಗಳು ಹೊದಿಕೆ ಗರಿಯದರಂತೆಯೇ ಇರುತ್ತವೆ. ಆದರೆ ಬಾರ್ಬ್ಯೂಲ್‌ಗಳಲ್ಲಿ ಬಾರ್ಬಿಸೆಲ್‌ಗಳಿರುವುದಿಲ್ಲ. ಅರೆಪುಚ್ಛಗರಿಗಳು ಸಾಮಾನ್ಯವಾಗಿ ದೇಹದ ಎಡಬಲಭಾಗಗಳಲ್ಲಿ ಹಾಗೂ ದೇಹದ ತಳಭಾಗದ ಮೇಲಾಯದಲ್ಲಿ ಕಂಡು ಬರುತ್ತವೆ.

3 ತುಪ್ಪಳ ಗರಿಗಳು : ಹಲವು ಪಕ್ಷಿಗಳ ಮರಿಗಳು ಮೊಟ್ಟೆಯಿಂದ ಹೊರ ಬಂದಾಗ ಒಂದು ವಿಶಿಷ್ಟಬಗೆಯ ಗರಿಗಳಿಂದ ಹೊದೆಯಲ್ಪಟ್ಟಿರುತ್ತವೆ. (ಕೆಲವು ಪಕ್ಷಿಯ ಮರಿಗಳು ಮೊಟ್ಟೆಯಿಂದ ಹೊರಬಂದಾಗ ಬೋಳಾಗಿರುತ್ತವೆ.) ಈ ಬಗೆಯ ತಾತ್ಕಾಲಿಕವಾದ ಗರಿಗಳಿಗೆ ತುಪ್ಪಳ ಗರಿಗಳು ಅಥವಾ ಗೂಡುಮರಿಯ ಗರಿಗಳು ಎಂದು (ನೆಸ್ಟಿಂಗ್ ಫೆದರ್ಸ್) ಹೆಸರು. ದೇಹದ ಶಾಖ ಹೊರಗೆ ಹೋಗದಂತೆ ತಡೆಯುವ ಪ್ರಚಂಡಶಕ್ತಿ ಇವಕ್ಕೆ ಇದೆ. ಮರಿಗಳಲ್ಲಿ ಮಾತ್ರವಲ್ಲದೆ ಇವು ಪ್ರಾಯಸ್ಥ ಪಕ್ಷಿಯ ದೇಹದ ಮೇಲೂ ಹೊದಿಕೆ ಗರಿಗಳ ತಳಭಾಗದಲ್ಲಿ ಬಿಡಿಬಿಡಿಯಾಗಿ ಹರಡಿರುವುದು ಕಂಡುಬರುತ್ತದೆ. ಈ ಬಗೆಯ ಗರಿಯ ದಂಡ ಬಲು ಮೃದುವಾಗಿಯೂ ಕ್ಷೀಣವಾಗಿಯೂ ಇರುತ್ತದೆ. ಇದರ ಮೇಲೆ ಒಂದು ಕೊನೆಯಿಂದ ಮತ್ತೊಂದು ಕೊನೆಯವರೆಗೆ ಚಿಕ್ಕಚಿಕ್ಕ ಬಾರ್ಬ್ಯೂಲ್‌ಗಳಿಂದ ಕೂಡಿದ ನೀಳವಾದ ಬಳುಕುವಂಥ ಬಾರ್ಬ್‌ಗಳಿರುತ್ತವೆ.

4 ತಂತು ಗರಿಗಳು : ಇವು ಹೊದಿಕೆ ಗರಿಗಳ ನಡುವೆ ಚದರಿದಂತೆ ಹರಡಿರುವ ಮತ್ತು ತೆಳುವಾದ ಕೂದಲಿನಂತಿರುವ ಗರಿಗಳು. ಇವು ಸಾಮಾನ್ಯವಾಗಿ ಹೊದಿಕೆಗಳಂತಿರುವ ಫಾಲಿಕಲ್‌ಗಳ ಬಳಿಯೇ ಗುಂಪುಗುಂಪಾಗಿ ಬೆಳೆಯುತ್ತವೆ. ಒಂದೊಂದು ತಂತುಗರಿಗೂ ಒಂದು ನೀಳವಾದ ದಾರದಂತಿರುವ ದಂಡ ಇರುತ್ತದೆ. ಇದರ ತುದಿಯಲ್ಲಿ ಚಿಕ್ಕ ಚಿಕ್ಕ ಬಾರ್ಬ್ಯೂಲ್‌ಗಳಿಂದ ಕೂಡಿದ ದುರ್ಬಲವಾದ ಹಾಗೂ ಬಿಡಿಬಿಡಿಯಾದ ಬಾರ್ಬ್‌ಗಳಿವೆ. ಇವು ಎಲ್ಲ ಪಕ್ಷಿಗಳಲ್ಲಿ ಕಾಣಬರುತ್ತವೆ. ಕಾರ್ಮೊರಾಂಟ್ ಪಕ್ಷಿಗಳಲ್ಲಿ ಇವು ಹೊದಿಕೆ ಗರಿಗಳಿಂದ ಹೊರ ಚಾಚಿರುತ್ತವೆ. ಇವು ಹೊದಿಕೆ ಗರಿಗಳ ಅಪಭ್ರಷ್ಟವಾದ ರಚನೆಗಳು.

5 ಬಿರುಗೂದಲ ಗರಿಗಳು : ಇವು ಹೊದಿಕೆ ಗರಿಗಳ ಒಂದು ರೀತಿಯ ಮಾರ್ಪಾಟು. ಇವು ಒಂದೊಂದಕ್ಕೂ ಒಂದು ಚಿಕ್ಕ ದಂಡವೂ ಇದರ ತಳಭಾಗದಲ್ಲಿ ಕೆಲವು ಬಿಡಿ ಬಿಡಿಯಾದ ಚಿಕ್ಕ ಚಿಕ್ಕ ಬಾರ್ಬ್‌ಗಳೂ ಇವೆ. ಇವು ಸಾಮಾನ್ಯವಾಗಿ

ಕೆಲವು ಕೀಟಭಕ್ಷಿ ಪಕ್ಷಿಗಳಲ್ಲಿ ಮೂಗು ಮತ್ತು ಬಾಯಿಯ ಬಳಿ ಕಂಡುಬರುತ್ತವೆ. ಇವಕ್ಕೆ ಸಂವೇದನಾತ್ಮಕ ಕ್ರಿಯೆಯಿರುವುದೆಂದು ಹೇಳಲಾಗಿದೆ.

6 ದೂಳು ಗರಿಗಳು : ಇವು ಬಕ, ಕಬ್ಬಾರೆ, ಕೊಕ್ಕರೆ ಮೊದಲಾದ ಕೆಲವು ಜಲಚರ ಪಕ್ಷಿಗಳಲ್ಲಿ ಕಂಡುಬರುತ್ತವೆ. ದೇಹದ ಕೆಲವು ಪ್ರದೇಶಗಳಲ್ಲಿ ಮಾತ್ರ ಬೆಳೆಯುವ ಈ ಗರಿಗಳು ಬೆಳೆದಮೇಲೆ ನಯವಾದ ಪುಡಿ ಅಥವಾ ದೂಳಾಗಿ ಮಾರ್ಪಡುತ್ತವೆ. ಹಕ್ಕಿಗಳು ಈ ದೂಳನ್ನು ಇತರ ಗರಿಗಳಿಗೆ ಸವರಲು ಉಪಯೋಗಿಸುತ್ತವೆ. ಬಾಲದ ಬಳಿಯಿರುವ ತೈಲಗ್ರಂಥಿಯಿಂದ ಪಡೆದ ತೈಲ ಮತ್ತು ಈ ದೂಳು ಗರಿಗಳಿಗೆ ನೀರು ಅಂಟದಂತೆ ನೋಡಿಕೊಳ್ಳುತ್ತವೆ.

ಉಷ್ಟ್ರಪಕ್ಷಿ, ಈಮ್ಯೂ ಮೊದಲಾದ ಹಾರಲಾಗದ ಪಕ್ಷಿಗಳಲ್ಲಿ ಗರಿಗಳು ಸಾಮಾನ್ಯವಾಗಿ ದೇಹದ ಮೇಲೆಲ್ಲ ಏಕರೂಪವಾಗಿ ಬೆಳೆಯುತ್ತವೆ. ಆದರೆ ಹಾರುವ ಪಕ್ಷಿಗಳಲ್ಲಿ ಇವು ಚರ್ಮದ ಮೇಲಿನ ನಿರ್ದಿಷ್ಟ ಪಥ ಅಥವಾ ಕ್ಷೇತ್ರಗಳಲ್ಲಿ ಮಾತ್ರ ಬೆಳೆಯುತ್ತವೆ. ಪಕ್ಷಿದೇಹದ ಮೇಲಿನ ಗರಿ ವಿನ್ಯಾಸಕ್ಕೆ ಟೆರಿಯೋಲಿಸಿಸ್ ಎಂದು ಹೆಸರು; ಗರಿಗಳು ಬೆಳೆಯುವ ಪಥಗಳಿಗೆ ಟೆರಿಲಗಳೆಂದೂ ಅವುಗಳ ನಡುವಣ ಪ್ರದೇಶಕ್ಕೆ ಆಪ್ಟೆರಿಲಗಳೆಂದೂ ಹೆಸರು. ಟೆರಿಲಗಳು ಒಂದೊಂದು ಪಕ್ಷಿಗಣಕ್ಕೂ ಒಂದೊಂದು ಬಗೆಯವಾಗಿರುವುದರಿಂದ ಇವನ್ನು ಹಕ್ಕಿಗಳ ವರ್ಗೀಕರಣದಲ್ಲಿ ಬಳಸುತ್ತಾರೆ. ಎದೆ, ಬೆನ್ನೆಲುಬು, ಕುತ್ತಿಗೆಯ ಇಕ್ಕಡೆಗಳು, ಎದೆಯ ಇಕ್ಕಡೆಗಳು, ಉದರದ ಇಕ್ಕಡೆಗಳು, ಭುಜವನ್ನು ಕೂಡಿಸುವ ಕ್ಷೇತ್ರ, ಕಾಲಿನ ಮೇಲಿನ ಎರಡು ಕ್ಷೇತ್ರಗಳು ಹಾಗೂ ರೆಕ್ಕೆ ಮತ್ತು ಜಾಲದ ಗರಿಗಳು ಬೆಳೆವ ಪ್ರದೇಶ ಇವು ಪ್ರಧಾನವಾದ ಗರಿಪಥಗಳು.

ಸಾಮಾನ್ಯವಾಗಿ ಎಲ್ಲ ಹಕ್ಕಿಗಳಲ್ಲಿ ಬೇಸಗೆ ಮುಕ್ತಾಯವಾದಂತೆ ಗರಿಗಳು ಉದುರುತ್ತವೆ. ಕೆಲವು ಪಕ್ಷಿಗಳಲ್ಲಿ ವಸಂತಋತುವಿನಲ್ಲಿ ಅಂದರೆ ಸಂತಾನೋತ್ಪತ್ತಿಗೆ ಮುನ್ನ ಗರಿಗಳು ಭಾಗಶಃ ಅಥವಾ ಸಂಪೂರ್ಣವಾಗಿ ಕಳಚಿಬೀಳುತ್ತವೆ. ಹಾರಾಟದಲ್ಲಿ ನೆರವಾಗುವ ಪೇನಾಗರಿಗಳು ಕೆಲವು ಪಕ್ಷಿಗಳಲ್ಲಿ ಜೋಡಿ ಜೋಡಿಯಾಗಿ ಉದುರಿದರೆ ಬಾತು ಮತ್ತು ನೀರುಕೋಳಿಗಳಲ್ಲಿ ಈ ಗರಿಗಳು ಒಟ್ಟಿಗೆ ಕಳಚಿ ಬೀಳುತ್ತವೆ. ಇದರಿಂದ ಅವು ಹಲವು ವಾರಗಳ ಕಾಲ ಹಾರಲಾರವು. ಅನಂತರ ಹೊಸಗರಿಗಳು ಹಳೆಗರಿಗಳಿದ್ದ ಸ್ಥಳದಲ್ಲಿಯೇ ಮೂಡಿಬರುತ್ತವೆ.

ಸರೀಸೃಪಗಳು ಶಲ್ಕೆಗಳಂತೆ ಗರಿಗಳು ಕೂಡ ಚರ್ಮದ ಪ್ಯಾಪಿಲಗಳಿಂದ ಮೂಡಿ ಬರುತ್ತವೆ. ಹಾಗೂ ಭ್ರೂಣಾವಸ್ಥೆಯಿಂದಲೇ ವಿಭೇದನೆ ಹೊಂದಲು ಪ್ರಾರಂಭಿಸುತ್ತವೆ. ಕೋಳಿಮರಿಯ ಭ್ರೂಣದಲ್ಲಿ ಗರಿಮೂಲ (ಫೆದರ್ ಜೆರ್ಮ್) ಕಾವು ಕೂತ 6 $^1/_2$ ದಿವಸಗಳಲ್ಲಿಯೇ ಕಾಣಿಸಿಕೊಂಡು ಬೆಳೆಯಲಾರಂಭಿಸುತ್ತದೆ. ಪ್ರತಿ ಗರಿ ಮೂಲವೂ ಚರ್ಮದ ಮೇಲೆ ಬೊಬ್ಬೆಯಂತೆ ಕಾಣಿಸಿಕೊಂಡು ಕ್ರಮೇಣ ಚರ್ಮದ ಹಳ್ಳದಲ್ಲಿ ಕೆಳಕ್ಕಿಳಿಯುತ್ತದೆ. ಈ ಹಳ್ಳಕ್ಕೆ ಗರಿಕೂಪ (ಫೆದರ್ ಫಾಲಿಕಲ್) ಎಂದು ಹೆಸರು. ಗರಿಕೂಪದ ತಳಭಾಗದಲ್ಲಿ ಗರಿಪ್ಯಾಪಿಲ ಮೇಲೆದ್ದು ನಿಂತಿರುತ್ತದೆ. ಪ್ರತಿಪ್ಯಾಪಿಲವೂ ಸೂಕ್ಷ್ಮ ರಕ್ತನಾಳಗಳಿಂದ ಕೂಡಿದ ಡರ್ಮಿಸ್ ಹಾಗೂ ಅದರ ಮೇಲಿನ ಎಪಿಡರ್ಮಿಸಿನ ಹೊದಿಕೆಯಿಂದ ಕೂಡಿರುತ್ತದೆ. ಡರ್ಮಿಸ್ ಭಾಗ ಬೆಳೆಯುವ ಗರಿಗೆ ಪೋಷಣಾಂಶವನ್ನು ಒದಗಿಸುತ್ತದೆ. ಎಪಿಡರ್ಮಿಸ್‌ನಲ್ಲಿ ಸ್ಟ್ರಾಟಂ ಕಾರ್ನಿಯಂ ಮತ್ತು ಸ್ಟ್ರಾಟಂ ಮಾಲ್ಫೀಗಿ ಎಂಬ ಎರಡು ಪದರಗಳಿವೆ. ಮಾಲ್ಫೀಗಿ ಪದರದ ಚಟುವಟಿಕೆಗಳಿಂದ ಗರಿಗಳು ರೂಪುಗೊಳ್ಳುತ್ತವೆ. ಹೊರಗಿನ ಕಾರ್ನಿಯಂ ಪದರ ಬೆಳೆಯುವ ಗರಿಗೆ ಕೊಂಬಿನಿಂದಾದ ಒಂದು ತಾತ್ಕಾಲಿಕವಾದ ಹೊದಿಕೆಯನ್ನು ರಚಿಸುತ್ತದೆ. ಗರಿ ಬೆಳೆದು ಚರ್ಮದ ಮೇಲೆ ಮೂಡಿಬಂದ ಮೇಲೆ ಈ ಆವರಣ ಕಳಚಿ ಬೀಳುತ್ತದೆ. ಸಾಧಾರಣವಾಗಿ ಪೂರ್ಣವಾಗಿ ಬೆಳೆದ ಮೇಲೆ ಫಾಲಿಕಲ್ಲಿನ ಡರ್ಮಿಸ್ ಭಾಗ ಗರಿಯ ಕ್ವಿಲ್‌ನ ಒಳಭಾಗದಿಂದ ಕೆಳಗಿಳಿಯುತ್ತದೆ. ಆದರೆ ಜಪಾನಿನ ಫೀನಿಕ್ಸ್ ಕೋಳಿಯ ಬಾಲದ ಮಧ್ಯದ ಗರಿಗಳು ಹಲವು ವರ್ಷಗಳು ಬೆಳೆಯುತ್ತಲೇ ಇದ್ದು ಸುಮಾರು ಆರು ಮೀಟರು ಉದ್ದದಷ್ಟಾಗುತ್ತವೆ.

ಗರಿಗಳಲ್ಲಿ ವರ್ಣವಿನ್ಯಾಸ ಕೆಂಪು, ಕಪ್ಪು, ಕಂದು, ಕಿತ್ತಳೆ, ಹಳದಿ ಹೀಗೆ ವೈವಿಧ್ಯಮಯ. ಬಣ್ಣಗಳಿಗೆ ಗರಿಗಳಲ್ಲಿನ ವರ್ಣಕಗಳೇ ಕಾರಣ. ಪಕ್ಷಿಗಳ ವರ್ಣ ವಿನ್ಯಾಸದಲ್ಲಿ ಲೈಂಗಿಕ ದ್ವಿರೂಪತ್ವವನ್ನೂ ಕಾಣಬಹುದು. ಗಂಡಿನ ಗರಿಗಳು ಹೆಣ್ಣಿನ ಗರಿಗಳಿಗಿಂತ ಹೆಚ್ಚು ಮನಮೋಹಕ ಹಾಗೂ ಆಕರ್ಷಕ. ಬಹುಶಃ ಹೆಣ್ಣನ್ನು ಒಲಿಸಿಕೊಳ್ಳುವುದಕ್ಕಾಗಿ ಹೀಗಿರಬಹುದು.

ಗರಿಗಳಿಂದ ಪಕ್ಷಿಗಳಿಗೆ ಹಲವು ಬಗೆಯ ಉಪಯೋಗಗಳಿವೆ. ಇವು ಹಾರಾಟದ ಸಾಧನಗಳಾಗಿರುವುದಲ್ಲದೆ ದೇಹವನ್ನೆಲ್ಲ ಆವರಿಸಿರುವುದರಿಂದ ದೇಹದ ಶಾಖ ಹೊರಗೆ ಹೋಗದಂತೆ ಸಂರಕ್ಷಿಸುತ್ತವೆ, ಬಿಸಿಲು ಮಳೆ, ಗಾಳಿಗಳಿಂದ ಒಳಚರ್ಮವನ್ನು ಕಾಪಾಡುತ್ತವೆ; ಕೆಲವು ಸಂದರ್ಭಗಳಲ್ಲಿ ಶತ್ರುಗಳ ಕಣ್ಣಿಗೆ ಬೀಳದಂತಿರಲು ನೆರವಾಗ ಬಹುದು. ಉದಾಹರಣೆಗೆ ಟಾರ್ಮಿಗನ್ ಹಕ್ಕಿಯ ಗರಿಗಳ ಬಣ್ಣ ಬೇಸಗೆಯಲ್ಲಿ ಬೂದಿಮಿಶ್ರಿತ ಕಂದುಬಣ್ಣವಾದರೆ ಚಳಿಗಾಲದಲ್ಲಿ ಬಿಳಿ. ಮೊದಲನೆಯ ಬಣ್ಣ ಎಲೆಗಳ ಬಣ್ಣದೊಂದಿಗೆ ಐಕ್ಯವಾದರೆ ಬಿಳುಪು ಮಂಜಿನೊಡನೆ ಮಿಲನಗೊಳ್ಳುತ್ತದೆ. ಗಿಳಿಗಳನ್ನು ಹಸಿರೆಲೆಗಳ ಮಧ್ಯೆ ಗುರುತಿಸುವುದು ಕಷ್ಟ.

ಗರಿಗಳಿಂದ ಮಾನವನೂ ಹಲವು ಬಗೆಯ ಉಪಯೋಗಗಳನ್ನು ಪಡೆಯುತ್ತಿದ್ದಾನೆ. ಹಂಸ, ಬಾತು ಮುಂತಾದ ಕೆಲವು ಪಕ್ಷಿಗಳ ಗರಿಗಳಿಗೆ ಸ್ಥಿತಿಸ್ಥಾಪನಶಕ್ತಿ, ಮೃದುತ್ವ ಮೊದಲಾದ ವಿಶೇಷ ಲಕ್ಷಣಗಳಿರುವುದರಿಂದ ಇವುಗಳ ತುಪ್ಪಳ ಗರಿಗಳು ಹಾಸಿಗೆದಿಂಬು, ಒರಗುದಿಂಬು, ಮೇಲುಹೊದಿಕೆ ಮೊದಲಾದುವುಗಳ ಉಪಯೋಗಕ್ಕೆ ಬರುತ್ತವೆ. ಲೇಖನಿಗಳು ಬಳಕೆಗೆ ಬರುವ ಮುನ್ನ ಹಂಸ, ಬಾತು, ಹದ್ದು, ಕಾಗೆ, ಗೂಬೆ, ಟರ್ಕಿಕೋಳಿ ಮೊದಲಾದ ಪಕ್ಷಿಗಳ ಪೇನಾಗರಿಗಳನ್ನು ಬರೆವಣಿಗೆಯ ಉಪಕರಣವನ್ನಾಗಿ ಉಪಯೋಗಿಸುತ್ತಿದ್ದರು. ಪಾಶ್ಚಾತ್ಯ ದೇಶದಲ್ಲಿ ಕೆಲವು ವರ್ಣವೈವಿಧ್ಯವನ್ನುಳ್ಳ ಗರಿಗಳನ್ನು ಹೆಂಗಸರ ಟೋಪಿಗಳ ಅಲಂಕಾರಕ್ಕಾಗಿ ಉಪಯೋಗಿಸುತ್ತಾರೆ. ಅಮೆರಿಕದ ರೆಡ್ ಇಂಡಿಯನ್ನರು ತಮ್ಮ ತಲೆಗೆ ಧರಿಸುವ ಗರಿಗಳ ಕಿರೀಟಗಳಲ್ಲಿ ಗೋಲ್ಡನ್ ಈಗಲ್ ಮೊದಲಾದ ಪಕ್ಷಿಗಳ ಗರಿಗಳನ್ನು ಉಪಯೋಗಿಸುತ್ತಾರೆ. ಗೂಬೆಯ ಗರಿಗಳು ಬ್ರಷ್ಷುಗಳ ತಯಾರಿಕೆಗೆ ಬರುತ್ತವೆ. ನೀಳವಾದ ಗರಿಗಳನ್ನು ಕಂತೆಕಟ್ಟಿ ಪೊರಕೆಗಳನ್ನು ಮಾಡುವುದುಂಟು. ಷಟಲ್‌ಕಾಕ್ (ಬ್ಯಾಡ್ಮಿಂಟನ್) ಚಂಡುಗಳ ತಯಾರಿಕೆಯಲ್ಲಿ ಕೆಲವು ಬಗೆಯ ಗರಿಗಳ ಬಳಕೆಯಿದೆ.

ಪಕ್ಷಿಗಳು ಗರಿಗಳಿಗಾಗಿ ಕೊಲ್ಲಲ್ಪಟ್ಟು ವಿನಾಶದಂಚಿಗೆ ಬಂದಿರುವುದರಿಂದ ಬಹುಪಾಲು ರಾಷ್ಟ್ರಗಳಲ್ಲಿ ಹಕ್ಕಿಗಳ ರಕ್ಷಣೆಗಾಗಿ ಕಾನೂನುಗಳನ್ನು ಜಾರಿ ಮಾಡಲಾಗಿದ್ದು, ಇವುಗಳ ಬೇಟೆಯನ್ನು ನಿಷೇಧಿಸಲಾಗಿದೆ. (ಬಿ.ಎನ್.ಬಿ.)

**ಗರಿಕೆಹುಲ್ಲು :** ಪೋಯೇಸೀ (ಗ್ರಾಮಿನೀ) ಕುಟುಂಬಕ್ಕೆ ಸೇರಿದ ಸೈನೊಡಾನ್ ಡ್ಯಾಕ್ಟಿಲಾನ್ ಎಂಬ ವೈಜ್ಞಾನಿಕ ಹೆಸರಿನ ಒಂದು ಬಹುವಾರ್ಷಿಕ ಹುಲ್ಲು ಗಿಡ. ಕುಡಿಗರಿಕೆ. ಪರ್ಯಾಯ ನಾಮ. ಬರ್ಮ್ಯುಡ ಹುಲ್ಲು, ಬಹಾಮ ಹುಲ್ಲು ಎಂಬ ಹೆಸರುಗಳೂ ಇವೆ. ಇದನ್ನೆ ಬಹುವಾಗಿ ಹೋಲುವ ಇನ್ನಿತರ ಸುಮಾರು 10 ಬಗೆಯ ಹುಲ್ಲುಗಳಿವೆ. ಇವಕ್ಕೂ ರೂಢಿಯಲ್ಲಿ ಗರಿಕೆ ಹುಲ್ಲು ಎಂದೇ ಹೆಸರು. ಇವೆಲ್ಲ ಹಬ್ಬಿ ಹರಡಿಕೊಳ್ಳುವ ಬಹುವಾರ್ಷಿಕ ಸಸ್ಯಗಳು. ಇವುಗಳೆಲ್ಲ ಗರಿಕೆಹುಲ್ಲು ದನಕರುಗಳಿಗೆ ಬಹು ಮುಖ್ಯವಾದ ಆಹಾರವೆನಿಸಿದೆ.

ಯೂರೋಪಿನ ಮೂಲ ನಿವಾಸಿಯಾದ ಇದು ಪ್ರಪಂಚದ ಉಷ್ಣ ಮತ್ತು ಸಮಶೀತೋಷ್ಣವಲಯಗಳಲ್ಲೆಲ್ಲ ಬೆಳೆಯುತ್ತಿದೆ. ಭಾರತದಲ್ಲಿ ಸಮುದ್ರಮಟ್ಟದಿಂದ ಹಿಡಿದು 2500 ಮೀ ಎತ್ತರದ ವರೆಗಿನ ಪ್ರದೇಶಗಳಲ್ಲಿ ಇದನ್ನು ಕಾಣಬಹುದು. ರಸ್ತೆ ಮತ್ತು ಕಾಲುದಾರಿಗಳ ಅಂಚಿನಲ್ಲಿ ಸಮೃದ್ಧಿಯಾಗಿ ಬೆಳೆದಿರುತ್ತದೆ. ಬಂಜರು ಬಿಟ್ಟಿರುವ ಭೂಮಿಯನ್ನು ಈ ಹುಲ್ಲು ಬಹುಬೇಗ ಆವರಿಸಿಕೊಳ್ಳುವುದು. ಇದು ಎಲ್ಲ ಬಗೆಯ



ಮಣ್ಣುಗಳಲ್ಲಿ ಬೆಳೆಯ ಬಲ್ಲದಾದರೂ ಗಟ್ಟಿ ಮಣ್ಣಿನಲ್ಲಿ ಚೆನ್ನಾಗಿ ಬೆಳೆಯುತ್ತದೆ. ವರ್ಷದ ಎಲ್ಲ ಕಾಲಗಳಲ್ಲೂ ಹೂ ಬಿಡುವುದು ಇದರ ಪ್ರಮುಖ ಲಕ್ಷಣಗಳಲ್ಲೊಂದು. ಗರಿಕೆ ಹುಲ್ಲನ್ನು ಕಾಂಡ ಅಥವಾ ಬೇರು ಭಾಗಗಳನ್ನು ಕತ್ತರಿಸಿ ನೆಟ್ಟು ಬೆಳೆಸಬಹುದು. ಬೀಜಗಳಿಂದಲೂ ಬೆಳೆಸಬಹುದು. ರೆಂಬೆಗಳಲ್ಲಿ ಗೆಣ್ಣುಗಳಲ್ಲಿ ಬೇರು ಬಿಟ್ಟುಕೊಂಡು ಹಬ್ಬಿ ಹರಡಿಕೊಳ್ಳುತ್ತವೆ. ಕಾಂಡದ ಕವಲುಗಳು ಬಳ್ಳಿಯಂತೆ 1–1.2 ಮೀ ಉದ್ದಕ್ಕೆ ಬೆಳೆಯುತ್ತವೆ. ಮಳೆಗಾಲದಲ್ಲಿ 5–7 ಮೀ ವರೆಗೂ ವರ್ಧಿಸಿರುವುದುಂಟು. ಹೂಗಳು ಸ್ಪೈಕ್ ಮಾದರಿಯ ಗೊಂಚಲಲ್ಲಿ ಸಮಾವೇಶಗೊಂಡಿವೆ. ಒಂದೊಂದು ಗೊಂಚಲಲ್ಲೂ 3–6 ಕವಲು ಗೊಂಚಲುಗಳಿರುತ್ತವೆ.

ಬೇರಾವ ಹುಲ್ಲಿಗಿಂತಲೂ ದನಕರುಗಳಿಗೆ, ಅದರಲ್ಲೂ ಕುದುರೆಗಳಿಗೆ, ಹೆಚ್ಚು ಉಪಯುಕ್ತವಾದ ಮೇವೆಂದರೆ ಗರಿಕೆಹುಲ್ಲು. ಇದನ್ನು ಹಸಿಯಾಗಿ ಇಲ್ಲವೆ ಒಣಗಿಸಿ ತಿನ್ನಿಸಬಹುದು. ಕಾಕಂಬಿ ಜೊತೆಯಲ್ಲಿ ಬೆರೆಸಿ ಕೆಡದಂತೆ ಅನೇಕ ವರ್ಷಗಳವರೆಗೆ ಇದನ್ನು ಕಾದಿಟ್ಟ ಹುಲ್ಲಾಗಿ ಅಥವಾ ಹಗೇವು ಮೇವಾಗಿ ಇಡಬಹುದು. ಬಲು

ಪುಷ್ಟಿದಾಯಕವೆಂದು ಹೆಸರಾಗಿರುವ ಇದರಲ್ಲಿ ಕಚ್ಚಾಪ್ರೋಟೀನ್ ಶೇ. 10.47, ನಾರು ಶೇ. 28.17, ಸಾರಜನಕಮುಕ್ತವಸ್ತುಗಳು ಶೇ. 47.8, ಈಥರ್ ಅಂಶ ಶೇ. 1.80 ಮತ್ತು ವಿವಿಧ ಖನಿಜಾಂಶಗಳು ಶೇ. 11.75, ಇರುವುದು ಕಂಡುಬಂದಿದೆ.

ತೆನೆ ಬಿಟ್ಟಾಗ ಇದನ್ನು ಕತ್ತರಿಸಿ ಒಣಗಿಸುವುದು ರೂಢಿಯಲ್ಲಿರುವ ಕ್ರಮ. ಒಂದು ಎಕರೆಗೆ 15–20 ಮಣದಷ್ಟು ಹುಲ್ಲು ದೊರೆಯುತ್ತದೆ. ಸರಿಯಾಗಿ ಗೊಬ್ಬರ ಮತ್ತು ನೀರನ್ನು ಒದಗಿಸಿ ಇಳುವರಿಯನ್ನು ಹೆಚ್ಚಿಸಬಹುದು. ವರ್ಷಕ್ಕೆ ಕೊನೆಯ ಪಕ್ಷ 4 ಬಾರಿ ಕಟಾಯಿಸಬಹುದು. ಇದರ ಗುಪ್ತಕಾಂಡಗಳನ್ನು ಸಣ್ಣ ಸಣ್ಣ ತುಂಡುಗಳಾಗಿ ಕತ್ತರಿಸಿ, ಸಗಣಿಯೊಂದಿಗೆ ಬೆರೆಸಿ ಕೆತ್ತಿದ ಭೂಮಿಯ ಮೇಲೆ, ಮಳೆ ಪ್ರಾರಂಭವಾಗುವ ಮುನ್ನ ಹಾಕಿದರೆ, ಮಳೆಗಾಲದ ಕೊನೆಗೆ ಚೆನ್ನಾಗಿ ಬೆಳೆದು ಹರಡಿಕೊಳ್ಳುತ್ತದೆ.

ಗರಿಕೆಹುಲ್ಲು ಇಷ್ಟು ಉಪಯುಕ್ತವಾದರೂ ಇದು ಒಂದು ಕಡೆ ಬೇರೂರಿದ ಮೇಲೆ ಇದನ್ನು ನಿರ್ಮೂಲ ಮಾಡುವುದು ಕಷ್ಟ. ವ್ಯವಸಾಯದ ಭೂಮಿಗಳನ್ನು ಇದು ಒಂದು ಅಪಾಯಕಾರಿ ಕಳೆಯಾಗಿ ಬಹುಬೇಗ ಆವರಿಸಿಕೊಳ್ಳುವುದು. ಅಲ್ಲಿ ಬೆಳೆದಿರುವ ಪೈರುಗಳನ್ನು ಹಾಳು ಮಾಡುವುದಲ್ಲದೆ ಕೆಲವೇ ವರ್ಷಗಳಲ್ಲಿ ಅಲ್ಲಿರುವ ಮಣ್ಣಿನ ಸಾರವನ್ನೆಲ್ಲ ಹೀರಿ ನೆಲವನ್ನು ವ್ಯವಸಾಯಕ್ಕೆ ಅನುಪಯುಕ್ತವಾಗಿ ಮಾಡುತ್ತದೆ. ಬೇಸಗೆಯಲ್ಲಿ ಭೂಮಿಯನ್ನು ಆಳವಾಗಿ ಉತ್ತು ಗರಿಕೆಹುಲ್ಲಿನ ಬೇರುಗಳನ್ನು ಬಿಸಿಲಿಗೆ ಬಿಡುವುದರ ಮೂಲಕ ಇದನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಬಹುದು. ಇಂಥ ಭೂಮಿಯಲ್ಲಿ ಗೋದಿಯ ಬೆಳೆಯನ್ನು ಬೆಳೆಸುವುದರಿಂದ ಹುಲ್ಲಿನ ಕಳೆ ಬಹುಮಟ್ಟಿಗೆ ನಿರ್ಮೂಲವಾಗುವುದೆಂಬ ಅಂಶ ಈಚೆಗೆ ಗೊತ್ತಾಗಿದೆ. ಬಹುಶಃ ಗೋದಿ ಬೆಳೆಗೆ ಮಾಡುವ ವ್ಯವಸಾಯ ಕ್ರಮ ಗರಿಕೆಹುಲ್ಲಿಗೆ ಮಾರಕವೆನಿಸಬಹುದು.

ಗರಿಕೆಹುಲ್ಲಿನ ಕಷಾಯ ಮೂತ್ರಸ್ರಾವವನ್ನು ಹೆಚ್ಚಿಸುತ್ತದೆ. ಜಲೋದರ ರೋಗಕ್ಕೆ ಔಷಧವಾಗಿಯೂ ಇದರ ಬಳಕೆ ಉಂಟು. ಬೇರು ಮತ್ತು ಗುಪ್ತಕಾಂಡಗಳಿಂದ ಮೂತ್ರಜನಕಾಂಗ ಮತ್ತು ಜನನಾಂಗಗಳ ಕೆಲವು ರೋಗಗಳ ನಿವಾರಣೆಗೆ ಔಷಧಿಯನ್ನು ತಯಾರಿಸುತ್ತಾರೆ. ರಕ್ತಸ್ರಾವವನ್ನು ತಡೆಯಲು ಕೂಡ ಇದನ್ನು ಬಳಸುವುದುಂಟು.

(ಕೆ.ಎಸ್.ಜೆ.; ಎಂ.)

**ಗರಿನಕ್ಷತ್ರ :** ಕಂಟಕಚರ್ಮಿಗಳ ವಂಶದ ಪೆಲ್ಮಟೋಜೋವ ಉಪವಂಶದ ಕ್ರೈನಾಯ್ಡಿಯ ವರ್ಗಕ್ಕೆ ಸೇರಿದ ಸಮುದ್ರವಾಸಿಗಳಿಗಿರುವ ಸಾಮಾನ್ಯ ಹೆಸರು (ಫೆದರ್ ಸ್ಟಾರ್, ಸೀ ಲಿಲ್ಲಿ). ಸು. 3500 ಮೀ ಆಳದಲ್ಲಿ ಯಾವುದಾದರೂ ಅಧಃಸ್ತರಕ್ಕೆ (ಸಬ್‌ಸ್ಟ್ರಾಟಮ್) ಅಂಟಿಕೊಂಡಿರುತ್ತದೆ. ಇದಕ್ಕೆಂದೇ ಅಧೋಭಾಗದಲಿ ಉದ್ದವಾದ ತೊಟ್ಟಿದೆ. ರೈಜೊಕ್ರೈನಸ್ ಮತ್ತು ಪೆಂಟ್ರಾಕ್ರೈನಸ್ ಈ ತೆರನ ಪ್ರಾಣಿಗಳು. ಅದರೆ ಆಂಟೆಡಾನ್ ಮಾತ್ರ ಕಾಂಡದಿಂದ ತುಂಡಾಗಿ ತನ್ನ ಬಾಹುಗಳ ಸಹಾಯದಿಂದ ಸಮುದ್ರದಲ್ಲಿ ಈಜಬಲ್ಲದು. ಪೆಡಸು ನಕ್ಷತ್ರ ಮತ್ತು ನಕ್ಷತ್ರಗಳಲ್ಲಿರುವಂತೆ ಇದರಲ್ಲಿಯೂ ಮಧ್ಯತಟ್ಟೆ ಮತ್ತು ಅದರಿಂದ ಹೊರಡುವ ಐದು ಬಾಹುಗಳಿವೆ. ಮಧ್ಯತಟ್ಟೆಗೆ ಕೇಲಿಕ್ಸ್ ಎಂದು ಹೆಸರು. ಪ್ರತಿ ಬಾಹುವೂ ಬುಡದಲ್ಲಿ ಎರಡಾಗಿ ಕವಲೊಡೆದಿರುವುದರಿಂದ ಹತ್ತು ನೀಳವಾದ, ನಮ್ಯವಾದ ಮತ್ತು ಉದ್ದವಾದ ಬಾಹುಗಳಿರುವಂತೆ ಭಾಸವಾಗುತ್ತದೆ. ಪ್ರತಿಯೊಂದು ಕವಲಿನಲ್ಲೂ ಪಿನ್ಯೂಲುಗಳೆಂಬ ಸಣ್ಣ ಸಣ್ಣ ಕವಲುಗಳಿವೆ. ಬಾಹುಗಳಿಗೂ ಹಕ್ಕಿಯ ಗರಿಗಳಿಗೂ ಹೋಲಿಕೆ ಇರುವುದರಿಂದಲೇ ಗರಿನಕ್ಷತ್ರವೆಂದು ಹೆಸರು. ಕೇಲಿಕ್ಸ್‌ನ ಊರ್ಧ್ವಭಾಗದಲ್ಲಿ ಬಾಯಿ ಮತ್ತು ಆಸನದ್ವಾರಗಳಿವೆ. ಇವಲ್ಲದೆ ಬಾಯಿಯಿಂದ ಐದು ಆಂಬುಲ್ಯಾಕ್ರಲ್ ಕೊರಕಲುಗಳು ತ್ರಿಜ್ಯಕ್ಕೆ ಹೊರಡುತ್ತವೆ. ಈ ಕೊರಕಲುಗಳು ಶಿಲಕೆಯುಕ್ತವಾಗಿವೆ ಮತ್ತು ಪರಿಧಿಯಲ್ಲಿ ಸಾಲಾಗಿ ಜೋಡಿಸಲ್ಪಟ್ಟ ಟೆಂಟಕಲ್ ಅಥವಾ ಪೋಡಿಯಗಳನ್ನು (ಮಾರ್ಪಾಟಾದ ನಳಿಕೆಪಾದ) ಹೊಂದಿವೆ. ಆಂಟೆಡಾನ್‌ನಲ್ಲಿ ಕೇಲಿಕ್ಸ್‌ನ್ ಅಧೋಭಾಗದಲ್ಲಿ ಒಂದು ದೊಡ್ಡ ಆಸಿಕಲ್ ಇದೆ. ಇದು ಮುಂಚೆ ಇದ್ದ ತೊಟ್ಟು ಅಥವಾ ಕಾಂಡದ ಮೂಲಬಿಂದು. ಇದಲ್ಲದೆ ಸಿರ್ರೈ ಎಂಬ ಸಣ್ಣ ಸಣ್ಣ ಆಸಿಕಲ್‌ಗಳೂ ಉಂಟು. ಇವು ಅಧಃಸ್ತರಕ್ಕೆ ಅಂಟಿಕೊಳ್ಳಲು ಸಹಾಯಕ. ದೇಹದ ಅಸ್ಥಿಪಂಜರ ಆಸಿಕಲ್‌ಗಳಿಂದಾಗಿದೆ. ಜೀರ್ಣಾಂಗವ್ಯೂಹ ಬಾಯಿ, ಅಗಲವಾದ ಅನ್ನನಾಳ, ದೊಡ್ಡದಾದ ಜಠರ, ಸುರುಳಿಯಾಕಾರದ ಕರುಳು ಮತ್ತು ಆಸನದ್ವಾರಗಳನ್ನೊಳಗೊಂಡಿದೆ. ಹೀಮಲ್ ವ್ಯವಸ್ಥೆ ಮತ್ತು ನರವ್ಯೂಹ ಇತರ ಕಂಟಕಚರ್ಮಿಗಳಂತಿವೆ. ಆಮ್ಲಜನಕ ಮತ್ತು ಇಂಗಾಲದ ಡೈಆಕ್ಸೈಡ್‌ಗಳ ವಿನಿಮಯವಾಗುವುದು ಪೋಡಿಯಗಳಲ್ಲಿ.

ಗರಿನಕ್ಷತ್ರಗಳು ಏಕಲಿಂಗಿಗಳು. ಮೊಟ್ಟೆಗಳೊಡೆದು ಡಾಲಿಯೋಲೇರಿಯ ಎಂಬ ಲಾರ್ವಗಳು ಹೊರಬರುತ್ತವೆ. ಇವು ನೀರಿನಲ್ಲಿ ಈಜಾಡುತ್ತ ಸ್ವಲ್ಪ ದಿವಸಗಳಲ್ಲೆ ಕಾಂಡಯುಕ್ತ ಪೆಂಟಾಕ್ರೈನಾಯಿಡ್ ಎಂಬ ಲಾರ್ವಗಳಾಗುತ್ತವೆ. ಇವುಗಳು ಅಧಃಸ್ತರಕ್ಕೆ ಅಂಟಿಕೊಂಡಿರುತ್ತವೆ. ರೂಪಪರಿವರ್ತನೆ ಹೊಂದಿ ಬೆಳೆದ ಗರಿನಕ್ಷತ್ರಗಳಾಗುತ್ತವೆ.

(ಎಸ್.ಕೆ.ಎಚ್.)

**ಗರುಡ :** ಫಾಲ್ಕನಿ ಫಾರ್ಮೀಸ್ ಗಣದ ಆಕ್ಸಿಪಿಟ್ರಿಡೀ ಕುಟುಂಬದ ಬ್ಯೂಟಿಯಾನಿನೀ ಉಪಕುಟುಂಬಕ್ಕೆ ಸೇರಿದ ಒಂದು ಹಕ್ಕಿ. ಹದ್ದು, ಗಿಡುಗ, ಡೇಗೆ, ರಣಹದ್ದು, ಗೂಬೆ ಮುಂತಾದವುಗಳ ಹತ್ತಿರ ಸಂಬಂಧಿ. ಹ್ಯಾಲಿಯಾಸ್ಟರ್ ಇಂಡಸ್ ಇದರ ವೈಜ್ಞಾನಿಕನಾಮ. ಬ್ರಾಹ್ಮಣಿ ಕೈಟ್ ಎಂಬುದು ಇಂಗ್ಲಿಷಿನಲ್ಲಿ ಸಾಮಾನ್ಯ ಬಳಕೆಯಲ್ಲಿರುವ ಹೆಸರು. ಗರುಡ ಭಾರತ, ಬಾಂಗ್ಲಾದೇಶ, ನೇಪಾಳ, ಶ್ರೀಲಂಕಾ, ಪಾಕಿಸ್ತಾನಗಳಲ್ಲಿ ಕಂಡುಬರುತ್ತದೆ.



ಇದರ ಹಲವು ಬಗೆಗಳು ಬರ್ಮ, ಇಂಡೋಚೀನ, ಮಲಯಗಳಿಂದ ಹಿಡಿದು ಸಾಲೊಮನ್ ದ್ವೀಪಗಳವರೆಗೂ ಹರಡಿವೆ. ಸುಮಾರು 48 ಸೆಂಮೀ. ಉದ್ದದ ಸುಂದರವಾದ ಹಕ್ಕಿಯಿದು. ತಲೆ, ಕುತ್ತಿಗೆ, ಎದೆ, ಮತ್ತು ಬೆನ್ನಿನ ಮುಂಭಾಗಗಳು ಬಿಳುಪು. ದೇಹದ ಉಳಿದ ಭಾಗ ಕೆಂಪು ಮಿಶ್ರಿತವಾದ ಕಂದು. ಈ ಕೆಂಪು ಮಿಶ್ರಿತ ಕಂದು ಬಣ್ಣವೇ ಇದಕ್ಕೆ ಇಂಗ್ಲಿಷ್ ಹೆಸರಿನ ಪೂರ್ವಪದ 'ಬ್ರಾಹ್ಮಿನಿ'ಯನ್ನು ತಂದುಕೊಟ್ಟಿದೆ. ನಮ್ಮಲ್ಲಿ ಬ್ರಾಹ್ಮಣಿ ಮೈನಾ, ಬ್ರಾಹ್ಮಿಣಿ ಬಾತುವೂ ಇವೆ. ಹೊರನೋಟಕ್ಕೆ ಗಂಡು ಹೆಣ್ಣುಗಳು ಒಂದೇ ಬಗೆ. ಗರುಡ ಸಾಮಾನ್ಯವಾಗಿ ನದಿ, ಕೊಳ, ಝರಿ, ಸಮುದ್ರ ತೀರ, ನೀರು ತುಂಬಿದ ಗದ್ದೆಗಳು, ಬಂದರು, ಅಣೆಕಟ್ಟುಗಳಿರುವ ಪ್ರದೇಶಗಳಲ್ಲಿ ಒಂಟೊಂಟಿಯಾಗಿ ಕಂಡು ಬರುತ್ತವೆ. ಹದ್ದಿನ ಕೊಕ್ಕಿನಂತೆ ಇದರ ಕೊಕ್ಕೂ ಬಲವಾಗಿದ್ದು ಬಾಗಿದೆ. ಅಂಚು ಬಲು ಹರಿತ. ಕೊಕ್ಕಿನ ಬಣ್ಣ ನಸುನೀಲಿ. ಮೇಲುಕೊಕ್ಕಿನ ಬುಡಭಾಗದಲ್ಲಿ ಸೆರೆ ಎಂಬ ಹಳದಿ



ವಿಷ್ಣುವಿನವಾಹನ ಗರುಡ–ರವಿವರ್ಮನ ಕಲಾಕೃತಿ

ಬಣ್ಣದ ರಚನೆಯಿದೆ. ಇದರ ಬಳಿ ಅಗಲ ಹಾಗೂ ದುಂಡಗಿನ ಮೂಗಿನ ಹೊಳ್ಳೆಗಳಿವೆ. ಕಣ್ಣಿನ ವರ್ಣಪಟಲ ಕಂದು ಅಥವಾ ಹಳದಿಮಿಶ್ರಿತವಾದ ಕಂದು ಬಣ್ಣದ್ದು. ದೃಷ್ಟಿ ಬಲು ಸೂಕ್ಷ್ಮ. ರೆಕ್ಕೆಗಳು ಅತ್ಯಂತ ಬಲಯುತವಾಗಿದ್ದು ತುಂಬ ಉದ್ದವಾಗಿ ಬಾಲದ ತುದಿಯವರೆಗೂ ಚಾಚಿವೆ. ಹರಡಿದಾಗ ಒಂದೊಂದು ರೆಕ್ಕೆಯೂ 38–39 ಸೆಂಮೀ ಅಗಲವಿರುತ್ತದೆ. ಬಾಲ ಕೂಡ ಉದ್ದ ಮತ್ತು ದುಂಡು. ಕಾಲು ಮತ್ತು ಪಾದಗಳು

ಬೂದು ಮಿಶ್ರಿತ ಇಲ್ಲವೆ ಹಸಿರು ಮಿಶ್ರಿತವಾದ ಹಳದಿಬಣ್ಣದಿಂದ ಕೂಡಿವೆ. ಕಾಲಿನ ಮೇಲ್ಭಾಗ ಗರಿಗಳಿಂದ ಮುಚ್ಚಿದ್ದು ತಳಭಾಗ ಬೋಳಾಗಿದೆ. ತಳಭಾಗದಲ್ಲೂ ಮತ್ತು ಬೆರಳುಗಳ ಮೇಲೂ ಶಲ್ಕೆಗಳಿವೆ. ಉಗುರುಗಳು ಕಪ್ಪು; ಬೇಟೆ ಹಿಡಿಯಲು ಅನುಕೂಲವಾಗುವಂತೆ ಬಾಗಿವೆ, ಬಲಯುತವಾಗಿವೆ. ಅಂಗಾಲಿನಲ್ಲಿ ಮುಳ್ಳುಮಯವಾದ ಸಣ್ಣಸಣ್ಣ ಶಲ್ಕೆಗಳಿವೆ. ಗರುಡಪಕ್ಷಿಯ ಧ್ವನಿ ತೀಕ್ಷ್ಣವಾದ ಸಿಳ್ಳಿನಂತಿದೆ. ಮೀನು, ಕಪ್ಪೆ, ಸಣ್ಣ ಸಣ್ಣ ಹಾವುಗಳು, ಹಲ್ಲಿ, ಸಣ್ಣಗಾತ್ರದ ಸ್ತನಿಗಳು, ಕೋಳಿ, ಕೀಟ ಮತ್ತು ಅವುಗಳ ಡಿಂಬಗಳು ಮುಂತಾದವು ಗರುಡಪಕ್ಷಿಯ ಮುಖ್ಯ ಆಹಾರ. ಅಪರೂಪವಾಗಿ ಇದು ಹದ್ದು, ರಣಹದ್ದುಗಳಂತೆ ಸತ್ತ ಪ್ರಾಣಿಗಳನ್ನು ತಿನ್ನುವುದುಂಟು.


ಬೇಲೂರಿನ ಚೆನ್ನಕೇಶವದೇವಾಲಯದಲ್ಲಿರುವ ಗರುಡ, ಚಿನ್ನಾಚಾರ್ಯರ ಆಧುನಿಕ ಶಿಲ್ಪ


ಗರುಡ ಪಕ್ಷಿಯ ಸಂತಾನೋತ್ಪತ್ತಿಯ ಕಾಲ ಡಿಸೆಂಬರ್ –ಏಪ್ರಿಲ್ ತಿಂಗಳುಗಳು. ಹಳ್ಳಿಗಳ ಹೊರವಲಯದಲ್ಲಿ ನೀರಿನ ಆಸರೆಯಿರುವಂಥ ಪ್ರದೇಶಗಳಲ್ಲಿ, ಬೆಳೆಯುವ ಅರಳಿ, ಆಲ, ಹುಣಿಸೆ, ಗಾಳಿಮರ ಮತ್ತು ತೆಂಗಿನ ಗಿಡಗಳ ಮೇಲೆ ಇದು ಗೂಡು ಕಟ್ಟುತ್ತದೆ. ಗೂಡಿನ ರಚನೆಯಲ್ಲಿ ಮುಖ್ಯವಾಗಿ ಕಡ್ಡಿಪುಳ್ಳೆಗಳು ಮತ್ತು ಕೆಲವೊಮ್ಮೆ ಹತ್ತಿ, ಉಣ್ಣೆ, ಎಲೆಗಳು ಮೊದಲಾದವನ್ನು ಬಳಸುವುದುಂಟು. ಸಾಮಾನ್ಯವಾಗಿ ಒಂದು ಸೂಲಿನಲ್ಲಿ ಎರಡು ಇಲ್ಲವೆ ಮೂರು ಮೊಟ್ಟೆಗಳಿರುತ್ತವೆ. ಮೊಟ್ಟೆಯ ಉದ್ದ 5 ಸೆಂಮೀ. ಅಗಲ 4 ಸೆಂಮೀ; ಬಣ್ಣ ಬೂದಿಮಿಶ್ರಿತ ಬಿಳಿ. ಮೇಲೆಲ್ಲ ಕಂದುಬಣ್ಣದ ಚುಕ್ಕೆಗಳಿವೆ. ಹೆಣ್ಣುಗಂಡುಗಳೆರಡೂ ಸೇರಿ ಗೂಡುಕಟ್ಟುತ್ತವೆ. ಕಾವು ಕೊಡುವುದು ಹೆಣ್ಣು. ಕಾವು ಕೊಡುವ ಹೆಣ್ಣಿಗೆ ಆಹಾರವನ್ನು ತಂದು ಕೊಡುವ ಕೆಲಸ ಗಂಡಿನ ಪಾಲಿನದು. 26–27 ದಿನಗಳ ಕಾಲ ಕಾವು ಕೊಟ್ಟ ಮೇಲೆ ಮೊಟ್ಟೆಯಿಂದ ಮರಿಗಳು ಹೊರಗೆ ಬರುತ್ತವೆ. ಪ್ರಾಯಕ್ಕೆ ಬರುವ ಮುನ್ನ ಮರಿಗಳ ಬಣ್ಣ ಕಂದು. ವರ್ಷಂಪ್ರತಿ ಮರಿಗಳ ಗರಿ ಉದುರುತ್ತವೆ. ನಾಲ್ಕು ವರ್ಷಗಳಾದ ಮೇಲೆ ಮರಿಗಳು ಪ್ರೌಢಾವಸ್ಥೆಗೆ ಬರುತ್ತವೆ. ಮರಿಗಳ ಬಾಲ ಗುಂಡಾಗಿರುತ್ತದೆ ಮತ್ತು ವಯಸ್ಕ ಹಕ್ಕಿಗಳಿಗೆ ತಲೆ ಹಾಗೂ ಎದೆಯ ಮೇಲೆ ಬಿಳಿಯ ಬಣ್ಣ ಇರುವುದಿಲ್ಲ.

ಭಾರತದಲ್ಲಿ ಗರುಡನಿಗೆ ಸಂಬಂಧಿಸಿದಂತೆ ಹಲವು ಪೌರಾಣಿಕ ಕಥೆಗಳಿವೆ. ಗರುಡ ಪಕ್ಷಿಗಳ ರಾಜ. ಗರುಡನ ಶಕ್ತಿ ಸಾಮರ್ಥ್ಯಗಳನ್ನು ಮೆಚ್ಚಿದ ಮಹಾವಿಷ್ಣು ಅದನ್ನು ತನ್ನ ವಾಹನವನ್ನಾಗಿ ಮಾಡಿಕೊಂಡಿದ್ದಾನೆ. ಶಿಲ್ಪಕಲೆಯಲ್ಲಿ ಗರುಡನ ಆಕೃತಿ ಮನುಷ್ಯನಂತಿದ್ದು ಬಾಗಿದ ಕೊಕ್ಕು ಮತ್ತು ರೆಕ್ಕೆಗಳಿಂದ ಕೂಡಿರುತ್ತದೆ. ಇಂಥ ವಿಗ್ರಹಗಳನ್ನು ಹಲವು ವೈಷ್ಣವ ದೇವಾಲಯಗಳಲ್ಲಿ ಕಾಣಬಹುದು. ಗರುಡನಿಗೂ ನಾಗರಹಾವುಗಳಿಗೂ ಇರುವ ಬದ್ಧ ದ್ವೇಷಕ್ಕೆ ಸಂಬಂಧಿಸಿದ ಕಥೆಗಳೂ ಉಂಟು. ಗರುಡ ಮತ್ತು ಸೂರ್ಯನ ಸಾರಥಿಯಾದ ಅರುಣ ಎಂಬುವರು ಕಶ್ಯಪಮುನಿ ಮತ್ತು ವಿನತೆಯರ ಮಕ್ಕಳು. ಇವರ ಮಲತಾಯಿ ಕದ್ರು, ಸರ್ಪಗಳ ತಾಯಿ. ಕಾರಣಾಂತರದಿಂದ ವಿನತೆ ಕದ್ರುವಿನ ದಾಸಿಯಾಗಿರಬೇಕಾದ ಸಂದರ್ಭ ಒದಗಿತು. ನಾಗರಾಜನು ಗರುಡನ ಬೆನ್ನುಹತ್ತಿ ಸವಾರಿ ಮಾಡಲು ಪ್ರಾರಂಭಿಸಿದ. ಇದರಿಂದ ಗರುಡನಿಗೆ ತುಂಬಾ ಅವಮಾನ ವಾದಂತಾಯಿತು. ತಾಯಿಯ ದಾಸ್ಯವನ್ನು ತೊಡೆದುಹಾಕಲು ಮಾರ್ಗವೇನೆಂದು ವಿಚಾರಿಸಿದ. ಸ್ವರ್ಗಲೋಕದಿಂದ ಅಮೃತವನ್ನು ಕದ್ರುವಿಗೆ ತಂದು ಕೊಟ್ಟರೆ ತಾಯಿಯ ದಾಸ್ಯ ನಿವಾರಣೆಯಾಗುವುದು ಎಂದು ತಿಳಿದುಬಂತು. ಆಗ ಗರುಡ ಸ್ವರ್ಗಲೋಕಕ್ಕೆ ಹೋಗಿ ಅಲ್ಲಿ ಅಮೃತ ಕಲಶದ ರಕ್ಷಕರಾದ ಗಂಧರ್ವರನ್ನು ಕೊಂದು, ಘಟಸರ್ಪಗಳನ್ನು ಸಂಹರಿಸಿ, ಇಂದ್ರನೊಡನೆ ಹೋರಾಡಿ ಕೊನೆಗೆ ಅಮೃತ ಕುಂಭವನ್ನು ತಂದು ಮಲತಾಯಿಗೆ ಕೊಟ್ಟು ದಾಸ್ಯ ಸಂಕಲೆಯಿಂದ ತಾಯಿಯನ್ನು ಬಿಡಿಸಿದ. ಇವನ ಪರಾಕ್ರಮಕ್ಕೆ ಮೆಚ್ಚಿ ಇಂದ್ರ ಇವನಿಗೆ ಸರ್ಪಗಳು ಆಹಾರವಾಗಿರುವಂತೆ ವರವನ್ನಿತ್ತ. ವಿಷ್ಣು ಇವನ ಸಾಹಸ ಸಾಮರ್ಥ್ಯಗಳಿಗೆ ಮಾರುಹೋಗಿ ಇವನಿಗೆ ಸಂಪರ್ಣನೆಂದು ಬಿರುದು ಕೊಟ್ಟು ತನ್ನ ವಾಹನವನ್ನಾಗಿ ಮಾಡಿಕೊಂಡುದಲ್ಲದೇ ತನ್ನ ಧ್ವಜದಲ್ಲಿ ಲಾಂಛನವನ್ನಾಗಿರಿಸಿಕೊಂಡ. ಭಾರತದ ಆದಿಪರ್ವದಲ್ಲಿ ಈ ಕತೆ ಬಹು ವಿಸ್ತಾರವಾಗಿ ಬಂದಿದೆ.

ಪುರಾತನ ಕಾಲದಿಂದಲೂ ತನ್ನ ಗಾತ್ರ, ಗಾಂಭೀರ್ಯ ಮತ್ತು ವೈಭವಯುತ ಹಾಗೂ ಪ್ರಯಾಸವಿಲ್ಲದ ಹಾರಾಟದಿಂದಾಗಿ ಗರುಡ ಪಕ್ಷಿಗಳ ರಾಜನೆಂದು ಮಾನ್ಯತೆ ಪಡೆದಿದೆ. ಇದು ಶಕ್ತಿ, ಶೌರ್ಯ ಮತ್ತು ವೈಭವಗಳ ಪ್ರತೀಕ. ಈಟಿಗಳ ಮೇಲೆ ಗರುಡಪಕ್ಷಿ ಪ್ರ.ಶ.ಪೂ. 104ರ ಹೊತ್ತಿಗೆ ರೋಮನರ ಮುಖ್ಯ ಲಾಂಛನವಾಯಿತು. ಅಲ್ಲದೆ ಅವರು ಇದನ್ನು ನಾಣ್ಯ ಮತ್ತು ಪದಕಗಳ ಮೇಲೂ ಹಾಕಿಕೊಂಡರು. ರೋಮನ್ ಪುರಾಣದಲ್ಲಿ ಬರುವ ದೇವತೆ ಹಾಗೂ ಮಾನವರ ಪ್ರಭುವಾದ ಜ್ಯೂಪಿಟರ್‌ನಿಗೆ ಪ್ರಿಯವಾದದ್ದು, ಈ ಗರುಡಪಕ್ಷಿ. 1200ರ ಅನಂತರ ಯುರೋಪಿನ ಹಲವು ರಾಜರು ಮತ್ತು ರಾಜ ಮಾನ್ಯರು ತಮ್ಮ ಗುರಾಣಿಗಳ ಮೇಲೆ ಗರುಡಪಕ್ಷಿಯ ಲಾಂಛನವನ್ನು ಉಪಯೋಗಿಸ ಲಾರಂಭಿಸಿದರು. ಎರಡು ತಲೆಯ ಗರುಡ ಪಕ್ಷಿ, ಜರ್ಮನಿ, ರಷ್ಯ, ಆಸ್ಟ್ರಿಯ, ಪೋಲೆಂಡ್ ಚಕ್ರವರ್ತಿಗಳ ರಾಷ್ಟ್ರಲಾಂಛನವಾಯಿತು. ಕಪ್ಪು ಗರುಡ ಪ್ರಷ್ಯದೇಶದ ಲಾಂಛನವಾಯಿತು. ಈ ಗರುಡಪಕ್ಷಿಯ ಮುದ್ರೆ ಅಮೆರಿಕನರ ನಾಣ್ಯಗಳಲ್ಲಿ 1776ರಲ್ಲಿಯೇ ಬಳಕೆಗೆ ಬಂದಿರುವುದನ್ನು ಗಮನಿಸಬಹುದು. (ಬಿ.ಎನ್.ಬಿ.; ಎನ್.ಎಸ್.ಆರ್.ಬಿ.)

**ಗರುಡಗಂಬ :** ದೇವಾಲಯಗಳ ಮುಂದಿರುವ ಕಲ್ಲಿನ ಧ್ವಜಸ್ತಂಭ ಅಥವಾ ದೀಪಸ್ತಂಭ. ಗರುಡಗಂಬಗಳನ್ನು ನಿಲ್ಲಿಸುವ ಪದ್ಧತಿ ವಿಜಯನಗರ ಕಾಲದಿಂದೀಚೆಗೆ ಬಂದಂತೆ ತೋರುತ್ತದೆ. ಬೇಲೂರಿನ ಕೇಶವ ದೇವಾಲಯದ ಮುಂದೆ ಇರುವ ಖಗ ಧ್ವಜಸ್ತಂಭವನ್ನು ವಿಜಯನಗರದ ಕೃಷ್ಣದೇವರಾಯನ ಕಾಲದಲ್ಲಿ ಜಕ್ಕನೃಪ ನಿಲ್ಲಿಸಿದ. ವಿಷ್ಣು ದೇವಾಲಯಗಳ ಮುಂದಿನ ಈ ಕಂಬಗಳು ಗರುಡಧ್ವಜಗಳನ್ನು ಸೂಚಿಸುತ್ತವೆ. ಶಿವದೇವಾಲಯಗಳ ಮುಂದೆ ನಿಲ್ಲಿಸಿರುವ ಕಂಬಗಳನ್ನು ನಂದಿಕಂಬವೆಂದು ಕರೆಯುತ್ತಾರೆ.

ವಿಜಯನಗರದ ಕಾಲದಿಂದೀಚೆಗೆ ನಿಲ್ಲಿಸಿರುವ ಇಂಥ ಕಂಬಗಳು ಧ್ವಜಸ್ತಂಭ ಅಥವಾ ದೀಪಸ್ತಂಭಗಳಾಗಿರಬಹುದು. ಆದರೆ ಹೊಯ್ಸಳರ ಕಾಲದಲ್ಲಿ ಶಿವ ದೇವಾಲಯಗಳ ಬಳಿ ನಿಲ್ಲಿಸುತ್ತಿದ್ದ ಕೆಲವು ವಿಶಿಷ್ಟವಾದ ಕಂಬಗಳಿಗೆ ಗರುಡಗಂಬಗಳೆಂಬ ಹೆಸರು ಬಂದಿರಬೇಕು. ಆ ಕಾಲದಲ್ಲಿ ರಾಜನಿಗೆ ನಿಷ್ಠರಾಗಿ, ಅವನ ಪ್ರಾಣ ರಕ್ಷಣೆಯೇ ತಮ್ಮ ಕರ್ತವ್ಯವೆಂದು ತಿಳಿದು, ರಾಜನ ಮರಣಾನಂತರ ಆತ್ಮಾರ್ಪಣೆ ಮಾಡಿಕೊಳ್ಳುತ್ತಿದ್ದ ಲೆಂಕರಿಗೆ ಗರುಡರೆಂಬ ಹೆಸರಿತ್ತು (**ನೋಡಿ– ಗರುಡರು**). ಸ್ವಾಮಿನಿಷ್ಠೆಯಲ್ಲಿ ತಾವು ಗರುಡನಿಗಿಂತ ಕಡಿಮೆಯೇನೂ ಇಲ್ಲವೆಂದು ಇವರು ಭಾವಿಸುತ್ತಿದ್ದುದರಿಂದ ಬಹುಶಃ ಇವರಿಗೆ ಈ ಹೆಸರು ಬಂದಿರಬೇಕು. ಸ್ವಾಮಿಗಾಗಿ ಸತ್ತವರ ನೆನಪಿಗಾಗಿ ಕಂಬಗಳನ್ನು ನಿಲ್ಲಿಸಿ ಶಾಸನ ಹಾಕಿಸುತ್ತಿದ್ದದ್ದುಂಟು. ಅಥವಾ ಅವರು ಅಂಥ ಕಂಬಗಳ ಮೇಲಿಂದ ಹಾರಿ ಪ್ರಾಣತ್ಯಾಗ ಮಾಡುತ್ತಿದ್ದರು. ಆನೆಯ ಮೇಲೆ ಕುಳಿತು ಗರುಡನೊಂದಿಗೆ ಸೆಣಸುತ್ತಿರುವ ಲೆಂಕರ ಮೂರ್ತಿಗಳನ್ನು ಹೊತ್ತ ಮೂರು ಕಂಬಗಳು ಅಗ್ರಹಾರ ಬಾಚಹಳ್ಳಿಯ ಹುಣಸೇಶ್ವರ ದೇವಾಲಯದ ಮುಂದೆ ಇವೆ. ಇಮ್ಮಡಿ ಬಲ್ಲಾಳನ ಮರಣಾನಂತರ ಗರುಡನಾದ ಕುವರಲಕ್ಷ್ಮ ಮತ್ತು ಅವನನ್ನುಸರಿಸಿದ ಸಾವಿರ ಲೆಂಕರು ಮತ್ತು ಅವರ ಹೆಂಡಿರ ನೆನಪಿಗಾಗಿ ಹಳೆಯಬೀಡಿನ ಹೊಯ್ಸಳೇಶ್ವರ ದೇವಾಲಯದ


ಗದುಗಿನ ವೀರನಾರಾಯಣ ದೇವಾಲಯದ ಎದುರಿನ ಗರುಡಗಂಬ


ಬಳಿ ಕಂಬವನ್ನು ನಿಲ್ಲಿಸಲಾಗಿದೆ. ಹೊಯ್ಸಳ ದೇವಾಲಯದಲ್ಲಿ ಈಗ ಊರೆಕಂಬ ವಾಗಿರುವ ಪ್ರೌಢ ದೇವರಾಯ ಕಂಬವೂ ರವಳ ಬೋವನಿನೆಂಬ ಗರುಡನೊಬ್ಬನ ನೆನಪಿಗಾಗಿ ನಿಲ್ಲಿಸಿದ್ದ ಕಂಬವೇ. ಬಸರಾಳಿನಲ್ಲಿ ಮಲ್ಲಿಕಾರ್ಜುನ ದೇವಾಲಯದ ಮುಂದಿನ ಕಂಬದ ಮೇಲೆ ಶಾಸನವಿಲ್ಲದಿದ್ದರೂ ಮೇಲಿನಿಂದ ಹಾರಿ ಪ್ರಾಣತ್ಯಾಗ ಮಾಡಲು ಸಿದ್ಧನಾಗಿರುವ ಗರುಡ, ಅವನ್ನನುಸರಿಸುತ್ತಿರುವ ಅವನ ಹೆಂಡತಿ–ಇವರ ಮೂರ್ತಿಗಳಿರುವುದರಿಂದ ಅದು ಗರುಡಗಂಬವೆಂಬುದು ಸ್ಪಷ್ಟ. (ಎಂ.ಎಚ್.)

**ಗರುಡಪುರಾಣ: ನೋಡಿ– ಅಷ್ಟಾದಶ ಪುರಾಣಗಳು**

**ಗರುಡ ಫಲ :** ಫ್ಲಕೂರ್ಷಿಯೇಸೀ ಕುಟುಂಬಕ್ಕೆ ಸೇರಿದ ಹಿಡ್ನೊಕಾರ್ಪಸ್ ಲಾರಿಫೋಲಿಯ ಎಂಬ ಶಾಸ್ತ್ರೀಯ ಹೆಸರಿನ ಮರ. ಚಿಕ್ಕ ಸುರಟಿ ಗಿಡ ಪರ್ಯಾಯ ನಾಮ. ಇಂಡೊ ಮಲಯ ಮತ್ತು ಏಷ್ಯದ ಉಷ್ಣ ಪ್ರದೇಶಗಳಲ್ಲಿ ಸಮೃದ್ಧವಾಗಿ ಬೆಳೆಯುತ್ತದೆ. ಭಾರತದಲ್ಲಿ ಪಶ್ಚಿಮ ಘಟ್ಟದ ಕಾಡುಗಳಲ್ಲೂ ವಿಪುಲ. ಸುಮಾರು 50ಮೀ ಎತ್ತರಕ್ಕೆ ಬೆಳೆಯುವ ಮರ ಇದು. ಕಂದುಬಣ್ಣದ ತೊಗಟೆ, ಗರಗಸದಂಥ ಅಂಚುಳ್ಳ ನೀಳವಾದ ಎಲೆಗಳು, ಹಸುರು ಮಿಶ್ರಿತ ಬಿಳಿಬಣ್ಣದ ಚಿಕ್ಕ ಗಾತ್ರದ ಹೂಗಳು, ಲಿಂಗಭಿನ್ನತೆ–ಇವು ಈ ಮರದ ಮುಖ್ಯ ಲಕ್ಷಣಗಳು. ಬೀಜಗಳು ಅಂಡಾಕೃತಿಯಲ್ಲಿವೆ. ಅವುಗಳಲ್ಲಿ ಒಂದು ವಿಶೇಷ ಬಗೆಯ ಎಣ್ಣೆ ಉಂಟು, ಇದಕ್ಕೆ ಹಿಡ್ನೊಕಾರ್ಪಸ್ ತೈಲ ಎಂದು ಹೆಸರು. ಇದು ಅನೇಕತರದ ಚರ್ಮ ವ್ಯಾಧಿಗಳಿಗೆ–ಮುಖ್ಯವಾಗಿ ಕುಷ್ಠರೋಗಕ್ಕೆ ಒಳ್ಳೆಯ ಮದ್ದು ಎನಿಸಿದೆ. ಬಹಳ ಹಿಂದಿನಿಂದಲೂ ಇದರ ಔಷಧೀಯ ಗುಣಗಳು ಪ್ರಸಿದ್ಧಯಾಗಿವೆ. ಎಣ್ಣೆಗೆ ಬೆಲ್ಜಿಯಂ, ಫ್ರಾನ್ಸ್, ಬೋರ್ನಿಯೊಗಳಲ್ಲಿ ಅತೀವ ಬೇಡಿಕೆಯಿದೆ.

ಗರುಡ ಫಲಗಳನ್ನು ಗುಡ್ಡಪ್ರದೇಶಗಳಲ್ಲಿ ರಸ್ತೆಯ ಇಕ್ಕೆಲಗಳಲ್ಲಿ ಬೆಳೆಸುವುದು ರೂಢಿ. ಸಸ್ಯಾಭಿವೃದ್ಧಿ ಬೀಜಗಳ ಮೂಲಕ. ಮೊದಲು ನರ್ಸರಿಯಲ್ಲಿ ಸಸಿಗಳನ್ನು ಬೆಳೆಸಿ ಅನಂತರ ಅಪೇಕ್ಷಿತ ಸ್ಥಳಗಳಲ್ಲಿ ಸಸಿಗಳನ್ನು ನಾಟಿ ಮಾಡಲಾಗುತ್ತದೆ. ಎಣ್ಣೆಗೆ ತನ್ನದೇ ಆದ ವಾಸನೆ ಹಾಗೂ ಕ್ಷಾರೀಯ ರುಚಿ ಉಂಟು. ಇದನ್ನು ಕೈಕಾಲುಗಳ ಮೇಲೆ ಮೂಡುವ ಗಂಟುಗಳ ಊದುವಿಕೆಗೆ ಮತ್ತು ಸ್ಪರ್ಶಕ್ಕೆ ಸಂವೇದಿಯಾಗಿಲ್ಲದ ಚರ್ಮದ ವ್ರಣಗಳ ಉಪಶಮನಕ್ಕೆ ಹಾಗೂ ಕುಷ್ಠರೋಗ ನಿವಾರಣೆಗೆ ಉಪಯೋಗಿಸುತ್ತಾರೆ. ತೈಲ ಇಲ್ಲವೆ ಬೀಜಗಳನ್ನು ಹೆಚ್ಚು ಮೊತ್ತದಲ್ಲಿ ನೇರವಾಗಿ ಸೇವಿಸಿದರೆ, ಕರುಳಿನಲ್ಲಿ ವೇದನೆ ಉಂಟಾಗುವುದರಿಂದ ಸೇವನೆಯ ಮೊತ್ತವನ್ನು ಕ್ರಮೇಣ ಹೆಚ್ಚಿಸುತ್ತ ಹೋಗಬೇಕು. ಚುಚ್ಚುಮದ್ದಿನ ರೂಪದಲ್ಲಿ ಕೊಡುವುದೇ ಒಳ್ಳೆಯದು. ಹಿಡ್ನೊಕಾರ್ಪಸ್ ಎಣ್ಣೆಯನ್ನು ಶುದ್ಧರೂಪದಲ್ಲಿ ಬಹಳ ಕಾಲ ಸಂಗ್ರಹಿಸಿಡಲಾಗುವುದಿಲ್ಲ. ಸಂಗ್ರಹಿಸಿಟ್ಟ ಎಣ್ಣೆ ಕೊಳೆಯುತ್ತದಲ್ಲದೆ ಇಂಥ ಎಣ್ಣೆಯನ್ನು ಬಳಸಿದರೆ ಹೆಚ್ಚು ನೋವು ಮತ್ತು ತುರಿಕೆಯುಂಟಾಗುತ್ತವೆ. ಇದರಿಂದ ತೈಲದ ಬಾಳಿಕೆಯನ್ನು ಹೆಚ್ಚಿಸಲು ಕ್ರಿಯೊಸೋಟ್ ಅಥವಾ ಹೈಡ್ರೊಕ್ವಿನೋನ್‌ಗಳನ್ನು ಮಿಶ್ರಮಾಡುತ್ತಾರೆ. ಬೀಜಗಳಿಂದ ಎಣ್ಣೆ ತೆಗೆದ ನಂತರ ಉಳಿವ ಹಿಂಡಿಯನ್ನು ಗೊಬ್ಬರವಾಗಿ ಉಪಯೋಗಿಸುತ್ತಾರೆ. ಗರುಡಫಲ ಮೀನುಗಳಿಗೆ ಮಾರಕವೆನ್ನಲಾಗಿದೆ. ಇದರ ಸೇವನೆಯ ಫಲವಾಗಿ ಸತ್ತ ಮೀನುಗಳು ತಿನ್ನಲು ಯೋಗ್ಯವಲ್ಲ. ಚೌಬೀನೆ ಬಲು ಹಗುರ, ಮೃದು ಮತ್ತು ಏಕರೂಪದ ರಚನಾವಿನ್ಯಾಸವುಳ್ಳದ್ದು. ಸುಲಭವಾಗಿ ಕೊಯ್ಯಬಹುದು ಮತ್ತು ನಯಗೊಳಿಸಬಹುದು. ಒಣಗಿಸುವಾಗ ಸೀಳದಿದ್ದರೂ ಕೊಂಚ ಕಾಲದ ಅನಂತರ ಅಲ್ಲಲ್ಲಿ ಬಿರುಕು ಬಿಡುವುದಲ್ಲದೆ ತನ್ನ ಬಣ್ಣವನ್ನು ಕಳೆದುಕೊಳ್ಳುತ್ತದೆ. ಅಲ್ಲದೆ ಕೀಟ, ಬೂಷ್ಟುಗಳಿಗೆ ಬಲುಬೇಗ ಬಲಿಯಾಗುವುದರಿಂದ ಹೆಚ್ಚು ಬಾಳಿಕೆ ಬರುವುದಿಲ್ಲ. ಆದ್ದರಿಂದ ತಾತ್ಕಾಲಿಕ ಉಪಯೋಗಕ್ಕೆ ಬೇಕಾಗುವ ಪೆಟ್ಟಿಗೆ ಮುಂತಾದವನ್ನು ಮಾತ್ರಮಾಡಲು ಇದನ್ನು ಬಳಸುತ್ತಾರೆ. ಸೌದೆಯಾಗಿ ಉಪಯೋಗಿಸುವುದುಂಟು. (ಎ.ಕೆ.ಕೆ.; ಪಿ.ಎಸ್.ಎಸ್.)

**ಗರುಡ ಮೂಗಿನ ಆಮೆ :** ಎರೆಟ್ಮೊಕೆಲಿಸ್ ಇಂಬ್ರಿಕೇಟ ಎಂಬ ವೈಜ್ಞಾನಿಕ ಹೆಸರಿನ ಕಡಲಾಮೆ. ಮೂತಿ ಗರುಡ ಪಕ್ಷಿಯ ಕೊಕ್ಕಿನ ಹಾಗೆ ಬಾಗಿರುವುದರಿಂದ ಇದಕ್ಕೆ ಈ ಹೆಸರು ಬಂದಿದೆ. ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಆಂಧ್ರಪ್ರದೇಶ, ಗುಜರಾತ್, ಕೇರಳ, ಲಕ್ಷದ್ವೀಪ, ಒರಿಸ್ಸ ಮತ್ತು ತಮಿಳುನಾಡುಗಳಲ್ಲಿ ಕಂಡು ಬರುತ್ತದೆ. ಆಫ್ರಿಕ, ಅಮೆರಿಕ, ಏಷಿಯ, ಆಸ್ಟ್ರೇಲಿಯ ಮತ್ತು ಯುರೋಪ್‌ಗಳ ಬಹುತೇಕ ಉಷ್ಣ



ಮತ್ತು ಸಮಶೀತೋಷ್ಣ ಸಾಗರಗಳಲ್ಲಿ ಸರ್ವೇಸಾಮಾನ್ಯವಾಗಿ ಹರಡಿದೆ. ಮಾಂಸಾಹಾರಿ. ಸ್ಪಂಜುಗಳನ್ನೂ ತಿನ್ನುವ ಏಕೈಕ ಆಮೆ ಪ್ರಭೇಧ. ಹವಳ ದ್ವೀಪಗಳ ಬಳಿಯಿರುವ ತೀರ ಪ್ರದೇಶಗಳಲ್ಲಿ ಸಂತಾನಾಭಿವೃದ್ಧಿ ಮಾಡುವುದು ಸಾಮಾನ್ಯ. ದೇಹದ ಮೇಲೆ ಸುಮಾರು 915 ಮಿಮೀ ಉದ್ದದ ಚಿಪ್ಪು ಇದೆ. ಚಿಪ್ಪಿನ ಮೇಲೆಲ್ಲ ಹೆಂಚು ಹೊದಿಸಿದಂತೆ ಕಾಣುವ ಕಂದುಬಣ್ಣದ ದಪ್ಪನೆಯ ಫಲಕಗಳಿವೆ. ಆಮೆಯ ಚಿಪ್ಪುಗಳಲ್ಲೆಲ್ಲ ಗರುಡ ಮೂಗಿನ ಆಮೆಯದು ಅತ್ಯುತ್ತಮ ವಾದುದೆಂದು ಹೇಳಲಾಗಿದೆ. ಇದರಿಂದ ಬಾಚಣಿಗೆ, ಕಡಗ, ಅಲಂಕಾರಿಕ ಸಮಾನುಗಳು ಮುಂತಾದವನ್ನು ಮಾಡಲಾಗುತ್ತದೆ. ಚಿಪ್ಪಿಗೋಸ್ಕರ ಹಿಂದಿನ ಕಾಲದಲ್ಲಿ ಇದನ್ನು ಬಹಳವಾಗಿ ಹಿಡಿಯುವುದಿತ್ತು. ಆದರೆ ಈಗ ಪ್ಲಾಸ್ಟಿಕ್ ವಸ್ತುಗಳ ಬಳಕೆ ಹೆಚ್ಚಾಗಿದ್ದು ಇದರ ಚಿಪ್ಪಿಗೆ ಬೇಡಿಕೆ ಕಡಿಮೆಯಾಗಿದೆ. ಆದರೂ ಸಂಖ್ಯೆ ಕ್ಷೀಣಿಸಿರುವುದರಿಂದ ಭಾರತದ ವನ್ಯ ಜೀವಿ ಸಂರಕ್ಷಣಾ ಕಾಯಿದೆ ಪಟ್ಟಿ 4 ರಲ್ಲಿ ಸೇರಿಸಲ್ಪಟ್ಟಿದೆ. *

**ಗರುಡರು :** ವಿಶೇಷವಾಗಿ ಕನ್ನಡ ನಾಡಿನಲ್ಲಿ–ಅದರಲ್ಲೂ ಹೊಯ್ಸಳರ ಕಾಲದಲ್ಲಿ ರಾಜರಿಗೆ ನೆಚ್ಚಿನ ಬಂಟರಾಗಿ, ಅವರಿಗಾಗಿ ಪ್ರಾಣವನ್ನೇ ಪಣವಾಗಿಟ್ಟು ಕಾದುತ್ತಿದ್ದು, ಅವರು ಸತ್ತಾಗ ಆತ್ಮಾರ್ಪಣೆ ಮಾಡಿಕೊಳ್ಳುತ್ತಿದ್ದ ವಿಶಿಷ್ಟ ಅಂಗರಕ್ಷಕರು. ಕರ್ನಾಟಕದ ಇತಿಹಾಸದ ವಿವಿಧ ಕಾಲಗಳಲ್ಲಿದ್ದ ಅಂಕಕಾರರು, ಲೆಂಕರು, ವೇಳೆಕಾರರು ಇವರು ಕೂಡ ಇದೇ ಬಗೆಯ ಯೋಧರು. ಕರ್ನಾಟಕದ ಹೊರಗಡೆಯೂ ರಾಜರು ಇಂಥ ನಿಷ್ಠಾವಂತ ಸೇವಕರನ್ನು ನೇಮಿಸಿಕೊಳ್ಳುವ ಪದ್ಧತಿ ಇತ್ತು. ಕೇರಳದಲ್ಲಿ ಈ ಪದ್ಧತಿ ಇತ್ತೆಂಬುದು ಮಾರ್ಕೊಪೋಲೋನ ಬರೆವಣಿಗೆಗಳಿಂದ ಗೊತ್ತಾಗುತ್ತದೆ.



ಸಿದ್ಧಾಪುರದ ಶಾಸನ

ವಿಷ್ಣುವಾಹನನಾದ ಗರುಡನಂತೆ ಇವರಿಗೆ ತಮ್ಮ ಪ್ರಭುವಿನಲ್ಲಿ ಅನನ್ಯ ಭಕ್ತಿ ನಿಷ್ಠೆಗಳಿದ್ದುದರಿಂದ ಇವರು ಗರುಡರೆಂದು ಹೆಸರಾದರು. ಗರುಡಪಟ್ಟವನ್ನು ಸ್ವೀಕರಿಸಲು ಸಾಮಾನ್ಯವಾಗಿ ಅನೇಕರು ಮುಂದೆ ಬರುತ್ತಿದ್ದರು. ಅವರ ನಿಯಮ, ನಿಷ್ಠೆ ಹಾಗೂ ಪರಾಕ್ರಮಗಳನ್ನು ಗಮನಿಸಿ ಅರ್ಹರಾದವರಿಗೆ ರಾಜ ಅನುಮತಿ ನೀಡುತ್ತಿದ್ದ. ಗರುಡಪಟ್ಟವನ್ನು ಸ್ವೀಕರಿಸಿದವರು ಮೊಣಕಾಲಿನ ಮೇಲೆ ತೊಡರೊಂದನ್ನು ಧರಿಸುತ್ತಿದ್ದರು. ತಮ್ಮ ಪ್ರಭುವಿಗೆ ಸೋಲೊದಗದಂತೆ ರಕ್ಷಿಸಲು ಇವರು ವೀರಪ್ರತಿಜ್ಞೆ ಮಾಡುತ್ತಿದ್ದರು.

ಗರುಡರ ಪರಾಕ್ರಮ, ಸಾಧನೆ ಮತ್ತು ಪ್ರಾಣತ್ಯಾಗಗಳಿಗೆ ಸಂಬಂಧಿಸಿದ ಅನೇಕ ಪ್ರಸಂಗಗಳು ಕನ್ನಡ ಶಾಸನಗಳಲ್ಲಿ ದೊರೆಯುತ್ತವೆ. ಪ್ರಶ.ಸು.865ರಲ್ಲಿ ನೀತಿ ಮಾರ್ಗ ಗಂಗರಾಜ ಮರಣಹೊಂದಿದಾಗ ಆತನ ಗರುಡರಾಗಿದ್ದ ರಾಸೇಯ ಮತ್ತು ಬೇಬಿಯಮ್ಮಣ್ಣರು ಪ್ರಾಣಾರ್ಪಣೆ ಮಾಡಿದರು. ರಾಷ್ಟ್ರಕೂಟ ಕಾಲದಲ್ಲೂ ಈ ಪದ್ಧತಿಯಿತ್ತು. ಹೊಯ್ಸಳ

ಚಕ್ರವರ್ತಿ ಇಮ್ಮಡಿ ವೀರಬಲ್ಲಾಳನ ಅಂಗರಕ್ಷಕ ದಳದ ಅಧಿಪತಿಯಾಗಿದ್ದ ಕುವರ ಲಕ್ಷ್ಮನ ಹೆಸರು ಉಲ್ಲೇಖಾರ್ಹವಾದದ್ದು, ಕುವರಲಕ್ಷ್ಮನೂ ಇವನ ವೀರಪತ್ನಿ ಸುಗ್ಗಲದೇವಿಯೂ ಇವನ ಅಧೀನದಲ್ಲಿದ್ದ ಯೋಧರು ಗರುಡರಾಗಿದ್ದರು. ತಮ್ಮ ದೊರೆಗಾಗಿ ಬದುಕುವುದಾಗಿ, ಅವನಿಗಾಗಿ ಸಾಯುವುದಾಗಿ ಅವರು ಪ್ರತಿಜ್ಞೆಮಾಡಿದ್ದರು. ವೀರ ಲಕ್ಷ್ಮನಿಗೂ ಅವನ ಪ್ರಭುವಾದ ಬಲ್ಲಾಳ ದೊರೆಗೂ ನಡುವೆ ಯಾವ ಭಿನ್ನಭಾವವೂ ಇರಲಿಲ್ಲ. ದೊರೆ ಅವನನ್ನು ತನ್ನ ಮಗನಂತೆಯೇ ಸಾಕಿದ. ತನ್ನ ಕೀರ್ತಿಯಲ್ಲೂ ದೊರೆತನದ ಮರ್ಯಾದೆಯಲ್ಲೂ ಅವನೂ ಪಾಲ್ಗೊಳ್ಳುವಂತೆ ಮಾಡಿದ. ದೊರೆ 1220ರಲ್ಲಿ ಮರಣಹೊಂದಿದಾಗ ಕುವರಲಕ್ಷ್ಮನೂ ಅವನ ಪತ್ನಿಯೂ ಅವನ ಸಾವಿರ ಯೋಧರ ಪಡೆಯೊಡನೆ ಪ್ರಾಣಾರ್ಪಣೆ ಮಾಡಿದರೆಂಬುದು ಹಳೇಬೀಡಿನ ಶಾಸನದಿಂದ ತಿಳಿದು ಬರುತ್ತದೆ. ಹೊಯ್ಸಳ ವೀರ ಸೋಮೇಶ್ವರನ ಮರಣದೊಡನೆ ಅವನ ಗರುಡನಾದ ಕಾಮೇಯ ನಾಯಕ ಪ್ರಾಣಾರ್ಪಣೆ ಮಾಡಿಕೊಂಡ.

ಆ ಕಾಲದಲ್ಲಿ ಈ ಪದ್ಧತಿಗೆ ಧಾರ್ಮಿಕ ಬೆಂಬಲವಿತ್ತು. ಶ್ರದ್ಧೆ ಮತ್ತು ನಿಷ್ಠೆಯಿಂದ ತಮ್ಮ ಪ್ರಮಾಣವಚನಕ್ಕೆ ಬದ್ಧರಾಗಿ ಆತ್ಮಾರ್ಪಣೆ ಮಾಡಿಕೊಳ್ಳುವುದರಿಂದ ತಮಗೆ ವೀರಸ್ವರ್ಗ ಲಭಿಸುವುದೆಂದು ಗರುಡರು ನಂಬಿದ್ದರು. ಗರುಡರ ಸ್ಮರಣಾರ್ಥವಾಗಿ ವೀರಗಲ್ಲುಗಳನ್ನು ನೆಡಿಸುತ್ತಿದ್ದುದುಂಟು. ಗರುಡಗಂಬಗಳೆಂಬ ಹೆಸರು ಇವರಿಂದ ಬಂದಿರಬಹುದೆಂದು ಹೇಳಲಾಗಿದೆ (**ನೋಡಿ– ಗರುಡಗಂಬ**). (ಜಿ.ಆರ್.ಆರ್.)

**ಗರೂಡ ಸದಾಶಿವರಾವ್ :** 1879–1954. ರಂಗಭೂಮಿಯ ಸುಪ್ರಸಿದ್ಧ ನಟ, ನಾಟಕಕಾರ, ರಂಗನಿರ್ಮಾಪಕ, ಗರೂಡ ಎಂಬುದು ಮನೆತನದ ಹೆಸರು. ತಂದೆ ಕೊಪ್ಪಳದ ಗುರುನಾಥ ಶಾಸ್ತ್ರಿಗಳು. ಎಳೆತನದಲ್ಲಿ ತಾಯಿಯನ್ನು ಕಳೆದುಕೊಂಡ ಇವರು ಕಲಬುರ್ಗಿಯಲ್ಲಿ ಸೋದರ ಮಾವನ ಮನೆಯಲ್ಲಿ ಬೆಳೆದರು. ಮೊದಲಿನಿಂದ ಸಂಗೀತ ಸಾಹಿತ್ಯಗಳ ಕಡೆ ಒಲವಿದ್ದ ಇವರು ಕನ್ನಡ ನಾಟಕ ಮಂಡಳಿಯ ಸತ್ಯ ಹರಿಶ್ಚಂದ್ರ ನಾಟಕ ನೋಡಿದಾಗ, ಹೆಚ್ಚು ಸಂಸ್ಕಾರಗೊಂಡಿದ್ದ ಅಂದಿನ ಮರಾಠೀ ನಾಟಕಗಳೊಂದಿಗೆ ಆ ಕನ್ನಡ ನಾಟಕವನ್ನು ಹೋಲಿಸಿ ಹೀಯಾಳಿಸಿದ ಗೆಳೆಯರ ಮೇಲೆ ಹುರುಡು ಗಟ್ಟಿ, ಪರಿಷ್ಕಾರಗೊಂಡ ಕನ್ನಡ ನಾಟಕವನ್ನು ರಚಿಸಿ ಪ್ರಯೋಗಿಸುವುದಾಗಿ ಪಣ ತೊಟ್ಟು, ಮಾರ್ಕಂಡೇಯ ಎಂಬ ತಮ್ಮ ಮೊದಲ ನಾಟಕವನ್ನು ಬರೆದು, ಶಿವ ಪ್ರಾಸಾದಿಕ ನಾಟಕ ಮಂಡಳಿಯನ್ನು ಕಟ್ಟಿ ಪ್ರಯೋಗಿಸಿ ಕಲ್ಬುರ್ಗಿಯ ಪ್ರೇಕ್ಷಕರನ್ನು ಮೆಚ್ಚಿಸಿದರು (1894). ಎರಡನೆಯ ನಾಟಕ ಬಂಧವಿಮೋಚನೆ. ಮುಂದೆ ಹನ್ನೆರಡು ವರ್ಷಗಳ ಕಾಲ ನಾಟಕಕಾರರಾಗಿ, ನಾಟ್ಯಶಿಕ್ಷಕರಾಗಿ ಕಲ್ಬುರ್ಗಿ, ಹೊಂಬಳ, ಕೊಪ್ಪಳ, ಬಿಜಾಪುರ, ಧಾರವಾಡಗಳ ಹಲವಾರು ನಾಟಕ ಸಂಸ್ಥೆಗಳಲ್ಲಿ ದುಡಿದರು.



ಕೊಣ್ಣೂರು ನಾಟಕ ಮಂಡಳಿಯ ವ್ಯವಸ್ಥಾಪಕ ಶಿವಮೂರ್ತಿಸ್ವಾಮಿ ಕಣಬರಗೀಮಠ ಅವರ ನೆರವಿನಿಂದ 1919ರಲ್ಲಿ ಗರೂಡರು ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿಯನ್ನು ಕಟ್ಟಿದರು. ತಾವೇ ರಂಗನಾಟಕಗಳನ್ನು ರಚಿಸಿ, ಕಲಾವಿದರನ್ನು ಹುಡುಕಿ, ಆರಿಸಿ ಕರೆತಂದು, ನಿಷ್ಪಕ್ಷವಾದ ಶಿಕ್ಷಣ ಕೊಟ್ಟು ಸಾರ್ಥಕ ಪ್ರಯೋಗಗಳನ್ನು ಮಾಡಿದರು. ಮುಂದಿನ ಮೂರು ದಶಕಗಳಲ್ಲಿ ದತ್ತಾತ್ರೇಯ ಮಂಡಳಿ ಕನ್ನಡ ನಾಡಿನ ಎಲ್ಲ ಮುಖ್ಯಪಟ್ಟಣಗಳಲ್ಲಿ ನಾಟಕಗಳನ್ನು ಆಡಿದು ದಲ್ಲದೆ, ಮಹಾರಾಷ್ಟ್ರದ ಪುಣೆ, ಸಾಂಗಲಿ, ಕೊಲ್ಲಾಪುರಗಳಲ್ಲಿ ಪ್ರವಾಸ ಮಾಡಿ ಯಶಸ್ಸನ್ನು ಗಳಿಸಿತು. ಮನೋಜ್ಞವಾದ ಅಭಿನಯ ಕಲೆ ಹಾಗೂ ಶುದ್ಧ ಸಾಹಿತ್ಯಕ ನಾಟಕಗಳಿಂದಾಗಿ ಅತ್ಯಂತ ಪ್ರಸಿದ್ಧಿಗೆ ಬಂತು. ಗರೂಡರು ಒಟ್ಟಾರೆ ಐವತ್ತನಾಲ್ಕು ರಂಗನಾಟಕಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಚೌತಿಯ ಚಂದ್ರ, ವತ್ಸಲಾಹರಣ, ಶಕ್ತಿವಿಲಾಸ, ಪಾದುಕಾಪಟ್ಟಾಭಿಷೇಕಗಳಂಥ ಪೌರಾಣಿಕ ನಾಟಕಗಳೂ ಎಚ್ಚಮನಾಯಕನಂಥ ಐತಿಹಾಸಿಕನಾಟಕವೂ ವಿವೇಕವಿಜಯ, ಬಲ ಸಿಂಹತಾರಾದಂಥ ಕಾಲ್ಪನಿಕ ಕಥಾವಸ್ತುವನ್ನು ಆಧರಿಸಿದ ನಾಟಕಗಳೂ ವಿಷಮ ವಿವಾಹ, ಉಗ್ರ ಕಲ್ಯಾಣ ದಂಥ ಸಾಮಾಜಿಕ ನಾಟಕಗಳೂ ಮಹಾತ್ಮಾ ಕಬೀರ ಮೊದಲಾಗಿ ಸಂತ ಜೀವನ ದರ್ಶನವನ್ನು ಪ್ರತಿಬಿಂಬಿಸಿದ ನಾಟಕಗಳೂ ಇವೆ. ಇವು ವೈಯಕ್ತಿಕವಾಗಿ ಗರೂಡರಿಗೆ ಅಪಾರವಾದ ಕೀರ್ತಿಯನ್ನೂ ಇವರ ಮಂಡಳಿಗೆ ಯಶಸ್ಸನ್ನೂ ತಂದುಕೊಟ್ಟವು.

ಇವರು ಹುಟ್ಟು ನಟರು. ಅಭಿನಯಕಲೆಯನ್ನೂ ಧ್ವನಿ ಬಳಕೆಯನ್ನೂ ಅವಿರತವಾಗಿ ಅಭ್ಯಸಿಸಿ ಆ ಕಲೆಗಳಿಗೆ ಶಾಸ್ತ್ರದ ಮಹತ್ತ್ವವನ್ನು ಕೊಟ್ಟವರು. ಅಶೋಕ, ದಶರಥ, ಎಚ್ಚಮನಾಯಕ, ಕಬೀರದಾಸ ಮೊದಲಾಗಿ ಇವರು ಅಭಿನಯಿಸಿದ ಭೂಮಿಕೆಗಳು ಅಭಿನಯಕೇಸರಿ, ಕರ್ಣಾಟಕ ನಾಟಕಾಲಂಕಾರ ಎಂಬ ಪ್ರಶಸ್ತಿಗಳನ್ನು ಇವರಿಗೆ ಗಳಿಸಿಕೊಟ್ಟವು.

ಇವರ ನಾಟಕಗಳಲ್ಲಿ, ಪ್ರದರ್ಶನಗಳಲ್ಲಿ, ಸಂಗೀತಕ್ಕಿಂತ ಹೆಚ್ಚಾಗಿ ಅಭಿನಯಕ್ಕೆ ಪ್ರಾಧಾನ್ಯ. ರಾಷ್ಟ್ರಪ್ರೇಮ ಹಾಗೂ ಭಾರತೀಯ ಸಂಸ್ಕೃತಿಯ ಉದಾತ್ತತೆಯ ಸೆಳಕುಗಳು ಇವರ ನಾಟಕಗಳಲ್ಲಿ ಹಾಸುಹೊಕ್ಕಾಗಿದ್ದವು. ಎಂದೇ ಅಂದಿನ ವಿಮರ್ಶಕರ ಕಣ್ಣಿನಲ್ಲಿ ಗರೂಡರು ನಟರಾಗಿ, ನಾಟಕಕಾರರಾಗಿ, ದೇಶಸೇವಕರಾಗಿ, ಧರ್ಮಪ್ರಸಾರಕರಾಗಿ ಕನ್ನಡ ರಂಗಭೂಮಿಗೆ ದೇಗುಲದ ಪಾವಿತ್ರ್ಯವನ್ನು ತಂದುಕೊಟ್ಟ ದ್ರಷ್ಟಾರರಾದರು. (ಎಚ್.ಕೆ.ಆರ್.)

**ಗರೆಸ್, ಯೋಹಾನ್ ಯೋಸೆಫ್ ಫಾನ್ :** 1776–1849. ಸುಪ್ರಸಿದ್ಧ ಪತ್ರಿಕೋದ್ಯಮಿಯಾಗಿದ್ದ ಜರ್ಮನ್ ಲೇಖಕ. ಕೊಬ್ಲೆಂಜ್ ಎಂಬ ಊರಿನಲ್ಲಿ ಜನಿಸಿದ. ತನ್ನ ಉದಾತ್ತ ಸ್ವಭಾವ, ಸೌಜನ್ಯಗಳಿಂದಲೂ ಚೈತನ್ಯಶಾಲಿ ವ್ಯಕ್ತಿತ್ವದಿಂದಲೂ ಈತ ಆ ಯುಗದ ಅತ್ಯಂತ ಪ್ರಭಾವಶಾಲಿ ವ್ಯಕ್ತಿಯೆನಿಸಿದ. ಮೊದಲಿನಿಂದಲೂ ಸ್ವಾತಂತ್ರ್ಯಪ್ರಿಯನಾದ ಈತ ಇನ್ನೂ ಶಾಲಾವಿದ್ಯಾರ್ಥಿಯಾಗಿರುವಾಗ ಆರಂಭವಾಗಿದ್ದ ಫ್ರಾನ್ಸಿನ ಮಹಾಕ್ರಾಂತಿಯ ಬಗ್ಗೆ ತುಂಬ ಭರವಸೆಯಿಟ್ಟುಕೊಂಡು ಆಶಾಗೋಪುರಗಳನ್ನು ಕಟ್ಟತೊಡಗಿದ. ಮುಂದೆ ರೈನ್ ಪ್ರಾಂತಗಳ ಪರವಾಗಿ ರಾಜಕೀಯ ಸಂಧಾನ ನಡೆಸಲು ಪ್ಯಾರಿಸ್ಸಿಗೆ ಹೋಗಿಬಂದಮೇಲೆ ಮಹಾಕ್ರಾಂತಿಯ ಬಗ್ಗೆ ಈತನಿಗೆ ಇದ್ದ ಭ್ರಮೆಯೆಲ್ಲ ಹಾರಿ ಹೋಯಿತು. ನಿರಾಸೆ ಕವಿಯಿತು. 1797ರಲ್ಲಿ ಡಾಸ್ ರೋಟೆ ಬ್ಲಟ್ ಎಂಬ ರಾಷ್ಟ್ರೀಯ ಪತ್ರಿಕೆಯನ್ನು ಆರಂಭಿಸಿ ಅದರ ಪ್ರಥಮ ಸಂಪಾದಕನಾದ. ಅನಂತರ ಗರೆಸ್ ರಾಜಕೀಯ ಜೀವನವನ್ನು ತ್ಯಜಿಸಿ ಕೊಬ್ಲೆಂಜ್‌ನಲ್ಲಿ ಅಧ್ಯಾಪಕನಾದ. 1806 ರಿಂದ 1808ರ ವರೆಗೆ ಹೈಡೆಲ್‌ಬರ್ಗ್‌ನಲ್ಲಿ ಜರ್ಮನಿಯ ರಮ್ಯ ಸಾಹಿತ್ಯವಾದಿಗಳಾಗಿದ್ದ ಆಹಿಂ ಫಾನ್ ಅರ್ನಿಮ್ ಮತ್ತು ಕ್ಲೆಮೆನ್ಸ್ ಬೆಂಟ್ಯಾನೊ ಎಂಬವರ ಜೊತೆಗೂಡಿ ಟ್ಸೈಟುಂಗ್ ಫ್ಯೂರೆ ಐನ್‌ಸೀಡ್ಲೆರ್ ಎಂಬ ಪತ್ರಿಕೆಯ ಸಂಪಾದಕನಾಗಿ ಜರ್ಮನಿಯ ಭವ್ಯ ಪರಂಪರೆಯನ್ನು ಪ್ರಸಾರಮಾಡುತ್ತ ರಾಷ್ಟ್ರಾಭಿಮಾನವನ್ನು ಜಾಗೃತಗೊಳಿಸುವ ಕಾರ್ಯದಲ್ಲಿ ತೊಡಗಿದ. 1807ರಲ್ಲಿ ತನ್ನ ಫೊಲ್ಕ್ಸ್ ಬ್ಯೂಷೆರ್ ಎಂಬ ಗ್ರಂಥದ ಮೊದಲ ಭಾಗವನ್ನು ಪ್ರಕಟಿಸಿದ. 1810ರಲ್ಲಿ ಮೈಥೆನ್ ಗೆಷಿಷ್ಟೆ ಡೆರ್ ಅಸಿಯಾಟಿಷೆನ್ ವೆಲ್ಟ್ ಎಂಬ ಏಷ್ಯದ ಪುರಾಣಗಳನ್ನು ಕುರಿತ, ಗ್ರಂಥವನ್ನು ಬರೆದು ಪ್ರಕಟಿಸಿದ. ಏಷ್ಯದ ಧರ್ಮ, ಸಂಸ್ಕೃತಿಗಳ ಬಗೆಗೆ ಜರ್ಮನಿಯ ಯುವಕರಿಗಿದ್ದ ಆಸ್ಥೆಯನ್ನಿದು ತೋರಿಸುತ್ತದೆ.



1814ರಲ್ಲಿ ಫ್ರಾನ್ಸಿನಲ್ಲಿ ನೆಪೋಲಿಯನ್ನನ ನಿರಂಕುಶಾಧಿಕಾರ ಉಚ್ಛ್ರಾಯ ಸ್ಥಿತಿಗೇರಿದಾಗ ರೈನಿಷೆರ್ ಮೆರ್ಕೂರ್ ಎಂಬ ತೀವ್ರಸ್ವಾತಂತ್ರ್ಯವಾದಿ ಪತ್ರಿಕೆಯನ್ನು ಆರಂಭಿಸಿದ. ಅದರಲ್ಲಿ ಪ್ರಕಟವಾಗುತ್ತಿದ್ದ ನಿರಂಕುಶ ಪ್ರಭುತ್ವ ವಿರುದ್ಧವಾದ

ಅಗ್ರಲೇಖನಗಳ ಉಗ್ರತೆ ನೆರೆರಾಜ್ಯಗಳಿಗೂ ತಟ್ಟಿತು. ಚಕ್ರವರ್ತಿ ನೆಪೋಲಿಯನ್ ವ್ಯಗ್ರನಾಗಿ ಈ ಪತ್ರಿಕೆಯನ್ನು ಪಂಚಮಶಕ್ತಿ ಎಂದು ಕರೆದ. ಗರೆಸ್‍ನ ಜನತಾ ಸ್ವಾತಂತ್ರ್ಯ ಪರವಾದ ನಿಷ್ಠುರ ಲೇಖನಗಳು ನೆಪೋಲಿಯನ್ನನ ಪತನಾನಂತರ ಜರ್ಮನಿಯಲ್ಲಿ ಅಸ್ತಿತ್ವಕ್ಕೆ ಬಂದ ಪ್ರಷ್ಯನ್ ಸರ್ಕಾರದ ದಬ್ಬಾಳಿಕೆಯನ್ನೂ ಖಂಡಿಸತೊಡಗಿದ್ದಕ್ಕಾಗಿ ಸರ್ಕಾರ 1816ರಲ್ಲಿ ಕ್ರಮ ಕೈಗೊಂಡು ಪತ್ರಿಕೆಯನ್ನು ನಿಲ್ಲಿಸಿಬಿಟ್ಟಿತು. ಗರೆಸ್ ತಾನು ಬರೆದ ಟುಟ್ಷ್‍ಲ್ಯಾಂಡ್ ಉಂಟ್ ಡಿ ರೆವೊಲ್ಯೂಷನ್ (ಜರ್ಮನಿ ಮತ್ತು ಕ್ರಾಂತಿ) ಎಂಬ ಪ್ರಚಾರ ಲೇಖದ ಪರಿಣಾಮವಾಗಿ ದೇಶ ಬಿಟ್ಟು ಓಡಿಹೋಗಬೇಕಾಯಿತಲ್ಲದೆ ಸ್ವಿಟ್ಜರ್ಲೆಂಡಿನಲ್ಲಿ ಹಲವಾರು ವರ್ಷ ಕಡು ಬಡತನದ ಬವಣೆಯಲ್ಲಿ ಬೇಯಬೇಕಾಗಿ ಬಂತು. 1824ರಲ್ಲಿ ಗರೆಸ್ ತಾನು ಹಿಂದೊಮ್ಮೆ ಕಡೆಗಣಿಸಿದ್ದ ರೋಮನ್ ಕ್ಯಾಥೊಲಿಕ್ ಚರ್ಚಿಗೆ ಸೇರಿಕೊಂಡ. 1827ರಲ್ಲಿ ಬವೇರಿಯದ ಮೊದಲು ಲೂದ್ವಿಷ್ ದೊರೆಯ ಆಹ್ವಾನವನ್ನು ಒಪ್ಪಿ ಇತಿಹಾಸದ ಪ್ರಧ್ಯಾಪಕನಾಗಿ ಮ್ಯೂನಿಕ್ ವಿಶ್ವವಿದ್ಯಾಲಯಕ್ಕೆ ಬಂದ. ಧಾರ್ಮಿಕವಾದ ವಿವಾದಗಳೆದ್ದಾಗಲೆಲ್ಲ ರೋಮನ್ ಕೆಥೋಲಿಕ್ ಪಂಥದ ವೀರಬೆಂಬಲಿಗನಾಗಿ ತನ್ನ ವಾಗ್ಝರಿಯನ್ನು ಹರಿಸಿದ.

1836ರಿಂದ 1842ರ ಅವಧಿಯಲ್ಲಿಯೇ ಈತನ ಮಹಾಕೃತಿಯೆನಿಸಿರುವ ಕ್ರೈಸ್ಟ್‍ಲಿಷ್ ಮಿಸ್ಟಿಕ್ ಎಂಬ ಗ್ರಂಥದ ರಚನೆಯಾಯಿತು. 1848ರಲ್ಲಿ ಈತ ಮ್ಯೂನಿಕ್ ನಗರದಲ್ಲಿ ವಿಧಿವಶನಾದ.

ಪ್ರಜಾಸ್ವಾತಂತ್ರ್ಯಕ್ಕಾಗಿ ಈತ ತೋರಿದ ನಿರಂತರ ಉತ್ಸಾಹ, ನಡೆಸಿದ ಪ್ರಾಮಾಣಿಕ ವಾದ ಹೋರಾಟ ಚಿರಸ್ಮರಣೀಯವಾದುವು. ಸತ್ತ್ವಶಾಲಿಯಾದ ಶೈಲಿ, ಅಮೋಘವಾದ ಭಾಷಾವೈಖರಿಗಳಿಂದ ಕೂಡಿದ ಲೇಖನಗಳಿಂದ ತುಂಬ ಪ್ರಭಾವವನ್ನು ಬೀರಿದ ಮಹಾವ್ಯಕ್ತಿಯೆಂದು ಈತ ವಿಖ್ಯಾತನಾದ. 1876ರಲ್ಲಿ ರೋಮನ್ ಕೆಥೋಲಿಕ್ ಧರ್ಮವನ್ನು ಕುರಿತ ವಿಶೇಷ ಅಧ್ಯಯನಕ್ಕೂ ಸಂಶೋಧನೆಗೂ ಮೀಸಲಾದ ಗರೆಸ್–ಗಸ್ಸೆಲ್ಸ್ ಸಂಸ್ಥೆಯೊಂದು ಸ್ಥಾಪಿತವಾಯಿತು. ಗರೆಸ್‍ನ ಮರಣಾನಂತರವೂ ಆತನ ಹೆಸರಿನ ಪ್ರಭಾವ ಎಷ್ಟಿತ್ತು ಎಂಬುದಕ್ಕೆ ಇದೊಂದು ನಿದರ್ಶನ. ಈ ಅಧ್ಯಯನ ಸಂಸ್ಥೆ ಈಗ ದೊಡ್ಡದಾಗಿ ಬೆಳೆದು ರೋಮ್, ಮ್ಯಾಡ್ರಿಡ್, ಜೆರೂಸಲೆಮ್ ನಗರಗಳಲ್ಲಿ ಶಾಖೆಗಳನ್ನು ತೆರೆದಿದೆ. ಇದರ ಆಶ್ರಯದಲ್ಲಿ ಹಲವಾರು ನಿಯತಕಾಲಿಕ ಧಾರ್ಮಿಕ ಪತ್ರಿಕೆಗಳು ಹೊರಡುತ್ತಿವೆ. ಈತನ ರಾಜಕೀಯ ಲೇಖನಗಳನ್ನೆಲ್ಲ ಸಂಗ್ರಹಿಸಿ ಗೆಸಾಮ್ಮೆಲ್ಟೆಷ್ರಿಫ್ಟೆನ್ ಎಂಬ ಹೆಸರಿಟ್ಟು 6 ಸಂಪುಟಗಳಲ್ಲಿ ಪ್ರಕಟಿಸಿದೆ. (1854–60). ಪ್ರಮುಖ ಪತ್ರಗಳನ್ನೆಲ್ಲ ಸಂಗ್ರಹಿಸಿ 3 ಸಂಪುಟಗಳಲ್ಲಿ (1858–74) ಮತ್ತು 1960ರಲ್ಲಿ ಈತನ ಎಲ್ಲ ಬರೆಹಗಳನ್ನೂ ಒಟ್ಟುಗೂಡಿಸಿ 16 ಸಂಪುಟಗಳಲ್ಲಿ ಪ್ರಕಟಿಸಿದೆ. (ಕೆ.ಬಿ.ಪಿ.)

**ಗರ್ನ್ಸಿ** : ಇಂಗ್ಲೆಂಡಿನ ದಕ್ಷಿಣಕ್ಕೆ, ಫ್ರಾನ್ಸ್ ತೀರಕ್ಕೆ ಸಮೀಪದಲ್ಲಿ ಇಂಗ್ಲಿಷ್ ಕಡಾಲ್ಗಾಲುವೆಯಲ್ಲಿರುವ ದ್ವೀಪಗಳಲ್ಲೊಂದು. ಗಾತ್ರದಲ್ಲಿ ಎರಡನೆಯದು. ವಿಸ್ತೀರ್ಣ 63. ಚ.ಕಿ.ಮೀ. ಉದ್ದ ಈಶಾನ್ಯದಿಂದ ನೈಋತ್ಯಕ್ಕೆ, ದಕ್ಷಿಣದಲ್ಲಿ ಇದರ ಅಗಲ ಸು. 13.5 ಕಿ.ಮೀ ಹರ್ಮ್, ಜೆತೂ ಮತ್ತು ಇತರ ಪುಟ್ಟ ದ್ವೀಪಗಳನ್ನೊಳಗೊಂಡಂತೆ ಏರ್ಪಟ್ಟಿರುವ ಬೇಯ್ಲಿಫ್ ಆಡಳಿತ ಪ್ರದೇಶದ ಜನಸಂಖ್ಯೆ 47,158 (1961). ರಾಜಧಾನಿ ಸೇಂಟ್ ಪೀಟರ್‍ಸ್ ಪೋರ್ಟ್.

ಭೌತಲಕ್ಷಣ: ಗರ್ನ್ಸಿ ದ್ವೀಪದ ದಕ್ಷಿಣ ಭಾಗದಲ್ಲಿ ಸಮುದ್ರದಂಚಿನಲ್ಲಿ ಪ್ರಪಾತಗಳಿವೆ. ಅನೇಕ ಕಡೆ ಸಮುದ್ರದ ಅಲೆಗಳಿಂದ ಸಂಭವಿಸಿದ ಕೊರಕಲುಗಳುಂಟು. ಉತ್ತರಾಭಿಮುಖವಾದ ತೊರೆಗಳು ಇಲ್ಲಿಯ ಕಣಿವೆಗಳ ಮೂಲಕ ಹರಿಯುತ್ತವೆ. ದಕ್ಷಿಣತೀರಭಾಗದ ಹೊರತು ದ್ವೀಪದ ಇತರ ತೀರಗಳಲ್ಲಿ ಕಲ್ಲಿನ ದಿಬ್ಬಗಳು ಹೆಚ್ಚು. ಇಂಥ ದಿಬ್ಬಗಳು ಪೆರೆಲ್ಲಿ ಕೊಲ್ಲಿ ಮತ್ತು ಅನತಿದೂರದ ಲಿಹೌ ದ್ವೀಪದಲ್ಲಿ ಹೇರಳವಾಗಿವೆ. ದ್ವೀಪದ ಪಶ್ಚಿಮತೀರ ಅಟ್ಲಾಂಟಿಕ್ ಸಾಗರಕ್ಕೆ ತೆರವಾಗಿದೆ. ಅಲ್ಲಿ ಹಲವು ನೌಕಾಘಾತಗಳು ಸಂಭವಿಸಿವೆ. ಉತ್ತರಕರಾವಳಿ ತಗ್ಗು, ಸೇಂಟ್ ಸ್ಯಾಂಪ್ಸನ್ ಬಂದರು ಇರುವುದು ಆ ಭಾಗದಲ್ಲಿ. ಅಲ್ಲಿ ಭೂಮಿ ಸಮುದ್ರದಿಂದ ಕೊಚ್ಚಿ ಬಂದ ಮರಳಿನಿಂದ ಕೂಡಿದ್ದು, ಸಮುದ್ರದ ಗಷ್ಟು ಮತ್ತು ಮರಳು ದಿಬ್ಬಗಳ ನಡುವಣ ಜಲಭಾಗದಲ್ಲಿ ಶೇಖರವಾದ ಕಶ್ಮಲ ವಸ್ತು ಸಾಮಾನ್ಯವಾಗಿ ಗೊಬ್ಬರವಾಗಿ ಉಪಯೋಗಕ್ಕೆ ಬರುತ್ತದೆ.

ವಾಯುಗುಣ: ಈ ದ್ವೀಪದ್ದು ಸಮುದ್ರತೀರದ ವಾಯುಗುಣ. ಮಂಜು ಮತ್ತು ಹಿಮ ಕಡಿಮೆ. ವಾರ್ಷಿಕ ಸರಾಸರಿ ಉಷ್ಣತೆ $17^0$ ಫ್ಯಾ. ($-8^0$ಸೆಂ.). ಬಿಸಿಲು ವರ್ಷದಲ್ಲಿ 1,905 ಘಂಟೆಗಳ ಕಾಲ ಬೀಳುತ್ತದೆ. ವಾರ್ಷಿಕ ಮಧ್ಯಕ ಮಳೆ ದಕ್ಷಿಣದಲ್ಲಿ 89 ಸೆಂ.ಮೀ, ವಾಯುವ್ಯದಲ್ಲಿ 76 ಸೆಂ.ಮೀ ಈ ದ್ವೀಪದ ಸಿಹಿನೀರಿನ ಅಭಾವವನ್ನು ಸಮುದ್ರದ ನೀರನ್ನು ಶೋಧಿಸುವ ಯಂತ್ರದ ಸಹಾಯದಿಂದ ಈಗ ನಿವಾರಿಸಿದ್ದಾರೆ.

ಇತಿಹಾಸ: ಗರ್ನ್ಸಿ ದ್ವೀಪದಲ್ಲಿ ನವಶಿಲಾಯುಗದಿಂದಲೂ ಜನಜೀವನ ಇದೆಯೆಂದು ತಿಳಿದುಬರುತ್ತದೆ. 11ನೆಯ ಶತಮಾನದಲ್ಲಿ ನಾರ್ಮಂಡಿ ಪ್ರದೇಶದ ಜನ ಈ ದ್ವೀಪದಲ್ಲಿ ವಸಾಹತುಗಳನ್ನು ಸ್ಥಾಪಿಸಿಕೊಂಡರು. ಆಗಿನ ಕಾಲದ ದಾಖಲೆಗಳಿಂದ ಸೇಂಟ್ ಸೋವರ್ ಪ್ರಭುಗಳು, ಬೆಸ್ಸಿನ್‍ನ ಶ್ರೀಮಂತರು, ಲ ಮಾಂಟ್ ಸೇಂಟ್ ಮಿಚೆಲ್, ಕ್ರೈಸ್ತಮಠದ ಪಾದ್ರಿಗಳು ಹಾಗೂ ನಾರ್ಮಂಡಿಯ ಡ್ಯೂಕ್–ಇವರು ಈ ದ್ವೀಪದ ಮುಖ್ಯ ಭೂಮಾಲೀಕರಾಗಿದ್ದರೆಂದು ತಿಳಿದುಬರುತ್ತದೆ. ಆ ಶತಮಾನದಲ್ಲಿ ಹತ್ತು ಪ್ಯಾರಿಷ್ ಚರ್ಚುಗಳು ಇಲ್ಲಿದ್ದುವು. 12ನೆಯ ಶತಮಾನದಲ್ಲಿ ಹನ್ನೆರಡು ಫ್ರೆಂಚ್ ಕ್ರೈಸ್ತ ಮಠಗಳು ಈ ದ್ವೀಪದಲ್ಲಿ ಸ್ವತ್ತು ಹೊಂದಿದ್ದುವು. ನಾರ್ಮಂಡಿಯಿಂದ ಪ್ರತ್ಯೇಕಗೊಂಡ ಮೇಲೆ, ಇಂಗ್ಲೆಂಡಿನ ಜಾನ್ ದೊರೆಯ ಕಾಲದಿಂದ ಈ ದ್ವೀಪ ಅದರ ಸಾಮಾನ್ಯ ಕಾನೂನುಗಳನ್ನು ಮತ್ತು ಸ್ಥಳೀಯ ಪದ್ಧತಿಗಳನ್ನು ಉಳಿಸಿಕೊಂಡು ಬಂತು. 15ನೆಯ ಶತಮಾನದ ಕೊನೆಯಿಂದ ಈ ದ್ವೀಪದ ಆಡಳಿತವನ್ನು ನೋಡಿಕೊಳ್ಳಲು ಒಬ್ಬ ಕಪ್ತಾನನನ್ನು ನೇಮಿಸಲಾಯಿತು. ಕ್ರಮೇಣ ಈ ಅಧಿಕಾರಿಯ ಹೆಸರು ಗವರ್ನರ್ ಎಂದಾಯಿತು. 1835ರಲ್ಲಿ ಗವರ್ನರ್ ಹುದ್ದೆ ರದ್ದಾಯಿತು; ಇದರ ಆಡಳಿತಕ್ಕೆ ಲೆಫ್ಟಿನೆಂಟ್ ಗವರ್ನರನ ನೇಮಕವಾಯಿತು.

14ನೆಯ ಶತಮಾನದ ಇಂಗ್ಲೆಂಡಿನ ಸಂಚಾರಿ ನ್ಯಾಯಾಧೀಶರು ಗರ್ನ್ಸಿ ದ್ವೀಪಕ್ಕೆ ಬಂದು ನ್ಯಾಯ ವಿಚಾರಣೆ ಮಾಡುವ ಪದ್ಧತಿ ಪ್ರಾರಂಭವಾಯಿತು. ತರುವಾಯ ನ್ಯಾಯಾಧಿಕಾರವನ್ನು ವಾರ್ಡನ್ ಎಂಬ ನ್ಯಾಯಾಧಿಕಾರಿಗೂ ಆ ತರುವಾಯ ಬೇಯ್ಲಿಫ್ ಮತ್ತು ನ್ಯಾಯದರ್ಶಿಗಳಿಗೂ ನೀಡಲಾಯಿತು. ಕಾಯಿದೆಯ ಕ್ಲಿಷ್ಟ ಸಮಸ್ಯೆಗಳನ್ನು ಭೂಹಿಡುವಳಿದಾರರೇ ಮುಂತಾದವರು ನ್ಯಾಯಾಲಯದಲ್ಲಿ ಸೇರಿದಾಗ ಬಗೆಹರಿಸುತ್ತಿದ್ದ ಪದ್ಧತಿಯಿಂದ ದಿ ಸ್ಟೇಟ್ಸ್ ಆಫ್ ಡೆಲಿಬರೇಷನ್ಸ್, ಎಂಬ ಶಾಸನ ಸಭೆ ವಿಕಾಸ ಹೊಂದಿತು. 19ನೆಯ ಶತಮಾನದಲ್ಲಿ ಸ್ಟೇಟ್ಸ್ ಸಭೆ ಕಾರ್ಯನಿರ್ವಾಹಕ ಸಮಿತಿಗಳ ಮೂಲಕ ದ್ವೀಪದ ಆಡಳಿತ ವಹಿಸಿತು.

ಗರ್ನ್ಸಿ ದ್ವೀಪ ಯಾವ ಕಾಲದಲ್ಲೂ ಪ್ರಬಲ ರಾಜಮನೆತನಗಳ ಪ್ರಭುತ್ವಕ್ಕೆ ಒಳಪಟ್ಟಿರಲಿಲ್ಲ. ರೈತ ಜನ ಭೂಮಾಲೀಕರಿಂದ ಶೋಷಿತರಾಗದೆ ಸ್ವತಂತ್ರವಾಗಿ ಉಳಿದುಕೊಂಡು ಬಂದಿದ್ದಾರೆ. ವಾಣಿಜ್ಯಾಭಿವೃದ್ಧಿಯಿಂದಾಗಿ ಸೇಂಟ್ ಪೀಟರ್ ಬಂದರು ಅಭಿವೃದ್ಧಿ ಹೊಂದಿ, 19ನೆಯ ಶತಮಾನದಲ್ಲಿ ಕೈಗಾರಿಕೆಗಳು ಮುಂದುವರಿದ ಕಾರಣ ಈ ದ್ವೀಪದಲ್ಲಿ ಊಳಿಗಮಾನ್ಯ ಪದ್ಧತಿ ಸಡಿಲಗೊಂಡಿತು.

ಜನಜೀವನ: ಗರ್ನ್ಸಿಯ ಜನ ನಾರ್ಮನ್ ಬುಡಕಟ್ಟಿನವರು. ಬ್ರಿಟನ್ನಿನ ಜನಾಂಗದವರೊಡನೆ ಕಲೆತಿದ್ದಾರೆ. 19ನೆಯ ಶತಮಾನದಲ್ಲಿ ಕಲ್ಲು ಗಣಿ ಕೆಲಸ ಮತ್ತು ತೋಟಗಾರಿಕೆಗೆ ಹೆಚ್ಚು ಅವಕಾಶವಿದ್ದ ಕಾರಣ ಜನ ಈ ದ್ವೀಪಕ್ಕೆ ವಲಸೆ ಬರಲಾರಂಭಿಸಿ ಜನಸಂಖ್ಯೆ ಹೆಚ್ಚಿತು. ದ್ವೀಪದ ಜನರಲ್ಲಿ 2/5 ಭಾಗ ಸೇಂಟ್ ಪೀಟರ್‍ಸ್ ಪೋರ್ಟ್ ನಗರದಲ್ಲಿ ವಾಸಿಸುತ್ತಾರೆ.

ಆಡಳಿತ: ಗರ್ನ್ಸಿ ದ್ವೀಪದ ಆಡಳಿತವನ್ನು ಸ್ಟೇಟ್ಸ್ ಆಫ್ ಡೆಲಿಬರೇಷನ್ಸ್ ಸಭೆ ವಹಿಸಿದೆ. ಅದರ ಅಧ್ಯಕ್ಷ ಬೇಯ್ಲಿಫ್. 12 ಮಂತ್ರಾಲೋಚಕರು (ಕೌನ್ಸೆಲರ್ಸ್), 33 ಚುನಾಯಿತ ಪ್ರಜಾಪ್ರತಿನಿಧಿಗಳು, 10 ಡೌಜೀನ್ ಪ್ರತಿನಿಧಿಗಳು, 2 ಡೆಪ್ಯುಟಿಗಳು ಸಭೆಯ ಸದಸ್ಯರು. ರಾಯಲ್ ನ್ಯಾಯಾಲಯದ ಅಧಿಪತಿ ಬೇಯ್ಲಿಫ್; ಅವನ ನೆರವಿಗೆ 12 ಮಂದಿ ಚುನಾಯಿತ ನ್ಯಾಯದರ್ಶಿಗಳಿದ್ದಾರೆ. ನ್ಯಾಯ ವ್ಯವಹಾರ ಇಂಗ್ಲಿಷಿನಲ್ಲಿ ನಡೆಯುತ್ತದೆ. ಲೆಫ್ಟಿನೆಂಟ್ ಗವರ್ನರ್ ಬ್ರಿಟಿಷ್ ದೊರೆಯ ವೈಯಕ್ತಿಕ ಪ್ರತಿನಿಧಿ. (ವಿ.ಜಿ.ಕೆ.)

**ಗರ್ಭಪಾತ** : ನಿರ್ಣಯಿತ ಕಾಲಕ್ಕೆ ಮುಂಚೆ ಪ್ರಸವವಾಗಿ ಹೀಗೆ ಪ್ರಸವಗೊಂಡ ವಸ್ತು ಜೀವಂತವಾಗಿರದ ಘಟನೆ (ಅಬಾರ್ಷನ್). ಮನುಷ್ಯರಲ್ಲಿ ಗರ್ಭಧಾರಣದ ಪೂರ್ಣಕಾಲ 40 ವಾರಗಳು. ಗರ್ಭಿಣಿಯಲ್ಲಿ ಇದಕ್ಕೆ ಮೊದಲೇ ಗರ್ಭಾವಸ್ಥೆ ಕೊನೆಗೊಂಡು ಜೀವದಿಂದಿರಲಾಗದ ಮಗು ಜನಿಸುವ ಘಟನೆಯೇ ಗರ್ಭಪಾತ. ಮೊದಲಿಗೆ ಗರ್ಭಕ್ಷಯ, ಗರ್ಭಪಾತ, ದಿನ ತುಂಬುವುದಕ್ಕೆ ಮುಂಚೆಯೇ ಅವಸರದಿಂದ ಹಡೆಯುವಿಕೆ ಎಂಬ ವಿವಿಧ ಘಟ್ಟಗಳನ್ನು ಗುರುತಿಸಲಾಗುತ್ತಿತ್ತು. ಗರ್ಭ ತಾಳುವುದಕ್ಕೆ ಹಿಂದಿನ ರಜಸ್ರಾವದ ಪ್ರಾರಂಭದ ದಿವಸದಿಂದ ಲೆಕ್ಕ ತೆಗೆದುಕೊಂಡು ಸು. 28 ವಾರಗಳಾದರೂ ಭ್ರೂಣ ಗರ್ಭಕೋಶದಲ್ಲಿ ಬೆಳೆಯದೆ ಇದ್ದರೆ ಪ್ರಸವವಾದಾಗ ಅದು ಜೀವಂತವಾಗಿರಲಾರದು. ಆಮೇಲೆ ಹುಟ್ಟಿದ ಮಕ್ಕಳು ಜೀವಂತವಾಗಿದ್ದರೂ ಹುಟ್ಟಿದಾಗ ಒಂದು ಕೆಜಿಗಿಂತ ಹೆಚ್ಚು ತೂಕವಿರದಿದ್ದರೆ, ಅವುಗಳ ಪೋಷಣೆ ಅತಿ ಕ್ಲಿಷ್ಟ ಸಮಸ್ಯೆಯಾಗಿ ಅವು ಬಹುವಾಗಿ ಸತ್ತು ಹೋಗುತ್ತವೆ. 34–36 ವಾರಗಳ ಕಾಲವಾದರೂ ಅವು ಗರ್ಭಾವಸ್ಥೆಯಲ್ಲಿ ಬೆಳೆಯುತ್ತ ಇದ್ದರೆ ಹುಟ್ಟಿದ ಮೇಲೆ ಜೀವಂತವಾಗಿದ್ದು ಸಹಜವಾಗಿ ಬೆಳೆಯುವ ಸಾಧ್ಯತೆ ಇರುತ್ತದೆ. ಹೀಗಾಗಿ ಸಾಮಾನ್ಯವಾಗಿ 28 ವಾರಗಳಿಗೆ ಮೊದಲೇ ಕೊನೆಗೊಂಡ ಗರ್ಭಾವಸ್ಥೆಯನ್ನು ಗರ್ಭಪಾತವೆಂದು ಗಣಿಸಬಹುದಾದರೂ ಬೇರೆ ಬೇರೆ ದೇಶಗಳಲ್ಲಿ ಗರ್ಭಪಾತಕ್ಕೆ ಬೇರೆ ಬೇರೆ ವ್ಯಾಖ್ಯಾನವಿದ್ದುದರಿಂದ ವಿಶ್ವ ಆರೋಗ್ಯಸಂಸ್ಥೆ 1950ರಲ್ಲಿ ಗರ್ಭಪಾತವನ್ನು ಈ ಮುಂದಿನಂತೆ ನಾಲ್ಕು ರೀತಿಯಲ್ಲಿ ವಿಂಗಡಿಸಿತು : 1. 20 ವಾರಗಳ ಗರ್ಭಾವಧಿಗೆ ಮುಂಚೆಯೇ, ಸತ್ತುಹುಟ್ಟುವ

ಸಂದರ್ಭಗಳು; 2. ಭ್ರೂಣ 20 ವಾರಗಳಾದ ಮೇಲೂ ಬೆಳೆಯುತ್ತಿದ್ದು 28ನೆಯ ವಾರದ ಒಳಗೆ, ಸತ್ತುಹುಟ್ಟುವ ಸಂದರ್ಭಗಳು; 3. ಭ್ರೂಣ 28 ವಾರಗಳೂ ಗರ್ಭದಲ್ಲಿ ಬೆಳೆದು ಆಮೇಲೆ, ಸತ್ತು ಹುಟ್ಟುವ ಸಂದರ್ಭಗಳು; 4. ಇವು ಮೂರು ಗುಂಪಿಗೂ ಸೇರದ, ಸತ್ತ ವಸ್ತುವಿನ ಜನನ.

ಗರ್ಭಪಾತ ಸ್ವಾಭಾವಿಕವಾಗಿ ಆಗಬಹುದು. ಇಲ್ಲವೇ ಕೃತಕವಾಗಿ ಆಗಬಹುದು. ಸ್ವಾಭಾವಿಕ ಗರ್ಭಪಾತ ಅಥವಾ ಸಾಮಾನ್ಯವಾಗಿ ಜನ ಕರೆಯುವಂತೆ ಮೈ ಇಳಿಯುವುದು ಶೇ. 12 ಗರ್ಭಿಣಿಯರಲ್ಲಿ ಕಂಡುಬರಬಹುದೆಂದು ಅಂದಾಜು ಮಾಡಲಾಗಿದೆ. ಅನೇಕರಿಗೆ ಗರ್ಭಧಾರಣೆಯಾದ ಕೆಲವು ವಾರಗಳಲ್ಲೆ ಗರ್ಭಪಾತವಾಗುವುದರಿಂದ ಗರ್ಭಪಾತವಾದ ವಿಷಯ ಗಮನಕ್ಕೇ ಬರದಿರಬಹುದು. ಪತನವಾದ ವಸ್ತು ಕೆಲವು ವೇಳೆ ಇನ್ನೂ ಭ್ರೂಣಾವಸ್ಥೆಯನ್ನೂ ಹೊಂದದೆ ಇರಬಹುದು. ಅಂತೂ ಈ ರೀತಿಯ ಗರ್ಭಪಾತ ಸ್ವಲ್ಪ ತಡವಾದ ಮತ್ತು ಅಧಿಕವಾದ ಸ್ವಾಭಾವಿಕ ಋತುಸ್ರಾವದಂತೆಯೇ ಇದ್ದು ಗರ್ಭನಷ್ಟವಾಗುವುದರಿಂದ ಗೋಚರಕ್ಕೆ ಬರುವುದಿಲ್ಲ. ಒಟ್ಟು ಗರ್ಭಧಾರಣೆಗಳಲ್ಲಿ ಶೇ.20 ರಷ್ಟು ಈ ರೀತಿಯ ಅವ್ಯಕ್ತ ಗರ್ಭಪಾತ ಕಾಣಬರುತ್ತದೆ. ಸ್ವಾಭಾವಿಕ ಗರ್ಭಪಾತಗಳಲ್ಲಿ ಶೇ.75ರಷ್ಟು ಸಾಮಾನ್ಯವಾಗಿ 3–4 ತಿಂಗಳ ಗರ್ಭಿಣಿಯರಲ್ಲಿ ಕಂಡುಬರುತ್ತದೆ. ಗರ್ಭಪಾತವಾಗುವುದಕ್ಕೆ ಕೆಲವು ದಿವಸಗಳಿಗೆ ಮುಂಚೆಯೇ ಭ್ರೂಣ ಗರ್ಭಕೋಶದೊಳಗೆ ಸತ್ತು ಹೋಗಿರುವುದು ಸಾಮಾನ್ಯ. ಕೆಲವು ವೇಳೆ ಹೀಗೆ ಸತ್ತುಹೋಗಿರುವ ಭ್ರೂಣ ವಿಸರ್ಜಿಸಲ್ಪಡದೆ ಗರ್ಭಕೋಶದ ಒಳಗೇ ಅನೇಕ ವಾರಗಳು ಇರಬಹುದು. ಇಂಥ ಸಂದರ್ಭಗಳಲ್ಲಿ ಗರ್ಭಪಾತದ ಸೂಚನೆ ಕಂಡುಬಂದು ಬಹುಬೇಗನೆ ಸಮಾಧಾನವಾಗಿ, ಗರ್ಭಸ್ಥಿತಿ ಮುಂದುವರಿಯುತ್ತಿದೆಯೇನೋ ಎನ್ನುವಂತೆ ಇರುತ್ತದೆ. ಆದರೆ ಗರ್ಭದ ಬೆಳೆವಣಿಗೆ ಇಲ್ಲದೆ ಒಂದೇ ಸ್ಥಿತಿಯಲ್ಲಿರುವುದು ಮತ್ತು ಇತರ ಸೂಚನೆಗಳಿಂದ ಈ ರೀತಿಯ ಗೋಪ್ಯಗರ್ಭಪಾತಗಳನ್ನು ಗುರುತಿಸಬಹುದು. ಇಂಥ ಸಂದರ್ಭಗಳಲ್ಲಿ ಗರ್ಭಕೋಶದೊಳಗೆ ಇರುವ ಸತ್ತ ಮತ್ತು ಶಿಥಿಲವಾಗುತ್ತಿರುವ ಭ್ರೂಣದ ವಿಸರ್ಜನೆಗೆ ಚಿಕಿತ್ಸೆ ಮಾಡಬೇಕಾಗುತ್ತದೆ. ಇದು ಔಷಧೋಪಚಾರಗಳಿಂದ ಸಾಗದಿದ್ದರೆ ಶಸ್ತ್ರಚಿಕಿತ್ಸೆಯನ್ನು ಅವಲಂಬಿಸಬೇಕು. ಕೆಲವು ವೇಳೆ ಯೋನಿಯೊಳಗಿನಿಂದ ರಕ್ತಸ್ರಾವ, ಸೊಂಟನೋವು, ಕಿಬ್ಬೊಟ್ಟೆನೋವು ಮುಂತಾದ ಸೂಚನೆಗಳು ಕಂಡುಬಂದು ಗರ್ಭಪಾತವಾಗುವ ಹೆದರಿಕೆ ಉಂಟಾಗುತ್ತದೆ. ಆದರೆ ಪೂರ್ಣ ವಿಶ್ರಾಂತಿ, ಔಷಧೋಪಚಾರಗಳಿಂದ ಗರ್ಭಪಾತವಾಗುವುದನ್ನು ತಪ್ಪಿಸಬಹುದು ಮತ್ತು ಗರ್ಭದ ಬೆಳೆವಣಿಗೆ ಮುಂದುವರಿಯುವಂತೆ ಮಾಡಬಹುದು. ಇಂಥ ಸಂದರ್ಭಗಳನ್ನು ಬೆದರಿಕೆ ಗರ್ಭಪಾತವೆನ್ನುತ್ತಾರೆ. ಇನ್ನು ಕೆಲವು ವೇಳೆ ಮೇಲೆ ಹೇಳಿದ ಗರ್ಭಪಾತದ ಸೂಚನೆಗಳು ಅಗಾಧವಾಗಿ ಕಂಡುಬಂದು ಏನು ಮಾಡಿದರೂ ಗರ್ಭಪಾತವಾಗುವುದನ್ನು ತಪ್ಪಿಸಲು ಸಾಧ್ಯವಾಗದೇ ಹೋಗಬಹುದು. ಇದು ಅನಿವಾರ್ಯ ಗರ್ಭಪಾತ. ಹೀಗೆ ಗರ್ಭಪಾತವಾದಾಗ ಗರ್ಭಕೋಶ ಪೂರ್ಣವಾಗಿ ಖಾಲಿಯಾದರೆ ಅದು ಸಮಗ್ರ ಅನಿವಾರ್ಯ ಗರ್ಭಪಾತ. ಅದಿಲ್ಲದೆ ಗರ್ಭಕೋಶದೊಳಗಿನ ವಸ್ತು ಪೂರ್ತಿಯಾಗಿ ವಿಸರ್ಜಿಸಲ್ಪಡದಿದ್ದರೆ ಅದು ಅಸಮಗ್ರ ಅನಿವಾರ್ಯ ಗರ್ಭಪಾತ ಎನ್ನಿಸಿಕೊಳ್ಳುತ್ತದೆ. ಈ ಸ್ಥಿತಿಯಲ್ಲಿ ಅತಿಯಾದ ರಕ್ತಸ್ರಾವ, ವಿಷಾಣು ಸೋಂಕು ಮುಂತಾದ ಭೀಕರ ಅವಸ್ಥೆಗಳು ಉಂಟಾಗದಂತೆ ಔಷಧೋಪಚಾರಗಳಿಂದ, ಅಗತ್ಯವಾದರೆ ಶಸ್ತ್ರಕಾರ್ಯದಿಂದ, ಚಿಕಿತ್ಸೆ ಮಾಡಿ ಗರ್ಭಪಾತ ಪೂರ್ಣವಾಗುವಂತೆ ಮಾಡಬೇಕಾಗುತ್ತದೆ.

ಗರ್ಭಪಾತಕ್ಕೆ ಕಾರಣಗಳು ತಾಯಿಯಲ್ಲಿ ಅಥವಾ ಭ್ರೂಣದಲ್ಲಿ ಇರಬಹುದು. ತಾಯಿಯಲ್ಲಿ ಸಿಡುಬು, ಪ್ಲೇಗು, ಮಲೇರಿಯ, ರೂಬೆಲ್ಲ, ಪರಂಗಿ ರೋಗ ಮುಂತಾದ ರೋಗಗಳ ನಂಜಿನಿಂದ ಗರ್ಭಪಾತವಾಗಬಹುದು. ಕ್ಷಯ, ಸಿಹಿಮೂತ್ರ, ಅಧಿಕ ರಕ್ತದೊತ್ತಡ, ನೆಫ್ರೈಟಿಸ್ ಮುಂತಾದ ರೋಗಗಳಿಂದಲೂ ಗರ್ಭಪಾತವಾಗುವ ಸಾಧ್ಯತೆ ಇದೆ. ತೀವ್ರವಾದ ಭೀತಿ, ದುಃಖ, ಆತಂಕಗಳು, ಹಾರ್ಮೋನುಗಳ ಮತ್ತು ನರಮಂಡಲದ ಏರುಪೇರುಗಳು ಗರ್ಭಪಾತವನ್ನು ಉಂಟುಮಾಡಬಲ್ಲವು. ಗರ್ಭಕೋಶ ವಿಕಾರವಾಗಿದ್ದರೆ, ರೋಗಪೀಡಿತವಾಗಿದ್ದರೆ, ಸ್ಥಳಾಂತರಗೊಂಡಿದ್ದರೆ, ದುರ್ಮಾಂಸದಿಂದೊಡಗೂಡಿದ್ದರೆ, ಅತಿ ಸಂಭೋಗದಿಂದ ಉದ್ರೇಕಗೊಂಡಿದ್ದರೆ ಗರ್ಭಪಾತವಾಗಬಹುದು. ಅತಿಯಾದ ದೈಹಿಕ ಶ್ರಮ, ಗರ್ಭಕೋಶದ ಹತ್ತಿರ ಘಾತ, ಕೃತಕ ಗರ್ಭಪಾತದ ಪ್ರಯತ್ನಗಳು ಇವು ಭ್ರೂಣವನ್ನು ರೂಢಮೂಲವಾಗಿ ಬೇರ್ಪಡಿಸಿ ಗರ್ಭಪಾತವನ್ನು ಉಂಟುಮಾಡಬಹುದು. ಆಹಾರಲೋಪ ಅಥವಾ ಬೇರೆ ಕಾರಣದಿಂದಾದ ನಿಶ್ಶಕ್ತಿಯೇ ಗರ್ಭಪಾತವನ್ನು ಉಂಟುಮಾಡಬಹುದು. ಸೀಸ, ತಾಮ್ರ, ಪಾದರಸ ಮುಂತಾದ ಲೋಹ ಸಂಯುಕ್ತ ವಸ್ತುಗಳು ಗರ್ಭಪಾತವನ್ನು ಉಂಟುಮಾಡುತ್ತವೆ. ಹಾಗೆಯೇ ರೋಗಪೀಡಿತ ಅಂಡಾಣು ಅಥವಾ ಪುರಷಾಣುಗಳ ಮಿಲನದಿಂದ ವಿಕೃತಿಗೊಂಡ ಭ್ರೂಣ, ರೋಗಪೀಡಿತವಾದ ಮತ್ತು ಪರಸ್ಥಳದಲ್ಲಿ ಊರ್ಜಿತವಾದ ಜರಾಯು, ಗರ್ಭಕೋಶದಲ್ಲಿ ಭ್ರೂಣದ ಅತಿಯಾದ ಚಲನದಿಂದ ಹೊಕ್ಕಳಬಳ್ಳಿ ಭ್ರೂಣದ ಕತ್ತಿಗೆ ಸುತ್ತಿಕೊಂಡು ನೇಣುಹಾಕುವುದು, ಭ್ರೂಣದ ರಕ್ತ ತಾಯಿಯ ರಕ್ತದಿಂದ ಆರ್‌ಹೆಚ್ ಎಂಬ ಘಟಕದಲ್ಲಿ ಭಿನ್ನವಾಗಿರುವಿಕೆ, ಹಾರ್ಮೋನು ಏರುಪೇರು ಇವು ಭ್ರೂಣಕ್ಕೆ ಸಂಬಂಧಿಸಿದಂತೆ ಗರ್ಭಪಾತ ಮಾಡಿಸುವ ಕಾರಣಗಳು.

ಕೆಲವರಲ್ಲಿ ಗರ್ಭಧಾರಣೆಯಾಗಿ ಸುಮಾರು 12 ವಾರಗಳ ಬಳಿಕ ಪ್ರತಿಸಲವೂ ಗರ್ಭಪಾತ ಸಂಭವಿಸುವುದು ರೂಢಿಯಾಗಿಬಿಟ್ಟಿರುತ್ತದೆ. ಇಂಥ ವರ್ತನೆಯ ಗರ್ಭಪಾತಕ್ಕೆ ಮೇಲೆ ಹೇಳಿದ ಕಾರಣಗಳು ಯಾವುವೂ ಅನ್ವಯಿಸುವಂತೆ ಕಾಣುವುದಿಲ್ಲ. ಸಾಮಾನ್ಯವಾಗಿ ಗರ್ಭಪಾತ ಸಹಜ ಋತುಕ್ರಮದಂತೆ ಋತುಸ್ರಾವವಾಗಬಹುದೆಂದು ನಿರೀಕ್ಷಿಸಬಹುದಾದ ದಿವಸಗಳಲ್ಲಿ ಆಗುತ್ತದೆ. ಪದೇ ಪದೇ ಗರ್ಭಪಾತಕ್ಕೊಳಗಾಗುವವರಲ್ಲಂತೂ ಇದು ಸ್ಪಷ್ಟವಾಗಿ ಕಾಣಬರುತ್ತದೆ.

ಕೃತಕ ಗರ್ಭಪಾತ ಸಾಮಾನ್ಯವಾಗಿ ಎಲ್ಲ ದೇಶಗಳಲ್ಲೂ ತೀವ್ರ ಅಪರಾಧವೆಂದು ಗಣಿಸಲ್ಪಟ್ಟಿದೆ. ಕೃತಕವಾಗಿ ಗರ್ಭಪಾತ ಮಾಡಿಸುವವರನ್ನೂ ಅವರಿಗೆ ಸಹಾಯ ಮಾಡುವವರನ್ನೂ ಶಿಕ್ಷೆಗೆ ಗುರಿ ಮಾಡಲಾಗುತ್ತಿದೆ. ಮಾನ ಹೋಗುವ ಸಂದರ್ಭಗಳಲ್ಲಿ, ಆರ್ಥಿಕ ಸಮಸ್ಯೆಗಳಿಗಾಗಿ, ಸಂತಾನ ನಿರೋಧ ಕ್ರಮದ ರಕ್ಷಣೆ ಅನಿರೀಕ್ಷಿತವಾಗಿ ಕುಸಿದು ಗರ್ಭಧಾರಣೆಯಾಗಿಬಿಟ್ಟಾಗ ಅಥವಾ ಬೇರೆ ಕಾರಣದಿಂದಲಾದರೂ ಬೇಡದ ಬಸಿರನ್ನು ಕಳೆದುಕೊಳ್ಳುವುದಕ್ಕಾಗಿ ಕೃತಕಗರ್ಭಪಾತವನ್ನು ಮಾಡಿಕೊಳ್ಳುತ್ತಾರೆ, ಇಲ್ಲವೇ ಮಾಡಿಸಿಕೊಳ್ಳುತ್ತಾರೆ. ಗರ್ಭಾವಸ್ಥೆಯ ಮೂರನೆಯ ತಿಂಗಳಲ್ಲಿ ಗರ್ಭಧಾರಣೆಯಾದ ವಿಷಯ ಖಚಿತವಾಗಿ ಮನದಟ್ಟಾದಾಗ, ಸಾಮಾನ್ಯವಾಗಿ, ಕೃತಕ ಗರ್ಭಪಾತದ ಪ್ರಯತ್ನ ನಡೆಯುತ್ತದೆ. ಇಲ್ಲವೇ ನಾಲ್ಕು ತಿಂಗಳುಗಳು ಕಳೆದ ಮೇಲೆ ಗರ್ಭಿಣಿಯೆಂಬ ವಿಷಯ ಬಹಿರಂಗವಾಗಿ ಗೋಚರವಾಗುವಂತಾದಾಗ ಈ ಪ್ರಯತ್ನ ನಡೆಯುತ್ತದೆ. ಕೃತಕ ಗರ್ಭಪಾತ ಅಪರಾಧವಾದುದರಿಂದ, ಸ್ವಪ್ರಯತ್ನ ಇಲ್ಲವೇ ಗುಟ್ಟಿನಲ್ಲಿ ಒದಗಬಹುದಾದ, ಕೌಶಲವಿಲ್ಲದವರ ಅಥವಾ ಕುಶಲಿಗಳ ಸಹಾಯದಿಂದ, ಸಾಮಾನ್ಯವಾಗಿ ಅಶುದ್ಧವಾದ ಸ್ಥಳದಲ್ಲಿ, ಅಶುದ್ಧ ಸಲಕರಣೆಗಳಿಂದ ಗರ್ಭಪಾತವನ್ನು ಉಂಟುಮಾಡಲಾಗುತ್ತದೆ. ಕೃತಕ ಗರ್ಭಪಾತ ಔಷಧ ಸೇವನೆ ಅಥವಾ ಪ್ರಯೋಗದಿಂದಾಗಲಿ ಅಥವಾ ಬಲಪ್ರಯೋಗದಿಂದಾಗಲಿ ಅಥವಾ ಸಲಕರಣೆಗಳ ಉಪಯೋಗದಿಂದಾಗಲಿ ಫಲಿಸುವಂತೆ ಪ್ರಯತ್ನ ನಡೆಯುತ್ತದೆ. ಖಚಿತವಾಗಿ ಗರ್ಭಪಾತ ಮಾಡಿಸಬಲ್ಲ ಸುರಕ್ಷಿತ ಔಷಧಿಗಳು ಅಷ್ಟಾಗಿ ಇಲ್ಲವೆಂದೇ ಹೇಳಬೇಕು. ಬಹಳ ರೀತಿಯ ಔಷಧಿಗಳನ್ನು ಗರ್ಭಪಾತವಾಗುವಷ್ಟು ಉಪಯೋಗಿಸಿದರೂ ಅವು ದೇಹಕ್ಕೆ ಅಪಾಯವಾಗುವಷ್ಟು ಗಾತ್ರದಲ್ಲಿ ಅವನ್ನು ಉಪಯೋಗಿಸಬೇಕಾಗಿದೆ. ಎರ್ಗಾಟ್, ಕ್ವಿನೀನ್, ಈಸ್ಟ್ರೋಜೆನ್ನುಗಳು, ಟರ್ಪೆಂಟೈನ್ ಕ್ಯಾಂಥರಿಡೀನುಗಳು, ಜಾಪಾಳ, ಕಿಲುಬು ಮುಂತಾದ ತೀಕ್ಷ್ಣವಾದ ವಮನ ವಿರೇಚಿಗಳು, ಸೀಸ ಸಂಯುಕ್ತ ರಾಸಾಯನಿಕಗಳು ಇವೆಲ್ಲವನ್ನು ಗರ್ಭಪಾತವಾಗಲು ಉಪಯೋಗಿಸುತ್ತಾರೆ. ಭಾರತದಲ್ಲಿ ಎಳೇ ಪರಂಗಿಬೀಜ, ಎಕ್ಕದ ಹಾಲು, ಚಿತ್ರಮೂಲ, ಹಾಗಲ, ನುಗ್ಗೆ ಮುಂತಾದವನ್ನು ಗರ್ಭಪಾತಕ್ಕೆ ಉಪಯೋಗಿಸುವುದುಂಟು. ಹಿಗ್ಗಿನ್ಸ್ ಪಿಚಕಾರಿಯಿಂದ ಯೋನಿಯ ಮೂಲಕ ಗರ್ಭಕೋಶಕ್ಕೆ ಒತ್ತಡದಿಂದ ಜಲಸೇಚನ ಮಾಡುವುದು, ಭಟ್ಟಿ ಜಾರಿದಾಗ ಅನುಸರಿಸುವಂಥ ಪಾತ್ರಾಪ್ರಯೋಗ, ಹೊಟ್ಟೆ ಮೇಲೆ ತುಳಿಸಿಕೊಳ್ಳುವುದು, ಹೊಟ್ಟೆ ಸುತ್ತ ಅತಿ ಬಿಗಿಯಾಗಿ ಸಿಂಬಿ ಸುತ್ತಿಕೊಳ್ಳುವುದು, ಎತ್ತರದಿಂದ ಧುಮುಕುವುದು, ಕುದುರೆ ಸವಾರಿ, ಶ್ರಮವಾಗುವ ಕುಣಿತ, ಮಹಡಿ ಹಂತವನ್ನು ಹತ್ತಿ ದುಡುದುಡನೆ ಇಳಿಯುವುದು ಮುಂತಾದ ಬಲಪ್ರಯೋಗಗಳನ್ನೂ ಗರ್ಭಪಾತವಾಗುವ ಸಲುವಾಗಿ ಅನುಸರಿಸಲಾಗುತ್ತದೆ. ಸಾಮಾನ್ಯವಾಗಿ ಪಿಚಕಾರಿ ಉಪಯೋಗದಿಂದ ಗರ್ಭಪಾತದ ಸ್ವಪ್ರಯತ್ನ ಪ್ರಾರಂಭವಾಗುತ್ತದೆ. ಅದು ಸಫಲವಾಗದಿದ್ದಾಗ ಶ್ರಮಸಾಧನೆಗಳು, ಅವೂ ತಪ್ಪಿದರೆ ಔಷಧ ಸೇವನೆ, ಅವೂ ತಪ್ಪಿದರೆ ಸಲಕರಣೆಗಳ ಉಪಯೋಗವನ್ನು ಕೃತಕ ಗರ್ಭಪಾತದ ಪ್ರಯತ್ನಗಳಾಗಿ ಕಾಣಬಹುದು. ಹೊರಗಿನವರಿಂದ ಗರ್ಭಪಾತ ಮಾಡಿಸಿಕೊಳ್ಳುವಾಗ ಸಾಮಾನ್ಯವಾಗಿ ಸಲಕರಣೆಗಳ ಉಪಯೋಗವೇ ಅನುಸರಿಸುವ ಮಾರ್ಗ. ತಿಳಿಯದ ಜನ ಸಲಕರಣೆಗಳನ್ನು ಉಪಯೋಗಿಸಿದಾಗ ಸ್ವಪ್ರಯತ್ನದಲ್ಲಿ ಸಲಕರಣೆಯ ಉಪಯೋಗದಂತೆಯೇ ಶರೀರ ಘಾತವಾಗುವ ಸಾಧ್ಯತೆ ಬಹಳ ಉಂಟು. ಅನುಭವಸ್ಥರು ಅಥವಾ ಶಸ್ತ್ರಕ್ರಿಯಾ ಜ್ಞಾನವುಳ್ಳವರು ಸಲಕರಣೆಗಳನ್ನು ಉಪಯೋಗಿಸಿದರೆ ಅಷ್ಟಾಗಿ ಘಾತವಾಗದೆ ಹೆಚ್ಚು ಕಡಿಮೆ ಖಚಿತವಾಗಿ ಗರ್ಭಪಾತವಾಗುವ ಸಂಭವವಿರುತ್ತದೆ. ಅನನುಭವಿಗಳು ಪಿಚಕಾರಿ ಪ್ರಯೋಗ, ಯೋನಿಯೊಳಗಿನಿಂದ ಗರ್ಭಕೋಶ ದ್ವಾರಕ್ಕೆ ಸಿಕ್ಕಿಕೊಳ್ಳುವಂತೆ ಔಷಧಗಳನ್ನು ಲೇಪಿಸಿದ ಕಡ್ಡಿಗಳನ್ನು ತೂರಿಸುವುದು, ಸೂಜಿ, ಮೊಳೆ ಮುಂತಾದ ಚೂಪಾದ ವಸ್ತುಗಳಿಂದ ಭ್ರೂಣವನ್ನು ಆವರಿಸಿರುವ ಚೀಲವನ್ನು ಛಿದ್ರಿಸುವುದು ಮುಂತಾದ ಮಾರ್ಗಗಳನ್ನು ಅನುಸರಿಸುತ್ತಾರೆ. ಅನುಭವಿಗಳೂ ಶಸ್ತ್ರಕ್ರಿಯಾ ಜ್ಞಾನವುಳ್ಳವರೂ ಸಾಮಾನ್ಯವಾಗಿ ಈ ನೀರಿನ ಚೀಲವನ್ನು ಛಿದ್ರಿಸುವ ವಿಧಾನವನ್ನೇ ಅನುಸರಿಸುತ್ತಾರೆ.

ಶಸ್ತ್ರಕ್ರಿಯಾ ಶಾಸ್ತ್ರಜ್ಞರು ಸಾಮಾನ್ಯವಾಗಿ ಶಸ್ತ್ರಕ್ರಿಯೆಗೆ ಅನುಸರಿಸುವ ಎಚ್ಚರಿಕೆಗಳನ್ನು ಆದಷ್ಟು ಮಟ್ಟಿಗೆ ಅನುಸರಿಸುವುದರಿಂದ ಇವರು ಜರುಗಿಸುವ ಕೃತಕ ಗರ್ಭಪಾತ ತಕ್ಕಮಟ್ಟಿಗೆ ಕ್ಷೇಮವಾಗಿರುತ್ತದೆ ಮತ್ತು ಬಹುವಾಗಿ ಸ್ವಾಭಾವಿಕ ಗರ್ಭಪಾತದಂತೆಯೇ ಇರುತ್ತದೆ. ಅಕುಶಲಿಗಳು ಅನುಸರಿಸುವ ಸಲಕರಣೆಗಳ ಪ್ರಯೋಗದಿಂದ ಮತ್ತು ಸ್ಥಳೀಕವಾಗಿ ತೀವ್ರ ಔಷಧ ಪ್ರಯೋಗಗಳಿಂದ ಯೋನಿ, ಗುದದ್ವಾರ, ಗರ್ಭಕೋಶದ್ವಾರ, ಗರ್ಭಕೋಶ ಗಳಲ್ಲಿ ಗಾಯ ವ್ರಣಗಳಾಗಿ, ರಕ್ತಸ್ರಾವ, ಡೊಗರು ಬೀಳುವಿಕೆ, ತೀವ್ರ ಆಘಾತಗಳಾಗಿ ಸಾವು ಸಂಭವಿಸಬಹುದು; ಇಲ್ಲವೇ ವಿಷಾಣು ಸೋಂಕಾಗಿ ವಿಷಮಿಸಿ ಸಾವು ಸಂಭವಿಸ ಬಹುದು. ಇಂಥ ಸಾವು, ಸ್ವಯಂಕೃತ ಮತ್ತು ಅಕುಶಲ ಪರಕೃತ ಕೃತಕ ಗರ್ಭಪಾತಗಳಲ್ಲಿ ಶೇ.16ರಷ್ಟು ಸಂಭವಿಸಬಹುದೆಂದು ಅಂದಾಜು ಮಾಡಿದ್ದಾರೆ. ಆಘಾತಗಳಿಂದ ಚೇತರಿಸಿಕೊಂಡರೂ ಅನೇಕ ಕಾಲ ಸೊಂಟನೋವು, ಅತಿರಜಸ್ರಾವ, ಬಿಳುಪು ಹೋಗುವುದು ಮುಂತಾದ ಅನಾರೋಗ್ಯ ಸ್ಥಿತಿಗಳಿಂದ ಬಹುಕಾಲ ನರಳಬೇಕಾಗುತ್ತದೆ.

ಕೃತಕ ಗರ್ಭಪಾತ ಕೆಲವು ಸಂದರ್ಭಗಳಲ್ಲಿ ಸಮರ್ಥನೀಯವಾಗಿರುತ್ತದೆ. ಇದು ಸಾಮಾನ್ಯವಾಗಿ ಮುಚ್ಚುಮರೆ ಇಲ್ಲದೆ ಸಕಲ ಸೌಕರ್ಯವೂ ಇರುವ ಆಸ್ಪತ್ರೆಯಲ್ಲಿ ತಜ್ಞರು ಮಾಡುವ ಕಾರ್ಯ. ಸಮರ್ಥನೀಯ ಗರ್ಭಪಾತವನ್ನು ಮಾಡಿಸುವ ಮೊದಲು ಆ ಗರ್ಭ ಮುಂದುವರಿದರೆ ತಾಯಿಯ ದೇಹಸೌಖ್ಯಕ್ಕೆ, ಮನೋಸ್ಥಿತಿಗೆ ಮತ್ತು ಜೀವಕ್ಕೆ ಅಪಾಯ ಉಂಟೆಂದು ಸಾಮಾನ್ಯವಾಗಿ ಇಬ್ಬರು ತಜ್ಞರಾದರೂ ಒಮ್ಮತದಿಂದ ಸಮ್ಮತಿಸಬೇಕಾಗುತ್ತದೆ. ಅಂತೆಯೇ ವ್ಯಕ್ತಿ ಮತ್ತು ಸಂಬಂಧಿಗಳ ಲಿಖಿತ ಒಪ್ಪಿಗೆಯೂ ಅಗತ್ಯ. ತುರ್ತು ಪರಿಸ್ಥಿತಿಗಳಲ್ಲಿ ಈ ನಿರ್ಬಂಧಗಳನ್ನು ಸಾಮಾನ್ಯವಾಗಿ ಸಡಿಲಿಸುತ್ತಾರೆ. ಸಮರ್ಥನೀಯ ಗರ್ಭಪಾತ ಮಾಡಬೇಕಾದ ಸಂದರ್ಭಗಳು ನವೀನ ಔಷಧಿಗಳು ಮತ್ತು ಚಿಕಿತ್ಸಾ ಕ್ರಮಗಳಿಂದ ಈಚೆಗೆ ಕಡಿಮೆಯಾಗಿವೆ. ಕ್ಷಯ, ತಕ್ಕಮಟ್ಟಿನ ಹೃದಯ ದೌರ್ಬಲ್ಯ, ರಕ್ತದ ಒತ್ತಡ ಮುಂತಾದ ಕಾರಣಗಳಿಗಾಗಿ ಈಚೆಗೆ ಗರ್ಭಪಾತವನ್ನು ಉಂಟುಮಾಡುವುದಿಲ್ಲ. ಅನಿವಾರ್ಯ ಗರ್ಭಪಾತ ಸಮಗ್ರಗೊಳ್ಳದೆ ದೀರ್ಘಕಾಲಿಕ ವಾದಾಗ, ಕೃತಕ ಗರ್ಭಪಾತದ ಅಕುಶಲಿತ ಪ್ರಯತ್ನಗಳಿಂದ ದೇಹಾಘಾತವಾಗಿ ವಿಷಾಣು ಸೋಂಕುಂಟಾದಾಗ, ಗರ್ಭಕೋಶದಲ್ಲಿ ದುರ್ಮಾಂಸ ಏಡಿಗಂತಿಗಳಿದ್ದಾಗ, ಮೂರ್ಛಾರೋಗ, ಹಿಂದಿನ ಪ್ರಸವ ಕಾಲಗಳಲ್ಲಿ ಮನೋವಿಕಲ್ಪ ಇಂಥ ಸಂದರ್ಭಗಳಲ್ಲಿ ಕೃತಕ ಗರ್ಭಪಾತ ಸಾಮಾನ್ಯವಾಗಿ ಸಮರ್ಥನೀಯವೆಂದು ಗಣಿಸಲ್ಪಡುತ್ತದೆ.

ಅನುವಂಶಿಕವಾಗಿರಬಹುದಾದ ಮೂರ್ಛಾರೋಗ, ಮನೋವಿಕಲ್ಪ, ತೀವ್ರ ಅಂಗವಿಕಲತೆ ಇವನ್ನು ತಡೆಗಟ್ಟಲು ಗರ್ಭಪಾತ ಸಮರ್ಥನೀಯವೆಂದು ಕೆಲವು ದೇಶಗಳಲ್ಲಿ ಎಣಿಸಲಾಗಿದೆ. ಅತಿಕ್ರಮ ಸಂಭೋಗದಿಂದಾದ ಗರ್ಭವನ್ನು ಕಳೆದುಕೊಳ್ಳಲೂ ಗರ್ಭಪಾತವನ್ನು ಸಮರ್ಥನೀಯವೆಂದು ಕೆಲವು ದೇಶಗಳಲ್ಲಿ (ಇತ್ತೀಚೆಗೆ ಭಾರತದಲ್ಲೂ) ಭಾವಿಸಲಾಗಿದೆ. ಈಚೆಗೆ ಜಪಾನ್ ಮುಂತಾದ ಕೆಲವು ದೇಶಗಳಲ್ಲಿ ಕುಟುಂಬ ಯೋಜನೆಯ ಅಂಗವಾಗಿ, ಸಾಮಾಜಿಕ ವೈಯಕ್ತಿಕ ಕಾರಣಗಳಿಗಾಗಿ ಗರ್ಭಪಾತವನ್ನು ಐಚ್ಛಿಕ ವಿಷಯವನ್ನಾಗಿ ಮಾಡಲಾಗಿದೆ. ಇಂಥ ಗರ್ಭಪಾತಗಳನ್ನು ಸರಕಾರದ ಅನುಮತಿ ಇರುವ ಸ್ಥಳಗಳಲ್ಲಿ ಮಾತ್ರ ತಜ್ಞರು ಯಾವ ಮುಚ್ಚುಮರೆಯೂ ಇಲ್ಲದೆ ಮಾಡಬೇಕಾಗಿರುತ್ತದೆ. ಈ ವ್ಯವಸ್ಥೆಗೆ ಈಡಾಗುವುದಕ್ಕೆ ಹೀನಾಯ ಪಟ್ಟುಕೊಂಡೋ ಆರ್ಥಿಕ ಕಾರಣಗಳಿಗಾಗಿಯೋ ಐಚ್ಛಿಕ ಗರ್ಭಪಾತವನ್ನು ಗುಟ್ಟಾಗಿ ಅಕುಶಲಿಕವಾಗಿ ಪ್ರಯತ್ನಿಸುವುದೂ ಅದರಿಂದಾಗಬಹುದಾದ ಗಂಡಾಂತರವನ್ನು ಅನುಭವಿಸುವುದೂ ಸಮಾಜದಲ್ಲಿ ಇದ್ದೇ ಇರುತ್ತದೆ. ಐಚ್ಛಿಕ ಗರ್ಭಪಾತವನ್ನು ಈಚೆಗೆ ನವವಿಧಾನಗಳಿಂದ ಕ್ಷೇಮಕರವಾಗಿ ಮಾಡಲಾಗಿದೆ. ಅಗತ್ಯವಾದ ಎಚ್ಚರಿಕೆಗಳನ್ನು ತೆಗೆದುಕೊಳ್ಳುವುದನ್ನು ಮರೆಯದೆ ಕಿಬ್ಬೊಟ್ಟೆಯ ಮೂಲಕ ಚುಚ್ಚುಮದ್ದಿನ ದೊಡ್ಡ ಸೂಜಿಯನ್ನು ಭ್ರೂಣವನ್ನು ಆವರಿಸಿರುವ ನೀರಿನ ಚೀಲದೊಳಗೆ ಹುಗಿಸಿ, ಆದಷ್ಟು ನೀರನ್ನು ತೆಗೆದು, ಅಷ್ಟೇ ಗಾತ್ರದಲ್ಲಿ ಶುದ್ಧೀಕರಿಸಿ ಬೆಚ್ಚಗೆ ಮಾಡಿದ ಶೇ.20 ಉಪ್ಪುನೀರನ್ನೋ ಶೇ.50 ಗ್ಲೂಕೋಸ್ ದ್ರಾವಣವನ್ನೊ ಚೀಲದೊಳಕ್ಕೆ ಸೇರಿಸುತ್ತಾರೆ. ಇದಾದ ಕೆಲವು ಗಂಟೆಗಳಲ್ಲಿ ಸಾಮಾನ್ಯವಾಗಿ ಗರ್ಭಪಾತ ಉಂಟಾಗುತ್ತದೆ. ಈ ರೀತಿ ಗರ್ಭಪಾತವನ್ನು ಉಂಟುಮಾಡಿದಾಗ ಹುಟ್ಟುವ ಮಕ್ಕಳು ಸತ್ತು ಹೋಗಿರುತ್ತವೆ ಎನ್ನುವುದನ್ನು ನೆನಪಿನಲ್ಲಿಡಬೇಕು. ಅಮೆರಿಕದಲ್ಲಿ ಈಚೆಗೆ ವಿದ್ಯುತ್ ಸಹಾಯದಿಂದ ಗರ್ಭಕೋಶವನ್ನು ಸಂಕುಚಿಸಿ ಗರ್ಭಪಾತವಾಗುವಂತೆ ಮಾಡುವುದೂ ರೂಢಿಗೆ ಬಂದಿದೆ. ಈ ರೀತಿಯ ಕೃತಕ ಗರ್ಭಪಾತಗಳು ಸಹಜ ಗರ್ಭಪಾತಗಳಂತೆಯೇ ಇದ್ದು ಭಿನ್ನತೆ ವ್ಯಕ್ತವಾಗದೇ ಇರಬಹುದಾದ್ದರಿಂದ ಇವನ್ನು ಪತ್ತೆಮಾಡುವುದು ಕಷ್ಟ.

ಭಾರತದಲ್ಲೂ (ಆಗಸ್ಟ್ 1971) ಐಚ್ಛಿಕ ಗರ್ಭಪಾತ ಕುಟುಂಬ ಯೋಜನೆ ಮತ್ತು ಕೆಲವು ವಿಶೇಷ ಸಂದರ್ಭಗಳಲ್ಲಿ ನ್ಯಾಯಸಮ್ಮತವೆಂದು ಶಾಸನ ಮಾಡಲಾಗಿದೆ. (ಎಸ್.ಆರ್.ಆರ್.)

ಕಾನೂನಿನ ದೃಷ್ಟಿಯಲ್ಲಿ ಗರ್ಭಪಾತ: ಗರ್ಭ ನಿಂತ ಯಾವುದೇ ಅವಧಿಯಲ್ಲಿ ಅನೈಸರ್ಗಿಕವಾಗಿ ಅಥವಾ ಕೃತ್ರಿಮ ರೀತಿಯಿಂದ ಗರ್ಭಕೋಶದಲ್ಲಿದ್ದ ಭ್ರೂಣ ಅಥವಾ ಅದರ ಅಂಶವನ್ನು ಹೊರಗೆ ಹಾಕುವುದನ್ನು ಕಾನೂನು ಗರ್ಭಪಾತವೆಂದು ಪರಿಗಣಿಸುತ್ತದೆ. ತೀರ ಇತ್ತೀಚಿನವರೆಗೆ ಗರ್ಭಪಾತ ಮಾಡಿಕೊಳ್ಳುವುದು ಇಲ್ಲವೇ ಮಾಡಿಸುವುದು ಕಾನೂನಿನಂತೆ ಅಪರಾಧವಾಗಿತ್ತು. ಈ ಅಪರಾಧಕ್ಕೆ ಮೂರು ವರ್ಷದ ಕಾರಾಗೃಹವಾಸದ ಶಿಕ್ಷೆ ಮತ್ತು/ಅಥವಾ ದಂಡ, ತಾಯಿ ಅಸುನೀಗಿದರೆ ಏಳು ವರ್ಷಗಳವರೆಗೆ ಶಿಕ್ಷೆ ಮತ್ತು/ಅಥವಾ ದಂಡ ಹಾಗೂ ಗರ್ಭಪಾತಕ್ಕೊಳಗಾಗುವವಳ ಅನುಮತಿ ಇಲ್ಲದೇ ಮಾಡಿದ ಅಪರಾಧಕ್ಕೆ ಗರಿಷ್ಠ ಆಜೀವ ಕಾರಾಗೃಹವಾಸದ ಶಿಕ್ಷೆಯಿತ್ತು. ಒಂದು ವೇಳೆ ತಾಯಿಯ ಜೀವವನ್ನು ಉಳಿಸುವ ಪ್ರಾಮಾಣಿಕ ಉದ್ದೇಶದಿಂದ ಗರ್ಭಪಾತ ಮಾಡಿಸಿದ್ದಾದರೆ ಮಾತ್ರ ಈ ಶಿಕ್ಷೆ ಅನ್ವಯಿಸುವುದಿಲ್ಲ.

ಕುಟುಂಬಯೋಜನಾ ಕಾರ್ಯಕ್ರಮ ಹಾಗೂ ಇನ್ನಿತರ ಸಾಮಾಜಿಕ ಕಾರಣಗಳಿಂದಾಗಿ ಗರ್ಭಪಾತವನ್ನು ಕಾಯಿದೆಬದ್ಧಗೊಳಿಸುವ ಮಸೂದೆ ಭಾರತದಲ್ಲಿ ಜಾರಿಗೆ ಬಂದಿದೆ. ಅದರಂತೆ ಗರ್ಭಪಾತವನ್ನು ಕಾಯಿದೆಬದ್ಧವಾಗಿ ಈ ಕೆಳಗಿನ ಕಾರಣಗಳಿಂದ ಮಾಡಿಸಬಹುದಾಗಿದೆ:

1. ಗರ್ಭ ನಿಲ್ಲುವುದರಿಂದ ತಾಯಿಯ ಜೀವಕ್ಕೆ ಅಪಾಯ ಒದಗಬಹುದಾದ ಸಂದರ್ಭಗಳಲ್ಲಿ. ಉದಾಹರಣೆಗೆ, ತಾಯಿಯಾಗಲಿರುವವಳು ಹೃದಯ ಅಥವಾ ಪಿತ್ತಕೋಶದ ತೊಂದರೆಯಿಂದ ಬಳಲುತ್ತಿದ್ದಾಗ ಅಥವಾ ಸ್ತನ ಅಥವಾ ಗುಪ್ತಾಂಗಗಳ ಕ್ಯಾನ್ಸರ್ ಮೊದಲಾದ ರೋಗಗಳಿಗೆ ತುತ್ತಾದಾಗ.

2. ವಿಕೃತ ಮಗುವಿನ ಜನನದ ಸಂಶಯವಿದ್ದಾಗ, ದೈಹಿಕವಾಗಿ ಅಥವಾ ಮಾನಸಿಕವಾಗಿ ವಿಕೃತಗೊಂಡ ಗರ್ಭ ಬೆಳೆವಣಿಗೆಯಲ್ಲಿದೆಯೆಂಬ ಸಂಶಯಕ್ಕೆ ಕಾರಣವಿದ್ದಲ್ಲಿ, ಅಂದರೆ ಗುಹ್ಯರೋಗಗಳು, ಮಾರಕ ಅಥವಾ ಮಾದಕ ಔಷಧ ಸೇವನೆ ಮುಂತಾದ ಸಂದರ್ಭಗಳಲ್ಲಿ ಇಂಥ ಸಂಶಯಕ್ಕೆ ಕಾರಣವಿದೆ. ವಿಕಿರಣಪಟುತ್ವದಿಂದ ಭ್ರೂಣ ಘಾಸಿಗೊಂಡಾಗ ಸಹ ಗರ್ಭಪಾತ ಮಾಡಿಸಬಹುದು.

3. ಅತ್ಯಾಚಾರಕ್ಕೆ ಬಲಿಯಾಗಿ ಗರ್ಭ ನಿಂತ ಸಂದರ್ಭಗಳಲ್ಲಿ ಗರ್ಭಪಾತ ಮಾಡಿಸಬಹುದಾಗಿದೆ.

4. ಸಾಮಾಜಿಕ ಇಲ್ಲವೇ ಇತರ ಕಾರಣಗಳು.

ಅವಿವಾಹಿತ ಕನ್ಯೆ, ವಿಧವೆ ಮೊದಲಾದವರು ಗರ್ಭವತಿಯರಾದಲ್ಲಿ ಅಥವಾ ಮಕ್ಕಳ ಸಂಖ್ಯೆ ಅತಿಯಾಗಿದ್ದಲ್ಲಿ ಗರ್ಭಪಾತವನ್ನು ಕಾನೂನು ಒಪ್ಪುತ್ತದೆ. ಆದರೆ ಇಂಥ ಪ್ರಸಂಗದಲ್ಲಿ ಅವರವರ ಸಾಮಾಜಿಕ ಸ್ಥಾನಮಾನ, ತಾಯಿಯಾಗಲಿರುವವಳ ವಯಸ್ಸು, ಮಕ್ಕಳ ಸಂಖ್ಯೆ, ಕುಟುಂಬದ ವರಮಾನ ಮುಂತಾದವುಗಳನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು. ಗರ್ಭ ಧರಿಸಿದ 12 ವಾರಗಳಲ್ಲಿ (ಮೂರು ತಿಂಗಳು) ಯಾವುದೇ ರಿಜಿಸ್ಟರ್ಡ್ ಮೆಡಿಕಲ್ ಪ್ರಾಕ್ಟಿಶನರ್ ಅಥವಾ ಸ್ತ್ರೀ ರೋಗ ತಜ್ಞವೈದ್ಯರು ಗರ್ಭಪಾತವನ್ನು ಮಾಡಿಸಬಹುದಾಗಿದೆ. ಆದರೆ 12 ವಾರಗಳ ಅನಂತರ 20 ವಾರದೊಳಗೆ ಗರ್ಭಪಾತ ಮಾಡಿಸುವ ಬಗ್ಗೆ ಇಂಥ ಇಬ್ಬರು ಡಾಕ್ಟರರ ಒಮ್ಮತದ ನಿರ್ಣಯ ಅವಶ್ಯ. ಜನನ ನಿಯಂತ್ರಣದ ಕೃತ್ರಿಮ ಸಾಧನಗಳ ದೋಷದಿಂದಾದ ಗರ್ಭವನ್ನು ತೆಗೆಯಿಸಲೂ ಕೂಡ ಕಾನೂನು ಅವಕಾಶ ಮಾಡಿಕೊಡುವುದು. ಗರ್ಭಪಾತವನ್ನು ಸರ್ಕಾರ ನಿಗದಿ ಮಾಡಿದ ಆಸ್ಪತ್ರೆಗಳಲ್ಲಿಯೇ ಮಾಡಿಸಬೇಕು. ಈ ಬಗ್ಗೆ ದಾಖಲೆಯಿಡತಕ್ಕದ್ದು. ಗರ್ಭಪಾತ ಮಾಡಿಕೊಳ್ಳುವವಳು ಹುಚ್ಚಿ ಇಲ್ಲವೇ ಅಪ್ರಾಯಸ್ಥಳು ಇದ್ದ ಸಂದರ್ಭವನ್ನು ಹೊರತುಪಡಿಸಿ ಗರ್ಭಪಾತ ಮಾಡಿಕೊಳ್ಳುವ ಬಗ್ಗೆ ಅಂತಿಮ ನಿರ್ಣಯವನ್ನು ಮಾಡಿಸಿಕೊಳ್ಳುವ ಹೆಂಗಸೇ ನಿರ್ಧರಿಸತಕ್ಕದ್ದು. ಪ್ರಾಮಾಣಿಕವಾಗಿ ಸದುದ್ದೇಶದಿಂದ ಮಾಡಿದ ಗರ್ಭಪಾತ ಕ್ರಿಯೆಗೆ ವೈದ್ಯರ ವಿರುದ್ಧ ನಷ್ಟ ವಗೈರೆ ಬಗ್ಗೆ ಕಾನೂನುಕ್ರಮ ಕೈಗೊಳ್ಳದಂತೆ ಅವರಿಗೆ ಕಾಯ್ದೆಯ ರಕ್ಷಣೆಯಿದೆ. (ಬಿ.ಡಿ.ಎಚ್.)

**ಗರ್ಭಾದಾನ :** ಶೌನಕರ ವ್ಯಾಖ್ಯಾನದ ಪ್ರಕಾರ ಹದಿನಾರು ಹಿಂದೂ ಸಂಸ್ಕಾರಗಳಲ್ಲಿ ಮೊದಲನೆಯದು; ಪತಿಯ ಮುಖಾಂತರ ಪತ್ನಿ ಗರ್ಭವತಿಯಾಗುವ ಕರ್ಮಪೂರ್ತಿ. ಗರ್ಭಾಲಂಬನ ಎಂಬ ಹೆಸರೂ ಉಂಟು.

ವೇದಪೂರ್ವಕಾಲದಲ್ಲಿ ಪ್ರಜೋತ್ಪತ್ತಿ ವಿಷಯದ ಬಗ್ಗೆ ಜನರ ಧೋರಣೆ ಏನಿದ್ದಿತೋ ತಿಳಿಯದು. ಮಾನವ ಜಾತಿಯ ಆದಿಕಾಲದಲ್ಲಿ ಗರ್ಭಧಾರಣೆ ಮತ್ತು ಪ್ರಸೂತಿಗಳಿಗೆ ಧಾರ್ಮಿಕ ಪ್ರಾಮುಖ್ಯವಿರಲಿಲ್ಲ. ವಿಷಯೋಪಭೋಗದ ಇಚ್ಛೆಯಾದ ಕೂಡಲೇ ಸ್ತ್ರೀಪುರುಷರಿಬ್ಬರೂ ಒಂದು ಕಡೆ ಕೂಡಿ ಪರಸ್ಪರ ಸಮಾಗಮ ಹೊಂದಿ ಇಂದ್ರಿಯಸುಖವನ್ನು ಅನುಭವಿಸುತ್ತಿದ್ದರು. ಇಂಥ ಸಮಾಗಮದಿಂದ ಸಂತಾನ ಪ್ರಾಪ್ತಿಯಾಗುವುದೆಂಬ ತಿಳಿವಳಿಕೆ ಉಂಟಾದದ್ದು ಕೇವಲ ಅನಂತರ, ನಿಧಾನವಾಗಿ. ಸಾಮಾಜಿಕವಾಗಿ ಹಾಗೂ ಧಾರ್ಮಿಕವಾಗಿ ಮುನ್ನಡೆ ಸಾಧಿಸಿದಂತೆ ಆದಿಮಾನವನಿಗೆ

ಗರ್ಭಾಧಾನವನ್ನು ಒಂದು ನಿರ್ದಿಷ್ಟ ಸಂಸ್ಕಾರವನ್ನಾಗಿ ಆಚರಿಸುವ ಅಗತ್ಯ ಕಂಡುಬಂತು. ಮನೆ, ಗೃಹಸ್ಥಾಶ್ರಮ, ಸಂತಾನಾಕಾಂಕ್ಷೆ ಇವಕ್ಕೆ ದೈವ ಕೃಪೆ ಅಗತ್ಯ ಎಂಬ ವಿಷಯದಲ್ಲಿ ಮೂಡಿದ ಅವನ ಶ್ರದ್ಧೆ ಈ ಸಂಸ್ಕಾರಕ್ಕೆ ಆಧಾರವಾಗಿದೆ. ಇದರ ಬಗೆಗೆ ಸಂಹಿತೆಗಳಲ್ಲಿ ಪ್ರತ್ಯೇಕ ಉಲ್ಲೇಖವಿಲ್ಲದಿದ್ದರೂ ಗರ್ಭಧಾರಣೆ ಮತ್ತು ಗರ್ಭದೇವತೆಗಳ ಬಗ್ಗೆ ಮಂತ್ರಗಳ ಉಲ್ಲೇಖವನ್ನು ಋಗ್ವೇದ ಮತ್ತು ಅಥರ್ವವೇದ ಸಂಹಿತೆಗಳಲ್ಲಿ ಕಾಣಬಹುದು. ಸೂತ್ರ ಪೂರ್ವಕಾಲದಲ್ಲಿ ಇದೊಂದು ಸಾಧಾರಣ ಸಂಸ್ಕಾರವಾಗಿತ್ತು. ಪತಿಯಾದವ ಋತುಸ್ನಾತ ಪತ್ನಿಯನ್ನು ಒಪ್ಪಿಕೊಂಡು, ಗರ್ಭದ ಸ್ಥಾಪನೆಯಾಗಲಿ ಎಂದು ದೇವರನ್ನು ಪ್ರಾರ್ಥಿಸಿ, ಆಕೆಯ ಸಮಾಗಮವನ್ನು ಮಾಡುತ್ತಿದ್ದ. ಸೂತ್ರಗಳ ಕಾಲಕ್ಕೆ ಇದೇ ಧಾರ್ಮಿಕ ಸಂಸ್ಕಾರದ ಸ್ವರೂಪವನ್ನು ತಾಳಿತು. ಗೃಹ್ಯಸೂತ್ರದಲ್ಲಿ ಇದರ ಬಗ್ಗೆ ವ್ಯವಸ್ಥಿತ ವಿವರಗಳು ಸೇರಿವೆ. ಋತುಸ್ನಾತ ಸ್ತ್ರೀಯ ಐದನೆಯ ದಿನದಿಂದ ಹದಿನಾರನೆಯ ದಿನದ ಗಡುವಿನ ಶುಭದಿನದಲ್ಲಿ ಇದನ್ನು ನಡೆಸಬೇಕು. ಇದಕ್ಕೆ ಯೋಗ್ಯವಾದ ತಿಥಿ, ನಕ್ಷತ್ರ, ಅವುಗಳ ಶುಭಾಶುಭ ಫಲಗಳ ಬಗ್ಗೆ ಮನು, ಯಾಜ್ಞವಲ್ಕ್ಯ ಇತ್ಯಾದಿ ಸ್ಮೃತಿಕಾರರೂ ಧರ್ಮಸಿಂಧು, ನಿರ್ಣಯಸಿಂಧುಗಳ ಗ್ರಂಥಕರ್ತೃಗಳೂ ವಿವೇಚಿಸಿದ್ದಾರೆ.

ಗಂಡುಮಗುವನ್ನು ಇಚ್ಛಿಸುವಾತ ಹೆಂಡತಿ ರಜಸ್ವಲೆಯಾದ ಮೊದಲನೆಯ ದಿನದಿಂದ 4, 6, 8, 10, 12 ಈ ದಿನಗಳಲ್ಲೂ ಸ್ತ್ರೀಸಂತಾನವನ್ನು ಬಯಸುವಾತ 5, 7, 9, 11ನೆಯ ದಿನಗಳಲ್ಲೂ ಗರ್ಭಾದಾನ ಮಾಡಬೇಕು. ಸತ್‌ಸಂತತಿಪ್ರಾಪ್ತಿಗಾಗಿ ಸತಿಪತಿಯರ ಹೃದಯಗಳು ಪ್ರೀತಿಯಿಂದ ಕೂಡಿರತಕ್ಕದ್ದು ಅವಶ್ಯ. ಭಯ, ಕ್ರೋಧ, ದ್ವೇಷ, ಮಾತ್ಸರ್ಯಗಳು ಗರ್ಭವನ್ನು ಕೆಡಿಸುತ್ತವೆ.

ಪ್ರಥಮ ರಜೋದರ್ಶನ ಕಾಲದ ತಿಥಿನಕ್ಷತ್ರಗಳಿಗನುಗುಣವಾಗಿ ಗರ್ಭಾಧಾನದ ಶುಭಾಶುಭಗಳನ್ನು ನಿರ್ಣಯಿಸುವುದುಂಟು. ದುಷ್ಟಯೋಗದಲ್ಲಿ ರಜೋದರ್ಶನವಾಗಿದ್ದರೆ ಆ ದೋಷ ಪರಿಹಾರಾರ್ಥವಾಗಿ ಭುವನೇಶ್ವರೀ ಶಾಂತಿಯನ್ನು ಕೈಕೊಳ್ಳುತ್ತಾರೆ. ರಾತ್ರಿ, ಸಮಾಗಮ ಪೂರ್ವದಲ್ಲಿ ಸಂಹಿತಗ್ರಂಥದಲ್ಲಿನ ಮಂತ್ರೋಚ್ಚಾರಣೆ ಮಾಡುತ್ತಾರೆ. ಇತ್ತೀಚೆಗೆ ಗರ್ಭಾದಾನ ಸಂಸ್ಕಾರವನ್ನು ಮದುವೆಯ ಜೊತೆಯಲ್ಲೇ ನಡೆಸುತ್ತಿದ್ದಾರೆ.

ಗರ್ಭಾದಾನದ ದಿವಸ ರಾತ್ರಿಯಲ್ಲಿ ಪತಿ–ಪತ್ನಿಯರನ್ನು ಪಕ್ಕಪಕ್ಕದಲ್ಲಿ ಕೂಡಿಸಿ ಪತ್ನಿಯ ಕಡೆಯಿಂದ ಪತಿಯ ಪೂಜೆ ಮಾಡಿಸುತ್ತಾರೆ. ಪತ್ನಿಗೆ ಉಡಿ ತುಂಬುತ್ತಾರೆ. ಹತ್ತಿರ ಸಮಯಗಳನ್ನಿಟ್ಟು ದೀಪ ಉರಿಸುತ್ತಾರೆ. ಪಕ್ಕದಲ್ಲಿ ವಿವಿಧ ಫಲಾಹಾರ ತುಂಬಿದ ತಟ್ಟೆಯನ್ನೂ ತಾಂಬೂಲ ಕರಂಡಕವನ್ನೂ ಇಟ್ಟಿರುತ್ತಾರೆ. ಪತಿಪತ್ನಿಯರಿಗೆ ಆರತಿ ಮಾಡುತ್ತಾರೆ. ಇದು ಲೌಕಿಕ ವಿಧಿ. *

**ಗರ್ಭಾವಸ್ಥೆ :** ಗರ್ಭಕೋಶದಲ್ಲಿ ಮಗು ಬೆಳೆಯುವ ಸ್ಥಿತಿ (ಪ್ರೆಗ್ನೆನ್ಸಿ). ಬಸಿರು ಪರ್ಯಾಯನಾಮ. ಈ ಸ್ಥಿತಿಯಲ್ಲಿರುವ ಸ್ತ್ರೀಗೆ ಗರ್ಭಿಣಿ ಅಥವಾ ಬಸುರಿ, ಬಿಮ್ಮನಸೆ ಎಂಬ ಹೆಸರುಗಳಿವೆ. ಅಂಡಾಣು ಮತ್ತು ವೀರ್ಯಾಣುಗಳ ಮಿಲನದಿಂದ ಗರ್ಭಾವಸ್ಥೆ ಪ್ರಾರಂಭವಾಗುತ್ತದೆ. ಭ್ರೂಣ ತಾಯಿಯ ಗರ್ಭಕೋಶದಲ್ಲಿದ್ದುಕೊಂಡು ಬೆಳೆದು ಶಿಶುವಿನ ರೂಪ ತಾಳಿ ಜನಿಸುವವರೆಗೂ ಗರ್ಭಾವಸ್ಥೆಯ ಅವಧಿ ಉಂಟು. ನಿರೀಕ್ಷಿತ ಕಾಲದಲ್ಲಿ ಮತ್ತು ಮುಂದೆಯೂ ಮುಟ್ಟಾಗದೇ ಹೋಗುವುದು, ನಾಲ್ಕಾರು ವಾರಗಳ ಬಳಿಕ ಬೆಳಿಗ್ಗೆ ಎದ್ದಾಗಲೆ ವಾಕರಿಕೆ, ಸ್ತನಗಳ ವೃದ್ಧಿ, ಮೊಲೆತೊಟ್ಟು ಕಪ್ಪು ವರ್ಣಕ್ಕೆ ತಿರುಗುವುದು, ಹೊಟ್ಟೆ ದಪ್ಪವಾಗುತ್ತಾ ಬರುವುದು, ಗರ್ಭಕೋಶದೊಳಗೆ ಮಗುವಿನ ಚಲನದಿಂದ ಆಗುವ ಅನುಭವ ಇವು ಕಂಡುಬಂದು ಸಾಮಾನ್ಯವಾಗಿ ಮುಟ್ಟು ನಿಂತ 40 ವಾರಗಳ ತರುವಾಯ (ಹತ್ತು ಚಾಂದ್ರಮಾನ ತಿಂಗಳು) ಶಿಶುವಿನ ಜನನವಾಗುತ್ತದೆ.

ಸಂಭೋಗ ಕ್ರಿಯೆಯಿಂದ ವೀರ್ಯ ಯೋನಿಯೊಳಹೊಕ್ಕ ಸಮಯದಲ್ಲಿ ಅಂಡಾಣು ಗರ್ಭಕೋಶನಾಳದೊಳಗಿದ್ದರೆ (ಫೆಲೋಪಿಯನ್ ಟ್ಯೂಬ್) ಅಥವಾ 12–24 ಗಂಟೆಗಳ ಬಳಿಕವಾದರೂ ಅದು ಬರುವ ಹಾಗಿದ್ದರೆ ಮಾತ್ರ ಅದರೊಡನೆ ಪುರುಷಾಣುವಿನ ಮಿಲನ ಸಾಧ್ಯ. ಪ್ರತಿ ಸಂಭೋಗ ಕ್ರಿಯೆಯೂ ಸ್ತ್ರೀಯಲ್ಲಿ ಗರ್ಭಾವಸ್ಥೆಯನ್ನು ಉಂಟುಮಾಡದೆ ಇರುವುದಕ್ಕೂ ಸಾಮಾನ್ಯವಾಗಿ ಮಾಸಿಕಚಕ್ರದ ಸುಮಾರು ಮಧ್ಯಕಾಲದಲ್ಲಿ ಮಾತ್ರ ಸಂಭೋಗದಿಂದ ಗರ್ಭಧಾರಣೆಯಾಗುವುದಕ್ಕೂ ಇದೇ ಕಾರಣ. ಸ್ತ್ರೀಯರಲ್ಲಿ ಪ್ರತಿ ತಿಂಗಳೂ (28 ದಿವಸಗಳ ಚಾಂದ್ರಮಾನ ತಿಂಗಳು) ಒಂದು ಅಂಡಾಣು ಅಂಡಾಶಯದಿಂದ ಕಳಿತು ಹೊರಬೀಳುತ್ತದೆ. ಮೇಲೆ ಹೇಳಿದಂತೆ 12–24 ಗಂಟೆಗಳ ಒಳಗೇ ಅದು ಪುರುಷಾಣುವಿನೊಡನೆ ಮಿಲನಗೊಂಡರೆ ಆಗ ಗರ್ಭಾವಸ್ಥೆಯುಂಟಾಗುತ್ತದೆ. ಇಲ್ಲದಿದ್ದರೆ ಅಂಡಾಣು ನಿಧಾನವಾಗಿ ಮುಂದಕ್ಕೆ ನೂಕಲ್ಪಡುತ್ತ ಗರ್ಭಕೋಶವನ್ನು ತಲಪಬಹುದು. ಆಮೇಲೋ ಅಥವಾ ಇನ್ನೂ ಮುಂಚೆಯೋ ಅದು ನಶಿಸಿಹೋಗುತ್ತದೆ. ಗರ್ಭಾವಸ್ಥೆ ಉಂಟಾಗದ ಇಂಥ ಸನ್ನಿವೇಶದಲ್ಲಿ ಅಂಡಾಣು ಅಂಡಾಶಯದಿಂದ ಹೊರಬಿದ್ದ 14 ದಿವಸಗಳ ತರುವಾಯ ಸ್ತ್ರೀಯಲ್ಲಿ ರಜಸ್ರಾವವಾಗುತ್ತದೆ. ಗರ್ಭಾವಸ್ಥೆ ಉಂಟಾದರೆ ರಜಸ್ರಾವವಾಗುವುದಿಲ್ಲ. ಆದ್ದರಿಂದ ಹೆಂಗಸು ಮುಟ್ಟಾಗುವುದು ಆಕೆ ಬಸಿರಾಗದೆ ಹೋದುದರ ಸೂಚನೆ ಮತ್ತು ಪರಿಣಾಮವಾಗಿರುತ್ತದೆ. ಹೆಂಗಸಿನ ಜೀವಮಾನದಲ್ಲಿ ಗರ್ಭಧಾರಣಾ ಸೌಲಭ್ಯ ಸುಮಾರು 15ನೆಯ ವರ್ಷದಿಂದ ಸುಮಾರು 50ನೆಯ ವರ್ಷ ವಯಸ್ಸಿನ ತನಕ ಕಾಣಬರುತ್ತದೆ. ಅಂದರೆ ಹುಡುಗಿ ಮೈನೆರೆದು ಪ್ರೌಢಳಾದಾಗಿನಿಂದ ವಯಸ್ಕ ಹೆಂಗಸಿನಲ್ಲಿ ಮುಟ್ಟು ನಿಲ್ಲುವತನಕ ಸಂತಾನ ಪ್ರಾಪ್ತಿ ಸೌಲಭ್ಯ ಉಂಟು. ರಜಸ್ರಾವಕ್ಕೂ ಗರ್ಭಧಾರಣೆ ಗರ್ಭಾವಸ್ಥೆಗಳಿಗೂ ಇರುವ ಸಂಬಂಧವನ್ನು ಅರ್ಥಮಾಡಿಕೊಳ್ಳಬೇಕಾದರೆ ಹೆಂಗಸಿನಲ್ಲಿ ಪ್ರಜನನ ಕ್ರಿಯೆಯ ಸ್ಥೂಲಪರಿಚಯವಿರಬೇಕು.

ಪ್ರಜನನ ಕ್ರಿಯೆ ಜನನಾಂಗಗಳಿಂದ ಜರುಗಿಸಲ್ಪಡುವ ದೇಹಕಾರ್ಯ ಸ್ತ್ರೀಯಲ್ಲಿ ಪ್ರಧಾನ ಜನನಾಂಗಗಳೆಂದರೆ ಕಿಬ್ಬೊಟ್ಟೆಯಲ್ಲಿರುವ (ಪೆಲ್ವಿಕ್ ಕ್ಯಾವಿಟಿ) ಎಡ ಮತ್ತು ಬಲ ಅಂಡಾಶಯಗಳು ಮತ್ತು ಅವುಗಳ ನಡುವೆ ಇರುವ ಗರ್ಭಕೋಶ. ಅಂಡಾಶಯಗಳ ಸನಿಹದಲ್ಲಿ ಪ್ರಾರಂಭವಾಗುವ ಗರ್ಭಕೋಶನಾಳಗಳು ಗರ್ಭಕೋಶವನ್ನು ಸೇರುತ್ತವೆ. ಗರ್ಭಕೋಶ ಗೇರುಹಣ್ಣಿನ ಆಕಾರದಲ್ಲಿರುತ್ತದೆ. ಅದರ ಕಂಠ ಯೋನಿಯೊಳಕ್ಕೆ ಚಾಚಿಕೊಂಡಿರುತ್ತದೆ. ಯೋನಿಗೆ ಸಂಪರ್ಕವನ್ನು ಉಂಟುಮಾಡುವ ಭಾಗವಿದು. ಅಲ್ಲದೇ ಇದು ಗರ್ಭಕೋಶದೊಳಕ್ಕೂ ಹೊರಗಡೆಗೂ ಸಂಪರ್ಕವನ್ನು ಉಂಟುಮಾಡುತ್ತದೆ. ಹುಡುಗಿ ಮೈನೆರೆದಾಗ ಈ ಭಾಗಗಳಲ್ಲಿ ಮತ್ತು ಅನುಷಂಗಿಕ ಅಂಗಗಳಲ್ಲಿ ಮುಖ್ಯವಾಗಿ ಸ್ತನಗಳಲ್ಲಿ ಚಟುವಟಿಕೆ ಮತ್ತು ಕ್ರಿಯಾಶಕ್ತಿ ಮೂಡಿ ಬಂದು ವಿಶಿಷ್ಟ ಕ್ರಮವನ್ನು ಅನುಸರಿಸಿ ಜರುಗುವ ಕ್ರಿಯೆ ಕಂಡುಬರುತ್ತದೆ. ಇದರ ಅವಧಿ ಸಾಮಾನ್ಯವಾಗಿ 28 ದಿವಸಗಳು ಅಥವಾ ಒಂದು ಚಾಂದ್ರಮಾನ 30ಗಳು ರಜಸ್ರಾವ ಈ ಚಕ್ರೀಯ ಕ್ರಿಯೆಯಲ್ಲಿ ಪ್ರಧಾನವಾಗಿ ವ್ಯಕ್ತವಾಗುವ ಘಟ್ಟವಾದುದರಿಂದ ಇದನ್ನು ಮಾಸಿಕ ಚಕ್ರವೆಂದು ಕರೆದು, ಚಕ್ರವನ್ನು ರಜಸ್ರಾವದ ಮೊದಲನೆಯ ದಿವಸದಿಂದ ಎಣಿಸುವುದು ರೂಢಿಯಾಗಿದೆ. ಈ ಕ್ರಿಯೆಗೆ ತಲೆಚಿಪ್ಪಿನೊಳಗೆ ಮಿದುಳಿನ ತಳಭಾಗದಿಂದ ತೊಟ್ಟಿನ ಮೂಲಕ ನೇತುಬಿದ್ದಿರುವ ಪಿಟ್ಯುಯಿಟರಿ ಗ್ರಂಥಿಯ ಮುಂಭಾಗದ ಎಸ್.ಎಸ್.ಎಚ್., ಎಲ್.ಎಚ್. ಮತ್ತು ಎಲ್.ಟಿ.ಎಚ್ ಗಳೆಂಬ ಅಂತಃಸ್ರಾವಗಳೇ ಕಾರಣ. ಇವು ಅಂಡಾಶಯುಗಳ ಮೇಲೆ ಪ್ರಭಾವ ಬೀರಿ ಅವನ್ನು ಕಾರ್ಯೋನ್ಮುಖಗೊಳಿಸುತ್ತವೆ. ಎಡ ಅಥವಾ ಬಲ ಅಂಡಾಶಯಗಳಲ್ಲಿ ಯಾವುದಾದರೂ ಒಂದು (ಯಾವುದು ಎನ್ನುವುದು ಕೇವಲ ಅನಿರ್ದಿಷ್ಟ) ಅಂಡಾಶಯದಿಂದ ಸಾಮಾನ್ಯವಾಗಿ ಒಂದು ಅಂಡಾಣು ಸುಮಾರು 2 ವಾರಗಳಲ್ಲಿ ಬಲಿತು ಹಣ್ಣಾಗುವುದಕ್ಕೆ ಈ ಎರಡು ವಾರಗಳು ಪಿಟ್ಯುಟರಿಯಿಂದ ಉತ್ಪತ್ತಿಯಾಗುವ ಎಫ್.ಎಸ್.ಎಚ್. ಕಾರಣ. ಇದೇ ಕಾರಣದಿಂದಲೇ ಈ ಎರಡು ವಾರಗಳಲ್ಲೂ ಅಂಡಾಶಯದಿಂದ ಈಸ್ಟ್ರೋಜೆನ್ನೆಂಬ ಅಂತಃಸ್ರಾವ ಉತ್ಪತ್ತಿಯಾಗುತ್ತದೆ. ಈಸ್ಟ್ರೋಜಿನ್ ಮುಖ್ಯವಾಗಿ ಗರ್ಭಕೋಶ ಮತ್ತು ಸ್ತನಗಳ ಮೇಲೆ ಪ್ರಭಾವ ಬೀರಿ ಅವುಗಳ ವೃದ್ಧಿಯನ್ನು ಉಂಟುಮಾಡುವುದು. ಎರಡು ವಾರಗಳ ತರುವಾಯ ಪಿಟ್ಯುಟರಿ ಎಫ್.ಎಸ್.ಎಚ್. ಬದಲು ಎಲ್.ಎಚ್ ಮತ್ತು ಎಲ್.ಟಿ.ಎಚ್‌ಗಳನ್ನು ಸ್ರವಿಸುತ್ತದೆ. ಇವುಗಳ ಪ್ರಭಾವವೂ ಅಂಡಾಶಯಗಳ ಮೇಲೆಯೇ ಪ್ರಧಾನವಾಗಿರುವುದು. ಈ ಕಾಲದ ಪ್ರಾರಂಭದಲ್ಲಿ ಅಂದರೆ ಸುಮಾರು 14ನೆಯ ದಿವಸವೇ ಬಲಿತು ಹಣ್ಣಾದ ಅಂಡಾಣು ಅಂಡಾಶಯದಿಂದ ಹೊರಬಿದ್ದು ಗರ್ಭಕೋಶ ನಾಳದೊಳಕ್ಕೆ ಹೀರಲ್ಪಟ್ಟು ಅದರೊಳಗೆ ಗರ್ಭಕೋಶದೆಡೆಗೆ ನೂಕಲ್ಪಡುತ್ತಿರುತ್ತದೆ. ಅಂಡಾಣುವಿದ್ದ ಸ್ಥಳ ರೂಪಾಂತರಗೊಂಡು ಕಾರ್ಪಸ್ ಲೂಟಿಯಂ ಮುಂದಕ್ಕೆ 14 ದಿವಸಗಳ ಪರ್ಯಂತ ಪ್ರೊಜೆಸ್ಟಿರಾನ್ ಎಂಬ ಅಂತಃಸ್ರಾವವನ್ನು ಉತ್ಪತ್ತಿ ಮಾಡುತ್ತದೆ. ಇದಕ್ಕೆ ಪಿಟ್ಯುಟರಿಯ ಎಲ್.ಟಿ.ಎಚ್. ಕಾರಣ ಪ್ರೊಜೆಸ್ಟಿರಾನ್ ಕೂಡ ಗರ್ಭಕೋಶ ಮತ್ತು ಸ್ತನಗಳ ಮೇಲೆ ಪ್ರಧಾನವಾಗಿ ಪ್ರಭಾವ ಬೀರಿ ಅವುಗಳ ವೃದ್ಧಿತ ಸ್ಥಿತಿ ಉಪಯುಕ್ತ ರೀತಿಯಲ್ಲಿ ಮುಂದುವರಿಯುವಂತೆ ಮಾಡುತ್ತದೆ. ಸಾಮಾನ್ಯವಾಗಿ ಈ ಎರಡು ವಾರಗಳ ಕೊನೆಯಲ್ಲಿ ಪಿಟ್ಯುಟರಿ ಎಲ್.ಎಚ್ ಮತ್ತು ಎಲ್.ಟಿ.ಎಚ್ ಅನ್ನು ಸ್ರವಿಸುವ ಬದಲು ಪುನಃ ಎಫ್.ಎಸ್.ಎಚ್. ಅನ್ನು ಸ್ರವಿಸುವುದಕ್ಕೆ ಪ್ರಾರಂಭಿಸುತ್ತದೆ. ತನ್ನ ಕ್ರಿಯಾಶಕ್ತಿ ಜರಾಯು ತಾಯಿಯ ಗರ್ಭಕೋಶ ಭಿತ್ತಿಯಿಂದ ಬೇರ್ಪಟ್ಟು ಅದರ ಕಾರ್ಯ ಕ್ಷೀಣಿಸುತ್ತದೆ, ಪ್ರೋಜೆಸ್ಟಿರಾನಿನ ಉತ್ಪತ್ತಿಗೆ ಇದರಿಂದ ಧಕ್ಕೆಯಾಗಿ ಗರ್ಭಾವಸ್ಥೆ ಕೊನೆಗೊಳ್ಳುತ್ತದೆ. ಆದರೆ ಇಷ್ಟರೊಳಗೆ ಭ್ರೂಣ ಬೆಳೆದು ತಾಯಿಯ ನೆರವಿಲ್ಲದೆ ಸ್ವತಂತ್ರವಾಗಿ ಜೀವಿಸಬಲ್ಲ ಮಗುವಾಗಿ ಅದರ ಜನನವಾಗುತ್ತದೆ. ಈ ಜನನಕ್ಕೆ ಪ್ರೋಜೆಸ್ಟಿರಾನಿನ ಉತ್ಪತ್ತಿಯ ನಿಲುಗಡೆ ಮಾತ್ರ ಕಾರಣವಲ್ಲ, ಪಿಟ್ಯುಟರಿ ಗ್ರಂಥಿಯ ಹಿಂಭಾಗದಿಂದ ಉತ್ಪತ್ತಿಯಾಗುವ ಆಕ್ಸಿಟೋಸಿನ್ ಎಂಬ ಅಂತಃಸ್ರಾವವೂ ಶಿಶು ಜನನಕ್ಕೆ (ಗರ್ಭಾವಸ್ಥೆಯ ಅಂತ್ಯಕ್ಕೆ) ಮುಖ್ಯವಾಗಿದೆ. ಬಹುಶ ಪ್ರೋಜೆಸ್ಟಿರಾನಿನ

ಪ್ರಭಾವಕ್ಕೆ ಒಳಗಾಗಿದ್ದ ಮತ್ತು ಆ ಪ್ರಭಾವ ಹಠಾತ್ತಾಗಿ ನಿಂತುಹೋದ ಗರ್ಭಕೋಶವನ್ನು ಮಾತ್ರ ಆಕ್ಸಿಟೋಸಿನ್ ಉದ್ರೇಕಿಸುತ್ತದೆ. ಹೀಗಾಗಿ 40 ವಾರಗಳ ಗರ್ಭಾವಸ್ಥೆಯ ಕೊನೆಯಲ್ಲಿ ಗರ್ಭಕೋಶ ಸಂಕುಚಿಸಿ ಒಳಗಿರುವ ಶಿಶುವನ್ನು ಹೊರದೂಡುತ್ತದೆ. ಸ್ವಲ್ಪ ಹೊತ್ತಿನಲ್ಲೆ ಬೇರ್ಪಟ್ಟ ಜರಾಯುವನ್ನೂ ಇದೇ ರೀತಿ ಹೊರದೂಡುತ್ತದೆ. ಇದು ಗರ್ಭಾವಸ್ಥೆಯ ಅಂತ್ಯ.

ಗರ್ಭಿಣಿಯರು ಹೆಚ್ಚು ಧೈರ್ಯಶಾಲಿಗಳಾಗಿಯೂ ಬಲಶಾಲಿಗಳಾಗಿಯೂ ಸಾಹಸ ಪ್ರವೃತ್ತಿಯವರಾಗಿಯೂ ಇರುವರೆಂದೂ ಗರ್ಭಾವಸ್ಥೆಯ ಕೊನೆಗೊಂಡ ಮೇಲೂ ಅವರು ಈ ಗುಣಗಳನ್ನು ಹೊಂದಿರುವರೆಂದೂ ಹೇಳಲಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ ಗರ್ಭಿಣಿಯರಲ್ಲಿ ಮಾನಸಿಕ ವ್ಯಾಪಾರಗಳು ಸ್ವಲ್ಪಮಟ್ಟಿಗೆ ಏರುಪೇರಾಗುತ್ತವೆ. ಸ್ವಲ್ಪ ಕಿರಿಕಿರಿ–ಶೀಘ್ರ ಕೋಪ–ಸೂಕ್ಷ್ಮಮನಸ್ಕರಾಗಿರುತ್ತಾರೆ. ಕ್ಷಯ ರೋಗಿಗಳು ಗರ್ಭಿಣಿಯರಾದಾಗ ಅವರಲ್ಲಿ ರೋಗದ ಉಲ್ಬಣ ತಗ್ಗಿನ ಮಟ್ಟದಲ್ಲಿರುತ್ತದೆ. ಆದರೆ ಗರ್ಭಾವಸ್ಥೆ ಕೊನೆಗೊಂಡ ಮೇಲೆ ರೋಗ ತೀಕ್ಷ್ಣತರವಾಗುತ್ತದೆ. ಆದರೆ ಬಲಹೀನ, ರೋಗಿಷ್ಠ ಸೂಕ್ಷ್ಮವ್ಯಕ್ತಿಗಳು, ಅತಿ ಚಿಕ್ಕ ವಯಸ್ಸಿಯವರು ಮತ್ತು ಅತಿ ಹೆಚ್ಚು ವಯಸ್ಕರು ಗರ್ಭಿಣಿಯರಾದರೆ ಗರ್ಭಾವಸ್ಥೆಯಲ್ಲಿ ಅವರು ಅನೇಕ ಪಿಡುಗುಗಳನ್ನು ಅನುಭವಿಸಬೇಕಾಗುತ್ತದೆ. ಹೊಟ್ಟೆ ತೊಳಸು, ವಾಂತಿ, ಕೆಲವು ಬಯಕೆ, ಹಲ್ಲುನೋವು, ಕೆಮ್ಮು ಗರ್ಭಕಾಲದ ಪ್ರಾರಂಭಿಕ ಮೂರು ತಿಂಗಳು ಮತ್ತು ಕೊನೆಯ ತಿಂಗಳು ಮೂತ್ರವಿಸರ್ಜನೆಯಲ್ಲಿ ತೊಂದರೆ, ಕಾಲಿನ ಅಭಿಧಮನಿಗಳು ಊದಿಕೊಂಡು ಕಾಲು ತೊಡೆಗಳಲ್ಲಿ ಊತ, ನೋವು ಉಂಟಾಗುವುದು ಇತ್ಯಾದಿ ಇವರ ಗರ್ಭಾವಸ್ಥೆಯಲ್ಲಿ ಕಂಡುಬರುತ್ತವೆ.

ಗರ್ಭಾವಸ್ಥೆಯಲ್ಲಿ ಸ್ವಾಭಾವಿಕ ಶಾರೀರಿಕ ಬದಲಾವಣೆಗಳು: ಬೆಳೆಯುವ ಭ್ರೂಣಕ್ಕೆ ಅಗತ್ಯವಾದ ಆಹಾರ ಸಾಮಗ್ರಿಗಳನ್ನು ಕ್ಲುಪ್ತ ಉಷ್ಣತೆಯುಳ್ಳ ಸ್ಥಳವನ್ನು ಗರ್ಭಾವಸ್ಥೆ ಅನುಕೂಲವಾಗಿ ಒದಗಿಸುವುದೇ ಅಲ್ಲದೆ ಮುಂದಕ್ಕೆ ಬೇಕಾಗಬಹುದಾದ ಶಾರೀರಿಕ ಬದಲಾವಣೆಗಳನ್ನೂ ಉಂಟುಮಾಡುತ್ತದೆ. ಮೊದಲಾಗಿ ಗರ್ಭಕೋಶ ದೊಡ್ಡದಾಗುವುದು. ಅದರೊಳಗಿರುವ ಭ್ರೂಣದ ಬೆಳವಣಿಗೆಯಿಂದ ಅದು ಹಿಗ್ಗುವುದು ಮಾತ್ರವಲ್ಲದೆ ತಾನೇ ಸ್ವತಃ ದೊಡ್ಡದಾಗಿ ದೃಢವಾಗುತ್ತದೆ. ಇದರಿಂದ ಗರ್ಭಕೋಶ ಸಕಾಲದಲ್ಲಿ ಸಂಕುಚಿಸಿ ಶಿಶುಜನನವಾಗುವುದಕ್ಕೆ ಅನುಕೂಲವಾಗುವುದು. ಉದರ ಮತ್ತು ಕಿಬ್ಬೊಟ್ಟೆಯ ಮುಂದಿನ ಭಿತ್ತಿಯ ಸ್ನಾಯುಗಳು ವೃದ್ಧಿ ಮತ್ತು ಸ್ರವಿಸುವ ಸಾಮರ್ಥ್ಯವೂ ಮೂಳೆಗಳ ಕಟ್ಟು ಹಿಗ್ಗಿದಂತಾಗುವುದೂ ಹೆರಿಗೆಗೆ ಅನುಕೂಲವಾಗುವ ಬದಲಾವಣೆಗಳು. ಸ್ತನಗಳ ವೃದ್ಧಿ ಮತ್ತು ಸ್ರವಿಸುವ ಸಾಮರ್ಥ್ಯವೂ ಗರ್ಭಾವಸ್ಥೆಯಲ್ಲಿ ಕಂಡುಬರುತ್ತದೆ. ಇದು ಮುಂದೆ ಹುಟ್ಟುವ ಮಗುವಿಗೆ ಹಾಲೂಡಿಸಿ ಸಂರಕ್ಷಿಸಲು ಆಗಿರುವ ಏರ್ಪಾಡು, ಗರ್ಭಾವಸ್ಥೆಯಲ್ಲಿ ವ್ಯಕ್ತಿಯ ತೂಕದ ಹೆಚ್ಚಳ ಸುಮಾರು 11–12 ಕೆ.ಜಿ. ವೃದ್ಧಿಗೊಂಡ ಗರ್ಭಕೋಶ, ಅದರೊಳಗಿರುವ ಮಗು, ಸ್ತನಗಳು ಎಲ್ಲಾ ಸುಮಾರು 5–6 ಕೆ.ಜಿ. ತೂಕಕ್ಕೆ ಕಾರಣ. ಉಳಿದ 5–6 ಕೆ.ಜಿ. ತೂಕದ ಹೆಚ್ಚಳ ದೇಹದಲ್ಲಿ ದ್ರವಾಂಶ ಹೆಚ್ಚು ಶೇಖರಣೆ ಆಗುವುದರಿಂದ ಉಂಟಾಗಿರುತ್ತದೆ. ರಕ್ತ ಸಹಜ ಪ್ರಮಾಣಕ್ಕಿಂತ 1/3ರಷ್ಟು ಹೆಚ್ಚಾಗಿದ್ದು ಕಣಗಳಿಗಿಂತ ದ್ರವಾಂಶ ಜಾಸ್ತಿಯಾಗಿರುವುದರಿಂದ ಸಹಜವಾಗಿಯೆ ಗರ್ಭಾವಸ್ಥೆಯಲ್ಲಿ ರಕ್ತವರ್ಣಹೀನತೆ ಕಂಡುಬಂದು ಸ್ವಾಭಾವಿಕ ಪ್ರಮಾಣದ ಶೇ. 87 ರಷ್ಟು ಮಾತ್ರ ಹಿಮೋಗ್ಲೋಬಿನ್ ಇರುತ್ತದೆ. ಗರ್ಭಾವಸ್ಥೆ ಕೊನೆಗೊಂಡಾಗ ಶರೀರ ತೂಕ ಸಹಜಮಟ್ಟಕ್ಕೆ ಸಾಮಾನ್ಯವಾಗಿ ಬಂದರೂ ಕೆಲವು ವೇಳೆ ತೂಕದ ಹೆಚ್ಚಳ ಪ್ರಸವಕಾಲದಿಂದ ಗಣನೆಗೆ ಬರುವಂತೆ ಸ್ಥೂಲಕಾಯವಾಗಿ ನಿಂತುಬಿಡಬಹುದು. ಗರ್ಭಾವಸ್ಥೆಯ ಪ್ರಾರಂಭವನ್ನು ಅನೇಕ ವಿಧದಿಂದ ಕರಾರುವಾಕ್ಕಾಗಿ ಗುರುತಿಸಬಹುದು. ಅಂಡಾಣು ಅಂಡಕೋಶದಿಂದ ಹೊರಬಿದ್ದ ದಿವಸ ಸ್ತ್ರೀಯರಲ್ಲಿ ಮುಂಜಾನೆ ದೇಹದ ಉಷ್ಣತೆ ಹಠಾತ್ತನೆ ಸ್ವಲ್ಪ ತಗ್ಗಿ ಆಮೇಲೆ ಮುಂಚಿಗಿಂತ ಸ್ವಲ್ಪ ಹೆಚ್ಚಿನ ಮಟ್ಟಕ್ಕೆ ಏರಿ ಮುಂದಿನ ದಿವಸಗಳಲ್ಲಿ ಆ ಹೊತ್ತಿನಲ್ಲಿ ಅದೇ ಏರಿದ ಮಟ್ಟದಲ್ಲಿ ಇರುತ್ತದೆ. ಅಂಡಾಣು ಅಂಡಕೋಶದಿಂದ ಹೊರಬಿದ್ದ 22–24 ಗಂಟೆಗಳಲ್ಲಿ ಗರ್ಭಾವಸ್ಥೆ ಪ್ರಾರಂಭವಾಗಿರಬೇಕೆನ್ನುವುದು ವ್ಯಕ್ತಪಟ್ಟಿದೆ. ಆದ್ದರಿಂದ ಮುಂಜಾವಿನ ಶರೀರೋಷ್ಣತೆಯನ್ನು ಕ್ಲಿಪ್ತವಾಗಿ ನೋಡುತ್ತಿದ್ದರೆ ಅದರ ವ್ಯತ್ಯಾಸದಿಂದ ಅಂಡಾಣು ಹೊರಬಿದ್ದ ದಿವಸವನ್ನು, ಅರ್ಥಾತ್ ಗರ್ಭಾವಸ್ಥೆಯ ಪ್ರಾರಂಭವನ್ನು, ಪತ್ತೆಮಾಡಬಹುದು. ಶರೀರೋಷ್ಣತಾ ವ್ಯತ್ಯಾಸ ಸ್ವಲ್ಪವೇ ಆದರೂ (0.5° ಸೆಂ.) ಅದು ಖಚಿತವಾಗಿ ಆಗುತ್ತದಾದ್ದರಿಂದ ಈ ರೀತಿಯ ಗಣನೆ ಕಷ್ಟವಾಗುವುದಿಲ್ಲ. ಆ ದಿವಸದಿಂದ ಗರ್ಭಾವಸ್ಥೆ ಸಾಮಾನ್ಯವಾಗಿ 266 ದಿವಸಗಳು ಅಂದರೆ 9 1/2 ತಿಂಗಳು (ಚಾಂದ್ರಮಾನ) ಕಾಲ ವ್ಯಾಪ್ತಿಯುಳ್ಳದ್ದಾಗಿರುತ್ತದೆ. ಆದರೆ ಬೇರೆ ಬೇರೆ ಸ್ತ್ರೀಯರಲ್ಲಿ ಆರೋಗ್ಯವಾಗಿದ್ದರೂ ಈ ಅವಧಿ 252 ರಿಂದ 285 ದಿವಸಗಳವರೆಗೆ ಬದಲಾಗಬಹುದು. ಜೊತೆಗೆ ಅಂಡಾಣು ಹೊರಬಿದ್ದ ದಿವಸವನ್ನು ಶರೀರದ ಉಷ್ಣತಾಮಾಪನದಿಂದ ಎಲ್ಲರೂ ಖಚಿತವಾಗಿ ತಿಳಿದುಕೊಳ್ಳಲಾರರು. ಆದ್ದರಿಂದ ಗರ್ಭಾವಸ್ಥೆಯ ಕಾಲವನ್ನು ಬೇರೆ ಸುಲಭ ರೀತಿಯಲ್ಲಿ ಗಣಿಸುವುದು ರೂಢಿಗೆ ಬಂದಿದೆ, ಕೊನೆಯ ಬಾರಿ ಆದ ರಜಸ್ರಾವದ ಮೊದಲನೆಯ ದಿವಸಕ್ಕೆ ಏಳು ದಿವಸಗಳನ್ನು ಸೇರಿಸಿ ಅಲ್ಲಿಂದ ಮುಂದಕ್ಕೆ 9 ತಾರೀಖು ಪಟ್ಟಿ ತಿಂಗಳನ್ನು ಎಣಿಸಿದರೆ ಲಭಿಸುವ ದಿವಸ ಗರ್ಭಾವಸ್ಥೆಯ ಅಂತಿಮ ದಿವಸವೆಂದು ಗಣಿಸುವುದೂ ಇದು ಮುಟ್ಟಾದ ಮೊದಲ ದಿವಸದಿಂದ 280 ದಿನಗಳು ಅಂದರೆ 10 ಚಾಂದ್ರಮಾನ ತಿಂಗಳುಗಳ ಮೇಲೆ ಎಂದು ಗಣಿಸುವುದೂ ರೂಢಿಯಾಗಿದೆ. ಆದರೆ ನಿಜವಾಗಿ ಗರ್ಭಾವಸ್ಥೆಯ ಕಾಲ ಅಂಡಾಣು ಹೊರಬಿದ್ದು ನಿಷೇಚನಗೊಂಡ ದಿವಸದಿಂದ ಪ್ರಾರಂಭವಾಗುವುದರಿಂದ ಇದಕ್ಕಿಂತ 14 ದಿವಸಗಳು ಕಡಿಮೆ ಇರುತ್ತದೆನ್ನುವುದನ್ನು ಮರೆಯಬಾರದು. ಗರ್ಭಾವಸ್ಥೆಯ ಅವಧಿ ಅನೇಕ ವೇಳೆ ಯೋಗ್ಯ ಅಥವಾ ಅನೈತಿಕ ಜನನ ನಿಷ್ಕರ್ಷೆಯಲ್ಲಿ ನ್ಯಾಯಾಲಯದ ಅವಲೋಕನಕ್ಕೆ ಬರಬಹುದಾಗಿರುವುದರಿಂದ ಅನೇಕ ದೇಶಗಳಲ್ಲಿ ಗರ್ಭಾವಸ್ಥೆಯ ಕನಿಷ್ಠ ಮತ್ತು ಗರಿಷ್ಠ ಮಿತಿಗಳನ್ನು ಕಾನೂನಿನಂತೆ ನಿಯಮಿಸಲಾಗಿದೆ. ಬೇರೆ ಬೇರೆ ದೇಶಗಳಲ್ಲಿ ಗರಿಷ್ಠ ಮಿತಿ ಬೇರೆ ಬೇರೆ ಉಂಟು. ಗರ್ಭಾವಸ್ಥೆಯ 28 ವಾರಗಳ ಮುಂಚೆಯೇ ಅಂದರೆ 7 ನೆಯ ತಿಂಗಳಿಗೆ ಮುಂಚೆಯೇ ಪ್ರಸವವಾದರೆ ಜನಿಸಿದ ಮಗು ಜೀವಂತವಾಗಿರುವುದಿಲ್ಲ ಎಂದು ಸಾಮಾನ್ಯವಾಗಿ ಎಲ್ಲ ದೇಶಗಳಲ್ಲೂ ಅಂಗೀಕರಿಸಿದ್ದಾರೆ. ಆದ್ದರಿಂದ ಅನೇಕ ದೇಶಗಳಲ್ಲಿ ಗರ್ಭಾವಸ್ಥೆಯ ಗರಿಷ್ಠ ಮಿತಿ 310 ದಿವಸಗಳೆಂದು ಗಣಿಸಲಾಗಿದೆ.

ಗರ್ಭಾವಸ್ಥೆಯ ಅರಿವು: ನಿರೀಕ್ಷಣೆಯಂತೆ ಮುಟ್ಟಾಗದೇ ಇದ್ದಾಗ ಸ್ತ್ರೀ ತಾನು ಗರ್ಭಿಣಿಯಾಗಿರಬಹುದೆಂಬುದನ್ನು ಊಹಿಸುತ್ತಾಳೆ. ಮುಂದಕ್ಕೆ ಬೆಳಗ್ಗೆ ಎದ್ದಾಗಲೇ ವಾಕರಿಕೆ, ಸ್ತನಗಳ ವೃದ್ಧಿ, ಹೊಟ್ಟೆ ದಪ್ಪವಾಗುವುದು ಕಂಡುಬರುತ್ತದೆ. ಗರ್ಭಾವಸ್ಥೆಯ 20ನೇ ವಾರ ಮೊದಲನೇ ಗರ್ಭಧರಿಸಿದವರಿಗೂ, 10ನೇ ವಾರಕ್ಕೆ ಎರಡನೆಯ, ಮೂರನೆಯ ಸಲ ಗರ್ಭಧರಿಸಿದವರಿಗೂ ಹೊಟ್ಟೆಯ ಮೇಲೆ ಕೈಯಿಟ್ಟು ನೋಡಿದರೆ ಶಿಶುವಿನ ಕೈಕಾಲು ಮುಂತಾದ ಭಾಗಗಳು ಸಿಕ್ಕಿ ಅವುಗಳ ಚಲನೆ ಖಾತರಿಯಾಗುತ್ತದೆ. ವ್ಯಕ್ತಿಗೇ ತಿಳಿಯುವಂತಿರುವ ಈ ಸೂಚನೆಗಳಲ್ಲದೆ ವೈದ್ಯಪರೀಕ್ಷೆಯಿಂದ ಗರ್ಭಾವಸ್ಥೆಯನ್ನು ಅರಿಯಬಹುದಾಗಿದೆ. 14ನೆಯ ವಾರಕ್ಕೆ ಡಾಪ್ಲರ್ ಮಗುವಿನ ಎದೆಬಡಿತ ಗುರುತಿಸುತ್ತದೆ. 16–18ವಾರಗಳ ಬಳಿಕ ಸ್ಟೆತಾಸ್ಕೋಪನ್ನು ಗರ್ಭಿಣಿಯ ಹೊಟ್ಟೆಯ ಮೇಲಿಟ್ಟು ಆಲಿಸಿದರೆ ಗುಂಡಿಗೆಯ ಬಡಿತ ಗಡಿಯಾರದ ಮಸುಕಾದ ಟಿಕ್ ಟಿಕ್ ಶಬ್ದದಂತೆ ಕೇಳುತ್ತದೆ. ಯೋನಿಯೊಳಗಿನ ಪರೀಕ್ಷೆಗಳಿಂದಲೂ ಗರ್ಭಾವಸ್ಥೆಯನ್ನು ಅರಿಯಬಹುದು;

33–34ನೆಯ ದಿನವೇ ಮೂತ್ರ ಪರೀಕ್ಷೆಯಿಂದ ಕರಾರುವಕ್ಕಾಗಿ ಆಕೆಯ ಗರ್ಭಿಣಿಯೇ ಇಲ್ಲವೇ ಎಂದು ತಿಳಿಯಬಹುದು. ಇತ್ತೀಚಿನ ಸ್ಕ್ಯಾನಿಂಗ್ ಪರೀಕ್ಷೆಯಲ್ಲಿ 5–6ನೇ ವಾರಕ್ಕೆ ಗರ್ಭಿಣಿಯೆ ಅಲ್ಲವೇ ತಿಳಿಯುವುದರೊಂದಿಗೆ ಮಗುವಿನ ಹೃದಯ ಮಿಡಿತ ಕೂಡ ನೋಡಬಹುದು. 6ನೇ ವಾರದಿಂದ ಯೋನಿ ಪರೀಕ್ಷೆಯಲ್ಲಿ ಗರ್ಭವನ್ನು ಖಚಿತಪಡಿಸಬಹುದು.

20ನೆಯ ವಾರಕ್ಕೆ ಮೊದಲ ಬಾರಿ ಬಸಿರಾದವರೂ, 16ನೆಯ ವಾರಕ್ಕೆ ಎರಡು ಮೂರನೆ ಬಾರಿ ಬಸಿರಾದವರಿಗೂ ಮಗುವಿನ ಚಲನೆ ತಿಳಿಯುತ್ತದೆ.

ನಡುಗಾಲದಲ್ಲಿ, ಗರ್ಭಾವಸ್ಥೆಯ ಪ್ರಾರಂಭಿಕ ಲಕ್ಷಣಗಳು ಬೇರೆ ಕಾರಣಗಳಿಂದಲೂ ಉಂಟಾಗಬಹುದಾದ್ದರಿಂದ ನಂಬುವಂಥದಲ್ಲ, ರಕ್ತಕೊರತೆಯಿಂದ ಅಥವಾ ಬಹುವಾಗಿ ಬೇಕಾದ ವ್ಯಕ್ತಿಯ ಸಾವಿನಂತಹ ತೀವ್ರಮಾನಸಿಕ ಆಘಾತದಿಂದ ವ್ಯಕ್ತಿ ನಿರೀಕ್ಷಣೆಯಂತೆ ಮುಟ್ಟಾಗದೆ ಅದು ಮುಂದೆ ಹೋಗಬಹುದು. ಅನೈತಿಕ ಅಥವಾ ಇಷ್ಟವಿಲ್ಲದ ಸಂಭೋಗವಾದ ಮೇಲೆ ಗರ್ಭಧಾರಣೆಯಾಗಿ ಬಿಟ್ಟಿದೆಯೋ ಎಂಬ ಮಾನಸಿಕ ಭೀತಿಯಿಂದಲೇ ನಿರೀಕ್ಷಿತ ಮುಟ್ಟು, ನಿಂತುಹೋಗಿರಬಹುದು. ಇದಕ್ಕೆ ಬದಲಾಗಿ ಮಕ್ಕಳಿರದ ಸ್ತ್ರೀಯಲ್ಲಿ ಮಕ್ಕಳಾಗಬೇಕೆಂಬ ಅಭಿಲಾಷೆ ತೀವ್ರತೆಯಿಂದಲೇ ಮುಟ್ಟು ನಿಂತು ಬೆಳಗಿನ ವಾಕರಿಕೆ, ಹೊಟ್ಟೆ ದಪ್ಪವಾಗುವುದು ಮುಂತಾದ ಗರ್ಭಾವಸ್ಥೆಯ ಮುಂದಿನ ಅನೇಕ ಸೂಚನೆಗಳು ವ್ಯಕ್ತವಾಗಿ ಕೊನೆಗೆ 10 ತಿಂಗಳ ತರುವಾಯ ನಕಲಿ ಪ್ರಸವವೂ ಆಗಬಹುದು. 3ನೆಯ ತಿಂಗಳು ತುಂಬಿದ ಮೇಲೆ ಗರ್ಭಕೋಶದ ಬೆಳವಣಿಗೆಯನ್ನು ಹೊಟ್ಟೆಯ ಮೇಲೆ ಕೈಯಿಟ್ಟು ಪರೀಕ್ಷಿಸಿ ತಿಳಿಯಬಹುದು. 3ನೆಯ ತಿಂಗಳಲ್ಲಿ ಹೊಕ್ಕಳ ಮಟ್ಟದಲ್ಲಿ, 9ನೆಯ ತಿಂಗಳಲ್ಲಿ ಎದೆ ಮೂಳೆಯ ಕೆಳತುದಿಯ ಮಟ್ಟದಲ್ಲಿ, 10ನೆಯ ತಿಂಗಳಲ್ಲಿ ಅಂದರೆ ಪ್ರಸವದ ಸಮಯ ಹತ್ತಿರವಾದಂತೆ ಮೇಲಿನ ಮಟ್ಟಕ್ಕಿಂತ ಸು. 3–28 ಸೆಂಮೀ ಅಂಗುಲ ಕೆಳಗೆ ಗರ್ಭಕೋಶವನ್ನು ಸ್ಪರ್ಶಿಸಬಹುದು. ಚೊಚ್ಚಲು ಗರ್ಭಿಣಿಯರಲ್ಲಿ ಸ್ತನಗಳು ದಪ್ಪವಾಗಿಯೂ ದೃಢವಾಗಿಯೂ ಆಗುವುದರ

ಜೊತೆಗೆ ಮುಟ್ಟಿದರೆ ನೋಯಲೂಬಹುದು. ಸಾಮಾನ್ಯವಾಗಿ ಎಲ್ಲ ಗರ್ಭಿಣಿಯರಲ್ಲೂ ಸ್ತನವನ್ನು ಅಮುಕಿದರೆ ಗಟ್ಟಿಯಾದ ಗಿಣ್ಣಿನಂತ ದ್ರವ ಬರುತ್ತದೆ. ಚೊಚ್ಚಲು ಗರ್ಭದಲ್ಲಿ ಮೊಲೆಗಳು ಕಂದು ಮತ್ತು ಅನೇಕರಲ್ಲಿ ಕಪ್ಪು ಬಣ್ಣಕ್ಕೆ ತಿರುಗುತ್ತವೆ ಮತ್ತು ಜೀವಮಾನ ಪರ್ಯಂತ ಕಪ್ಪಾಗಿಯೇ ಇರುತ್ತವೆ. ಹಾಗೇ ಹೊಟ್ಟೆಯ ನಡುಗೆರೆ ಹೊಕ್ಕಳಿಂದ ಕೆಳಭಾಗದಲ್ಲಿ ಕಪ್ಪಾಗುತ್ತದೆ. ಹೊಟ್ಟೆ ಹಿಗ್ಗುವುದರಿಂದ ಗರ್ಭಾವಸ್ಥೆಯಲ್ಲಿ ಹೊಟ್ಟೆಯ ಮೇಲೆಲ್ಲ ಕೆಂಪು ರೇಖೆಗಳು ಕಂಡು ಬರುತ್ತದೆ. ಪ್ರಸವವಾದ ಮೇಲೆ ಇವು ಬಿಳಿಯ ಸುಕ್ಕುಗಟ್ಟಿದ ರೇಖೆಗಳಾಗುತ್ತವೆ. ಈ ರೇಖೆಗಳು ಜೀವಮಾನಪರ್ಯಂತ ಇರುತ್ತವೆ. ಮೊಲೆಗಳ ಕಪ್ಪುವರ್ಣ, ಹೊಟ್ಟೆಯ ಸುಕ್ಕುಗಟ್ಟಿದ ರೇಖೆಗಳು ಆ ಸ್ತ್ರೀ ಒಮ್ಮೆಯಾದರೂ ಗರ್ಭಿಣಿಯಾಗಿದ್ದಳೆಂಬುದನ್ನು ಸೂಚಿಸುತ್ತವೆ. ಶಂಕಿತ ವ್ಯಕ್ತಿಯ ಮೂತ್ರವನ್ನು ಇಲಿ, ಮೊಲ, ಕಪ್ಪೆ ಮುಂತಾದ ಪ್ರಾಣಿಗಳಿಗೆ ಪಿಚಕಾರಿಯ ನೆರವಿನಿಂದ ಚುಚ್ಚಿ ಈ ಪರೀಕ್ಷೆಗಳನ್ನು ಮಾಡಲಾಗುತ್ತದೆ. ಅಷಿಂಜಾಂಡೆಕ್‌ರ ಪರೀಕ್ಷಾ ವಿಧಾನದಲ್ಲಿ ಎಳೆಯ ಹೆಣ್ಣು ಇಲಿಗಳಿಗೆ 3–4 ದಿವಸ ಶಂಕಿತ ವ್ಯಕ್ತಿಯ ಮೂತ್ರವನ್ನು ಚುಚ್ಚುಮದ್ದಾಗಿ ಕೊಟ್ಟು ಆಮೇಲೆ ಅವನ್ನ ಕೊಂದು ಅವುಗಳ ಅಂಡಾಶಯಗಳನ್ನು ಪರೀಕ್ಷಿಸಲಾಗುತ್ತದೆ. ಅಂಡಾಣು ವೃದ್ಧಿಯಾಗಿರುವುದೂ ಅದು ಹೊರಬಿದ್ದು ಅಂಡಾಶಯದಲ್ಲಿ ರಕ್ತಕಲೆ ಕಟ್ಟಿಕೊಂಡಿರುವುದೂ ಸ್ತ್ರೀ ಗರ್ಭಿಣಿ ಎಂದು ಸೂಚಿಸುತ್ತದೆ. ಫ್ರೀಡ್‌ಮನ್ನನ ಪರೀಕ್ಷಾ ವಿಧಾನದಲ್ಲಿ ಜೊತೆಯ ಮೊಲಗಳಿಂದ ಅದರಲ್ಲೂ ಗಂಡಿನಿಂದ 2 ವಾರಗಳು ಬೇರೆಯಾಗಿರದ ಕನ್ಯಾಮೊಲವನ್ನು ಉಪಯೋಗಿಸುತ್ತಾರೆ. 48 ಗಂಟೆಗಳಾದ ಬಳಿಕ ಶಸ್ತ್ರಚಿಕಿತ್ಸೆಯಿಂದ ಹೊಟ್ಟೆಯನ್ನು ಕೊಯ್ದು ಮೊಲದ ಅಂಡಾಶಯಗಳನ್ನು ಪರೀಕ್ಷಿಸಲಾಗುತ್ತದೆ. ಇಲ್ಲೂ ಅಂಡಾಣುವೃದ್ಧಿ ವ್ಯಕ್ತಿಯ ಗರ್ಭಾವಸ್ಥೆಯನ್ನು ಸೂಚಿಸುತ್ತದೆ. ಹಾಗ್‌ಬೆನ್ ಪರೀಕ್ಷಾವಿಧಾನದಲ್ಲಿ ಒಂದು ತರಹ ಹೆಣ್ಣು ನೆಲಗಪ್ಪೆಯನ್ನು (ಟೋಡ್) ಉಪಯೋಗಿಸಲಾಗುವುದು. ಇದಲ್ಲದೆ ಗಂಡು ಕಪ್ಪೆಗಳನ್ನು ಉಪಯೋಗಿಸುವ ಪರೀಕ್ಷಾ ವಿಧಾನಗಳು ಉಂಟು, ಈ ಪರೀಕ್ಷಾ ವಿಧಾನಗಳಿಂದ ಗರ್ಭಾವಸ್ಥೆಯನ್ನು ಮುಟ್ಟು ನಿಂತ 1 ವಾರದಲ್ಲೇ ಅಂದರೆ ಸುಮಾರು 3 ವಾರಗಳ ಗರ್ಭಾವಸ್ಥೆಯಲ್ಲೇ ಪತ್ತೆ ಮಾಡಬಹುದು ಮತ್ತು ಇವು ಶೇ. 98 ಸಂದರ್ಭಗಳಲ್ಲಿ ಖಚಿತವಾದ, ನಂಬಲರ್ಹವಾದ ಪರೀಕ್ಷಾ ವಿಧಾನಗಳಾಗಿವೆ.

ಗರ್ಭಧರಿಸಿದ ಸಮಯದಲ್ಲಿ ಒಳ್ಳೆಯಗಾಳಿ, ಪೌಷ್ಟಿಕ ಆಹಾರ ಮತ್ತು ನಿಯಮಿತ ವ್ಯಾಯಾಮ ಅಗತ್ಯ. ಆಹಾರ ಸಮತೋಲನವಾಗಿದ್ದು, ವಿಟಮಿನ್ನುಗಳನ್ನೂ ಕಬ್ಬಿಣದ ಮತ್ತು ಸುಣ್ಣ ಅಂಶವನ್ನೂ ಪೂರೈಸುವಂತಿರಬೇಕು. ಸಾಮಾನ್ಯವಾಗಿ ಗರ್ಭಿಣಿಗೆ ಗರ್ಭಸ್ಥಿತಿ ಪೂರ್ವದ 1 1/5 ರಷ್ಟು ಶಕ್ತಿಯನ್ನು ಒದಗಿಸುವಷ್ಟು ಆಹಾರ ಬೇಕಾಗುತ್ತದೆ. ಇದು 3ನೆಯ ತಿಂಗಳಿನಿಂದಲೇ ಸಹಜವಾಗಿ ಉಂಟಾಗುವ ಹೆಚ್ಚಿನ ಹಸಿವಿನಿಂದ ಪೂರೈಕೆ ಆಗುತ್ತದೆ. ತರಕಾರಿ ಹಣ್ಣುಗಳನ್ನೂ ದಿನಕ್ಕೆ ಕಡೆಪಕ್ಷ ಮುಕ್ಕಾಲು ಲೀಟರ್ ಹಾಲನ್ನು ತೆಗೆದುಕೊಂಡರೆ ಸಾಕಾದಷ್ಟು ಪೋಷಣೆ ದೊರೆಯುತ್ತದೆ. ಪ್ರಗತಿಪರ ರಾಷ್ಟ್ರಗಳ ಜನತೆಯಲ್ಲಿ ತಕ್ಕಷ್ಟು ಜ್ಞಾನ, ಧನ ಇರುವುದರಿಂದ ಗರ್ಭಾವಸ್ಥೆಯಲ್ಲಿ ಹೆಚ್ಚು ಪ್ರಮಾಣದಲ್ಲಿ ಅಗತ್ಯವಾದ ವಿಟಮಿನ್ನುಗಳನ್ನುಳ್ಳ ಆಹಾರಗಳನ್ನು ತೆಗೆದುಕೊಂಡು ಆ ಅವಧಿಯಲ್ಲಿ ಮತ್ತು ಪ್ರಸವ ಸಮಯದಲ್ಲಿ ಕಷ್ಟವಾಗದಂತೆ ನೋಡಿಕೊಳ್ಳುತ್ತಾರೆ. ಆದರೆ ಭಾರತದಂಥ ಮುಂದುವರೆಯುತ್ತಿರುವ ದೇಶಗಳಲ್ಲಿ ಪೌಷ್ಟಿಕಾಹಾರದ ಕೊರತೆ ಕಂಡುಬರುತ್ತದೆ. ಕಬ್ಬಿಣದ ಕೊರತೆಯಿಂದ ರಕ್ತಹೀನತೆ ಕಂಡುಬರುತ್ತದೆ. ಗರ್ಭಾವಸ್ಥೆಯಲ್ಲಿ ಮದ್ಯಸಾರವು ಹೊಗೆಸೊಪ್ಪೂ ವರ್ಜ್ಯ, ವ್ಯಕ್ತಿಯ ಸ್ವಾಭಾವಿಕ ಬಯಕೆಗಳ ಪೂರೈಕೆ ವಿಚಾರದಲ್ಲಿ ಜಾಗರೂಕತೆಯಿಂದ ವರ್ತಿಸಬೇಕಾಗುತ್ತದೆ. ಗರ್ಭಾವಸ್ಥೆಯಲ್ಲಿ ನರಮಂಡಲ ಸೂಕ್ಷ್ಮಸ್ಥಿತಿಯಲ್ಲಿ ಇರುವುದರಿಂದ ಮನಸ್ಸು ಉದ್ರೇಕಗೊಳ್ಳದಂತೆ ಎಚ್ಚರಿಕೆ ವಹಿಸಬೇಕಾಗುತ್ತದೆ. ಅವಶ್ಯಕತೆಗೆ ತಕ್ಕಂತೆ ನಿದ್ರೆ ಬೇಕಾಗುತ್ತದೆ. ಕಡಿಮೆಯೆಂದರೂ 10 ಗಂಟೆಗಳ ಕಾಲ ನಿದ್ರೆ ಮಗುವಿನ ಬೆಳವಣಿಗೆಗೆ ಅಗತ್ಯ. ಉಡಿಗೆ ತೊಡಿಗೆಗಳು ಹೊಟ್ಟೆ, ಸ್ತನಗಳನ್ನು ಬಿಗಿಯದಂತೆ ಇರಬೇಕಾಗುತ್ತದೆ. ಗರ್ಭಾವಸ್ಥೆಯಲ್ಲಿ ದೇಹದ ಸಮತೋಲನ ವ್ಯತ್ಯಾಸವಾಗಿದ್ದು ಗರ್ಭಿಣಿಯರು ನಡೆದಾಡುವಾಗ ಒಂದೆರಡು ಬಾರಿಯಾದರೂ ಮುಗ್ಗರಿಸಿ ಬೀಳುವುದು ಸಾಮಾನ್ಯ. ದೇಹಘಾತ ಮತ್ತು ಶ್ರಮವನ್ನು ಉಂಟುಮಾಡುವ ಕೆಲಸಗಳು, ಎತ್ತರದಿಂದ ಧುಮುಕುವುದು, ಭಾರ ಹೊರುವುದು ಗುದ್ದಾಡುವುದು, ದೂರ ಪ್ರಯಾಣ ಇವುಗಳೆಲ್ಲ ವರ್ಜ್ಯ, ಎತ್ತರದ ಹಿಮ್ಮಡಿ ಚಪ್ಪಲಿ ಒಳ್ಳೆಯದಲ್ಲ, ಯಾವ ಆತಂಕಗಳೂ ಇಲ್ಲದಿದ್ದರೆ ಸಂಭೋಗ ನಿಶಿದ್ಧವಲ್ಲ.

ಮೊದಲು ಗರ್ಭ ಖಚಿತಪಡಿಸಿಕೊಳ್ಳಬೇಕು, ಆ ಸಮಯದಲ್ಲಿಯೇ ಗರ್ಭಿಣಿಯ ದೈಹಿಕ ಬಗ್ಗೆ ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕು. ರಕ್ತ ಪರೀಕ್ಷೆಗಳ ಮೂಲಕ ತೊಂದರೆಗಳು ಇಲ್ಲದೇ ಇರುವುದನ್ನು ಖಚಿತಪಡಿಸಿಕೊಳ್ಳಬೇಕು.

ಗರ್ಭಾವಸ್ಥೆಯ ಕಾಲದಲ್ಲಿ ತೆಗೆದುಕೊಳ್ಳಬೇಕಾದ ಎಚ್ಚರಿಕೆ ಕ್ರಮ: ಅತಿ ವಾಂತಿಯು ಮೊದಲ ತಿಂಗಳಲ್ಲಿ ಅವರಿಗೆ ಕಾಡಬಹುದಾದ ಅಂಶ. ಚಿಕಿತ್ಸೆಗೆ ಬಗ್ಗದಿದ್ದರೆ ವೈದ್ಯಕೀಯ ಮೇಲ್ವಿಚಾರಣೆಯಿಂದ ಗರ್ಭಪಾತ ಮಾಡಿಸಬಹುದು. ಸುಖ ಪ್ರಸವವಾಗುವುದಕ್ಕೆ ಗರ್ಭಿಣಿಯ ದೇಹದಲ್ಲಿ ಏನಾದರೂ ಅಡಚಣೆ ಇದೆಯೇ ಎಂದು ಮೊದಲ ಪರೀಕ್ಷೆಯಲ್ಲಿ ನೋಡಿಕೊಳ್ಳಬೇಕು. ಸೊಂಟದಲ್ಲಿ ಮೂಳೆಗಳ ವಿಕೃತಿಯಿಂದ ಇಂಥ ಸಂಭಾವ್ಯತೆ ಬರಬಹುದು. ಇಲ್ಲವೇ ರೋಗಸ್ಥಿತಿಯಿಂದ ಅಡಚಣೆ ಬರಬಹುದು. ಇವುಗಳಿಗೆ ತಕ್ಕ ಗಮನ ಕೊಟ್ಟು ಸುಖಪ್ರಸವವಾಗಿ ತಾಯಿ ಮಗು ಆರೋಗ್ಯವಾಗಿರುವಂತೆ ನೋಡಿಕೊಳ್ಳುವುದು ಪ್ರಸವಪೂರ್ವ ಎಚ್ಚರಿಕೆ ಕ್ರಮ. ಈ ಕ್ರಮದಂತೆ ಪ್ರಸವ ಆಸ್ಪತ್ರೆಯಲ್ಲಿ ನಡೆಯಬೇಕೇ ಮನೆಯಲ್ಲಿ ನಡೆಯಬೇಕೇ ಎನ್ನುವ ನಿರ್ಧಾರ ಮಾಡಬೇಕಾಗುತ್ತದೆ. ಕಷ್ಟ ಪ್ರಸವದಲ್ಲಿ ಆಸ್ಪತ್ರೆ ಸೌಕರ್ಯದ ಅವಶ್ಯಕತೆ ಜನತೆಗೆ ಬೇಕಾಗಿದೆ. 1930ರಿಂದ ಈಚೆಗೆ ಇಂಗ್ಲೆಂಡಿನಲ್ಲಿ ಮತ್ತು ಭಾರತದಲ್ಲಿ ಹೆರಿಗೆ ಆಸ್ಪತ್ರೆಗಳು, ಆಸ್ಪತ್ರೆಗೆ ಸೇರಬಯಸುವ ವ್ಯಕ್ತಿಗಳ ಸಂಖ್ಯೆಯೂ ಬಹುವಾಗಿ ಹೆಚ್ಚಿವೆ. ಎಲ್ಲ ಗರ್ಭಿಣಿಯರಿಗೂ ಆಸ್ಪತ್ರೆಯಲ್ಲೇ ಹೆರಿಗೆ ಆಗಬೇಕೆನ್ನುವುದು ಅಸಾಧ್ಯ. ಆದರೆ ಚೊಚ್ಚಲ ಬಸಿರಿನವರು, ಹಿಂದಿನ ಹೆರಿಗೆಗಳು ಕಷ್ಟವಾಗಿದ್ದವರು, ಮನೆಯಲ್ಲಿ ಹೆರಿಗೆಗೆ ಸೌಕರ್ಯಲೇಶವೂ ಇಲ್ಲದಿರುವವರು– ಇವರುಗಳಿಗೆ ಆಸ್ಪತ್ರೆಯ ದಾಖಲಾತಿ ಅವಶ್ಯಕವಾಗಿರುತ್ತದೆ. ಆಗಲೇ ಬಹು ಮಕ್ಕಳಾಗಿರುವವರಿಗೂ ಆಸ್ಪತ್ರೆಯಲ್ಲೇ ಹೆರಿಗೆ ನಡೆಯುವುದು ಸೂಕ್ತ. ಏಕೆಂದರೆ ಇವರಲ್ಲಿ ಪ್ರಸವ ಕಾಲದ ಮರಣ ಸಂಭಾವ್ಯತೆ ಬಹುವಾಗಿರುತ್ತದೆ. 3–4 ಮಕ್ಕಳಿರುವ ವ್ಯಕ್ತಿಗಳಿಗಿಂತ 6 ಮಕ್ಕಳಿರುವ ವ್ಯಕ್ತಿಗಳಲ್ಲಿ ಪ್ರಸವ ಕಾಲದ ಮರಣ ಸಂಭಾವ್ಯತೆ ಎರಡಷ್ಟೂ ಹತ್ತು ಮಕ್ಕಳಿರುವವರಲ್ಲಿ ನಾಲ್ಕರಷ್ಟೂ ಇರುವುದರಿಂದ ಆಸ್ಪತ್ರೆ ಅಂಥವರಿಗೆ ಎಷ್ಟು ಅಗತ್ಯ ಎಂದು ಗೊತ್ತಾಗುತ್ತದೆ.

ಪ್ರಸವಪೂರ್ವ ಎಚ್ಚರಿಕೆ ಗರ್ಭಸ್ಥಿತಿಯ ತರುಣದಲ್ಲೆ ದೇಹ ಪರೀಕ್ಷೆಯಿಂದ ಪ್ರಾರಂಭವಾಗಬೇಕು. ಕೊನೆಯ ಸಲ ಆದ ರಜಸ್ರಾವದ ಮೊದಲ ದಿವಸವನ್ನೂ ನಿರೀಕ್ಷಿತ ಪ್ರಸವ ದಿವಸವನ್ನೂ ವ್ಯಕ್ತಿಯ ತೂಕ, ಎತ್ತರ, ರಕ್ತದ ಒತ್ತಡವನ್ನೂ ಗುಂಡಿಗೆ ಘುಪ್ಪುಸನಾಳ ಸ್ಥಿತಿಯನ್ನೂ ಮೊದಲ ಸಾರಿಯೇ ಪರೀಕ್ಷೆ ಪ್ರಯೋಗಗಳಿಂದ ತಿಳಿದುಕೊಳ್ಳಬೇಕು. ರಕ್ತದ ಕೊರತೆ, ರಕ್ತಪಂಗಡ, ಅದರಲ್ಲೂ ಆರ್.ಎಚ್.ಪಂಗಡ ಹೆಚ್.ಐ.ವಿ. ಕಾಮಾಲೆ ಮತ್ತು ಪರಂಗಿ ರೋಗದ ಪತ್ತೆಗಾಗಿ ರಕ್ತಪರೀಕ್ಷೆಯನ್ನು ಮಾಡಬೇಕು. ಮೂತ್ರದಲ್ಲಿ ಆಲ್‌ಬ್ಯುಮಿನ್ ಸಕ್ಕರೆಗಳಿವೆಯೇ ಎಂದು ಪರೀಕ್ಷಿಸಬೇಕು. ಆಮೇಲೆ ನಾಲ್ಕು ವಾರಗಳಿಗೊಮ್ಮೆ ತೂಕ ಮತ್ತು ರಕ್ತದ ಒತ್ತಡವನ್ನು ಗರ್ಭಸ್ಥಿತಿಯ 20ನೆಯ ವಾರದ ತನಕವೂ 2 ವಾರಗಳಿಗೊಮ್ಮೆ 36ನೆಯ ವಾರದ ತನಕವೂ ಆಮೇಲೆ ಪ್ರಸವವಾಗುವ ತನಕ ವಾರವಾರವೂ ನೋಡುತ್ತಿರಬೇಕು. ಹೊಟ್ಟೆಯನ್ನು ಅಮುಕಿ ಪರೀಕ್ಷಿಸಿ ಗರ್ಭಕೋಶ ಎಷ್ಟು ಎತ್ತರದಲ್ಲಿದೆ ಎಂದು ಕಂಡುಕೊಳ್ಳಬೇಕು. ಗರ್ಭಕೋಶದೊಳಗೆ ಭ್ರೂಣ ಸರಿಯಾದ ಭಂಗಿಯಲ್ಲಿದೆಯೇ ಎಂದು ಗಮನಿಸಬೇಕು, ಮೊದಲ, ಎರಡನೆಯ ಹಾಗೂ ಕೊನೆಯ ತ್ರೈಮಾಸಿಕಗಳಲ್ಲಿ ನಡೆಸುವ ಸ್ಕ್ಯಾನಿಂಗ್ ಎಲ್ಲಾ ಪರೀಕ್ಷೆಗಳಿಗೆ ಪೂರಕವಾಗಿ ಒದಗುತ್ತವೆ ಎನ್ನುವುದನ್ನೂ ತಿಳಿದುಕೊಳ್ಳಬೇಕು. ಗರ್ಭಸ್ಥಿತಿಯ 34ನೆಯ ವಾರದಲ್ಲಿ ಸುಖಪ್ರಸವಾಗುವಂತಿದೆಯೇ ಶಸ್ತ್ರಕ್ರಿಯಾಪ್ರಸವದ ಅಗತ್ಯ ಬೀಳುತ್ತದೆಯೇ ಎನ್ನುವುದನ್ನು ಭ್ರೂಣದ ತಲೆಯ ಗಾತ್ರದ ಪರೀಕ್ಷೆಯಿಂದ ತಿಳಿಯಬೇಕು. ಪ್ರಸವಪೂರ್ವ ಎಚ್ಚರಿಕೆಕ್ರಮ ಗರ್ಭಾವಸ್ಥೆಯ ಬಸಿರು ನಂಜನ್ನು ಪತ್ತೆಮಾಡಲು ಅಗತ್ಯವಾದ ವಿಧಾನ. ಬಸಿರು ನಂಜು ಇರುವ ವಿಚಾರವನ್ನು ಅದಷ್ಟು ಬೇಗ ಪತ್ತೆಮಾಡಿ ಚಿಕಿತ್ಸೆಗೆ ಒಳಪಡಿಸುವುದು ಒಳ್ಳೆಯದು. ಯಾರಿಗೆ ಬಸುರು ನಂಜು ಬರುವ ಸಾಧ್ಯತೆಗಳಿದೆಯೋ ಅವರಿಗೆ ಮೂರನೆಯ ತಿಂಗಳಿನಿಂದಲೂ ಚಿಕಿತ್ಸೆ ಆರಂಭಿಸುವುದು ಉತ್ತಮ. ಪುಷ್ಟಿಭರಿತ ಆಹಾರ, ನೀರು, ವಿಶ್ರಾಂತಿ, ಮಾನಸಿಕ ನೆಮ್ಮದಿ ಮುಖ್ಯವಾಗುತ್ತವೆ.

ವಿಟಮಿನ್ ಎ, ಸಿ, ಆಯ್ಕೆ ಮಾಡಿದ ಮೇದೋ ಅಮ್ಲಗಳು ಈ ದಿಸೆಯಲ್ಲಿ ಮುಖ್ಯವಾದ ಔಷಧಿಗಳು. ಕಾಲಮೀರಿದ ಮೇಲೆ ಜ್ಞಾನ ತಪ್ಪಿ ಅದಿರುವಾಯು ಬಂದು ಸಾವೇ ಸಂಭವಿಸಬಹುದು. ವಿಷಮ ಸ್ಥಿತಿ ಗರ್ಭಾವಸ್ಥೆಯ ಉತ್ತರಾರ್ಧದಲ್ಲಿ ಅವ್ಯಕ್ತವಾಗಿ ಪ್ರಾರಂಭವಾಗುತ್ತದೆ. ತೂಕ ಅತಿ ಹೆಚ್ಚಾಗುವುದಕ್ಕೆ ಮೂತ್ರದಲ್ಲಿ ಆಲ್‌ಬ್ಯುಮಿನ್ ಹೋಗುವುದು, ಕೈ ಕಾಲು ಮುಖ, ಹೊಟ್ಟೆ ಊತ ಇದರ ಸೂಚನೆಗಳು ಏರಿದ ಚಿಪ್ಪು, ಕಣ್ಕತ್ತಲೆ ನಂಜು ಹೆಚ್ಚಾದ ಸೂಚನೆ. ಅನೇಕ ವೇಳೆ ಇದೇ ವಿಷಮ ಸ್ಥಿತಿಯ ಪ್ರಾಥಮಿಕ ಗುರುತಾಗಿರುತ್ತದೆ ಮತ್ತು ತೂಕದ ವಿಷಯದಲ್ಲಿರುವಂತೆಯೇ ಕಾಲಕಾಲದ ದೇಹ ಪರೀಕ್ಷೆಯಿಂದಲೊ ಅಕಸ್ಮಾತ್ತಾಗಿಯೋ ತಿಳಿದುಬರುವ ಸ್ಥಿತಿಯಾಗಿರುತ್ತದೆ. ಇನ್ನು ಮುಂದಿನ ಘಟ್ಟ, ಗರ್ಭಾವಸ್ಥೆಯ ವಿಷಮ ಪರಿಸ್ಥಿತಿಯನ್ನು ವೈದ್ಯರ ನೇರ

ನಿರ್ದೇಶನದಲ್ಲಿ ಮನೆಯಲ್ಲೇ ಸೂಕ್ತ ವಿಶ್ರಾಂತಿ ಕೊಟ್ಟು ಚಿಕಿತ್ಸಿಸಬಹುದು. ಪರಿಸ್ಥಿತಿ ತೀವ್ರವಾಗಿದ್ದರೆ ಆಸ್ಪತ್ರೆಗೇ ಸೇರಿಸಬೇಕಾಗುತ್ತದೆ. ಕಾಲಮೀರಿ ವಿಷಮಸ್ಥಿತಿ ಅದಿರುವಾಯುವಿನ ಘಟ್ಟ ತಲುಪಿದ್ದರೆ ಶೇ.30 ಮರಣವನ್ನಪುತ್ತಾರೆ. ಈ ಸ್ಥಿತಿಯ ಕಾರಣದ ಅರಿವು ಇನ್ನೂ ಹೆಚ್ಚುವವರೆಗೂ ಹೀಗೆ ಇರುತ್ತದೆ ಎಂಬುದಾಗಿಯೂ ಅಂದಾಜು ಮಾಡಲಾಗಿದೆ. ನಂಜು ಹತೋಟಿಯಲ್ಲಿಲ್ಲದಿದ್ದರೆ ಮಗುವನ್ನು ತೆಗೆಯಲೇಬೇಕು. ಗರ್ಭಿಣಿ ಆರ್.ಎಚ್. ಋಣ ಪ್ರತಿಯಕಾಯ (ಆ್ಯಂಟಿ ಆರ್. ಎಚ್. ಅಗ್ಲೂಟಿನೆನ್) ಉತ್ಪತ್ತಿಯಾಗಿ ಮಾಸು/ಕಸದ ಮೂಲಕ ಭ್ರೂಣದ ದೇಹಕ್ಕೆ ತಲುಪಿ ಭ್ರೂಣದ ಕೆಂಪುರಕ್ತಕಣ (ಕೆಂಗಣ) ನಾಶವಾಗುತ್ತದೆ. ಇದರಿಂದ ಶಿಶುವಿನಲ್ಲಿ ರಕ್ತಹೀನತೆ, ಕಾಮಾಲೆಗಳು ಉಂಟಾಗುತ್ತವೆ. ಮೊದಲ ಗರ್ಭಾವಸ್ಥೆಯಲ್ಲಿ ತಾಯಿ ತಂದೆಯವರಿಗೆ ಆಗುವ ಮಗುವಿಗೆ ಯಾವ ಅಪಾಯವೂ ಇಲ್ಲ.

ಆದರೆ ಮುಂದಿನ ಗರ್ಭಾವಸ್ಥೆಗಳು ಸಾಮಾನ್ಯವಾಗಿ ಗರ್ಭಪಾತದಿಂದಲೋ ಸತ್ತಮಗುವಿನ ಜನನದಿಂದಲೋ ಅಥವಾ ಹುಟ್ಟಿದ ಮಗು ರಕ್ತಹೀನತೆ ಕಾಮಾಲೆಗಳ ತೀವ್ರತೆಯಿಂದ ಸುಮಾರು ಒಂದು ವಾರದಲ್ಲೇ ಮೃತವಾಗುವುದರಿಂದಲೋ ಪರ್ಯವಸಾನವಾಗುತ್ತದೆ. ಹುಟ್ಟಿದ ಶಿಶುವಿನ ರಕ್ತವನ್ನೆಲ್ಲ ತೆಗೆದು ಅದರ ದೇಹಕ್ಕೆ ಒಗ್ಗುವ ಬೇರೆ ರಕ್ತವನ್ನು ತುಂಬಿ ಶಿಶು ಜೀವಂತವಾಗಿರುವಂತೆ ಮಾಡಲು ಪ್ರಯತ್ನಿಸುತ್ತಾರೆ. ಶಿಶು ಗರ್ಭದಲ್ಲಿ ಇರುವಾಗಲಾದರೂ ಈ ಪ್ರಯೋಗ ಮಾಡಬಹುದು. ಶಿಶುವಿಗೆ ಮಾತ್ರವಲ್ಲದೆ ಈ ಪರಿಸ್ಥಿತಿ ತಾಯಿಗೂ ಅನಾನುಕೂಲವಾಗಿರುತ್ತದೆ. ತಾಯಿಗೆ ಆರ್.ಎಚ್. ಧನಪಂಗಡದ ರಕ್ತವನ್ನು ಕೊಡುವಂತಿಲ್ಲ. ಪರಿಸ್ಥಿತಿಯ ಅರಿವಿಲ್ಲದೆ ಹಾಗೇನಾದರೂ ಕೊಟ್ಟರೆ, ತಾಯಿಯ ಜೀವಕ್ಕೆ ಅಪಾಯವಾಗಬಹುದು. ಕ್ಷಯರೋಗ ತಾಯಿಗೆ ಮಾರಕವಾಗಬಹುದು. ಲೈಂಗಿಕ ರೋಗಗಳು ಶಿಶುವಿಗೆ ಮಾರಕವಾಗಿರುತ್ತವೆ. ಮೂತ್ರಪಿಂಡ ರೋಗಗಳೂ ಗರ್ಭಾವಸ್ಥೆಯ ವಿಷಮಪರಿಸ್ಥಿತಿಗಳೂ ತಾಯಿ ಮಗು ಇಬ್ಬರಿಗೂ ಮಾರಕವಾಗಿತ್ತವೆ. ಕೀಲು ಗಂಟು ನೋವು ಇರುವವರಿಗೆ ಗರ್ಭಾವಸ್ಥೆಯ ಕಾಲದಲ್ಲಿ ಯೋನಿಯಿಂದ ರಕ್ತಸ್ರಾವವಾಗಬಹುದು. ಇದು ಗರ್ಭಪಾತದ ಚಿಹ್ನೆ ಇಲ್ಲವೇ ಕಷ್ಟ ಪ್ರಸವದ ಚಿಹ್ನೆಯಾಗಿದ್ದು ಎಚ್ಚರಿಕೆ ತೆಗೆದುಕೊಳ್ಳಬೇಕಾದ ಪ್ರಸಂಗವಾಗಿರುತ್ತದೆ. ಗರ್ಭಾವಸ್ಥೆಯಲ್ಲಿ ಅವಳಿತ್ರಿವಳಿ ಮಕ್ಕಳಿರುವ ಸಾಧ್ಯತೆ ಅಪರೂಪವೇನಲ್ಲ, ಅಂಡಾಶಯದಿಂದ ಒಂದು ಕಾಲದಲ್ಲಿ ಒಂದೇ ಅಂಡಾಣು ವೃದ್ಧಿಯಾಗಿ ಹೊರಬೀಳುವ ಬದಲು 2–3 ಅಂಡಾಣುಗಳು ಏಕಕಾಲಿಕವಾಗಿ ಹೊರಬೀಳುವುದರಿಂದ ಅವಳಿತ್ರಿವಳಿಗಳಾಗುವ ಸಂಭಾವ್ಯತೆ ಉಂಟಾಗುತ್ತದೆ. ಭ್ರೂಣಾಣು ಬೆಳೆದು ಒಂದು ಶಿಶುವಾಗುವ ಬದಲು, ಪ್ರಾರಂಭದಲ್ಲಿ ಭ್ರೂಣಾಣು ಇಬ್ಭಾಗವಾದಾಗ ಆ ಎರಡೂ ಬೇರೆ ಬೇರೆ ಶಿಶುಗಳಾಗಿ ಬೆಳೆಯುವುದರಿಂದಲೂ ಅವಳಿ ಸ್ಥಿತಿಗೆ ಕಾರಣವಾಗಿದೆ. ಆದರೆ ಕೆಲವರಲ್ಲಿ ಕೆಲವು ಸಲ ಮಾತ್ರ ಹೀಗೆ ಏಕೆ ಆಗುತ್ತದೆ ಎನ್ನುವುದು ಗೊತ್ತಿಲ್ಲ. ಗರ್ಭಾವಸ್ಥೆಯಲ್ಲಿ ಭ್ರೂಣ ಸರಿಯಾಗಿ ಬೆಳೆಯದೆ ಕಾರಣಾಂತರದಿಂದ ಅಕ್ರಮ ಬೆಳೆವಣಿಗೆಯಾಗಿ ಅಂಗವಿಕಲವಾದ ಮಗು ಹುಟ್ಟಬಹುದು. ಸ್ವಲ್ಪ ಕಾಲದ ಹಿಂದೆ ಥಾಲಿಡೋಮೈಡ್ ಎಂಬ ವೇದನಾಶಕ ಔಷಧಿಯನ್ನು ಗರ್ಭಿಣಿಯರು ಸೇವಿಸುವ ರೂಢಿ ಇದ್ದಾಗ ಇಂತ ವ್ಯತ್ಯಯಗಳು ಉದ್ಭವಿಸಿ ಅನೇಕ ಊನಗಳುಳ್ಳ ಶಿಶುಗಳ ಜನನವಾಗುತ್ತಿತ್ತು. ಗರ್ಭಾವಸ್ಥೆಯ ಕಾಲದಲ್ಲಿ ತಾಯಿಗೆ ರೂಬೆಲ್ಲ ಎಂಬ ಸೋಂಕಿನ ರೋಗ ಉಂಟಾದರೂ ಹೀಗೆ ಭ್ರೂಣದಲ್ಲಿ ಅಕ್ರಮ ಬೆಳೆವಣಿಗೆ ಮತ್ತು ಅಂಗವಿಕಲತೆ ಕಂಡುಬರುತ್ತವೆ. ಗರ್ಭಾವಸ್ಥೆಯಲ್ಲಿ ಸ್ತ್ರೀ ಅಗಾಧ ವಿಕಿರಣಪಟುತ್ವಕ್ಕೆ ಒಳಗಾದಾಗಲೂ ಇಂತಹ ಅಕ್ರಮಗಳುಂಟಾಗುತ್ತವೆ. 1945ರಲ್ಲಿ ಜಪಾನಿನ ಹಿರೊಷಿಮ, ನಾಗಸಾಕಿಗಳಲ್ಲಿ ದ್ವಿತೀಯ ಮಹಾಯುದ್ಧ ಕಾಲದಲ್ಲಿ ಪ್ರಥಮವಾಗಿ ಉಪಯೋಗಿಸಿದ ಪರಮಾಣು ಬಾಂಬಿನ ಸ್ಫೋಟನೆಯಿಂದಾಗಿ ಅಗಾಧ ವಿಕಿರಣಪಟುತ್ವಕ್ಕೆ ತುತ್ತಾಗಿ ಜನಿಸಿದ ಸಹಸ್ರಾರು ಅಂಗವಿಕಲ ಮಕ್ಕಳನ್ನು ಯಾರೂ ಮರೆಯಲಾರರು.

ಗರ್ಭಾವಸ್ಥೆಯ ಅವಧಿ 40 ವಾರಗಳು ಎಂದು ಮೇಲೆ ವಿವರಿಸಿದ್ದರೂ ಶೇ.5 – ಶೇ.8 ರಷ್ಟು ಪ್ರಸಂಗಗಳಲ್ಲಿ ಅವಧಿಗೆ ಮುಂಚಿತವಾಗಿಯೇ ಗರ್ಭಾವಸ್ಥೆ ಕೊನೆಗೊಂಡು ಅವಸರದ ಹೆರಿಗೆ ಆಗುತ್ತದೆ. ಹೀಗೆ ಅವಸರವಾಗಿ ಹುಟ್ಟಿದ ಅನೇಕ ಮಕ್ಕಳು ಸತ್ತೇ ಹುಟ್ಟುತ್ತವೆ. ಇಲ್ಲವೇ ಶೀಘ್ರದಲ್ಲೇ ಸತ್ತು ಹೋಗುತ್ತವೆ. ಗರ್ಭಾವಸ್ಥೆಯ ಅವಧಿ 28 ವಾರಗಳನ್ನು ಮೀರಿ 40 ವಾರಗಳನ್ನು ಸಮೀಪಿಸಿದಂತೆ ಹುಟ್ಟುವ ಮಕ್ಕಳು ಜೀವಂತವಾಗಿರುವ ಸಂಭಾವ್ಯತೆ ಹೆಚ್ಚುತ್ತದೆ. ಗರ್ಭಾವಸ್ಥೆಯ ಅವಧಿ ಈ ಮಿತಿಯಲ್ಲಿ ಎಷ್ಟೇ ಇರಲಿ, ಹುಟ್ಟಿದ ಮಗು 2 ಕೆ.ಜಿ.ಗಿಂತ ಕಡಿಮೆ ಇದ್ದರೆ ಅದನ್ನು ಅವಸರದಲ್ಲಿ ಹುಟ್ಟಿದ ಮಗು ಎಂದು ಪರಿಗಣಿಸಬೇಕೆಂದು ಎಲ್ಲ ದೇಶದವರೂ ಒಪ್ಪಿದ್ದಾರೆ. ಗರ್ಭಾವಸ್ಥೆಯ ಅಕಾಲಿಕ ಅಂತ್ಯ ತಾಯಿಯ ದೇಹದಾರ್ಢ್ಯ, ಪೌಷ್ಟಿಕಸ್ಥಿತಿ ಇವನ್ನು ಅವಲಂಬಿಸಿವೆ. ಕುಳ್ಳ ರೋಗಿಷ್ಠ ಹೆಂಗಸು, ಎತ್ತರವಾಗಿ ಆರೋಗ್ಯವಾಗಿರುವ ಹೆಂಗಸಿಗಿಂತ 6ರಷ್ಟು ಹೆಚ್ಚು ಸಂದರ್ಭಗಳಲ್ಲಿ ಗರ್ಭಾವಸ್ಥೆಯ ಅಕಾಲಿಕ ಅಂತ್ಯವನ್ನು ತೋರುತ್ತಾಳೆ.

(ಎಸ್.ಆರ್.ಆರ್.)

**ಗರ್ಭಾವಸ್ಥೆ (ಪ್ರಾಣಿಗಳಲ್ಲಿ) :** ಮರಿಗಳಿಗೆ ಮೊಲೆ ಹಾಲೂಡಿಸುವ ಪ್ರಾಣಿಗಳನ್ನು, ಎಂದರೆ ಸಸ್ತನಿಗಳನ್ನು, ಕುರಿತು ಗರ್ಭಾವಸ್ಥೆ ಎಂಬ ಪದದ ಬಳಕೆ ಉಂಟು. ಇಂಥ ಪ್ರಾಣಿಗಳಲ್ಲಿ ಸಹ ಗರ್ಭಾವಸ್ಥೆಯ ಅವಧಿಯನ್ನು ಮನುಷ್ಯರಲ್ಲಿ ವ್ಯಾಖ್ಯಾನಿಸಿರುವಂತೆಯೇ ವ್ಯಾಖ್ಯಾನಿಸಲಾಗಿದೆ: ಗರ್ಭದಲ್ಲಿ ಭ್ರೂಣವುಂಟಾಗಿ ಪಿಂಡವಾಗಿ ಬೆಳೆದು ಅದು ಮರಿಯಾಗಿ ಹುಟ್ಟುವವರೆಗಿನ ಕಾಲ. ಯಾವುದೇ ಪ್ರಾಣಿಯಲ್ಲಿ ನಿಷೇಚನ ಯಾವಾಗ ನಡೆಯಿತು ಎಂಬುದನ್ನು ಕರಾರುವಾಕ್ಕಾಗಿ ಹೇಳುವುದು ಕಷ್ಟ. ಆದ್ದರಿಂದ ಇಂಥಲ್ಲಿ ಋತು ದಿನದಿಂದ ಲೆಕ್ಕಹಾಕಿ ಗರ್ಭಾವಧಿಯನ್ನು ನಿರ್ಧರಿಸಬೇಕು. ಒಂದೊಂದು ಪ್ರಾಣಿಯ ಗರ್ಭಾವಸ್ಥೆಯ ಕಾಲ ಒಂದೊಂದು ಎಂಬುದನ್ನು ಮುಂದಿನ ಯಾದಿಯಲ್ಲಿ ನೋಡಬಹುದು.

| ಪ್ರಾಣಿಯ ಹೆಸರು | | ಗಬ್ಬದ ಅವಧಿ (ದಿನಗಳಲ್ಲಿ) |
|---|---|---|
| | ಕತ್ತೆಕಿರುಬ ... | 110 |
| | ಮೀನ್ಸುಳ್ಳಿ ... | 338–358 |
| | ಮುಳ್ಳು ಹಂದಿ– ... | |
| | ಯುರೋಪಿನ | 35–40 |
| | ಹಂದಿ ಮೀನು ... | 276 |
| 1 | ಎಮ್ಮೆ ... | 275 |
| 2 | ಕಾಡೆಮ್ಮೆ ... | 270 |
| 3 | ದನ ... | 284 (260–300) |
| 4 | ಕುರಿ ... | 148 (143–159) |
| 5 | ಮೇಕೆ ... | 151 (145–157) |
| 6 | ಕುದುರೆ ... | 337 (320–356) |
| 7 | ಕತ್ತೆ ... | 365 |
| 8 | ಒಂಟೆ ... | 410 (370–440) |
| 8ಎ | ಹಂದಿ ... | 113 (110–120) |
| 9ಬಿ | ಖಡ್ಗಮೃಗ (ಆಫ್ರಿಕದ)... | 530–550 |
| 9 | ಜಿರಾಫೆ ... | 395–425 |
| 9ಎ | ನೀರಾನೆ ... | 237–250 |
| 10 | ಜಿಂಕೆ ... | 197–220 |
| 11 | ಹಿಮ ಸಾರಂಗ ... | 215–224 |
| 12 | ಬೆಕ್ಕು ... | 63 (55–69) |
| | ನಾಯಿ ... | 61 (58–63) |
| 15 | ಕಾಡು ಬೆಕ್ಕು ... | 92–95 |
| 16 | ಚಿರತೆ ... | 90–93 |
| 17 | ಸಿಂಹ ... | 108 (105–113) |
| 18 | ಹುಲಿ ... | 113–105 |
| 19 | ರಕೂನ್ ... | 63 |
| 19ಎ | ಸೀಲ್ ಪ್ರಾಣಿ (ಉತ್ತರದ ತುಪ್ಪುಳು ಪ್ರಾಣಿ) | 350 |
| 20 | ಇಲಿ ... | 22 (21.5–22) |
| 20 | ನೀರು ನಾಯಿ–ಕೆನಡ ... | 62 |
| 21 | ಕರಡಿ ... | 210 |
| 21 | ಗಿನಿ ಹಂದಿ ... | 68 |
| 22 | ಮೊಲ ... | 38 |
| 23 | ತಿಮಿಂಗಿಲ ... | 365 (360–480) |
| 24 | ಆನೆ ... | 600–660 |
| 25 | ಆನೆ–ಏಷ್ಯದ್ದು ... | 645 (520–730) |
| 26 | ಕೋತಿ ... | 210 |

| | | |
|---|---|---|
| 27 | ಕೋತಿ–ರ್‍ಹಿಸಸ್ ... | 164 (146–180) |
| 28 | ಚಿಂಪಾಂಜಿ ... | 237 (216–261) |
| 29 | ಬಾವಲಿ ... | 50 |
| 30 | ಕಾಂಗರೂ–ದೊಡ್ಡದು ... | 30–40 |
| 31 | ಒಪಾಸಮ್ (ವರ್ಜೀನಿಯದ) | 181 (502–2.5) |

ಸಸ್ತನಿಗಳಲ್ಲೆಲ್ಲ ಅತಿಕಡಿಮೆ ಗಬ್ಬದ ಅವಧಿ ವರ್ಜೀನಿಯದ ಒಪಾಸಮ್‌ನಲ್ಲಿ ಕಂಡು ಬಂದರೆ. ಅತಿ ದೀರ್ಘಾವಧಿ ಭಾರತದ ಆನೆಗಳಲ್ಲಿ (ಸುಮಾರು 22 ತಿಂಗಳುಗಳು) ಕಾಣಬಹುದು. ಈ ವ್ಯತ್ಯಾಸದ ಕಾರಣ ನಿಖರವಾಗಿ ಇನ್ನೂ ತಿಳಿದು ಬಂದಿಲ್ಲ. ಪ್ರಾಣಿಗಳು ವಿಕಾಸವಾದಂತೆಲ್ಲ ಅವುಗಳ ದೇಹಸ್ಥಿತಿಗೆ ಅನುಗುಣವಾಗಿ ಗರ್ಭಾವಸ್ಥೆ ಹೊಂದಿಕೊಂಡಿರ ಬಹುದು. ಪಿಂಡದ ಬೆಳೆವಣಿಗೆ ಹಾಗೂ ಅದರ ಗಾತ್ರ ಗಬ್ಬದ ಅವಧಿಯನ್ನು ಅವಲಂಬಿಸಿರುತ್ತದೆ. ಆದ್ದರಿಂದ ಚಿಕ್ಕ ಚಿಕ್ಕ ಪ್ರಾಣಿಗಳಲ್ಲಿ ಗಬ್ಬದ ಅವಧಿ ಕಡಿಮೆ: ದೈತ್ಯಾಕಾರದ ಪ್ರಾಣಿಗಳಲ್ಲಿ ಹೆಚ್ಚು. ಈ ನಿಯಮಕ್ಕೆ ಅಪವಾದದ ಪ್ರಾಣಿಗಳು–ಗಿನಿಹಂದಿ ಹಾಗೂ ಈ ಪ್ರಾಣಿಯ ಸಂಬಂಧಿಗಳಾದ ದಕ್ಷಿಣ ಅಮೆರಿಕದ ಮೂಷಕಗಳು. ಇವು ಗಾತ್ರದಲ್ಲಿ ಚಿಕ್ಕವಾದರೂ ಇವುಗಳ ಗರ್ಭಾವಸ್ಥೆ ಸಾಕಷ್ಟು ದೀರ್ಘವಾಗಿಯೇ ಇರುವುದು. ಹೆಚ್ಚು ದಿವಸ ಗರ್ಭದಲ್ಲಿದ್ದು ಹುಟ್ಟುವ ಮರಿಗಳು ಚೆನ್ನಾಗಿ ಬೆಳೆದಿರುತ್ತವೆ.

**ಕಾರ್ಪಸ್ ಲೂಟಿಯಮಿನ ಪಾತ್ರ:** ಪ್ರಾಣಿ ಗಬ್ಬವಾದಾಗ ಅದರ ಗರ್ಭಕೋಶ, ಅಂಡಾಶಯ ಮತ್ತು ದೇಹದ ಅಂಗಾಂಶಗಳೆಲ್ಲ ಪ್ರಭಾವಿತವಾಗುತ್ತವೆ. ದೇಹದ ಹೊರಗೆ ಒಳಗೆ ಅನೇಕ ರೀತಿಯ ಬದಲಾವಣೆಗಳು ಆಗುತ್ತವೆ. ಅಂಡಾಶಯದಲ್ಲಿ ಕಾರ್ಪಸ್ ಲೂಟಿಯಮ್ ಕಾಣಿಸಿಕೊಳ್ಳುತ್ತದೆ. ಇದು ಇರುವವರೆಗೂ ಗಬ್ಬ ಮುಂದುವರಿಯುವುದು. ಇದು ಒಂದು ಅಂತಃಸ್ರಾವ ಗ್ರಂಥಿಯ ರೀತಿಯಲ್ಲಿ ಕೆಲಸಮಾಡುವುದು. ಇದರಿಂದ ಪ್ರೋಜೆಸ್ಟಿರಾನ್ ಉತ್ಪತ್ತಿಯಾಗುತ್ತದೆ. ಇದು ಇರುವವರೆಗೂ ಪಿಂಡ ಗರ್ಭದಲ್ಲಿಯೇ ಇರುತ್ತದೆ. ಕಾರ್ಪಸ್ ಲೂಟಿಯಮ್ ಸಂಕುಚಿತವಾದಾಗ ಪ್ರೋಜೆಸ್ಟಿರಾನಿನ ಉತ್ಪಾದನೆ ನಿಂತುಹೋಗುವುದು. ಆಗ ಪ್ರಾಣಿ ಈಯುತ್ತದೆ (ಮರಿಹಾಕುತ್ತದೆ). ಆದ್ದರಿಂದ ಕಾರ್ಪಸ್ ಲೂಟಿಯಮಿನ ಕ್ರಿಯಾಶೀಲತೆಯ ವೇಳೆಯನ್ನು ಗರ್ಭಾವಧಿಯೆನ್ನಬಹುದು. ಒಂದು ವೇಳೆ ಕೃತಕ ರೀತಿಯಲ್ಲಿ ಪ್ರೋಜೆಸ್ಟಿರಾನನ್ನು ದೇಹದೊಳಗೆ ಸೇರಿಸುತ್ತಾ ಹೋದರೆ ಪ್ರಾಣಿಯ ಮರಿಹಾಕುವ ಕಾರ್ಯ ಮುಂದೆ ಹೋಗುವುದಲ್ಲದೆ ಪಿಂಡ ಬೆಳೆಯುತ್ತಲೇ ಹೋಗುತ್ತದೆ. ಕೆಲವು ದಿವಸಗಳು ಮಾತ್ರ ಈ ರೀತಿ ಮಾಡಿದರೆ ಪಿಂಡಕ್ಕೆ ಅಪಾಯವೇನೂ ಆಗುವುದಿಲ್ಲ. ಆದರೆ ಬಹಳ ದಿವಸಗಳವರೆಗೆ ಪ್ರೋಜೆಸ್ಟಿರಾನನ್ನು ಉಪಯೋಗಿಸುತ್ತ ಹೋದರೆ ಪಿಂಡ ಸತ್ತುಹೋಗುವುದು. ಆದ್ದರಿಂದ ಗರ್ಭಾವಸ್ಥೆಯಲ್ಲಿ ಕಾರ್ಪಸ್ ಲೂಟಿಯಮಿನ ಪಾತ್ರ ಬಹಳ ಪ್ರಧಾನವಾದುದು. ಆದರೆ ಎಲ್ಲ ಪ್ರಾಣಿಗಳಲ್ಲಿಯೂ ಕಾರ್ಪಸ್ ಲೂಟಿಯಮಿನ ಅವಶ್ಯಕತೆ ಅಷ್ಟಾಗಿರದು. ಪೂರ್ವ ಆಫ್ರಿಕದಲ್ಲಿ ಕಾಣಬರುವ ನಿಕ್ಟೀರಿಯಸ್ ಜಾತಿಯ ಬಾವಲಿಗಳಲ್ಲಿ ಪ್ರಾಣಿ ಗರ್ಭಾವಸ್ಥೆಯಲ್ಲಿರುವಾಗಲೆ ಕಾರ್ಪಸ್ ಲೂಟಿಯಮ್ ಸಂಕುಚಿತವಾಗುತ್ತದೆ. ಆದರೂ ಗಬ್ಬ ಮುಂದುವರಿಯುತ್ತದೆ. ಸಾಕುಪ್ರಾಣಿಗಳಾದ ಕುದುರೆಗಳಲ್ಲಿಯೂ ಇದೇ ಸ್ಥಿತಿ ಕಾಣಬರುತ್ತದೆ. ಕಾರ್ಪಸ್ ಲೂಟಿಯಮಿನ ಕಾರ್ಯವನ್ನು ಬೇರೆ ಅಂತಃಸ್ರಾವ ಗ್ರಂಥಿಗಳು ವಹಿಸಿಕೊಂಡು ಪ್ರೋಜೆಸ್ಟಿರಾನನ್ನು ಉತ್ಪತ್ತಿಮಾಡುವುದರಿಂದ ಗಬ್ಬ ಮುಂದುವರಿಯುತ್ತದೆ. ಕೆಲವು ಪ್ರಾಣಿಗಳ ಗರ್ಭಾವಸ್ಥೆಯಲ್ಲಿ ಕಾರ್ಪಸ್ ಲೂಟಿಯಮ್ ಇರಲೇಬೇಕು. ಇಲ್ಲದಿದ್ದರೆ ಅಥವಾ ಅದನ್ನು ತೆಗೆದುಹಾಕಿದರೆ ಚಿಟ್ಟಿಲಿ ಮತ್ತು ಮೇಕೆಗಳಲ್ಲಿ ಪಿಂಡವು ಇಂಗಿ ಹೋಗುವುದು. ಪಿಂಡ ತಳವೂರಿದ ಬಳಿಕ ಕೋತಿ ಮತ್ತು ಮನುಷ್ಯರಲ್ಲಿ ಕಾರ್ಪಸ್ ಲೂಟಿಯಮನ್ನು ತೆಗೆದುಹಾಕಿದರೂ ಯಾವ ಬಾಧಕವೂ ಆಗುವುದಿಲ್ಲ.

ಕಾಡಿನಲ್ಲಿ ವಾಸಿಸುವ ಪ್ರಾಣಿಗಳಲ್ಲಿ ಗಬ್ಬದ ಸ್ಥಿತಿ ಇನ್ನೂ ವಿಚಿತ್ರ. ಅವು ಯಾವ ತಾಣದಲ್ಲಿಯೂ ನಿಲ್ಲದೆ ಕಾಡಿನಲ್ಲೆಲ್ಲ ಓಡಾಡುತ್ತವೆ. ಕೆಲವಾರು ಪ್ರಾಣಿಗಳು ಗುಹೆ ಮತ್ತು ಬಿಲಗಳಲ್ಲಿ ವಾಸಿಸುತ್ತವೆ. ಯಾವ ತಾಣದಲ್ಲಿಯೂ ಇರದ ಪ್ರಾಣಿಗಳಲ್ಲಿ ಗಬ್ಬದ ಅವಧಿ ದೀರ್ಘವಾದುದು. ಹುಟ್ಟಿದ ಮರಿಗಳು ಸಾಕಷ್ಟು ಬಲಿಷ್ಠವಾಗಿರುತ್ತವೆ. ಆದರೆ ಗುಹೆ, ಬಿಲಗಳಲ್ಲಿ ವಾಸಿಸುವ ಇಲಿ ಮುಂತಾದ ಮೂಷಕಗಳ ಮರಿಗಳು ಹುಟ್ಟಿದಾಗ ಬಹಳ ಎಳೆಯ ಸ್ಥಿತಿಯಲ್ಲಿಯೇ ಇರುತ್ತವೆ. ಕರಡಿ ಮರಿಗಳೂ ಹುಟ್ಟಿದಾಗ ಬಹಳ ಎಳಸಾಗಿರುತ್ತವೆ. ಗಬ್ಬದ ಅವಧಿ ಕಾಂಗರೂ ಮುಂತಾದ ಮಾರ್ಸ್ಯುಪಿಯಲ್‌ಗಳಲ್ಲಿ ಕಡಿಮೆ. ಇವುಗಳ ಮರಿಗಳು ಹುಟ್ಟಿದಾಗ ಬಹಳ ಎಳಸಾಗಿರುತ್ತವೆ. ಮರಿಗಳ ಬೆಳೆವಣಿಗೆ ಪೂರ್ಣವಾಗಿರುವುದಿಲ್ಲ. ಆದ್ದರಿಂದ ಮರಿಗಳು ಹುಟ್ಟಿದಮೇಲೆ ಅವನ್ನು ತಾಯಿ ಪ್ರಾಣಿ ತನ್ನ ಒಡಲಿನ ಹೊರಭಾಗದಲ್ಲಿ ಕಾಣಬರುವ ಮರಿಚೀಲದಲ್ಲಿ ಸಾಕುತ್ತದೆ. ಈ ಚೀಲದಲ್ಲಿ ಮರಿಗಳ ಬೆಳೆವಣಿಗೆ ಮುಂದುವರಿದು ಅವು ಪೂರ್ಣಾವಸ್ಥೆಯನ್ನು ತಲಪುತ್ತವೆ. ಕೆಲವೊಂದು ಜಾತಿಯ ಪ್ರಾಣಿಗಳಲ್ಲಿ ಈ ರೀತಿಯ ಮರಿಚೀಲ ಕಂಡುಬರುವುದಿಲ್ಲ. ಇಂಥ ಪ್ರಾಣಿಗಳಲ್ಲಿ ಹುಟ್ಟಿದ ಎಳೆಮರಿಗಳು ತಮ್ಮ ಕಾಲುಗಳಿಂದ ತಾಯಿಯ ಎದೆಭಾಗವನ್ನು ತಬ್ಬಿಕೊಂಡಿದ್ದು ಯಾವಾಗಲೂ ಮೊಲೆತೊಟ್ಟನ್ನು ಬಾಯಿಂದ ಹಿಡಿದುಕೊಂಡಿರುತ್ತವೆ. ಉದಾ: ಒಪಾಸಮ್, ಮಾರ್ಮೊಸಾಟ್, ಅಮೆರಿಕೆಯ ಬಯಲಿನ ಇಲಿ ಮತ್ತು ಕಾಡಿನ ಇಲಿಗಳು.

**ಭ್ರೂಣದ ಒಳನಾಟಿಕೆ ಹಾಗೂ ಗರ್ಭಾವಧಿ:** ಕೆಲವಾರು ಜಾತಿಯ ಪ್ರಾಣಿಗಳಲ್ಲಿ ಭ್ರೂಣದ ಬೆಳೆವಣಿಗೆ ಕೆಲಕಾಲ ನಿಂತುಹೋಗುತ್ತದೆ. ಇದರಿಂದ ಗಬ್ಬದ ಅವಧಿ ಹೆಚ್ಚಾಗುತ್ತದೆ. ಇದು ತುಪ್ಪಳಗೂದಲ ಹೊದಿಕೆಯುಳ್ಳ ಮಾಂಸಗಳಲ್ಲಿ ಸಾಮಾನ್ಯ. ಉದಾಹರಣೆಗೆ, ತುಪ್ಪಳಿಗ ಮತ್ತು ವೀಸಲ್. ಯುರೋಪಿನ ಬ್ಯಾಡ್ಜರ್ ಮತ್ತು ಅಮೆರಿಕದಲ್ಲಿನ ತುಪ್ಪಳಿಗ ಜುಲೈ ಮತ್ತು ಆಗಸ್ಟ್‌ನಲ್ಲಿ ಗಬ್ಬವಾಗುತ್ತವೆ. ಭ್ರೂಣ ಕೆಲಕಾಲ ಮಾತ್ರ ಬೆಳೆದು ಮುಂದೆ ಜನವರಿ ತಿಂಗಳಿನವರೆಗೆ ತನ್ನ ಬೆಳೆವಣಿಗೆಯನ್ನು ಸ್ಥಗಿತಗೊಳಿಸುತ್ತದೆ. ಆಗ ಭ್ರೂಣ ಗರ್ಭಕೋಶದೊಳಗೆ ನಾಟುವುದಿಲ್ಲ. ಜನವರಿ ತಿಂಗಳಲ್ಲಿ ಭ್ರೂಣ ಒಳನಾಟಿಕೊಂಡು ಬೆಳೆದು ಮಾರ್ಚ್ ತಿಂಗಳಿನಲ್ಲಿ ಈ ಪ್ರಾಣಿಗಳು ಮರಿಹಾಕುವುವು. ಇಲ್ಲಿ ಗಬ್ಬದ ಅವಧಿ 250 ದಿನಗಳಾದರೂ ಭ್ರೂಣ/ಪಿಂಡ ಬೆಳೆಯಲು ಬೇಕಾಗುವ ಅವಧಿ ಮಾತ್ರ ಕೇವಲ 50 ದಿನಗಳು. ಈ ಪ್ರಾಣಿಗಳನ್ನು ಗಬ್ಬವಾದ ಮೇಲೆ ಪ್ರಾಯೋಗಿಕವಾಗಿ ಬಿಸಿಲಿನಲ್ಲಿ ಬಿಟ್ಟರೆ ಗಬ್ಬ ಮೂರು ತಿಂಗಳಿನಷ್ಟು ಕಡಿಮೆಯಾಗುತ್ತದೆ. ಬಿಸಿಲಿನ ಪ್ರಭಾವದಿಂದ ಚೇತನಗೊಂಡ ಕಾರ್ಪಸ್ ಲೂಟಿಯಮ್ ಪಿಟ್ಯುಟರಿ ಗ್ರಂಥಿಯನ್ನು ಪ್ರಚೋದಿಸಿ ಅದರಿಂದ ಹಾರ್ಮೋನ್ ಉತ್ಪತ್ತಿಯಾಗುವಂತೆ ಮಾಡುವುದು. ಇದೇ ರೀತಿಯ ಗಬ್ಬದ ಸ್ಥಿತಿ ಆರ್ಮಡಿಲೊ ಮತ್ತು ರೋ ಜಿಂಕೆಗಳಲ್ಲಿ ಸಹ ಕಾಣಬರುತ್ತದೆ. ಕರಡಿ ಮತ್ತು ಸೀಲ್‌ಗಳಲ್ಲಿಯೂ ಇದೇ ರೀತಿ ಇರಬಹುದೆಂದು ನಂಬಲಾಗಿದೆ. ಈ ಒಳನಾಟಿಕೆ ನಿಧಾನವಾಗುವುದರಿಂದ ಚಿಟ್ಟಿಲಿ ಮುಂತಾದ ಚಿಕ್ಕ ಮೂಷಕಗಳಲ್ಲಿ ಗಬ್ಬ ಮುಂದೆ ಹೋಗುತ್ತದೆ. ತಾಯಿ ಮರಿಗಳಿಗೆ ಹಾಲನ್ನುಣ್ಣಿಸುತ್ತಿದ್ದರೆ 10–20 ದಿವಸಗಳಷ್ಟು ಗಬ್ಬ ಮುಂದೆ ಹೋಗುವುದು. ತಾಯಿಯ ದೇಹದಿಂದ ಹಾಲು ಉತ್ಪತ್ತಿಯಾಗಿ ಉಪಯೋಗವಾಗುವುದರಿಂದ ಹಾಗೂ ತಾಯಿ ಹೆಚ್ಚಿನ ಮರಿಗಳಿಗೆ ಹಾಲನ್ನು ಕೊಡುತ್ತಿರುವ ಸ್ಥಿತಿಯಲ್ಲಿ ಗಬ್ಬವಾಗುವುದು ನಿಧಾನವಾಗುತ್ತದೆ. ಆದರೆ ದೊಡ್ಡ ಗಾತ್ರದ ಮೂಷಕಗಳಲ್ಲಿ ಒಳನಾಟಿಕೆ ನಿಧಾನವಾಗುವುದು ವಿರಳ. ಚಿಟ್ಟಿಲಿಗಿಂತ ಸಾಮಾನ್ಯ ಇಲಿಗಳಲ್ಲಿ ಸೂಲಿನ ಅವಧಿ 22 ದಿನಗಳು. ಅರಳೆ ಇಲಿಯಲ್ಲಿ 27 ದಿನಗಳು.

**ಗಬ್ಬದ ಪರೀಕ್ಷೆಗಳು:** ಮನುಷ್ಯನಲ್ಲಿ ಮಾಡುವಂತೆಯೇ ಆಷಿಂಘಾಂಡೆಕ್ ಪರೀಕ್ಷೆಯ ತತ್ತ್ವವನ್ನು ಪಾಲಿಸಿಕೊಂಡು ಪ್ರಾಣಿಗಳಲ್ಲಿಯೂ ಈ ರೀತಿಯ ಪರೀಕ್ಷೆಗಳನ್ನು ಮಾಡುವ ವಿಧಾನ ಜಾರಿಯಲ್ಲಿದೆ. ಕುದುರೆ ಮತ್ತು ಹಸುಗಳಲ್ಲಿ ಅವು ಗಬ್ಬಗಟ್ಟಿದ ಬಳಿಕ ಈಸ್ಟ್ರಿನ್ ಅಥವಾ ಈಸ್ಟ್ರೋಜನ್ ಚೋದಕಗಳು ಉತ್ಪತ್ತಿಯಾಗುವುದು. ಇದನ್ನು ಸಹ ಇಲಿ ಹಾಗೂ ಚಿಟ್ಟಿಲಿಗಳನ್ನು ಉಪಯೋಗಿಸಿಕೊಂಡು ಗರ್ಭಾವಸ್ಥೆಯನ್ನು ಕಂಡುಹಿಡಿಯ ಬಹುದು. ಸ್ವಲ್ಪವೇ ಗಂಜಲವನ್ನು ಪ್ರಯೋಗದ ಹೆಣ್ಣು ಪ್ರಾಣಿಗಳಿಗೆ ಸೂಜಿಯ ಮೂಲಕ ದೇಹದೊಳಗೆ ಸೇರಿಸಿದರೆ ಇವುಗಳ ಯೋನಿದ್ವಾರದ ಮೇಲುಪೊರೆಯ ಕಣಗಳಲ್ಲಿ ವಿಶಿಷ್ಟವಾದ ಬದಲಾವಣೆಗಳುಂಟಾಗುವುವು. ಅದರ ಗಾಜುಫಲಕ ಮೇಲಿನ ಬಳಿತವನ್ನು (ಸ್ಮಿಯರ್) ಬಣ್ಣವೇರಿಸಿ ಸೂಕ್ಷ್ಮದರ್ಶಕದಡಿ ಈ ಬದಲಾವಣೆಗಳನ್ನು ನೋಡಬಹುದು. ಹೆಣ್ಣುದುರೆಯಲ್ಲಿ ಗಂಡಿನೊಡನೆ ಸಂಗಮವಾದ 42 ದಿವಸಗಳೊಳಗೆ ಈ ಪರಿಣಾಮ ಕಾಣಬರುವುದು. ಆದರೆ ಗರ್ಭನಿದಾನ ಪರೀಕ್ಷೆಯನ್ನು 60–65 ದಿನಗಳ ಬಳಿಕ ಮಾಡಿದರೆ ಕುದುರೆ ಗಂಜಲದಲ್ಲಿ ಈಸ್ಟ್ರಿನ್ ಅಂಶ ಹೆಚ್ಚಾಗಿರುವುದು. ಹಸುವಿನಲ್ಲಿ ಗಂಜಲದ ಮೂಲಕ ಹೊರ ಹೋಗುವ ಈಸ್ಟ್ರಿನ್ ತೀರ ಕಡಿಮೆ ಇರುವುದು. ಆದ್ದರಿಂದ 90 ದಿನಗಳವರೆಗೂ ಒಳ್ಳೆಯ ಪರಿಣಾಮ ಕಾಣಬರದು. ಮೇಲಾಗಿ ಒಂದೊಂದು ಹಸುವಿನಲ್ಲಿ 175 ದಿನಗಳವರೆಗೂ ಸರಿಯಾದ ಪರಿಣಾಮ ಕಾಣಿಸದು.

ಈ ರೀತಿಯಲ್ಲಿ ಈ ಗರ್ಭನಿದಾನ ಪರೀಕ್ಷೆಗಳು ಬಹಳ ಸೂಕ್ಷ್ಮತರವಾದವು. ನಾರ್ವೆಯಲ್ಲಿ ಇತ್ತೀಚೆಗೆ ಬಹಳ ಗುರುತರವಾದ ಪರೀಕ್ಷೆಯೊಂದನ್ನು ರೂಪಿಸಿರುವರು. ಹಂದಿಗಳ ಗಬ್ಬದ ಅವಸ್ಥೆಯನ್ನು ತಿಳಿಯಲು ಈ ಪರೀಕ್ಷೆಯನ್ನು ಮಾಡಬಹುದು. ಈ ಪರೀಕ್ಷೆಗೆ ಒಂದು ಗಂಟೆ ಹಿಡಿಯುವುದಲ್ಲದೇ ಬಹಳ ದುಬಾರಿ. ಇದಲ್ಲದೆ ಮಾಂಸಕ್ಕಾಗಿ ಬೀಜ ತೆಗೆದು ಬೆಳೆಸುವ ಕಂದುಬಣ್ಣದ ಕೆಪನ್ ಹುಂಜವನ್ನು ಗರ್ಭನಿದಾನಕ್ಕಾಗಿ ಉಪಯೋಗಿಸಿರುವರು. ಈ ಹಕ್ಕಿಯ ರೆಕ್ಕೆಗಳು ಸಾಮಾನ್ಯವಾಗಿ ಕಪ್ಪಾಗಿರುವುವು. ಈಸ್ಟ್ರಿನನ್ನು ಸೂಜಿಯ ಮೂಲಕ ದೇಹದೊಳಗೆ ಸೇರಿಸಿದರೆ ಬೆಳ್ಳಿಬಣ್ಣದ ಪಟ್ಟಿಗಳು ಬೆಳೆಯುವ ಪುಕ್ಕಗಳ ಮೇಲೆ ಕಾಣಿಸಿಕೊಳ್ಳುವುವು. ಗಂಜಲದಲ್ಲಿ ಈಸ್ಟ್ರಿನ್

ಅಂಶವಿದ್ದರೆ ಸೂಕ್ಷ್ಮದರ್ಶಕದಡಿ ನೋಡಿ ನಿರ್ಧಾರಮಾಡಬಹುದು. ಈ ಪರೀಕ್ಷೆಗೆ ಸುಮಾರು 48 ಗಂಟೆ ಹಿಡಿಯುವುದು. ಅಮೆರಿಕ ಸಂಯುಕ್ತಸಂಸ್ಥಾನಗಳಲ್ಲಿ ಅತಿಶಬ್ದದಿಂದ (ಅಲ್ಟ್ರಾಸಾನಿಕ್ಸ್) ಕುರಿಗಳ ಗರ್ಭನಿದಾನ ಪರೀಕ್ಷೆ ಮಾಡುವರು. ಈ ಪರೀಕ್ಷೆ ಮಾಡುವಾಗ ಉಂಟಾಗುವ ಎಕ್ಸ್‌ಕಿರಣಗಳು ಪಿಂಡಕ್ಕೆ ಯಾವುದೇ ರೀತಿಯ ದುಷ್ಪರಿಣಾಮವನ್ನುಂಟು ಮಾಡುವುದಿಲ್ಲ.

**ಗಬ್ಬದ ಪರೀಕ್ಷೆ:** ಗುದದ್ವಾರದ ಮೂಲಕ ಕೈಯಿಟ್ಟು ನೆಟ್ಟಗರುಳಿನ ಕೆಳಗಿರುವ ಗರ್ಭಕೋಶವನ್ನು ಕೈಬೆರಳುಗಳ ಮೂಲಕ ಮುಟ್ಟಿ ಪಿಂಡ ಬೆಳೆಯುತ್ತಿರುವ ಗರ್ಭದ ಶೃಂಗ, ಪಿಂಡದ ಬೆಳವಣಿಗೆಗಳನ್ನು ತಿಳಿಯಬಹುದು. ದೊಡ್ಡ ಗಾತ್ರದ ಸಾಕುಪ್ರಾಣಿಗಳಲ್ಲಿ ಈ ವಿಧಾನವನ್ನು ಅನುಸರಿಸಬಹುದು. ಉದಾಹರಣೆಗೆ, ಕುದುರೆ ಮತ್ತು ಹಸು. ಇದು ಅಷ್ಟು ಸುಲಭದ ಕೆಲಸವಲ್ಲ. ಗರ್ಭಕೋಶದ ಆಕಾರ, ರಚನೆ, ಗರ್ಭಧಾರಣೆ, ಪಿಂಡದ ಬೆಳವಣಿಗೆ ಹಾಗೂ ಪ್ರಸವಶಾಸ್ತ್ರಜ್ಞರು ಮಾಡುವ ಕೆಲಸವಿದು. ಕುಶಲಿಗಳಲ್ಲದವರು ಈ ಪರೀಕ್ಷೆಯನ್ನು ತಾವೇ ಮಾಡಲು ಹೋದರೆ ಪ್ರಾಣಿಗೆ ಅನೇಕ ರೀತಿಯ ಹಾನಿಗಳುಂಟಾಗಬಹುದು. ಪಿಂಡದ ಗುಂಡಿಗೆ ಒಡೆದು ಪಿಂಡ ಸಾಯಬಹುದು. ನೆಟ್ಟಗರುಳಿನಲ್ಲಿ (ರೆಕ್ಟಂ) ತೂತು ಉಂಟಾಗಬಹುದು. ಹಸು ಕಂದು ಹಾಕುವುದು. ಇತರ ಚಿಕ್ಕಪ್ರಾಣಿಗಳಲ್ಲಿ ಉದರಭಾಗದಲ್ಲಿ ಪಿಂಡದ ಬೆಳವಣಿಗೆಯನ್ನು ಗಮನಿಸಿ ಗಬ್ಬದ ಅವಧಿಯನ್ನು ನಿರ್ಧರಿಸುವರು.

ಪ್ರಾಣಿ ಗಬ್ಬವಾದ ಮೇಲೆ ಅದರ ಗರ್ಭಕೋಶ, ಅಂಡಾಶಯಗಳು ಮತ್ತು ದೇಹದ ಅಂಗಾಂಶಗಳೆಲ್ಲ ಅನೇಕ ವಿಧದಲ್ಲಿ ಗಬ್ಬದ ಪ್ರಭಾವಕ್ಕೆ ಒಳಗಾಗುತ್ತವೆ. ಮರಿಹಾಕಿದ ಮೇಲೆ ಈ ಪ್ರಭಾವಗಳಿರುವುದಿಲ್ಲ. ಆದರೆ ಕೆಲವಾರು ಸೂಕ್ಷ್ಮ ಬದಲಾವಣೆಗಳು ಆಜೀವ ಪರ್ಯಂತ ಇರುತ್ತವೆ. ಉದಾಹರಣೆಗೆ ಕೆಚ್ಚಲು ದೊಡ್ಡದಾಗುವುದು ಮತ್ತು ಗರ್ಭಕೋಶ ವಿಶಾಲವಾಗುವುದು. ಆದರೂ ಮರಿ ಹಾಕಿದ ನಾಲ್ಕು ವಾರಗಳ ಅನಂತರ ಇವುಗಳೆಲ್ಲ ಸಾಮಾನ್ಯಸ್ಥಿತಿಗೆ ಬರುವುವು. ಕೆಚ್ಚಲುಗಳಲ್ಲಿ ಮಾತ್ರ ಯಾವ ಬದಲಾವಣೆಯೂ ಆಗದೆ ಹಾಲು ಉತ್ಪತ್ತಿಯಾಗುತ್ತಾ ಹೋಗುತ್ತದೆ. ಒಂದೇ ಮರಿ ಹಾಕುವ ಪ್ರಾಣಿಗಳಲ್ಲಿ ಗರ್ಭದ ಒಂದು ಕೋಡು ತನ್ನ ಸುರುಳಿಯಾಕಾರದಿಂದ ಬಿಡುಗಡೆಯಾಗಿ ನೆಟ್ಟಗಾಗುತ್ತದೆ. ಅಲ್ಲದೆ ಸಾಕಷ್ಟು ವಿಶಾಲವಾಗುತ್ತದೆ. ಉಳಿದ ಕೋಡಿನಲ್ಲಿ ಯಾವ ಬದಲಾವಣೆಯೂ ಕಾಣುವುದಿಲ್ಲ. ಹಲವಾರು ಮರಿಗಳನ್ನು ಹಾಕುವ ಪ್ರಾಣಿಗಳಲ್ಲಿ ಎರಡು ಕೋಡುಗಳೂ ವಿಶಾಲವಾಗಿ ಅವುಗಳಲ್ಲಿ ಪಿಂಡಗಳು ಬೆಳೆಯುವುವು. ಪಿಂಡ ಹೊತ್ತ ಕೋಡಿನಲ್ಲಿ ಅನೇಕ ಬದಲಾವಣೆಗಳು ಕಾಣಬರುತ್ತವೆ. ರಕ್ತಚಲನೆ ಹೆಚ್ಚಾಗುವುದು. ಗರ್ಭಕೋಶದ ಧಮನಿಯ ಗಾತ್ರ ಹೆಚ್ಚಿ ರಕ್ತದ ಮಿಡಿತ ಬಲವಾಗುವುದು. ಪಿಂಡ ಬೆಳೆಯುತ್ತ ಹೋದಂತೆ ಅದಕ್ಕೆ ಅನು ಮಾಡಿಕೊಡಲು ದೊಡ್ಡ ತಂತು (ಬ್ರಾಡ್ ಲಿಗಮೆಂಟ್) ಸಹ ಉದ್ದದಲ್ಲಿ ಬೆಳೆಯುತ್ತದೆ. ಇದರಿಂದ ಗರ್ಭಕೋಶ ಪಿಂಡದ ಭಾರವನ್ನು ಹೊತ್ತುಕೊಂಡು ಒಡಲಿನ ಮೇಲ್ಭಾಗದಲ್ಲಿರಲು ಅನುಕೂಲವಾಗುತ್ತದೆ. ಈ ರೀತಿ ಪಿಂಡ ಪ್ರವೃದ್ಧವಾಗುತ್ತಿರುವಂತೆ ಗರ್ಭಕೋಶದ ಮಾಂಸದ ಪೊರೆ ಬೆಳೆಯುವುದರಿಂದ ಶಕ್ತಿಯುತವಾಗುವುದಲ್ಲದೆ ದಪ್ಪವಾಗಿ ಗಟ್ಟಿಯಾಗುವುದು. ಇದರಿಂದ ಪಿಂಡದ ಭಾರವನ್ನು ಹೊರುವ ಶಕ್ತಿಯೂ ಇದಕ್ಕೆ ಬರುತ್ತದೆ. ಗರ್ಭಕೋಶದ ಲೋಳೆಪೊರೆಯಲ್ಲಿ ಗಮನೀಯ ಬದಲಾವಣೆಗಳಾಗುವುವು. ಹರಡಿದ ಜರಾಯುವನ್ನು ಪಡೆದಿರುವ ಪ್ರಾಣಿಗಳಾದ ಕುದುರೆ ಮತ್ತು ಹಂದಿಗಳಲ್ಲಿ ಲೋಳೆಪೊರೆ ದಪ್ಪವಾಗುವುದು; ಬಹಳ ರಕ್ತಪ್ರಸಾರ ಸಹ ಆಗುವುದು. ಮೆಲುಕು ಹಾಕುವ ಪ್ರಾಣಿಗಳ ಗರ್ಭಕೋಶದಲ್ಲಿ ಪಿಂಡದ ಚೀಲ ಗುಂಡಿಗಳಂಥ ರಚನೆಗಳಿಂದ ಬಂಧಿತವಾಗಿರುವುದು. ಪಿಂಡ ಬೆಳೆದ ಹಾಗೆಲ್ಲ ಗುಂಡಿಗಳ ಗಾತ್ರ ಮತ್ತು ಸಂಖ್ಯೆ ಹೆಚ್ಚಾಗುತ್ತದೆ. ಇವು ಅಣಬೆಯಾಕಾರದಲ್ಲಿ ಬೆಳೆದು ಹಸುವಿನಲ್ಲಿ ಹೊರ ಉಬ್ಬಿನ ರೂಪದಲ್ಲಿಯೂ ಕುರಿಗಳಲ್ಲಿ ಒಳತಗ್ಗಿನ ರೂಪದಲ್ಲಿಯೂ ಇರುವುವು. ನಾಯಿ ಮತ್ತು ಬೆಕ್ಕುಗಳಲ್ಲಿ ಪಿಂಡದ ಚೀಲ ಗರ್ಭಕೋಶದ ಲೋಳೆಪೊರೆಗೆ ಕೆಲವು ಭಾಗಗಳಲ್ಲಿ ಅಂಟಿಕೊಂಡಿರುವುದು.

**ಗಬ್ಬದ ಲಕ್ಷಣಗಳು:** ಗಬ್ಬವಾದ ಮೇಲೆ ಮೊದಲೆರಡು ತಿಂಗಳು ಗರ್ಭಧಾರಣೆ ಆಗಿದೆಯೆ ಇಲ್ಲವೆ ಎಂದು ಗೊತ್ತಾಗುವುದಿಲ್ಲ. ಕಾಲಕಳೆದಂತೆ ಕೆಲವಾರು ಲಕ್ಷಣಗಳ ಸಹಾಯದಿಂದ ಗರ್ಭಧಾರಣೆಯನ್ನು ಗುರುತಿಸಬಹುದು. ಗರ್ಭಧರಿಸಿದ ಮೇಲೆ ಹೆಣ್ಣು ಗಂಡಿನೊಡನೆ ಕೂಡುವ ಬಯಕೆಯನ್ನು ತೋರಿಸುವುದಿಲ್ಲ. ಕೆಲವು ವೇಳೆ ಗಂಡಿನೊಂದಿಗೆ ಕೂಡುವ ಲಕ್ಷಣ ತೋರಿಸಬಹುದಾದರೂ ಆಗ ಹೋರಿಯಿಂದ ವೀರ್ಯ ಸಂಚಯನ ಮಾಡಿಸಿದರೆ ಹಸು ಕಂದು ಹಾಕುವುದು. ಬೆದರುವ, ಕಾಟಕೊಡುವ ಕುದುರೆಗಳು ಗಬ್ಬವಾದ ಮೇಲೆ ಸಾಧುವಾಗುವುವು. ಹಸುಗಳು ಸಹ ಸಾಧುವಾಗುವುವು. ಗಬ್ಬವಾದ ಮೇಲೆ ಪ್ರಾಣಿಗಳು ಮೈತುಂಬಿಕೊಳ್ಳುವುದು. ಕೆಲಸ ಮಾಡಲಾಗದೆ ಬೇಗನೆ ಬಳಲುವುವು. ಕುದುರೆಗಳು ಬೇಗನೆ ಬೆವರುವುವು. ಹಂದಿ ಮತ್ತು ನಾಯಿಗಳು ಆದಷ್ಟು ಆರಾಮವಾಗಿ ಇರಲು ಬಯಸುವುವು.

**ಒಡಲು:** ಒಡಲು ಮೈತುಂಬಿ ಗುಂಡಾಗುತ್ತದೆ. ಗಬ್ಬವಾದ ಮೇಲೆ ಕಾಣಿಸಿಕೊಳ್ಳುವ ಪ್ರಧಾನ ಲಕ್ಷಣವಿದು. ಒಳಗೆ ಪಿಂಡ ಬೆಳೆದಂತೆ ಉದರದ ಆಕಾರ ಬದಲಾವಣೆ ಹೊಂದುವುದು. ಈಯುವ ಕಾಲ ಬಂದಾಗ ಪಕ್ಕೆಗಳಲ್ಲಿ ಗುಳಿ ಬೀಳುವುದು. ಬೆನ್ನು ಮೂಳೆಗಳು ಮೇಲೆದ್ದು ಕಾಣುವುವು. ರೊಂಡಿಯ ಮಾಂಸಗಳು ಇಳಿಬೀಳುವುವು. ಪಿರ್ರೆಯ ಭಾಗ ಕುಗ್ಗುವುದು. ಬಾಲದ ಬುಡದ ಬಳಿ ಗುಳಿ ಚೆನ್ನಾಗಿ ತೋರುವುದು.

**ಕೆಚ್ಚಲು:** ಗಬ್ಬವಾದ ಮೇಲೆ ಕ್ರಮೇಣ ಕೆಚ್ಚಲು ದಪ್ಪವಾಗುತ್ತ ಹೋಗುವುದು. ಮೊಲೆತೊಟ್ಟುಗಳು ಉದ್ದವಾಗುವುದು. ಕೆಚ್ಚಲು ಮೇಲಿನ ಸುಕ್ಕು ಇಲ್ಲವಾಗುವುದು. ಮರಿಹಾಕುವ ಅವಧಿ ಹತ್ತಿರವಾದಂತೆ ಹಳದಿಬಣ್ಣದ ಅಂಟು ಹಾಲು ಉತ್ಪತ್ತಿಯಾಗುವುದು. ಹಾಲು ಕೊಡುತ್ತಿದ್ದ ಹಸುವಿನ ಹಾಗೂ ಕುದುರೆಯ ಕೆಚ್ಚಲು ಅವು ಗಬ್ಬವಾದ ಮೇಲೆ ಸ್ವಲ್ಪ ಒಣಗಿಹೋಗುವುವು. ಹಸುವಿನಲ್ಲಿ ಏಳು ತಿಂಗಳವರೆಗೆ, ಕುದುರೆಗಳಲ್ಲಿ ಎಂಟರಿಂದ ಒಂಬತ್ತು ತಿಂಗಳವರೆಗೆ ಹಾಲು ಕಡಿಮೆಯಾಗುತ್ತ ಹೋಗಿ, ಆಮೇಲೆ ನಿಂತುಹೋಗುವುದು.

ಗರ್ಭವನ್ನು ಹೊತ್ತ ಪ್ರಾಣಿಯ ದೇಹಭಾರ ಹೆಚ್ಚುತ್ತ ಹೋಗುವುದು. ಮೇಲಾಗಿ ಒಡಲಿನ ಅಕ್ಕಪಕ್ಕಗಳಲ್ಲಿ ಪಿಂಡದ ಓಡಾಟ ಕಾಣಬರುವುದು. ಕುದುರೆಯ ಒಡಲಿನ ಎಡಪಾರ್ಶ್ವದಲ್ಲಿ, ಹಸುವಿನ ಬಲಭಾಗದಲ್ಲಿ ಪಿಂಡದ ಆಂತರಿಕ ಓಡಾಟ ಕಾಣಬರುವುದು. ಗಬ್ಬ ಹೊತ್ತ ಪ್ರಾಣಿ ತಣ್ಣೀರು ಕುಡಿದಾಗ ಅಥವಾ ಸ್ವಲ್ಪ ದೂರ ನಡೆದು ಒಮ್ಮೆಗೆ ನಿಂತುಕೊಂಡಾಗ ಪಿಂಡ ಮಾತ್ರ ಓಡಾಡುವುದು. ಅಲ್ಲದೆ ಹಸುಗಳು ಎಡಕ್ಕೆ ಮತ್ತು ಕುದುರೆಗಳು ಬಲಕ್ಕೆ ಬೇಗನೆ ತಿರುಗಿದರೂ ಈ ಓಡಾಟ ಕಾಣುವುದು. ಮಲಗಿ ಎದ್ದ ಪ್ರಾಣಿಗಳ ಒಡಲಿನಲ್ಲಿ ಈ ಓಡಾಟವನ್ನು ಗುರುತಿಸಬಹುದು. ಚಿಕ್ಕಪ್ರಾಣಿಗಳಲ್ಲಿ ಈ ರೀತಿಯ ಪಿಂಡದ ಓಡಾಟ ಕಾಣಬರುವುದಿಲ್ಲ. ಆದರೆ ಒಡಲಿನ ಮೇಲೆ ಕೈಯಿಟ್ಟು ಸ್ವಲ್ಪ ಒತ್ತಿಹಿಡಿದರೆ ಪಿಂಡದ ಇರುವನ್ನು ಸುಲಭವಾಗಿ ಗುರುತಿಸಬಹುದು.

**ಗಬ್ಬವಾದ ಪ್ರಾಣಿಯ ಉಪಚಾರ:** ಗಬ್ಬವಾದ ಪ್ರಾಣಿಗೆ ಸಾಕಷ್ಟು ವ್ಯಾಯಾಮ ಮತ್ತು ಒಳ್ಳೆಯ ಆಹಾರ ಅವಶ್ಯಕ. ಪಿಂಡದ ಬೆಳವಣಿಗೆ ಹಾಗೂ ಪ್ರಾಣಿಯ ಆರೋಗ್ಯರಕ್ಷಣೆಗೆ ಬೇಕಾಗುವ ಸಮತೂಕ ಆಹಾರವನ್ನು ಕೊಡಬೇಕು. ಹೊಟ್ಟೆಯಲ್ಲಿ ಉರಿಯನ್ನು ಉಂಟುಮಾಡುವ, ಭೇದಿಯನ್ನು ಉಂಟುಮಾಡುವ ಆಹಾರವನ್ನು ಕೊಡಬಾರದು. ಆಹಾರದಲ್ಲಿ ತೀವ್ರ ಬದಲಾವಣೆ ಸಹ ಮಾಡಬಾರದು. ತಣ್ಣನೆಯ ಮತ್ತು ಶುಚಿಯಾದ ನೀರನ್ನು ಆದಷ್ಟು ಹೆಚ್ಚಾಗಿ ಕೊಡಬೇಕು. ಕುರಿಗಳು ತಿನ್ನುವ ಹಸುರು ಮೇವಿನಲ್ಲಿ ಸಾಕಷ್ಟು ನೀರಿನ ಅಂಶವಿರುವುದರಿಂದ ಅವಕ್ಕೆ ಹೆಚ್ಚು ನೀರು ಬೇಕಾಗುವುದಿಲ್ಲ. ಪಿಂಡದ ಚೀಲದ ರಕ್ಷಣೆಗೆ ನೀರು ಬಹಳ ಅವಶ್ಯಕವಾದುದು. ಅಲ್ಲದೆ ಕೆಚ್ಚಲ ಬೆಳವಣಿಗೆಗೂ ನೀರು ಬೇಕಾಗುವುದು.

**ಕುದುರೆ:** ಅದರ ಒಡಲು ದಪ್ಪವಾಗುವವರೆಗೂ ಯಥಾಪ್ರಕಾರ ಅದನ್ನು ಪೋಷಿಸಬೇಕು. ಅದಕ್ಕೆ ಬಹಳ ಹಗುರವಾದ ಕೆಲಸ ಕೊಡಬೇಕು. ಸಾಕಷ್ಟು ನೆರಳನ್ನು ಸಹ ಕಲ್ಪಿಸಬೇಕು. ಹನ್ನೊಂದು ತಿಂಗಳ ಮಧ್ಯಭಾಗ ಮುಟ್ಟಿದರೆ ಅದನ್ನು ಮಧ್ಯಾಹ್ನ ಹುಲ್ಲುಮೇಯಲು ಬಿಟ್ಟು ಅನಂತರ ಸ್ವಲ್ಪ ಕೆಲಸಮಾಡಿಸಬೇಕು. ಸವಾರಿಗೆ ಉಪಯೋಗಿಸಬಾರದು. ಕೊನೆಯ ತಿಂಗಳಲ್ಲಿ ಹೆಚ್ಚಿನ ಆಹಾರ ಹಾಗೂ ನೀರನ್ನು ಕೊಡಬೇಕು. ಒಳ್ಳೆಯ ಕುದುರೆಗೆ ಮಸಾಲೆ ಸೊಪ್ಪು ಹಾಗೂ ಹಸಿರು ಹುಲ್ಲನ್ನು ಒದಗಿಸಬೇಕು. ಮರಿಹಾಕುವ ದೊಡ್ಡಿಯನ್ನು ಶುಚಿಯಾಗಿ ಇಟ್ಟಿರಬೇಕು. ಕುದುರೆಗೆ ಮಾಲೀಸುಮಾಡುವಾಗ ನೋವಾಗದಂತೆ ಎಚ್ಚರವಹಿಸಬೇಕು. ಚೊಚ್ಚಲು ಬಸಿರಿನ ಕುದುರೆಯ ಒಡಲನ್ನು ಆಗಾಗ್ಗೆ ನಯವಾಗಿ ಒತ್ತಬೇಕು. ಮೇಲಾಗಿ ಕೆಚ್ಚಲು, ಒಡಲಿನ ಮೇಲೆ ಆಗಾಗ್ಗೆ ಕೈಯಾಡಿಸುತ್ತ ಇರಬೇಕು.

**ಹಸು:** ಗಬ್ಬವಾದ 7 ತಿಂಗಳ ಅನಂತರ ಹಾಲು ಕರೆಯುವುದನ್ನು ನಿಲ್ಲಿಸಬೇಕು. ಇದರಿಂದ ಪಿಂಡದ ಬೆಳವಣಿಗೆ ಚೆನ್ನಾಗಿ ಆಗುತ್ತದೆ. ಹಸುವನ್ನು ಯಾವ ರೀತಿಯ ಕಷ್ಟಕ್ಕೂ ಈಡುಮಾಡಬಾರದು. ಮಳೆ, ಗಾಳಿ, ಬಿಸಿಲುಗಳ ತೀವ್ರತೆಯಿಂದ ರಕ್ಷಿಸಬೇಕು. ಹೋರಿಯಿಂದ ಆಗುವ ತೊಂದರೆಯನ್ನು ತಪ್ಪಿಸಬೇಕು. ಭೇದಿ ಉಂಟುಮಾಡುವ ಹಾಗೂ ಮತ್ತುಬರಿಸುವ ಔಷಧಿಗಳನ್ನು ನಿಲ್ಲಿಸಬೇಕು. ಕರುಹಾಕುವ ಕಾಲಬಂದಾಗ ಯಾವ ಅಡೆತಡೆಗಳಿಲ್ಲದ ಒಂದು ಕೊಠಡಿಯಲ್ಲಿ ಈಯಲು ಬಿಡಬೇಕು.

**ಕುರಿ ಮತ್ತು ಮೇಕೆ:** ಇವನ್ನು ಮರಿಹಾಕುವ ರೊಪ್ಪದಲ್ಲಿಟ್ಟು ಎಲ್ಲ ವಿಷಯಗಳಲ್ಲಿಯೂ ಗಮನ ಹರಿಸಬೇಕು. ಅವನ್ನು ಒರಟಾಗಿ ಕಾಣದೆ ಓಡಾಡಿಸದೆ ಇಡಬೇಕು. ನಾಯಿಯ ಕಾಟವನ್ನು ತಪ್ಪಿಸಬೇಕು.


**ಹಂದಿ:** ಇವನ್ನು ಹಳೆಯ ಮನೆಯೊಂದರಲ್ಲಿ ಇಡಬೇಕು. ರಾತ್ರಿಯ ವೇಳೆಯಲ್ಲಿ ಒಳ್ಳೆಯ ಆಹಾರ ಹಾಗೂ ತಳಹಾಸುಗಳನ್ನು ಕೊಡಬೇಕು. ಬೇರೆ ಯಾವ ರೀತಿಯ ತೊಂದರೆಯೂ ಆಗದಂತೆ ನೋಡಿಕೊಳ್ಳಬೇಕು. ಮರಿ ಹಾಕುವ ಹಂದಿಗಳನ್ನು ಬೇರೆ ಬೇರೆಯಾಗಿ ಉಣಿಸಬೇಕು. ಇಲ್ಲದಿದ್ದರೆ ಒಂದೊಂದು ಹಂದಿಗೂ ಸರಿಯಾಗಿ ಆಹಾರ ಸಿಗದು.

**ನಾಯಿ:** ಸರಿಯಾಗಿ ಓಡಾಡಿಸಬೇಕು. ಒಳ್ಳೆಯ ಆಹಾರ, ಪಿಷ್ಟರಹಿತ ತಿಂಡಿ, ಆಗಾಗ್ಗೆ ಯಕೃತ್ತಿನ ಚೂರುಗಳನ್ನು ಅಥವಾ ಬೇಯಿಸಿದ ಯಕೃತ್ತನ್ನು ಕೊಡಬೇಕು. ಬೆಚ್ಚನೆಯ ಸ್ಥಳಗಳಲ್ಲಿ ಇವನ್ನು ಇಟ್ಟು ತಳಹಾಸು ಹಾಗೂ ಮೆತ್ತೆಯನ್ನು ಕೊಡಬೇಕು. ಹಾಸಿಗೆ ಹಾಗೂ ಹಚ್ಚಡಗಳನ್ನು ಹಾಕಿ ಬೆಚ್ಚಗೆ ಮಲಗಿಸಬೇಕು. (ಜಿ.ಆರ್.ಆರ್.ಎಸ್.)

**ಗರ್ಭೋನ್ಮಾದ : ನೋಡಿ: ಉನ್ಮಾದ**

**ಗರ್ಲಾಫ್ಕ :** ಸೋವಿಯೆತ್ ಸಮಾಜವಾದಿ ಗಣರಾಜ್ಯ ಒಕ್ಕೂಟ 1991ರ ಡಿಸೆಂಬರ್ 21 ರಂದು ವಿಘಟನೆ ಹೊಂದಿ ಉಕ್ರೇನಿಯನ್ ಗಣರಾಜ್ಯ ಸೋವಿಯೆತ್ ಒಕ್ಕೂಟ ಸೇರಿತು. ಡನೆಟ್ಸ್ ಆಬ್ಲಾಸ್ಟ್‌ನಲ್ಲಿ (ಆಡಳಿತ ವಿಭಾಗ) ಇರುವ ಒಂದು ಪಟ್ಟಣ. ಡನೆಟ್ಸ್ಕ್ ನದೀಕಣಿವೆಯ ಕೈಗಾರಿಕಾ ಪ್ರದೇಶದ ಮಧ್ಯಭಾಗದಲ್ಲಿದೆ. ಡನೆಟ್ಸ್ಕ್ ನಗರಕ್ಕೆ 40 ಕಿಮೀ ದೂರದಲ್ಲಿದೆ. 1867ರಲ್ಲಿ ಇದನ್ನು ಗಣಿವಸತಿಯಾಗಿ ಸ್ಥಾಪಿಸಲಾಯಿತು. 1932ರಲ್ಲಿ ಇದು ಪಟ್ಟಣವಾಯಿತು; ಈಗ ಈ ಪ್ರದೇಶದ ಅತ್ಯಂತ ದೊಡ್ಡ ಕಲ್ಲಿದ್ದಲು ಗಣಿ ಕೇಂದ್ರಗಳಲ್ಲೊಂದಾಗಿದೆ. ವಿಶ್ವದಲ್ಲೆ ಅತ್ಯಂತ ಆಳವಾದ ಕಲ್ಲಿದ್ದಲು ಕುಳಿಗಳ ಪೈಕಿ ಕೆಲವು ಇಲ್ಲಿವೆ. ಕಲ್ಲಿದ್ದಲು ಗಣಿ ಯಂತ್ರ ತಯಾರಿಸುವ ದೊಡ್ಡ ಎಂಜಿನಿಯರಿಂಗ್ ಕೈಗಾರಿಕೆಯೂ ರಸಾಯನ ಕೈಗಾರಿಕೆಯೂ ಇಲ್ಲಿ ಬೆಳೆದಿವೆ. ಅನೇಕ ರೈಲುಮಾರ್ಗಗಳು ನಗರಕ್ಕೂ ಸುತ್ತಮುತ್ತಲಿನ ನಗರಗಳಿಗೂ ಸಂಪರ್ಕ ಕಲ್ಪಿಸಿವೆ. (ವಿ.ಜಿ.ಕೆ.)

**ಗಲ್ :** ಕರ್ಯಾಡ್ರಿಯಿಫಾರ್ಮೀಸ್ ಗಣದ ಲ್ಯಾರಿಡೀ ಕುಟುಂಬಕ್ಕೆ ಸೇರಿದ ಹಲವಾರು ಜಾತಿಯ ಸಾಗರವಾಸಿ ಹಕ್ಕಿಗಳಿರುವ ಸಾಮಾನ್ಯ ಬಳಕೆಯ ಇಂಗ್ಲಿಷ್ ಹೆಸರು. ಸುಮಾರು 40 ಕ್ಕೂ ಹೆಚ್ಚು ಬಗೆಯ ಗಲ್ ಹಕ್ಕಿಗಳಿವೆ. ಟರ್ನ್ ಹಕ್ಕಿಗಳಿಗೆ ಬಹಳ ಹತ್ತಿರದ ಸಂಬಂಧಿಗಳಿವು. ಪ್ರಪಂಚದ ಮೇರು ಪ್ರದೇಶಗಳು ಮತ್ತು ಸಮಶೀತೋಷ್ಣ ವಲಯಗಳಲ್ಲೆಲ್ಲ ಇವುಗಳ ವ್ಯಾಪ್ತಿಯಿದೆ. ಕೆಲವು ಬಗೆಯವು ಉಷ್ಣಪ್ರದೇಶಗಳಲ್ಲೂ (ಚಳಿಗಾಲದಲ್ಲಿ) ಕಾಣಬರುತ್ತವೆ. (ಜಿ.ಎಸ್.ಆರ್.)



ಲೇರಸ್ ಬ್ರುನಿಸಿಫ್ಯಾಲಸ್

ವಿವಿಧ ಬಗೆಯ ಗಲ್ ಹಕ್ಕಿಗಳಲ್ಲಿ ಕೆಲವು ಭಿನ್ನತೆಗಳಿರುವುವಾದರೂ ಎಲ್ಲಕ್ಕೂ ಸಮಾನವೆನಿಸುವ ಹಲವಾರು ಗುಣಲಕ್ಷಣಗಳನ್ನು ನೋಡಬಹುದು : ಸುಪ್ರಮಾಣ ಬದ್ಧವಾದ ದೇಹ, ಉದ್ದವಾದ ಮತ್ತು ಬಲಯುತವಾದ ರೆಕ್ಕೆಗಳು, ಅತ್ಯಂತ ದೃಢವಾದ ಮತ್ತು ತುದಿಯಲ್ಲಿ ಕೊಕ್ಕೆಯಂತೆ ನಸುಬಾಗಿದ ಕೊಕ್ಕು, ಜಾಲಪಾದ, ಇತ್ಯಾದಿ. ದೇಹದ ಬಣ್ಣ ಪ್ರೌಢಹಕ್ಕಿಗಳಲ್ಲಿ ಸಾಮಾನ್ಯವಾಗಿ ಬಿಳಿ. ಆದರೆ ಕೆಲವು ಬಗೆಗಳಲ್ಲಿ ಬೆನ್ನು, ರೆಕ್ಕೆ ಮತ್ತು ತಲೆಗಳು ಬೂದಿ, ಕಪ್ಪು, ಕಂದು ಮುಂತಾದ ವರ್ಣಗಳನ್ನು ಪಡೆದಿರಬಹುದು. ಮರಿಹಕ್ಕಿಗಳು ಕಂದುಬಣ್ಣಕ್ಕಿರುತ್ತವೆ. ವಯಸ್ಕ ಹಾಗೂ ಮರಿಹಕ್ಕಿಗಳು ಒಂದೆಡೆ ಕೂಡಿದಾಗ ಬೇರೆ ಬೇರೆ ಪ್ರಭೇದಗಳು ಸೇರಿವೆಯೆಂಬ ಭಾವನೆ ಬರುವಷ್ಟು ಬಣ್ಣವ್ಯತ್ಯಾಸವನ್ನು ಇವು ಪ್ರದರ್ಶಿಸುತ್ತವೆ. ಕಂದುಬಣ್ಣಕ್ಕಿರುವ ಮರಿಹಕ್ಕಿ ವರ್ಷಕ್ಕೆರಡು ಸಲ ತನ್ನ ಗರಿಗಳನ್ನು ಬದಲಿಸುತ್ತದೆ. ಪ್ರತಿಸಲ ಗರಿಯುದುರಿದಾಗಲೂ ದೇಹದ ಬಣ್ಣ ಕಂದಿನಿಂದ ತಿಳಿಯಾಗುತ್ತ ಬಂದು ಸುಮಾರು 3 ವರ್ಷಗಳ ಅನಂತರ ವಯಸ್ಕ ಹಕ್ಕಿಯ ಬಣ್ಣವಾದ ಬಿಳಿ ಬಣ್ಣಕ್ಕೆ ತಿರುಗುತ್ತದೆ.

ಗಲ್ ಹಕ್ಕಿಗಳು ಬಲು ಸೊಗಸಾಗಿ ಶ್ರಮವಿಲ್ಲದೆ ಗಾಳಿಯಲ್ಲಿ ತೇಲುವಂತೆ ಹಾರಬಲ್ಲವು. ಸಾಮಾನ್ಯವಾಗಿ ಸಮುದ್ರತೀರ, ರೇವುಪಟ್ಟಣಗಳ ಬಳಿಯೇ ಇವುಗಳ ವಾಸ. ಆದಷ್ಟು ನೆಲದ ಸಮೀಪವೇ ಇರುವುದು ಇವುಗಳಿಗೆ ಇಷ್ಟವಾದರೂ ಆಗಿಂದಾಗ್ಗೆ ಹಡಗು, ದೋಣಿಗಳನ್ನು ಹಿಂಬಾಲಿಸಿ ಸಾಗರಗಳ ಮೇಲೆ ಹಲವಾರು ಕಿಲೋಮೀಟರ್‌ಗಳಷ್ಟು ದೂರ ಸಾಗುವುದೂ ಉಂಟು. ಮೀನು ಮತ್ತು ಸಾಗರವಾಸಿ ಪ್ರಾಣಿಗಳೇ ಇವುಗಳ ಮುಖ್ಯ ಆಹಾರ. ಆದರೆ ಬೇರೆ ಬಗೆಯ ಆಹಾರವನ್ನೂ ತಿನ್ನದೆ ಇಲ್ಲ. ಚೆನ್ನಾಗಿ ಈಜಬಲ್ಲವಾದರೂ ಟರ್ನ್ ಮುಂತಾದ ಇತರ ಹಕ್ಕಿಗಳಂತೆ ಸಾಗರಗಳಲ್ಲಿ ಈಜುವ ಮೀನು ಮುಂತಾದ ಪ್ರಾಣಿಗಳನ್ನು ಹಿಡಿವ ಚಾಣಾಕ್ಷತೆ ಇವಕ್ಕೆ ಇಲ್ಲ. ಅಕಸ್ಮಾತ್ತಾಗಿ ಸತ್ತು ನೀರಮೇಲೆ ತೇಲುವ ಇಲ್ಲವೆ ಗಾಯಗೊಂಡು ಚೆನ್ನಾಗಿ ಈಜಲಾರದ ಪ್ರಾಣಿಗಳನ್ನು ಮಾತ್ರ ಚುರುಕಾಗಿ ಹಿಡಿಯಬಲ್ಲವು. ಈ ಕಾರಣದಿಂದಲೇ ಗಲ್‌ಗಳು ಸಾಮಾನ್ಯವಾಗಿ ಮನುಷ್ಯರ ವಾಸ್ತವ್ಯವಿರುವ ಸ್ಥಳಗಳಲ್ಲೆ ಇದ್ದು ಅವರು ಎಸೆಯುವ ಕೊಳೆತ ಮೀನು ಮತ್ತಿತರ ಆಹಾರವನ್ನು ತಿನ್ನುತ್ತ ವಾಸಿಸುತ್ತವೆ. ತೀರಪ್ರದೇಶಗಳ ಬಂದರುಗಳು, ಕೊಳಚೆ ಸ್ಥಳಗಳು, ಚರಂಡಿ, ಹೊಲಸು ಇರುವೆಡೆಯೆಲ್ಲೆಲ್ಲ ಇವು ಇರುತ್ತವೆ. ಈ ಗುಣದಲ್ಲಿ ಕಾಗೆಗಳನ್ನು ಹೋಲುವ ಗಲ್‌ಗಳು ಮನುಷ್ಯನಿಗೆ ಅತ್ಯಂತ ಉಪಕಾರಿಯೆನಿಸಿವೆ. ಕೆಲವೊಮ್ಮೆ ಒಳನಾಡಿನ ಕೃಷಿಭೂಮಿಯಲ್ಲೂ ಗಲ್‌ಗಳನ್ನು ಕಾಣಬಹುದು. ಅಲ್ಲಿ ಸಿಗಬಹುದಾದ ಕ್ರಿಮಿಕೀಟಗಳನ್ನು ಇವು ಹಿಡಿದು ತಿನ್ನುತ್ತವೆ. ಗಲ್‌ಗಳಿಗೆ ಕಪ್ಪೆಚಿಪ್ಪಿನ ಪ್ರಾಣಿಗಳೆಂದರೆ ಬಲು ಇಷ್ಟ. ಚಿಪ್ಪಿನೊಳಗಿನ ಪ್ರಾಣಿಗಳನ್ನು ಹೊರತೆಗೆಯಲು ಸುಲಭವಾಗಿ ಆಗದೆಂದು ಅರಿತಿರುವ ಇವು ಚಿಪ್ಪನ್ನು ಹಿಡಿದುಕೊಂಡು ಮೇಲಕ್ಕೆ ಹಾರಿ ಅಲ್ಲಿಂದ ನೆಲದ ಮೇಲಿನ ಕಲ್ಲು ಮುಂತಾದ ಯಾವುದಾದರೂ ಗಟ್ಟಿಯಾದ ವಸ್ತುವಿನ ಮೇಲೆ ಬೀಳಿಸಿ ಚಿಪ್ಪು ಒಡೆಯುವಂತೆ ಮಾಡುತ್ತವೆ. ತತ್‌ಕ್ಷಣವೇ ಅಲ್ಲೆ ಸುತ್ತ ಇರುವ ಬೇರೆ ಹಕ್ಕಿಯೊಂದು ಆಹಾರದ ಮೇಲೆ ಎರಗುವ ಮುನ್ನವೇ ಕೆಳಕ್ಕೆ ಧಾವಿಸಿ ಚಿಪ್ಪಿನಿಂದ ಹೊರಬಂದ ಪ್ರಾಣಿಯನ್ನು ಭಕ್ಷಿಸುತ್ತವೆ. ಚಿಪ್ಪನ್ನು ಒಡೆಯಲು ಕೆಲವೊಮ್ಮೆ ಕಾರು, ಮನೆ, ಮಾಡು, ರಸ್ತೆಗಳ ಮೇಲೂ ಹಾಕುವುದುಂಟು. ಕೆಲವು ಬಗೆಯ ಗಲ್‌ಗಳು ಬೇರೆ ಹಕ್ಕಿಗಳ ಮೊಟ್ಟೆ, ಮರಿಹಕ್ಕಿ, ಕೆಲವೊಮ್ಮೆ ವಯಸ್ಕ ಹಕ್ಕಿಗಳನ್ನು ತಿನ್ನುವುದುಂಟು.

ಬೇರೆ ಬಹುಪಾಲು ಬಗೆಯ ಹಕ್ಕಿಗಳಿಗೆ ಹೋಲಿಸಿದರೆ ಗಲ್‌ಗಳು ಬಹಳ ವರ್ಷ ಬದುಕಿರುತ್ತವೆ. ಇವುಗಳ ಆಯಸ್ಸು ಸುಮಾರು 25–30 ವರ್ಷಗಳು. ಇವು ಸಂಘಜೀವಿಗಳು. ಪ್ರದೇಶದಿಂದ ಪ್ರದೇಶಕ್ಕೆ ಸಾಗುವಾಗ, ಆಹಾರಕ್ಕಾಗಿ ಬೇಟೆಯಾಡುವಾಗ, ವಿರಮಿಸುವಾಗ ಹೀಗೆ ಎಲ್ಲ ಚಟುವಟಿಕೆಗಳಲ್ಲೂ ಗುಂಪುಗಳಲ್ಲಿಯೇ ಇರುತ್ತವೆ. ಯಾವಾಗಲೂ ಕರ್ಕಶವಾಗಿ ಕೂಗುತ್ತ ಆಹಾರಕ್ಕಾಗಿ ಪರಸ್ಪರ ಜಗಳವಾಡುತ್ತ ಹಾರಾಡುತ್ತಿರುತ್ತವೆ. ಸಂತಾನೋತ್ಪತ್ತಿಯ ಕಾಲದಲ್ಲಂತೂ ಈ ಸ್ವಭಾವ ಹೆಚ್ಚು ವ್ಯಕ್ತವಾಗುತ್ತದೆ. ಒಂದೇ ಪ್ರಭೇದದ ಹಲವಾರು ಹಕ್ಕಿಗಳು ಗುಂಪುಗೂಡುವುದು ಸಾಮಾನ್ಯವಾದರೂ ಕೆಲವೊಮ್ಮೆ ಬೇರೆ ಪ್ರಭೇದಗಳೊಂದಿಗೆ ಟರ್ನ್, ಕಾರ್ಮೊರಾಂಟ್, ಪೆಲಿಕನ್ ಮುಂತಾದ ಬೇರೆ ಜಾತಿಯ ಹಕ್ಕಿಗಳೊಂದಿಗೆ ಇರುವುದೂ ಉಂಟು. ಮೊಟ್ಟೆಯಿಡುವ ಕಾಲದಲ್ಲಿ ಯಾವುದಾದರೂ ಸುರಕ್ಷಿತವಾದ ದ್ವೀಪವನ್ನು ಆರಿಸಿಕೊಂಡು ನೆಲದಮೇಲೆ ಇಲ್ಲವೆ ಸಣ್ಣಗಾತ್ರದ ಮರಗಳ ಮೇಲೆ ಕಡ್ಡಿ, ಸಮುದ್ರದ ಸಸ್ಯಗಳನ್ನು ಉಪಯೋಗಿಸಿ ಗೂಡುಗಳನ್ನು ನಿರ್ಮಿಸುತ್ತವೆ. ಕೆಲವು ಪ್ರಭೇದಗಳು (ಅಮೆರಿಕದ ಕ್ಯಾಲಿಫೋರ್ನಿಯ ಗಲ್, ಫ್ರಾಂಕ್ಲಿನ್ಸ್ ಗಲ್, ಚೀನದ ಸಾಂಡರ್ಸ್ ಗಲ್, ನ್ಯೂಜಿಲೆಂಡಿನ ಬಲರ್ಸ್ ಗಲ್) ಒಳನಾಡಿನ ಸರೋವರಗಳ ಬಳಿ ಗೂಡು ಕಟ್ಟುತ್ತವೆ. ಭಾರತದಲ್ಲಿ ಕಾಣಬರುವ ಕಂದು ತಲೆಯ ಗಲ್ ಹಕ್ಕಿ ಹಿಮಾಲಯದ ಲಡಾಕ್, ಟಿಬೆಟ್, ಮಾನಸಸರೋವರಗಳಲ್ಲಿ ಸಂತಾನೋತ್ಪತ್ತಿ ಮಾಡುತ್ತದೆ. ಉತ್ತರಾರ್ಧಗೋಳದ ಸಾಗರವಾಸಿಯಾದ ಕಿಟಿವೇಕ್ ಎಂಬ ಹೆಸರಿನ ಗಲ್ ಚಳಿಗಾಲದಲ್ಲಿ ಬ್ರಿಟನ್ನಿನವರೆಗೆ ವಲಸೆ ಬಂದು ಸಮುದ್ರತೀರಗಳಲ್ಲಿನ ಪ್ರಪಾತಗಳಲ್ಲಿ ಗೂಡುಕಟ್ಟಿ ಮರಿಮಾಡುತ್ತದೆ. ಬಹುಪಾಲು ಪ್ರಭೇದಗಳಲ್ಲಿ ಮೊಟ್ಟೆಗಳ ಸಂಖ್ಯೆ ಸೂಲಿಗೆ ಮೂರನ್ನು ಮೀರುವುದಿಲ್ಲ. ಮೊಟ್ಟೆಗಳ ಬಣ್ಣ ಕಂದು, ಮೇಲೆಲ್ಲ ಕಗ್ಗಂದು ಇಲ್ಲವೆ ಕಪ್ಪುಬಣ್ಣದ ಚುಕ್ಕೆಗಳಿರುತ್ತವೆ. ಗಂಡು ಹೆಣ್ಣು ಹಕ್ಕಿಗಳೆರಡೂ ಕಾವು ಕೊಟ್ಟು ಮರಿಮಾಡುವ ಮತ್ತು ಮರಿಗಳ ಪಾಲನೆಯ ಕೆಲಸವನ್ನು ಹಂಚಿಕೊಳ್ಳುತ್ತವೆ. ಅದೇ ತಾನೇ ಮೊಟ್ಟೆಯೊಡೆದು ಹೊರಬಂದ ಮರಿಹಕ್ಕಿಗಳು ಸ್ವಶಕ್ತಿಯಿಂದ ನಿಲ್ಲುವ ನಡೆದಾಡುವ ಸಾಮರ್ಥ್ಯವನ್ನು ಪಡೆದಿವೆಯಾದರೂ ಸಾಮಾನ್ಯವಾಗಿ ಪೂರ್ಣ ದೊಡ್ಡವಾಗುವವರೆಗೂ ತಂದೆತಾಯಿಗಳನ್ನು ಬಿಟ್ಟು ಕದಲುವುದಿಲ್ಲ. ಇವು ಸುಮಾರು 4–6 ವಾರಗಳಲ್ಲಿ ಹಾರುವ ಶಕ್ತಿ ಪಡೆಯುತ್ತವೆ.

ಸುಮಾರು 40ಕ್ಕೂ ಹೆಚ್ಚು ಬಗೆಯ ಗಲ್ ಹಕ್ಕಿಗಳಿವೆ ಎಂದು ಮೊದಲೇ ಹೇಳಿದೆ. ಇವುಗಳಲ್ಲಿ ಬಹುಮುಖ್ಯವಾದ ಕೆಲವು ಪ್ರಭೇದಗಳನ್ನು ಮುಂದೆ ವಿವರಿಸಲಾಗಿದೆ.

1. *ಲೇರಸ್ ಬ್ರುನಿಸಿಫ್ಯಾಲಸ್* (ಕಂದುತಲೆಯ ಗಲ್) : ಭಾರತದಲ್ಲಿ ಕಾಣಬರುವ ಬಗೆ ಇದು. ಕಾಡುಕಾಗೆ ಗಾತ್ರದ್ದು. ಬೂದಿಬಣ್ಣದ ಬೆನ್ನುಭಾಗ, ಬಿಳಿಯ ಹೊಟ್ಟೆಭಾಗ, ಕಾಫಿಬಣ್ಣದ ತಲೆ ಇದೆ. ಕರ್ಕಶವಾಗಿ ಕೀಯಾ ಎಂದು ಕೂಗುತ್ತ ಹಾರಾಡುತ್ತಿರುತ್ತದೆ.

2. *ಲೇರಸ್ ರಿಡಿಬಂಡಸ್* (ಕಪ್ಪು ತಲೆಯ ಗಲ್) : ಯುರೇಶಿಯದ ಸಮಶೀತೋಷ್ಣ ವಲಯಗಳಲ್ಲೆಲ್ಲ ಇದು ಸಾಮಾನ್ಯ. ಚಳಿಗಾಲದಲ್ಲಿ ಭಾರತಕ್ಕೂ ಬರುತ್ತದೆ. ಯುರೋಪಿನ ಕೃಷಿ ಭೂಮಿಗಳಲ್ಲಿನ ಕೀಟಗಳನ್ನು ತಿನ್ನುವುದರಿಂದ ಬಲು ಉಪಕಾರಿ ಎನಿಸಿದೆ.

3. *ಲೇರಸ್ ಮ್ಯಾರಿನಸ್* (ಕಪ್ಪು ಬೆನ್ನಿನ ಗಲ್) : ಉತ್ತರ ಅಟ್ಲಾಂಟಿಕ್ ಸಾಗರದ ತೀರಪ್ರದೇಶಗಳಲ್ಲಿ ಕಾಣಬರುತ್ತದೆ. ಗಲ್‍ಹಕ್ಕಿಗಳಲ್ಲೆಲ್ಲ ಅತಿದೊಡ್ಡದು. ಇದರ ರೆಕ್ಕೆ ಹರಡಿದಾಗ ಅಗಲ ಸುಮಾರು 1.5 ಮೀ ಗೂ ಹೆಚ್ಚು. ಬೇರೆ ಹಕ್ಕಿಗಳ ಮೊಟ್ಟೆ ಮರಿ ಮುಂತಾದುವನ್ನು ತಿನ್ನುವುದರಿಂದ ಒಂದು ರೀತಿಯ ಹಿಂಸ್ರ ಪಕ್ಷಿಯಂತಿದೆ.

4. *ಲೇರಸ್ ಅರ್ಜೆಂಟೇಟಸ್* (ಹೆರ್ರಿಂಗ್ ಗಲ್) : ಉತ್ತರಾರ್ಧಗೋಳದಲ್ಲೆಲ್ಲ ಬಲು ಸಾಮಾನ್ಯ.

5. *ಲೇರಸ್ ಪಿಪಿಕ್ಸ್‌ಕನ್* (ಫ್ರಾಂಕ್ಲಿನ್ಸ್ ಗಲ್) : ಉತ್ತರ ಅಮೆರಿಕದ ಒಳನಾಡಿನಲ್ಲಿ ವಾಸಿಸುತ್ತದೆ. ಹಿಂದೊಮ್ಮೆ ಕೃಷಿಪಿಡುಗುಗಳಾದ ಮಿಡತೆಗಳನ್ನು ಸಂಪೂರ್ಣವಾಗಿ ನಾಶಮಾಡಿ ಬೆಳೆಯನ್ನು ಉಳಿಸಿಕೊಟ್ಟವೆಂದು ಅಮೆರಿಕದ ಸಾಲ್ಟ್‌ಲೇಕ್ ನಗರಗಳಲ್ಲಿ ಈ ಪ್ರಭೇದದ ಗಲ್‍ಗಳಿಗೆ ಸ್ಮಾರಕವೊಂದನ್ನು ನಿರ್ಮಿಸಲಾಗಿದೆ.

6. *ಲೇರಸ್ ಕ್ಯಾಲಿಫೋರ್ನಿಕಸ್* (ಕ್ಯಾಲಿಫೋರ್ನಿಯ ಗಲ್) : ಉತ್ತರ ಅಮೆರಿಕದಲ್ಲಿನ ಪಶ್ಚಿಮ ಭಾಗಗಳಲ್ಲಿ ಬಲುಸಾಮಾನ್ಯ. ಅಲ್ಲಿನ ಒಳನಾಡಿನ ಸರೋವರಗಳಲ್ಲಿ ಸಂತಾನೋತ್ಪತ್ತಿ ಮಾಡುತ್ತದೆ.

7. *ಪ್ಯಾಗೊಫಿಲ ಎಬರ್ನಿಯ* (ಐವರಿ ಗಲ್) : ಗಲ್‍ಗಳಲ್ಲೆಲ್ಲ ಬಹುಶಃ ಅತ್ಯಂತ ಸುಂದರವಾದುದು. ಮೈಬಣ್ಣ ಅಚ್ಚಬಿಳಿ. ಕಾಲುಗಳು ಮಾತ್ರ ಕಪ್ಪು. ಆರ್ಕ್‌ಟಿಕ್ ಪ್ರದೇಶಗಳಲ್ಲಿ ವಾಸಿಸುತ್ತದೆ.

8. *ರಿಸ ಟ್ರೈಡ್ಯಾಕ್ಟೈಲ* (ಕಿಟಿವೇಕ್) : ಉತ್ತರಾರ್ಧಗೋಳದ ಸಾಗರಗಳಲ್ಲಿ ಕಾಣಬರುತ್ತದೆ. ಬ್ರಿಟನ್ನಿನ ಸಮುದ್ರತೀರದ ಪ್ರಪಾತಗಳಲ್ಲಿ ಸಂತಾನೋತ್ಪತ್ತಿ ಮಾಡುತ್ತದೆ. ಇದರ ಕಾಲುಗಳಲ್ಲಿ ಹಿಂಬೆರಳು ಇಲ್ಲ.

9. *ರೋಡೋಸ್ಪಿತಿಯ ರೋಸಿಯ* (ರೋಸಿಯೇಟ್ ಗಲ್) : ಆರ್ಕ್‌ಟಿಕ್ ಪ್ರದೇಶಗಳ ವಾಸಿ. ಗುಲಾಬಿ ಬಣ್ಣದ ರೆಕ್ಕೆ ಪುಕ್ಕಗಳಿಂದಾಗಿ ಸುಂದರವಾಗಿ ಕಾಣುತ್ತದೆ.

10. *ಕ್ಸೀಮ ಸ್ಯಾಬಿನೈ* (ಸ್ಯಾಬೈನ್ಸ್ ಗಲ್) : ಇದು ಕೂಡ ಆರ್ಕ್‌ಟಿಕ್ ಪ್ರದೇಶಗಳಲ್ಲಿ ಕಾಣಬರುವಂಥದು. ಇದರ ಬಾಲ ಕವಲೊಡೆದಿದೆ. ನೆಲದಮೇಲೆ ಚೆನ್ನಾಗಿ ಓಡಲೂಬಲ್ಲದು ಇದು.


11. *ಕ್ರೆಯಾಗ್ರಸ್ ಫರ್ಕೇಟಸ್* (ಕವಲುತೋಕೆ ಗಲ್) : ಗಲಾಪಗಸ್ ದ್ವೀಪಗಳ ಮೂಲವಾಸಿ. ಬಾಲ ಎರಡು ಭಾಗಗಳಾಗಿ ಸೀಳಿದೆ.

12. *ಗೇಬಿಯಾನಸ್ ಪ್ಯಾಸಿಫಿಕಸ್ (ಪೆಸಿಫಿಕ್ ಗಲ್)* : ಟಾಸ್ಮೇನಿಯ ಮತ್ತು ದಕ್ಷಿಣ ಆಸ್ಟ್ರೇಲಿಯಗಳಲ್ಲಿ ಸಂತಾನೋತ್ಪತ್ತಿ ಮಾಡುತ್ತದೆ. ದೇಹದ ಬಣ್ಣ ಬೂದಿ.

(ಜಿ.ಎಸ್.ಆರ್.)

**ಗಲಗು :** ಸೋರ್ಗಂ ಹ್ಯಾಲಪೆನ್ಸ್ ಎಂಬ ವೈಜ್ಞಾನಿಕ ಹೆಸರಿನ ಏಕದಳ ಸಸ್ಯ. ಪೋಯೇಸೀ ಕುಟುಂಬಕ್ಕೆ ಸೇರಿದೆ. ಯುರೋಪು ಮತ್ತು ಆಫ್ರಿಕದ ಮೆಡಿಟರೇನಿಯನ್ ಪ್ರದೇಶಗಳ ಮೂಲನಿವಾಸಿಯಾದ ಈ ಸಸ್ಯವನ್ನು ಮೊಟ್ಟಮೊದಲು ಕರ್ನಲ್ ಜಾನ್ಸನ್ ಎಂಬಾತ ತಂದು ಬೆಳೆಸಿದ್ದರಿಂದ ಇದನ್ನು ಜಾನ್ಸನ್ ಹುಲ್ಲು ಎಂದೂ ಕರೆಯುವುದುಂಟು. ದಪ್ಪವಾಗಿ ಎತ್ತರಕ್ಕೆ ಬೆಳೆಯುತ್ತದೆ. ಇದೊಂದು ಬಹುವಾರ್ಷಿಕ ಹುಲ್ಲು. ಇದಕ್ಕೆ ಅಗಲವಾದ ಎಲೆಗಳಿವೆ. ಎಲೆಯ ಮಧ್ಯನಾಳ ದಪ್ಪ ಮತ್ತು ಬಿಳುಪಾಗಿರುತ್ತದೆ. ಹೂಗಳು ಅಗಲವಾದ ಪ್ಯಾನಿಕಲ್ ಮಾದರಿಯ ಗೊಂಚಲಲ್ಲಿ ಜೋಡಣೆಗೊಂಡು ಅರಳಿದಾಗ ಎದ್ದುಕಾಣುತ್ತದೆ. ಬೀಜಗಳು ಬಲಿತಾಗ ಸಿಡಿದು ಪ್ರಸಾರವಾಗುತ್ತವೆ. ಇತರ ಹುಲ್ಲುಸಸ್ಯಗಳಲ್ಲಿರುವ ತೊಡಕು ಬೇರುಗಳ ಜೊತೆಗೆ ಇದಕ್ಕೆ ಅನೇಕ ಗುಪ್ತಕಾಂಡಗಳೂ ಇವೆ. ಗುಪ್ತಕಾಂಡಗಳ ಗೆಣ್ಣುಗಳಿಂದ ಕೊಂಬೆಗಳು ಹೊರಟು ಹೊಸಗಿಡಗಳಾಗಿ ಬೆಳೆಯುತ್ತವೆ. ಮಣ್ಣಿನಲ್ಲಿ 15–20 ಸೆಂ.ಮೀ ಕೆಳಕ್ಕೆ ಇವು ಅಡಗಿರುತ್ತವೆ. ಕಾಂಡ 7–15 ಸೆಂ.ಮೀ ಎತ್ತರಕ್ಕೆ ಬೆಳೆಯುತ್ತದೆ.

ನದಿಯ ಮೆಕ್ಕಲುಮಣ್ಣಿನ ಮತ್ತು ಎರೆಮಣ್ಣಿನ ಭೂಮಿಗಳಲ್ಲಿ ಗಲಗು ಚೆನ್ನಾಗಿ ಬೆಳೆಯುತ್ತದೆ. ಇದು ಚೆನ್ನಾಗಿ ಬೆಳೆಯಲು ಮಳೆ, ಹಳ್ಳಗಳಿಂದ ಉಕ್ಕುವ ನೀರು, ನೀರಾವರಿಯ ಪ್ರದೇಶ ಇತ್ಯಾದಿಗಳಿಂದ ಒದಗುವ ತೇವ ಆವಶ್ಯಕ. ಬಿಸಿಲನ್ನು ಬಯಸುವ ಈ ಸಸ್ಯ ಉಷ್ಣತೆ ಹೆಚ್ಚಾಗಿರುವೆಡೆ ಚೆನ್ನಾಗಿ ಬೆಳೆಯುತ್ತದೆ. ಸು.1/2 ಹೆಕ್ಟೇರಿಗೆ ಸುಮಾರು 10–12 ಕೆ.ಜಿ ಬೀಜ ಬಿತ್ತನೆಗೆ ಬೇಕಾಗುತ್ತದೆ. ಚೆನ್ನಾಗಿ ಬೆಳೆದು ಫಲ ಬಿಟ್ಟ ಮೇಲೆ ಪೈರನ್ನು ಕತ್ತರಿಸಿದ ಅನಂತರ ಮತ್ತೆ ಗಿಡ ಚಿಗುರಿ ಮರುಫಸಲು ನೀಡುತ್ತದೆ. ಹೀಗೆ ವರ್ಷಕ್ಕೆ ಎರಡು ಬೆಳೆ ಬೆಳೆಸಬಹುದು. ನೀರಾವರಿ ಭೂಮಿಯಲ್ಲಿ ಎಕರೆಗೆ 5–6 ಟನ್ ಫಸಲು ದೊರಕುತ್ತದೆ. ನದೀ ಬಯಲು ಭೂಮಿಯಲ್ಲಿ 3–4 ಟನ್ ಫಸಲನ್ನು ಪಡೆಯಬಹುದು. ಮಳೆ ನೀರನ್ನು ಆಶ್ರಯಿಸಿರುವೆಡೆ ಎಕರೆಗೆ 1–3 ಟನ್ ಫಸಲು



ದೊರಕುವುದು. ತೆನೆ ಬಂದಾಗ ಅಥವಾ ಹಾಲು ಹಿಡಿದಾಗ ಕಟಾವು ಮಾಡುವುದರಿಂದ ಸಸಾರಜನಕಾದಿ ವಸ್ತು ಅತ್ಯಧಿಕ ಪ್ರಮಾಣದಲ್ಲೂ ನಾರು ಕಡಿಮೆ ಪ್ರಮಾಣದಲ್ಲೂ ಇರುತ್ತವೆ. ಮೇವಿನಲ್ಲಿ ಶೇ.3.9 ಭಸ್ಮಾಂಶ (ಆ್ಯಷ್), ಶೇ.7.8 ಸಸಾರಜನಕಾದಿ ವಸ್ತುವೂ ಶೇ.1.7 ಮೇದೋಭಾಗವೂ ಶೇ.32.0 ನಾರೂ ಇರುತ್ತವೆ. (ಎಂ.)

**ಗಲಾಪಗಸ್ ದ್ವೀಪಗಳು :** ಸಮಭಾಜಕೀಯ ಪೆಸಿಫಿಕ್ ಸಾಗರದಲ್ಲಿ, ಈಕ್ವಡಾರಿನ ಪಶ್ಚಿಮಕ್ಕೆ 800 ಕಿಮೀಗಳಿಂದ 1320ಕಿಮೀಗಳ ವರೆಗೆ 57500ಚ.ಕಿಮೀ ಗಳಲ್ಲಿ ಹರಡಿರುವ 14 ದೊಡ್ಡ ಮತ್ತು ಹಲವಾರು ಸಣ್ಣ ದ್ವೀಪಗಳ ಗುಂಪು. ಇವುಗಳ ಒಟ್ಟು ವಿಸ್ತೀರ್ಣ 7570 ಚ.ಕಿಮೀ. ಇವುಗಳಲ್ಲಿ ಅತ್ಯಂತ ದೊಡ್ಡದೂ ಎತ್ತರವಾದದ್ದೂ ಆದ ದ್ವೀಪ ಆಲ್ಬೆಮಾರ್ಲ್.

ಈ ದ್ವೀಪಗಳ ಉಗಮ ಹೇಗಾಯಿತೆಂಬುದು ನಿರ್ವಿವಾದವಾಗಿ ಇನ್ನೂ ಸ್ಥಾಪಿತವಾಗಿಲ್ಲ. ಇವು ಅಮೆರಿಕ ಖಂಡದೊಂದಿಗೆ ಎಂದಿಗೂ ಸೇರಿರಲಿಲ್ಲವೆಂದು ಕಾಣುತ್ತದೆ. ಈಗ ಜೀವಂತವಾಗಿಲ್ಲದ ಅಗ್ನಿ ಪರ್ವತಗಳ ಲಾವದಿಂದ ಇವು ಬಹಳಮಟ್ಟಿಗೆ ಕೂಡಿವೆ. ಆಲ್ಬೆಮಾರ್ಲ್‌ನ ಒಂದು ಜ್ವಾಲಾಮುಖಿ 1948ರಿಂದ ಈಚೆಗೆ ಮೂರು ಬಾರಿ ಜ್ವಾಲೆ ಉಗುಳಿತ್ತು.

ಈ ದ್ವೀಪಸ್ತೋಮ ಉಷ್ಣವಲಯದಲ್ಲಿದ್ದರೂ ಇಲ್ಲಿಯ ವಾಯುಗುಣ ಅನೇಕ ವ್ಯತಿಕ್ರಮಗಳಿಂದ ಕೂಡಿದ್ದು, ತೀರಪ್ರದೇಶದಲ್ಲಿ ಮಳೆ ಬಹಳ ಕಡಿಮೆ. ಗಾಳಿಯ ಉಷ್ಣತೆ $70^0$–$85^0$ಫ್ಯಾ. ಸಮುದ್ರದ ನೀರಿನ ಮೇಲ್ಭಾಗದ ಉಷ್ಣತೆಯೂ ಕಡಿಮೆ ($63^0$–$86^0$ಫ್ಯಾ.). ಇದಕ್ಕೆ ಕಾರಣವೆಂದರೆ, ಈ ದ್ವೀಪಸ್ತೋಮದ ಸುತ್ತ ಬುದ್ಬುದಿಸುವ ಶೀತೋದಕ ಪ್ರವಾಹ.

ಭಾರಿ ಮೊಂಡುಗಳ್ಳಿ, ಕುರುಚಲು ಮತ್ತು ಕುಳ್ಳಾದ ಪರ್ಣಪಾತಿ ವೃಕ್ಷಗಳು ಕರಾವಳಿಯಲ್ಲಿ ವಿಶೇಷವಾಗಿವೆ. ಒಳನಾಡಿನಲ್ಲಿ ಪೇರಲ ಮತ್ತು ಸೂರ್ಯಕಾಂತಿ ಬೆಳೆಯುತ್ತವೆ.

ಇಲ್ಲಿ ನಾನಾ ಜಾತಿಯ ಪಕ್ಷಿಗಳು ಮತ್ತು ಉರಗಗಳು ಉಂಟು. ರಾಕ್ಷಸಾಕಾರದ ಆಮೆ ಮತ್ತು ಇಗ್ವಾನ ಇಲ್ಲಿಯ ಮುಖ್ಯ ಪ್ರಾಣಿಗಳು. ಈ ದ್ವೀಪಗಳ ಪ್ರಾಣಿಗಳ ಸಂರಕ್ಷಣೆಗೆ ವ್ಯವಸ್ಥೆ ಮಾಡಲಾಗಿದೆ.

ಮೀನುಗಾರಿಕೆ ಮತ್ತು ಚರ್ಮ ಹದಮಾಡುವುದು ಇಲ್ಲಿಯ ಮುಖ್ಯ ಕಸುಬುಗಳು. ಚರ್ಮ, ವಸ್ತ್ರ, ಗಂಧಕ ಮತ್ತು ಮೀನು ಇಲ್ಲಿಯ ಮುಖ್ಯ ನಿರ್ಯಾತಗಳು.




ಗಲಾಪಗಸ್ ದ್ವೀಪಸ್ತೋಮವನ್ನು 1535ರಲ್ಲಿ ಪನಾಮಾದ ಬಿಷಪ್ ಟಾಮಸ್ ಡಿ ಬೆರ್ಲಾಂಗ್ ಕಂಡುಹಿಡಿದ. ಪ್ರಸಿದ್ಧ ಕಾದಂಬರಿಕಾರ ಹರ್ಮನ್ ಮೆಲ್ವಿಲ್ 1841ರಲ್ಲಿ ಈ ದ್ವೀಪಸ್ತೋಮವನ್ನು ಸಂದರ್ಶಿಸಿದ್ದ.

1835ರಲ್ಲಿ ಚಾರಲ್ಸ್ ಡಾರ್ವಿನ್ ಈ ದ್ವೀಪಗಳಿಗೆ ಭೇಟಿ ಕೊಟ್ಟು ಇಲ್ಲಿಯ ಅಸಾಧಾರಣ ಜೀವಿಗಳನ್ನು ಅಭ್ಯಸಿಸಿ ತನ್ನ ಸಿದ್ಧಾಂತಗಳಿಗೆ ಅನೇಕ ವಿವರಗಳನ್ನು ಪಡೆದುಕೊಂಡ. ಈತನ ಭೇಟಿಯ ಅನಂತರ ಈ ದ್ವೀಪಸ್ತೋಮ ವಿಜ್ಞಾನಿಗಳ ಗಮನ ಸೆಳೆಯಿತು.

1832ರಲ್ಲಿ ಈ ದ್ವೀಪಸ್ತೋಮವನ್ನು ಈಕ್ವಡಾರ್ ಅಧಿಕೃತವಾಗಿ ವಶಪಡಿಸಿ ಕೊಂಡಿತು. ಚಾರಲ್ಸ್ ದ್ವೀಪದಲ್ಲಿ ವಸತಿ ಆರಂಭವಾಯಿತು. 1920 ರಿಂದ ಕೆಲವು ಐರೋಪ್ಯರೂ ಇಲ್ಲಿ ಬಂದು ನೆಲೆಸಿದರು. ಎರಡನೆಯ ಮಹಾಯುದ್ಧ ಕಾಲದಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನ ಇಲ್ಲೊಂದು ವಿಮಾನ ನೆಲೆ ಸ್ಥಾಪಿಸಿತ್ತು. ಈಚೆಗೆ ಈಕ್ವಡಾರ್ ಜನ ಅಧಿಕ ಸಂಖ್ಯೆಯಲ್ಲಿ ಇಲ್ಲಿ ನೀರಿನ ಸೌಕರ್ಯ ಇರುವೆಡೆಗಳಲ್ಲಿ ನೆಲಸುತ್ತಿದ್ದಾರೆ. (ಎಂ.ಎ.ಎಚ್.)

**ಗಲಿಪೊಲಿ :** ಐರೋಪ್ಯ ತುರ್ಕಿಯ ಚಾನಾಕ್ಕಾಲೆ ಪ್ರಾಂತ್ಯದಲ್ಲಿ, ಡಾರ್ಡನೆಲ್ಸ್ ಜಲಸಂಧಿಯ ಈಶಾನ್ಯ ತುದಿಯಲ್ಲಿ, ಮಾರ್ಮರ ಸಮುದ್ರದ ಪಶ್ಚಿಮ ಪ್ರವೇಶದ್ವಾರದ ಎಡೆಯಲ್ಲಿ ಉ.ಅ. $40^0$ 26' ಮತ್ತು ಪೂ.ರೇ. $26^0$ 38' ಮೇಲೆ ಇರುವ ಒಂದು ರೇವುಪಟ್ಟಣ. ಕಿರಿದಾದ ಪರ್ಯಾಯದ್ವೀಪವೊಂದರ ಮೇಲಿದೆ. ಇದರ ಎರಡೂ ಬದಿಗಳಲ್ಲಿ–ಎಂದರೆ ಮಾರ್ಮರ ಸಮುದ್ರದ ಕಡೆಗೂ ಇಜೀಯನ್ ಸಮುದ್ರದ ಕಡೆಗೂ ಮುಖ ಮಾಡಿದಂತೆ–ಎರಡು ಬಂದರುಗಳಿವೆ. ಇಸ್ತಾಂಬೂಲಿಂದ ಇಲ್ಲಿಗೆ ಸು. 211ಕಿ.ಮೀ ದೂರ. ಇಲ್ಲಿ ಅನೇಕ ಮಸೀದಿಗಳು, ರೋಮನ್ ಮತ್ತು ಬಿಜಾಂಟೈನ್ ಅವಶೇಷಗಳು, 483–565ರಲ್ಲಿದ್ದ 1ನೆಯ ಜಸ್ಟಿನಿಯನ್ ಚಕ್ರವರ್ತಿಯ ಮದ್ದಿನ ಉಗ್ರಾಣ, ಚಚ್ಚೌಕನಾದ ಕೋಟೆ ಮತ್ತು ಕೆಲವು ಗೋರಿಗಳು ಇವೆ. ಇಸ್ತಾಂಬೂಲಿನಿಂದ ಇಲ್ಲಿಗೆ ಹಡಗು ಸಂಚಾರವುಂಟು. ಹಡಗುಗಳಿಗೆ ಸೂಚನೆ ನೀಡುವುದಕ್ಕಾಗಿ ಕಟ್ಟಲಾದ ಎತ್ತರವಾದ ದೀಪಸ್ತಂಭವೊಂದು ಇಲ್ಲಿದೆ. ಇಲ್ಲಿಂದ ಎಡಿರ್ನೆಗೂ ಇಸ್ತಾಂಬೂಲಿಗೂ ಹೆದ್ದಾರಿಯಿದೆ. ಇದೊಂದು ಮೀನುಗಾರಿಕೆ ಕೇಂದ್ರ. ಇಲ್ಲಿ ರೇಷ್ಮೆ, ಕರ್ಪೂರ, ಚರ್ಮ, ಕಬ್ಬಿಣ ಮತ್ತು ಪೆಟ್ರೋಲಿಯಂ ಕೈಗಾರಿಕೆಗಳಿವೆ. ಇಸ್ತಾಂಬೂಲಿನ ರಕ್ಷಣೆಯ ದೃಷ್ಟಿಯಿಂದ ಇದು ಆಯಕಟ್ಟಿನ ಸ್ಥಳವಾಗಿದೆ. 1ನೆಯ ಮಹಾಯುದ್ಧದ ಕಾಲದಲ್ಲಿ 1915ರಲ್ಲಿ ಮಿತ್ರ ರಾಷ್ಟ್ರಗಳು ಟರ್ಕಿ ಮತ್ತು ಆಸ್ಟ್ರಿಯಾಗಳ ಮೇಲೆ ಧಾಳಿ ನಡೆಸಿ ಯುದ್ಧಕ್ಕೆ ಹೊಸ ತಿರುವು ಕೊಡಬಯಸಿದವು. ಆದರೆ ಬ್ರಿಟನ್ ಮತ್ತು ಫ್ರಾನ್ಸ್ ಯುದ್ಧ ನೌಕೆ ಡಾರ್ಡನೆಲ್ಸ್‌ನಲ್ಲಿ ಭಾರಿ ನಷ್ಟವನ್ನನುಭವಿಸಿತು. ಈ ಯುದ್ಧ ಕಾಲದಲ್ಲಿ ಇದು ಬಹಳ ಮಟ್ಟಿಗೆ ನಾಶವಾಯಿತು. (ಪಿ.ಎಂ.ಯು.ಎಸ್.)

**ಗಲೀನ :** ಸೀಸದ ಮುಖ್ಯ ಅದಿರು. ರಾಸಾಯನಿಕವಾಗಿ ಸೀಸದ ಸಲ್ಫೈಡ್ $PbS$. ಇದು ಉತ್ತಮ ನಿಕ್ಷೇಪವಾಗಿ ದೊರೆಯುತ್ತದೆ. ಸಾಮಾನ್ಯವಾಗಿ ಉತ್ತಮ ಹರಳು ಗುಚ್ಛಗಳಂತೆ ಇದರ ಆಕಾರ ಉಂಟು. ಲೋಹದಂತೆ ಚೆನ್ನಾಗಿ ಹೊಳೆಯುತ್ತದೆ. ಚೌಕಾಕಾರದ ಸೀಳುಗೆರೆಗಳು ಇದರ ಮೇಲೆ ಬಲುಸ್ಪಷ್ಟವಾಗಿ ಕಾಣುತ್ತವೆ. ಸಾಂದ್ರತೆ 7.4–7.6. ಮೋಕಾಠಿನ್ಯಮಾನದಲ್ಲಿ ಇದರ ಕಾಠಿನ್ಯ 2.5–2.75ರವರೆಗಿದೆ. ಇದರ ಬಣ್ಣ ಮತ್ತು ಒರೆ ಸೀಸದ ಬೂದು ಬಣ್ಣವಾಗಿದೆ. ಸೀಸದ ಸಲ್ಫೈಡ್ ಅದಿರಾದ ಗಲೀನ ಸಾಧಾರಣವಾಗಿ ತಾಮ್ರ, ಸತು, ಆಂಟಿಮನಿ, ಆರ್ಸೆನಿಕ್ ಮುಂತಾದ ಲೋಹ ಸಲ್ಫೈಡುಗಳೊಂದಿಗೆ ದೊರೆಯುತ್ತವೆ. ಸೀಸ ನಿಕ್ಷೇಪಗಳೊಂದಿಗೆ ಸತು ನಿಕ್ಷೇಪಗಳು, ಸತು ನಿಕ್ಷೇಪಗಳೊಂದಿಗೆ ಸೀಸ ನಿಕ್ಷೇಪಗಳು ಸಾಮಾನ್ಯವಾಗಿ ಕೂಡಿಲ್ಲದಿದ್ದರೂ ಇವೆರಡು ಲೋಹದ ಅದಿರುಗಳು ಒಂದೆಡೆಯಲ್ಲಿರುವುದುಂಟು. ಗಲೀನದಿಂದ ಸುಲಭವಾಗಿ ಬೇರ್ಪಡಿಸಬಹುದಾದ ಬೆಳ್ಳಿ ಕೆಲವು ಸಂದರ್ಭಗಳಲ್ಲಿ ಲಾಭಕರವಾದ ಗಾತ್ರದಲ್ಲಿ ಇರುವುದುಂಟು. ಆಗ ಅದಕ್ಕೆ ಆರ್ಜೆಂಟಿಫೆರಸ್ ಗಲೀನ ಅಥವಾ ರಜತಾನ್ವಿತ ಗಲೀನ ಎಂದು ಹೆಸರು.




ಗಲೀನದ ಮೂರು ಬಗೆಯ ಹರಳುಗಳು

ಭಾರತದಲ್ಲಿ ಸೀಸದ ಅದಿರು ಬಹಳ ಕಡೆ ಸಿಕ್ಕಿದ್ದರೂ ಆರ್ಥಿಕ ದೃಷ್ಟಿಯಿಂದ ಹೇಳಿಕೊಳ್ಳುವಂಥ ಉತ್ತಮ ನಿಕ್ಷೇಪಗಳಿಲ್ಲ. ಪ್ರಸಕ್ತ ರಾಜಸ್ಥಾನದ ಭವಾರ್ ಸೀಸದ ಅದಿರು ನಿಕ್ಷೇಪ ಬಹಳ ಮುಖ್ಯವಾದದ್ದು. ಇಲ್ಲಿ ರಜತಾನ್ವಿತ ಸೀಸದ ಅದಿರು ಸತುವಿನ ಜೊತೆಯಲ್ಲಿ ಡಾಲೊಮೈಟ್ ಶಿಲೆಯ ಬಿರುಕುಗಳಲ್ಲಿ ಅಡಕವಾಗಿದೆ. ಸದ್ಯದಲ್ಲಿ ಭಾರತದ ಲೋಹ ಕಾರ್ಪೊರೇಷನ್ನಿನವರು ಈ ಅದಿರಿಗಾಗಿ ಮೊಚಿಯಮಾಗ್ರ ಎಂಬ ಬೆಟ್ಟದಲ್ಲಿ ಗಣಿ ಕೆಲಸ ನಡೆಸುತ್ತಿದ್ದಾರೆ. ಮೈಸೂರಿನ ಕೆಲವು ಪ್ರದೇಶಗಳಲ್ಲಿ ತಾಮ್ರದ ಅದಿರಿನೊಂದಿಗೆ ಅಥವಾ ಶುದ್ಧರೂಪದಲ್ಲಿ ಸೀಸದ ಅದಿರು ನಿಕ್ಷೇಪಗಳಿವೆ. ಆದರೆ ಇವೆಲ್ಲವೂ ಅಷ್ಟು ದೊಡ್ಡ ಗಾತ್ರದ ನಿಕ್ಷೇಪಗಳಲ್ಲ. ಬೆಳ್ಳಿ ಬೆರೆತ ಗಲೀನ ಅದಿರು ಮುಖ್ಯವಾಗಿ ಚಿತ್ರದುರ್ಗದ ಸಮೀಪದಲ್ಲಿ ಮತ್ತು ಗುಡ್ಡದ ರಂಗಪ್ಪನಹಳ್ಳಿ, ಕುರುಬರ ಮರಡೀಕೆರೆ ಸುತ್ತಮುತ್ತ ಅನೇಕ ಸ್ಥಳಗಳಲ್ಲಿ ಕಂಡುಬಂದಿದೆ. ಈ ಪ್ರದೇಶದಲ್ಲಿ 16–19 ಕಿಮೀ ಉದ್ದದ ಕ್ಲೋರೈಟ್ ಪದರ ಶಿಲಾಹರವನ್ನು ಹಾಯ್ದಿರುವ ಅನೇಕ ಬೆಣಚು ಸಿರಗಳಲ್ಲಿ ಗಲೀನ ಬಿಡಿ ಹರಳು ಗಳಂತೆಯೂ ಗೊಂಚಲುಗಳಂತೆಯೂ ಮಡಿಗಳಂತೆಯೂ ಸಿಗುತ್ತದೆ. (ಟಿ.ಟಿ.)

**ಗಲೀವರ್ಸ್ ಟ್ರಾವಲ್ಸ್ : ನೋಡಿ– ಸ್ವಿಫ್ಟ್, ಜೊನ್ಯಾಥನ್**

**ಗಲ್ಫ್ ಸ್ಟ್ರೀಂ :** ಮೆಕ್ಸಿಕೋ ಕೊಲ್ಲಿಯಲ್ಲಿ (ಗಲ್ಫ್) ಉಗಮಿಸಿ, ಫ್ಲಾರಿಡ ಜಲಸಂಧಿಯ ಮೂಲಕ ಸಾಗಿ, ಅಮೆರಿಕ ಸಂಯುಕ್ತಸಂಸ್ಥಾನದ ತೀರಕ್ಕೆ ಸಮಾನಾಂತರದಲ್ಲಿ ಈಶಾನ್ಯ ದಿಕ್ಕಿನಲ್ಲಿ ಹರಿದು ಹೋಗುವ ಪ್ರವಾಹ (ಸ್ಟ್ರೀಂ). ಬ್ರಿಟಿಷ್ ದ್ವೀಪಗಳ ಆಚೆಗೂ ವ್ಯಾಪಿಸಿಕೊಂಡಿರುವ ಪ್ರವಾಹದ ಈ ಹೆಸರು ವಾಸ್ತವವಾಗಿ ಹ್ಯಾಟೆರಸ್ ಮತ್ತು ನ್ಯೂಫಂಡ್‌ಲ್ಯಾಂಡ್ ತೀರಗಳ ನಡುವಣ ಭಾಗಕ್ಕೆ ಮಾತ್ರ ಅನ್ವಯಿಸುತ್ತದೆ. ಗಾಢ



ಅಥವಾ ಕಡು ನೀಲಿ ಬಣ್ಣದ ಈ ಉದಕದ ಮೇಲ್ಮೈನಲ್ಲಿ ಶೇ. 36ರಷ್ಟು ಲವಣವೂ, $80^0$ ಫ್ಯಾ. ಉಷ್ಣತೆಯೂ ಇರುವುದೆಂದು ಹೇಳಲಾಗಿದೆ. ಕೊಲ್ಲಿಯನ್ನು ಬಿಟ್ಟು ಹೊರಡುವಾಗ 80 ರಿಂದ 160 ಕಿಮೀಗಳಷ್ಟು ಅಗಲವಾಗಿಯೂ ಸುಮಾರು 610 ಮೀಟರ್‌ಗಿಂತಲೂ ಹೆಚ್ಚು ಆಳವಾಗಿಯೂ ಇದ್ದು, ದಿನವೊಂದಕ್ಕೆ ಸುಮಾರು 108 ಕಿಮೀ ವೇಗದಲ್ಲಿ ಪ್ರವಹಿಸುತ್ತದೆ. ಈ ವೇಗ ಮಿಸಿಸಿಪಿ ನದಿಯ ವೇಗಕ್ಕಿಂತ 1000

ಪಟ್ಟು ಹೆಚ್ಚು ಅಂಟಾರ್ಕ್‌ಟಿಕ್ ವೃತ್ತದ ಬಳಿಯ ಪ್ರವಾಹವನ್ನು ಬಿಟ್ಟರೆ ಇದೇ ಜಗತ್ತಿನ ದೊಡ್ಡ ಸಾಗರೋದಕ ಪ್ರವಾಹ.

ಅಟ್ಲಾಂಟಿಕ್ ಸಮುದ್ರದ ಸಮಭಾಜಕ ವೃತ್ತದ ಬಳಿಯಲ್ಲಿ ಬೀಸುವ ವಾಣಿಜ್ಯ ಮಾರುತಗಳು ನೀರಿನ ಪ್ರವಾಹವನ್ನು ಪಶ್ಚಿಮದತ್ತ ತಿರುಗಿಸುತ್ತವೆ. ಆ ಪ್ರವಾಹದ ಕವಲುಗಳು ಉತ್ತರ ಮತ್ತು ದಕ್ಷಿಣ ಸಮಭಾಜಕೀಯ ಪ್ರವಾಹಗಳೆಂದು ಹೆಸರಾಗಿವೆ. ದಕ್ಷಿಣ ಸಮಭಾಜಕೀಯ ಪ್ರವಾಹ ಪಶ್ಚಿಮದತ್ತ ಹರಿದು ಬ್ರೆಜ಼ಿಲಿನ ಉತ್ತರ ಕರಾವಳಿಗೆ ಅಪ್ಪಳಿಸಿದಾಗ ಅಲ್ಲಿಯ ನೀರು ಕ್ಯಾರಿಬೀಯನ್ ಸಾಗರಕ್ಕೆ ನುಗ್ಗುತ್ತದೆ; ಅದು ಉತ್ತರ ಸಮಭಾಜಕೀಯ ಪ್ರವಾಹದ ಉಷ್ಣಪ್ರವಾಹದೊಂದಿಗೆ ಬೆರೆತು ಅದರ ಉಷ್ಣತೆಯನ್ನು ಹೆಚ್ಚಿಸುತ್ತದೆ. ಈ ಸಂಯುಕ್ತ ಪ್ರವಾಹ ಇಕ್ಕಟ್ಟಾಗಿರುವ ಯುಕಟ್ಯಾನ್ ಕಾಲುವೆ ಮತ್ತು ಫ್ಲಾರಿಡ ಜಲಸಂಧಿ ಇವುಗಳ ಮೂಲಕ ಹಾಯ್ದುಬಂದಾಗ ಗಲ್ಫ್ ಸ್ಟ್ರೀಂ ಎನ್ನಿಸಿಕೊಳ್ಳುತ್ತದೆ.

ಈ ಉಷ್ಣೋದಕ ಪ್ರವಾಹ ಬಹಾಮ ಕರಾವಳಿಯನ್ನು ದಾಟಿ ಹೋಗುವಾಗ ಆಂಟಿಲೆಸ್ ಪ್ರವಾಹದೊಡನೆ ಬೆರೆಯುತ್ತದೆ. ಇದು ವೆಸ್ಟ್ ಇಂಡೀಸಿನ ಅಟ್ಲಾಂಟಿಕ್ ಪಾರ್ಶ್ವದಲ್ಲಿ ವಾಯವ್ಯಾಭಿಮುಖವಾಗಿ ಹರಿಯುವ ಪ್ರವಾಹ. ಈ ಸಂಯುಕ್ತ ಪ್ರವಾಹ ಮುಂದೆ ಸಾಗಿದಂತೆ ಇದರ ವೇಗ ಕಡಿಮೆಯಾಗುತ್ತದೆ, ಪಾತ್ರ ಅಗಲವಾಗುತ್ತದೆ. ಮುಂದೆ ಉತ್ತರ ಅಮೆರಿಕದ ಅಟ್ಲಾಂಟಿಕ್ ಕರಾವಳಿಗೆ ಸಮಾನಾಂತರದಲ್ಲಿ ಸಾಗುತ್ತದೆ. ಕರಾವಳಿಗೂ ಈ ಉಷ್ಣೋದಕ ಪ್ರವಾಹಕ್ಕೂ ನಡುವೆ ಇರುವ ನೀರಿನ ಕಿರುಧಾರೆಗೆ ಕೋಲ್ಡ್ ವಾಲ್ (ತಂಪುಗೋಡೆ) ಎಂದು ಹೆಸರು. ನ್ಯೂಫಂಡ್‌ಲ್ಯಾಂಡ್ ತೀರವನ್ನು ತಲಪುವ ಹೊತ್ತಿಗೆ ಇದರ ವೇಗ ತುಂಬ ಕಡಿಮೆಯಾಗಿರುತ್ತದೆ. ಅಲ್ಲಿ ಇದು ಮತ್ತಷ್ಟು ಹರಡಿಕೊಂಡು ಸಾಧಾರಣ ಉಷ್ಣೋದಕ ಪ್ರವಾಹವಾಗಿ, ಪೂರ್ವಾಭಿಮುಖವಾಗಿ ಯುರೋಪಿನತ್ತ ಹರಿಯುತ್ತದೆ. ಇಲ್ಲಿಂದ ಮುಂದೆ ಇದು ಉತ್ತರ ಅಟ್ಲಾಂಟಿಕ್ ಪ್ರವಾಹ ಎನಿಸಿಕೊಳ್ಳುತ್ತದೆ. ಯುರೋಪಿನ ಬಳಿಗೆ ಬಂದಮೇಲೆ ಈ ಪ್ರವಾಹ ಎರಡು ಕವಲುಗಳಾಗಿ ಒಡೆಯುತ್ತದೆ. ಒಂದು ಕವಲು ದಕ್ಷಿಣಾಭಿಮುಖವಾಗಿ ಹರಿಯತೊಡಗಿ ಆಫ್ರಿಕದ ಪಶ್ಚಿಮ ಕರಾವಳಿಯನ್ನು ಸೇರುತ್ತದೆ. ಇನ್ನೊಂದು ಕವಲು ಬ್ರಿಟಿಷ್ ದ್ವೀಪಗಳತ್ತ ಸಾಗುತ್ತದೆ. ಈ ಕವಲು ಮುಂದೆ ಮತ್ತೆ ಮೂರು ಭಾಗಗಳಾಗಿ ಒಡೆಯುತ್ತದೆ. ಒಂದು ಉಪಕವಲು ಸ್ಕಾಟ್ಲೆಂಡಿನ ಉತ್ತರಕ್ಕಿರುವ ಫೇರೋ ಮತ್ತು ಶೆಟ್ಲೆಂಡ್ ದ್ವೀಪಸ್ತೋಮಗಳ ನಡುವೆ ಸಾಗಿ, ಆರ್ಕ್‌ಟಿಕ್ ಸಮುದ್ರದಲ್ಲಿ ಲೀನವಾಗುತ್ತದೆ. ಎರಡನೆಯ ಉಪಕವಲು ಐಸ್‌ಲೆಂಡಿನ ಪಶ್ಚಿಮ ಕರಾವಳಿಯಲ್ಲಿ ಸಾಗುತ್ತದೆ. ಮೂರನೆಯ ಉಪಕವಲು ಗ್ರೀನ್‌ಲೆಂಡಿನ ಕರಾವಳಿಯಲ್ಲಿ ಸಾಗಿ ಡೇವಿಸ್ ಜಲಸಂಧಿಯಲ್ಲಿ ಹರಿದು ಬ್ಯಾಫಿನ್ ಕೊಲ್ಲಿಯಲ್ಲಿ ಲೀನವಾಗುತ್ತದೆ.

ಗ್ರೇಟ್ ಬ್ರಿಟನ್ ಮತ್ತು ವಾಯವ್ಯ ಯುರೋಪ್ ವಾಯುಗುಣ ಅಷ್ಟೇ ಉತ್ತರಕ್ಕಿರುವ ಉತ್ತರ ಅಮೆರಿಕನ್ ಪ್ರದೇಶಗಳಿಗಿಂತ ಹಿತಕರವಾಗಿರುವುದಕ್ಕೆ ಗಲ್ಫ್ ಸ್ಟ್ರೀಮಿನ ಮೇಲಿನಿಂದ ಬೀಸುವ ಮಾರುತಗಳೇ ಕಾರಣ. ಈ ಮಾರುತಗಳು ಹಾದುಹೋಗುವ ಪ್ರದೇಶದಲ್ಲೆಲ್ಲ ವಾತಾವರಣ ಬೆಚ್ಚಗಿರುತ್ತದೆ. ಜನವರಿ ತಿಂಗಳಿನಲ್ಲಿ ಉತ್ತರ ನಾರ್ವೆಯ ಉಷ್ಣತೆ ಆ ಅಕ್ಷಾಂಶದಲ್ಲಿರುವ ಇತರ ಪ್ರದೇಶಗಳಿಗಿಂತ $45^0$ ಫ್ಯಾ. ಅಧಿಕವಾಗಿರುತ್ತದೆ. ಈ ಉಷ್ಣೋದಕ ಪ್ರವಾಹದಿಂದಾಗಿ ವಾಯವ್ಯ ಯುರೋಪಿನ ಅನೇಕ ಬಂದರುಗಳು ಚಳಿಗಾಲದಲ್ಲಿ ಹಿಮಗಟ್ಟಿರುವುದಿಲ್ಲ. ಈ ಪ್ರವಾಹದ ಪ್ರಭಾವಕ್ಕೊಳಗಾದ, ಉತ್ತರ ನಾರ್ವೆಯ ಹಾಮೆರ್‌ಫೆಸ್ಟ್ ನಗರ (ಉ.ಅ. $70^0$ 38') ಚಳಿಗಾಲದಲ್ಲೂ ಹಿಮಮುಕ್ತವಾಗಿರುತ್ತದೆ. ಇದು ಪ್ರಮುಖ ಮೀನುಗಾರಿಕೆ ಕೇಂದ್ರ. ಆದರೆ ಇದಕ್ಕೆ 1200 ಕಿಮೀ ದಕ್ಷಿಣದಲ್ಲಿ ರಷ್ಯ ಗಣರಾಜ್ಯದ ರೀಗ ಬಂದರು ಚಳಿಗಾಲದಲ್ಲಿ ಹಿಮಾವೃತವಾಗಿರುತ್ತದೆ.

ಗಲ್ಫ್ ಸ್ಟ್ರೀಂ ನೌಕಾ ಸಾರಿಗೆಗೂ ನೆರವಾಗುತ್ತದೆ. ದಕ್ಷಿಣ ಅಮೆರಿಕದಿಂದ ಅಟ್ಲಾಂಟಿಕ್ ಕರಾವಳಿಯ ಬಂದರುಗಳತ್ತ ಯಾನಮಾಡುವ ತೈಲವಾಹಕ ಮತ್ತು ಅದಿರುಸಾಗಣೆ ನೌಕೆಗಳು ತಮ್ಮ ಉತ್ತರಾಭಿಮುಖ ಯಾನದಲ್ಲಿ ಈ ಪ್ರವಾಹ ಪಥವನ್ನೇರುತ್ತವೆ. ಇದರಿಂದ ಯಾನದ ಅವಧಿ ಕಡಿಮೆಯಾಗುತ್ತದೆ. ಹೀಗೆ ಇದು ವಾಣಿಜ್ಯ ಹಾಗೂ ವಾಯುಗುಣ ದೃಷ್ಟಿಯಿಂದ ತುಂಬ ಮಹತ್ತ್ವಪೂರ್ಣವೆನಿಸಿದ ಪ್ರವಾಹ. (ಪಿ.ಜಿ.ಡಿ.)

**ಗಲ್‌ಸ್ಟ್ರಾಂಡ್ ಆಲ್‌ವಾರ್ :** 1862–1930. ಸ್ವೀಡನಿನ ನೇತ್ರವೈದ್ಯ, ವೈದ್ಯಶಾಸ್ತ್ರಕ್ಕೆ ಸಂಬಂಧಿಸಿದಂತೆ 1911ರ ನೊಬೆಲ್ ಪಾರಿತೋಷಿಕವನ್ನು ಪಡೆದ ಈತ ಸ್ವೀಡನಿನ ಲಾಂಟ್ಸ್‌ಕ್ರೂನಾ ಎಂಬಲ್ಲಿ 1862ರ ಜೂನ್ 5ರಂದು ಜನಿಸಿದ. ವೈದ್ಯಶಾಸ್ತ್ರದಲ್ಲಿ–ಅದರಲ್ಲೂ ಕಣ್ಣಿಗೆ ಸಂಬಂಧಿಸಿದ ಅಧ್ಯಯನ, ರೋಗನಿದಾನ, ಚಿಕಿತ್ಸೆ ಮುಂತಾದವುಗಳಲ್ಲಿ ಹೆಚ್ಚಿನ ಆಸಕ್ತಿ ತಳೆದಿದ್ದ. ಉಪ್ಸಲ ಎಂಬಲ್ಲಿ ಈತ ಕಣ್ಣಿನ ರೋಗ ವಿಜ್ಞಾನದ ಪ್ರಾಧ್ಯಾಪಕನಾದ (1894). ಅನಂತರ 1913ರಲ್ಲಿ ಈತನನ್ನು ಅಲ್ಲೇ ದೃಗ್ವಿಭಾಗದ ಪ್ರಾಧ್ಯಾಪಕನನ್ನಾಗಿ ನೇಮಿಸಲಾಯಿತು. ವಕ್ರೀಭವನ ಶಾಸ್ತ್ರಕ್ಕೆ (ಡಯಾಪ್ಟರಿಕ್ಸ್) ಸಂಬಂಧಿಸಿದಂತೆ ಸಾರ್ವತ್ರಿಕ ನಿಯಮಗಳನ್ನು ಕುರಿತ ಇವನ ಸಂಶೋಧನೆಗಳು ದೃಗ್‌ವಿಜ್ಞಾನತತ್ತ್ವ, ಕಣ್ಣಿನೊಳಗಣ ದೃಷ್ಟಿಪ್ರತಿಬಿಂಬಗಳ ಬಿಡಿಸಿಕೆ, ಬೆಳಕು ಮತ್ತು ಕಣ್ಣಿಗೂ ಇರುವ ಸಂಬಂಧ–ಈ ಮುಂತಾದ ಪ್ರಕಾರಗಳಲ್ಲಿ ಒಂದು ಹೊಸದೃಷ್ಟಿ ಕೋನವನ್ನು ಉಂಟುಮಾಡಿದವು. ಈ ಸಂಶೋಧನೆಗಳಿಗಾಗಿಯೇ ಈತನಿಗೆ ನೊಬೆಲ್ ಪಾರಿತೋಷಿಕ ಲಭಿಸಿದ್ದು. ಇವನ ಹಲವಾರು ಬರೆಹಗಳಲ್ಲಿ 1900, 1908 ಮತ್ತು 1911ರಲ್ಲಿ ಪ್ರಕಟಗೊಂಡ ವೈದ್ಯಕೀಯ ಲೇಖನಗಳು ಮಹತ್ತ್ವವುಳ್ಳವು. ಈತನಿಗೆ ಡಬ್ಲಿನ್ ವಿಶ್ವವಿದ್ಯಾಲಯ ಗೌರವ ಡಾಕ್ಟರ್ ಆಫ್ ಸೈನ್ಸ್ ಪದವಿ ನೀಡಿ ಗೌರವಿಸಿತು. ಕನ್ನಡಕದ ಮಸೂರಗಳು, ಕಣ್ಣಿನ ರೋಗ ನಿದಾನೋಪಕರಣವಾದ ಸ್ಲಿಟ್‌ಲ್ಯಾಂಪ್ ಇವುಗಳ ಸುಧಾರಣೆಗೆ ಗಲ್‌ಸ್ಟ್ರಾಂಡ್ ಕಾರಣನಾದ. ಈತ 1885ರಲ್ಲಿ ಸಿಗನೆ ಎಂಬುವವಳನ್ನು ವಿವಾಹವಾದ. ಈತ 1930 ಜುಲೈ 28ರಂದು ಸ್ಟಾಕ್‌ಹೂಮ್‌ನಲ್ಲಿ ನಿಧನವಾದ. *

**ಗವರ್ನರ್–ಜನರಲ್ :** ಒಂದು ದೇಶದ ಅತ್ಯುನ್ನತ ಅಧಿಕಾರಿ. ಗವರ್ನರ್, ಲೆಫ್ಟಿನೆಂಟ್ ಗವರ್ನರ್ ಮುಂತಾದ ಹಲವಾರು ಅಧಿಕಾರಿಗಳ ಮೇಲೆ ಇರುವವ. ಗವರ್ನರ್–ಇನ್–ಚೀಫ್ ಎಂದೂ ಇವನನ್ನು ಕರೆಯುವುದಿದೆ.

ಬ್ರಿಟಿಷ್ ಸಂವಿಧಾನ ಪದ್ಧತಿಯಲ್ಲಿ ಗವರ್ನರ್–ಜನರಲನ ಅಧಿಕಾರ ದೊರೆಯಿಂದ (ಅಥವಾ ರಾಣಿಯಿಂದ) ಇಲ್ಲವೇ ಸಾಮ್ರಾಜ್ಯೀಯ ಅಥವಾ ಸ್ಥಳೀಯ ಕಾನೂನಿನಿಂದ ಪ್ರಾಪ್ತವಾದದ್ದು. ಬ್ರಿಟನಿನ ಅಧೀನ ಪ್ರದೇಶಗಳಲ್ಲಿ ಹಲವಾರು ವಿಭಾಗಗಳ ಒಕ್ಕೂಟದ ಉನ್ನತಾಧಿಕಾರಿಯನ್ನು ಗವರ್ನರ್–ಜನರಲ್ ಎಂದು ಕರೆಯಲಾಗುತ್ತದೆ.


ಜನರಲ್ ಕಾರ್ನ್‌ವಾಲಿಸ್

ಬ್ರಿಟಿಷ್ ಸಾಮ್ರಾಜ್ಯದ ಇತಿಹಾಸದಲ್ಲಿ ಗವರ್ನರ್–ಜನರಲ್ ಹುದ್ದೆಯ ಸ್ಥಾನಮಾನ ಕಾರ್ಯಭಾರಗಳು ಕಾಲಾನುಗುಣವಾಗಿ ವಿಶೇಷವಾದ ಬದಲಾವಣೆಗಳಿಗೆ ಒಳಗಾಗಿವೆ. ಅದರ ಅಧೀನ ಪ್ರದೇಶಗಳು ಸ್ವಯಮಾಡಳಿತದತ್ತ ವಿಕಾಸಗೊಂಡಂತೆಲ್ಲ ಆ ಹುದ್ದೆಯ ಸ್ವರೂಪ ವ್ಯತ್ಯಾಸಗೊಂಡಿದೆ. ನಾಮಕರಣಗೊಂಡ ಸದಸ್ಯರಿದ್ದ ವಿಧಾನ ಮಂಡಲಗಳು ಚುನಾಯಿತ ಸದನಗಳುಳ್ಳ ಮಂಡಲಗಳಾದಂತೆ ಗವರ್ನರ್ – ಜನರಲನ ಹುದ್ದೆಯೂ ಪ್ರಜಾಸತ್ತಾತ್ಮಕವಾಗಿ ಪರಿಣಮಿಸಿದೆ.

ಬ್ರಿಟಿಷ್ ಚಕ್ರಾಧಿಪತ್ಯದೊಳಗಿನ ಸ್ವಯಮಾಡಳಿತ ವಸಾಹತುಗಳ ಗವರ್ನರ್–ಜನರಲ್‌ಗಳನ್ನು ಬ್ರಿಟಿಷ್ ಸರ್ಕಾರ ನೇಮಕ ಮಾಡುವಾಗ ಆ ನೇಮಕಗಳನ್ನು ಸಂಬಂಧಪಟ್ಟ ಸರ್ಕಾರಗಳ ಒಪ್ಪಿಗೆ ಪಡೆಯುವ ಪದ್ಧತಿ 1890ರ ವೇಳೆಗೆ ಬಂದಿತ್ತು. 1922ರಲ್ಲಿ ಐರಿಷ್ ಸ್ವತಂತ್ರ ರಾಜ್ಯ ಸ್ಥಾಪನೆ ಆದಾಗ ಈ ವಿಚಾರದಲ್ಲಿ ಇನ್ನೊಂದು ಮಹತ್ತ್ವದ ಸುಧಾರಣೆ ಆಯಿತು. ಸ್ವತಂತ್ರ ರಾಜ್ಯ ಸರ್ಕಾರವೇ ಗವರ್ನರ್ – ಜನರಲನನ್ನು ಆಯ್ಕೆ ಮಾಡತೊಡಗಿತು: ಇದಕ್ಕೆ ದೊರೆ ಅನುಮತಿ ನೀಡುತ್ತಿದ್ದ. ಅದಕ್ಕೆ ಮುಂಚೆ ಐರ್ಲೆಂಡಿನಲ್ಲಿದ್ದ ರಾಜಪ್ರತಿನಿಧಿ ವೈಸ್‌ರಾಯ್ ಸ್ಥಾನಮಾನ ಪಡೆದಿದ್ದ. 1920ರ ಕಾಯಿದೆಯ ಪ್ರಕಾರ ಐರಿಷ್ ಸ್ವತಂತ್ರ ರಾಜ್ಯಕ್ಕೆ ಗವರ್ನರ್–ಜನರಲ್ ಹುದ್ದೆಯನ್ನು ರಚಿಸಲಾಯಿತು. ಐರಿಷ್ ಸ್ವತಂತ್ರ ರಾಜ್ಯ ಅಧಿರಾಜ್ಯದ (ಡೊಮಿನಿಯನ್) ಸ್ಥಾನ ಪಡೆಯಿತು.

1926ರಲ್ಲಿ ಇನ್ನೊಂದು ಮಹತ್ತರ ಬದಲಾವಣೆ ಆಯಿತು. ಆ ಬಾರಿ ಇದಕ್ಕೆ ಕಾರಣವಾದದ್ದು ಕೆನಡ. ಅಧಿರಾಜ್ಯವೊಂದರ ಗವರ್ನರ್–ಜನರಲ್ ಸಾಮಾನ್ಯವಾಗಿ ದೊರೆಯ ಪ್ರತಿನಿಧಿಯಾಗಿ ಮಾತ್ರ ಇರತಕ್ಕದ್ದೆಂದು, ಆತ ಬ್ರಿಟಿಷ್ ಸರ್ಕಾರದ ಪರವಾಗಿ ಯಾವುದೇ ಕಾರ್ಯಭಾರ ನಿರ್ವಹಿಸಬೇಕೆಂದು ಸಂಬಂಧಪಟ್ಟ ಅಧಿರಾಜ್ಯ ಕೇಳಿಕೊಂಡ ವಿನಾ ಅವನು ಅದನ್ನು ನಿರ್ವಹಿಸತಕ್ಕದ್ದಲ್ಲವೆಂದು ತೀರ್ಮಾನವಾಯಿತು.

1930ರಲ್ಲಿ ನಡೆದ ಸಾಮ್ರಾಜ್ಯ ಸಮ್ಮೇಳನದಲ್ಲಿ ಕೈಗೊಂಡ ತೀರ್ಮಾನ ಇನ್ನಷ್ಟು ಪ್ರಗತಿಪರವಾದ್ದು. ಗವರ್ನರ್–ಜನರಲನನ್ನು ನೇಮಿಸುವುದು ಸಂಬಂಧಪಟ್ಟ ಅಧಿರಾಜ್ಯದ ಪ್ರಾಧಿಕಾರವೆಂಬುದಾಗಿ ಆ ಸಮ್ಮೇಳನದಲ್ಲಿ ತೀರ್ಮಾನವಾಯಿತು. ಇದರ ಫಲವಾಗಿ ಕೆಲವು ಅಧಿರಾಜ್ಯಗಳು ತಮ್ಮ ಪ್ರಜೆಗಳನ್ನೇ ಗವರ್ನರ್–ಜನರಲನನ್ನಾಗಿ ಆರಿಸಿಕೊಂಡವು. ಗವರ್ನರ್–ಜನರಲನ ನೇಮಕದ ಪ್ರಶ್ನೆ ಅಧಿರಾಜ್ಯಕ್ಕೂ ಬ್ರಿಟಿಷ್ ರಾಜತ್ವಕ್ಕೂ

ಸಂಬಂಧಿಸಿದ್ದು. ಬ್ರಿಟನಿನ ದೊರೆ ತನ್ನ ಸಚಿವಮಂಡಲಿಯ ಸಲಹೆಯ ಮೇರೆಗೆ ನಡೆಯುವಂತೆ, ಅಧಿರಾಜ್ಯದ ಗವರ್ನರ್-ಜನರಲನ ನೇಮಕವೂ ಅದರ ಸಚಿವರ ಸಲಹೆಯ ಮೇರೆಗೇ ಆಗತಕ್ಕದ್ದು. ನೇಮಕದ ಬಗ್ಗೆ ಅವರು ಮೊದಲು ಅನೌಪಚಾರಿಕವಾಗಿ ದೊರೆಯೊಡನೆ ಸಮಾಲೋಚನೆ ನಡೆಸಿ, ಅನಂತರ ಔಪಚಾರಿಕವಾಗಿ ದೊರೆಗೆ ಸಲಹೆ ನೀಡುವರು. ದೊರೆ ಅದನ್ನು ಒಪ್ಪತಕ್ಕದ್ದು. ಹೀಗೆ ಇದು ಅಧಿರಾಜ್ಯ ಸರ್ಕಾರಕ್ಕೂ ದೊರೆಗೂ ನೇರವಾಗಿ ನಡೆಯುವ ವ್ಯವಹಾರ-ಎಂಬುದು ನಿಶ್ಚಿತವಾಯಿತು.



ಜನರಲ್ ಲಾರ್ಡ್ ಕರ್ಜನ್

ನೇಮಕ ಹೊಂದಿದ ಗವರ್ನರ್ - ಜನರಲನನ್ನು ವಜಮಾಡುವ ಬಗ್ಗೆ ಕ್ರಾಂತಿಕಾರಿ ಮಾರ್ಗ ಅನುಸರಿಸಿದ್ದು ಐರ್ಲೆಂಡ್. 1932ರಲ್ಲಿ ಈ ಘಟನೆ ಸಂಭವಿಸಿತು. ತನಗೆ ಮೆಚ್ಚುಗೆ ಯಿಲ್ಲದ ಗವರ್ನರ್-ಜನರಲನನ್ನು ದೊರೆಯಿಂದ ತೆಗೆಸಿ ಹಾಕುವ ಕ್ರಮವನ್ನು ಐರಿಷ್ ಸ್ವತಂತ್ರ ರಾಜ್ಯ ಅನುಸರಿಸಿತು. ಅಧಿರಾಜ್ಯದ ಗವರ್ನರ್ - ಜನರಲನ ಸಂವೈಧಾನಿಕ ಸ್ಥಾನ ಬ್ರಿಟಿಷ್ ದೊರೆಯಂತೆಯೇ ಆದರೂ ಗವರ್ನರ್-ಜನರಲ್ ತತ್ಕಾಲದ ಸರ್ಕಾರದ ಇಚ್ಛಾನುಗುಣವಾಗಿ ಮಾತ್ರವೇ ಅಧಿಕಾರದಲ್ಲಿರಬಲ್ಲ.

**ಭಾರತದಲ್ಲಿ :** ಬ್ರಿಟಿಷ್ ಭಾರತದಲ್ಲಿ ಗವರ್ನರ್-ಜನರಲನ ಹುದ್ದೆ ವಿಕಾಸಗೊಂಡ ರೀತಿಯೇ ಬೇರೆ. 1773ರಲ್ಲಿ ಜಾರಿಗೆ ಬಂದ ರೆಗ್ಯುಲೇಟಿಂಗ್ ಕಾಯಿದೆಯ ಪ್ರಕಾರ ಗವರ್ನರ್-ಜನರಲನ ಹುದ್ದೆ ರಚಿತವಾಯಿತು. ವಾರನ್ ಹೇಸ್ಟಿಂಗ್ಸ್ ಮೊದಲನೆಯ ಗವರ್ನರ್-ಜನರಲ್ ಆಗಿ ನೇಮಕವಾದ. 1834ರ ವರೆಗೂ ಈ ಅಧಿಕಾರಿಯನ್ನು ಬಂಗಾಳದ ಫೋರ್ಟ್ ವಿಲಿಯಂನ ಗವರ್ನರ್ - ಜನರಲ್ ಎಂದು ಕರೆಯಲಾಗುತ್ತಿತ್ತು. 1833ರ ಚಾರ್ಟರ್ ಕಾಯಿದೆಯ ಪ್ರಕಾರ ಇವನನ್ನು ಭಾರತದ ಗವರ್ನರ್-ಜನರಲ್ ಎಂದು ಕರೆಯಲಾಯಿತು. ವ್ಯಾಪಾರಕ್ಕಾಗಿ ಬಂದಿದ್ದ ಈಸ್ಟ್ ಇಂಡಿಯ ಕಂಪನಿಯಂಥ ಸಂಸ್ಥೆ ದೂರದೇಶವೊಂದರ ಆಳ್ವಿಕೆ ನಡೆಸುವುದು ಯುಕ್ತವೆ ಎಂಬ ವಿಷಯ ಇಂಗ್ಲೆಂಡಿನ ಪಾರ್ಲಿಮೆಂಟಿನಲ್ಲಿ ಚರ್ಚೆಗೆ ಬಂದು, ಆ ಆಳ್ವಿಕೆಯ ಮೇಲ್ವಿಚಾರಣೆ ಪಾರ್ಲಿಮೆಂಟಿಗೆ ಸೇರಿರಬೇಕೆಂದು ತೀರ್ಮಾನವಾಗಿ, ಅದರಂತೆ ರೆಗ್ಯುಲೇಟಿಂಗ್ ಕಾಯಿದೆಯನ್ನು ಜಾರಿಗೆ ತರಲಾಗಿತ್ತು. ಇದರ ಪ್ರಕಾರ, ಭಾರತದಲ್ಲಿ ಈಸ್ಟ್ ಇಂಡಿಯ ಕಂಪನಿಯ ಆಳ್ವಿಕೆಗೆ ಸೇರಿದ ರಾಜ್ಯಗಳ ಆಡಳಿತ ನಿಯಂತ್ರಣ ಬ್ರಿಟಿಷ್ ಪಾರ್ಲಿಮೆಂಟಿಗೆ ಸೇರಿದ್ದೆಂದು ನಿರ್ಣಯವಾಗಿ, ಗವರ್ನರ್-ಜನರಲನನ್ನು ನೇಮಿಸಲಾಯಿತು. ಇವನ ಅಧಿಕಾರವ್ಯಾಪ್ತಿ ಎಷ್ಟು ಎಂಬುದನ್ನು ಮೊದಲು ಸ್ಪಷ್ಟವಾಗಿ ಗೊತ್ತುಮಾಡಿರಲಿಲ್ಲವಾದ್ದರಿಂದ ಮೊದಲನೆಯ ಗವರ್ನರ್-ಜನರಲ್ ಆದ ವಾರನ್ ಹೇಸ್ಟಿಂಗ್ಸ್ ಬಹಳ ಕಿರುಕುಳಗಳನ್ನನುಭವಿಸ ಬೇಕಾಯಿತು. ಈ ಹೊಸ ಕಾಯಿದೆ ಈಸ್ಟ್ ಇಂಡಿಯ ಕಂಪನಿಯ ಆಡಳಿತದ ಮೇಲೆ ಬ್ರಿಟಿಷ್ ಸರ್ಕಾರಕ್ಕೆ ಖಚಿತವಾದ ಹತೋಟಿಯನ್ನು ಕೊಟ್ಟಿರಲಿಲ್ಲ; ಕಂಪನಿಯ ನಿರ್ದೇಶಕರಿಗೆ ಭಾರತದಲ್ಲಿ ತಮ್ಮ ಅಧಿಕಾರಿಗಳ ಮೇಲೆ ಎಷ್ಟರಮಟ್ಟಿನ ಅಧಿಕಾರ ಇರತಕ್ಕದ್ದೆಂದು ನಿಗದಿ ಮಾಡಿರಲಿಲ್ಲ. ಗವರ್ನರ್-ಜನರಲ್‌ಗೆ ತನ್ನ ಸಲಹಾ ಮಂಡಲಿಯ ಸದಸ್ಯರ ಮೇಲೆ ಇದ್ದ ಅಧಿಕಾರ ಎಷ್ಟೆಂಬುದನ್ನೂ ತಿಳಿಸಿರಲಿಲ್ಲ; ಮದರಾಸ್, ಮುಂಬಯಿ ಗವರ್ನರುಗಳ ಮೇಲೆ



ಜನರಲ್ ವಾರನ್‌ಹೇಸ್ಟಿಂಗ್ಸ್

ಗವರ್ನರ್-ಜನರಲ್‌ಗೆ ಇದ್ದ ಅಧಿಕಾರ ಎಷ್ಟೆಂಬುದನ್ನು ನಿರ್ದಿಷ್ಟಪಡಿಸಿರಲಿಲ್ಲ-ಎಂದು ಒಬ್ಬ ಚರಿತ್ರಕಾರ ಬರೆದಿದ್ದಾನೆ.

ವಾರನ್ ಹೇಸ್ಟಿಂಗ್ಸ್ ಸಮರ್ಥ, ನಿಷ್ಠಾವಂತ. ಆದರೂ ಅವನಿಗೆ ವಿರೋಧಿಗಳಾಗಿದ್ದ ಸಲಹಾ ಮಂಡಲಿಯ ಸದಸ್ಯರಿಂದ ಹೆಜ್ಜೆಹೆಜ್ಜೆಗೂ ವಿರೋಧ ಹುಟ್ಟಿ ಆಡಳಿತ ನಡೆಸುವುದು ಅವನಿಗೆ ಬಹು ಕಷ್ಟವಾಯಿತು; ಪ್ರಾಂತೀಯ ಗವರ್ನರುಗಳು ಸ್ವತಂತ್ರವಾಗಿ ವರ್ತಿಸುತ್ತಿದ್ದರು. 1784ರಲ್ಲಿ ವಿಲಿಯಂ ಪಿಟ್ಟನ ಶ್ರಮದ ಫಲವಾಗಿ ಹೊಸ ಇಂಡಿಯ ಕಾಯಿದೆ (ಪಿಟ್‌ನ ಇಂಡಿಯ ಕಾಯಿದೆ) ಪಾರ್ಲಿಮೆಂಟಿನ ಅನುಮತಿ ಪಡೆದು ಜಾರಿಗೆ ಬಂದಿತು. ಭಾರತದಲ್ಲಿ ಬ್ರಿಟಿಷರಿಗೆ ಸೇರಿದ್ದ ಪ್ರಾಂತ್ಯಗಳ ಆಡಳಿತದ ಮೇಲ್ವಿಚಾರಣೆಯನ್ನು ಭಾರತದ ಕಾರ್ಯದರ್ಶಿಯನ್ನೊಳಗೊಂಡು ಆರು ಸದಸ್ಯರಿದ್ದ ನಿಯೋಜಿತ ಮಂಡಲಿಗೆ ಒಪ್ಪಿಸಲಾಯಿತು. ಈಸ್ಟ್ ಇಂಡಿಯ ಕಂಪನಿಯ ನಿರ್ದೇಶಕ ಮಂಡಲಿಯ ಆಡಳಿತದ ಮೇಲಿನ ಅಧಿಕಾರ ಇನ್ನೂ ಕುಗ್ಗಿತು. ಗವರ್ನರ್-ಜನರಲನ ಅಧಿಕಾರ ಹೆಚ್ಚು ವ್ಯಾಪಕವಾಯಿತು, ಹೆಚ್ಚು ನಿರ್ದಿಷ್ಟವಾಯಿತು. 1793-1813, 1833 ಮತ್ತು 1853ರಲ್ಲಿ ಈ ಕಾಯಿದೆ ಪರಿಷ್ಕೃತವಾಯಿತು.

1858ರಲ್ಲಿ ಭಾರತದ ಆಡಳಿತ ಈಸ್ಟ್ ಇಂಡಿಯ ಕಂಪನಿಯಿಂದ ಬ್ರಿಟಿಷ್ ಸರ್ಕಾರಕ್ಕೆ ವರ್ಗವಾಯಿತು. ಆಗಿನಿಂದ ಗವರ್ನರ್-ಜನರಲನನ್ನು ವೈಸ್‌ರಾಯ್ ಎಂದೂ ಕರೆಯಲಾಯಿತು. ಲಾರ್ಡ್ ಕ್ಯಾನಿಂಗ್ ಭಾರತದ ಪ್ರಥಮ ವೈಸ್‌ರಾಯ್.

ಭಾರತದಲ್ಲಿ ಬ್ರಿಟಿಷರ ಆಡಳಿತ ಇರುವವರೆಗೂ ಯಾವ ಭಾರತೀಯನೂ ಈ ಹುದ್ದೆಗೆ ನೇಮಕವಾಗಲಿಲ್ಲ.

ಗವರ್ನರ್-ಜನರಲನ ಅಧಿಕಾರಗಳೂ ಕರ್ತವ್ಯಗಳೂ ಮೊಟ್ಟಮೊದಲಿಗೆ 1773ರ ರೆಗ್ಯುಲೇಟಿಂಗ್ ಕಾಯಿದೆಯಲ್ಲಿ ನಿಬಂಧಿತವಾಗಿದ್ದುವು. 1784ರ ಪಿಟ್ಟನ ಇಂಡಿಯ ಕಾಯಿದೆ ಮತ್ತು 1786ರ ಅನುಬಂಧಿ ಕಾಯಿದೆಗಳಲ್ಲೂ ಇವನ್ನು ವ್ಯಾಖ್ಯಿಸಲಾಗಿದೆ. ಗವರ್ನರ್-ಜನರಲ್ ಸಾಮಾನ್ಯವಾಗಿ ತನ್ನ ಮಂಡಲಿಯ ಸಲಹೆಯ ಮೇರೆಗೆ ಆ ದೇಶದ ಆಡಳಿತ ನಡೆಸಬೇಕು. ಆದರೆ ಅಗತ್ಯವೆನಿಸಿದಾಗ ಆತ ಅದರ ಸಲಹೆಯನ್ನು ತಳ್ಳಿ ತನಗೆ ಸರಿಯೆನಿಸಿದಂತೆ ನಡೆಯಬಹುದು. ಎಂದರೆ ಬ್ರಿಟಿಷ್ ಆಡಳಿತ ಕಾಲದಲ್ಲಿ ಗವರ್ನರ್-ಜನರಲನಿಗೆ ಅತ್ಯುನ್ನತ ಅಧಿಕಾರವಿತ್ತು. ದೂರದಲ್ಲಿ ಇಂಗ್ಲೆಂಡಿನಲ್ಲಿದ್ದ ಪಾರ್ಲಿಮೆಂಟ್ ಹಾಗೂ ಸ್ಟೇಟ್ ಸೆಕ್ರೆಟರಿಗಳ ನಿಯಂತ್ರಣಕ್ಕೆ ಮಾತ್ರ ಇವನು ಒಳಪಟ್ಟಿರುತ್ತಿದ್ದ.

1947ರಲ್ಲಿ ಭಾರತ ಸ್ವಾತಂತ್ರ್ಯ ಕಾಯಿದೆ ಜಾರಿಗೆ ಬಂದಾಗ ಭಾರತದ ಗವರ್ನರ್-ಜನರಲನ ನೇಮಕವೂ ಅಧಿರಾಜ್ಯಗಳ ಗವರ್ನರ್-ಜನರಲರ ನೇಮಕದ ರೀತಿಯಲ್ಲೇ ಆಗಬೇಕಾಯಿತು. ಆದರೆ ರಾಣಿಗೆ ಈ ಬಗ್ಗೆ ಸಲಹೆ ನೀಡಲು ಸಚಿವರು ಇರಲಿಲ್ಲ. ಗವರ್ನರ್-ಜನರಲನ ನೇಮಕವಾಗುವರೆಗೂ ಸಚಿವರು ಅಧಿಕಾರ ಸ್ವೀಕರಿಸುವಂತಿರಲಿಲ್ಲ. ಆಗ ಅನೌಪಚಾರಿಕವಾಗಿ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ಗಳ ನಾಯಕರೊಂದಿಗೆ ಸಮಾಲೋಚಿಸಿ, ಭಾರತ-ಪಾಕಿಸ್ತಾನಗಳ ಗವರ್ನರ್-ಜನರಲ್‌ಗಳ ನೇಮಕದ ಬಗ್ಗೆ ಬ್ರಿಟಿಷ್ ಸರ್ಕಾರ ರಾಣಿಗೆ ಸಲಹೆ ಒಪ್ಪಿಸಿತು. ವೈಸ್‌ರಾಯ್ ಹುದ್ದೆ ಕೊನೆಗೊಂಡಿತು. ಭಾರತ ಸ್ವತಂತ್ರ ಗಣರಾಜ್ಯವಾಗುವವರೆಗೂ ಗವರ್ನರ್-ಜನರಲ್ ಹುದ್ದೆ ಮುಂದುವರೆಯಿತು.

ಭಾರತದಲ್ಲಿ ಅನುಕ್ರಮವಾಗಿ ಗವರ್ನರ್-ಜನರಲ್‌ಗಳಾಗಿದ್ದವರನ್ನೂ ಅವರ ಅಧಿಕಾರಾವಧಿಗಳನ್ನೂ ಮುಂದೆ ಕೊಡಲಾಗಿದೆ:

| | | |
|---|---|---|
| ವಾರನ್ ಹೇಸ್ಟಿಂಗ್ಸ್ | ... | 1773-1786 |
| ಲಾರ್ಡ್ ಕಾರ್ನ್‌ವಾಲಿಸ್ | ... | 1786-1793 |
| ಸರ್ ಜಾನ್ ಷೋರ್ | ... | 1793-1798 |
| ಲಾರ್ಡ್ ವೆಲೆಸ್ಲಿ | ... | 1798-1805 |
| ಲಾರ್ಡ್ ಕಾರ್ನ್‌ವಾಲಿಸ್ (ಎರಡನೆಯ ಬಾರಿ) | ... | 1805ಜುಲೈ-1805 ಅಕ್ಟೋಬರ್ |
| ಲಾರ್ಡ್ ಮಿಂಟೊ | ... | 1807-1813 |
| ಲಾರ್ಡ್ ಹೇಸ್ಟಿಂಗ್ಸ್ | ... | 1813-1823 |
| ಲಾರ್ಡ್ ಆಮ್‌ಹರ್ಸ್ಟ್ | ... | 1823-1828 |
| ಲಾರ್ಡ್ ವಿಲಿಯಂ ಬೆಂಟಿಂಕ್ | ... | 1828-1833 |
| ಲಾರ್ಡ್ ಆಕ್ಲ್ಯಾಂಡ್ | ... | 1836-1842 |
| ಲಾರ್ಡ್ ಎಲೆನ್‌ಬರೊ | ... | 1842-1844 |
| ಲಾರ್ಡ್ ಹಾರ್ಡಿಂಜ್ I | ... | 1844-1848 |
| ಲಾರ್ಡ್ ಡಾಲ್‌ಹೌಸಿ | ... | 1848-1856 |

| | | |
|---|---|---|
| ಲಾರ್ಡ್ ಕ್ಯಾನಿಂಗ್ | ... | 1856–1862 |
| ಲಾರ್ಡ್ ಎಲ್ಗಿನ್ I | ... | 1862–1863 |
| ಲಾರ್ಡ್ ಲಾರೆನ್ಸ್ | ... | 1864–1869 |
| ಲಾರ್ಡ್ ಮೇಯೊ | ... | 1869–1872 |
| ಲಾರ್ಡ್ ನಾರ್ತ್‌ಬ್ರೂಕ್ | ... | 1872–1876 |
| ಲಾರ್ಡ್ ಲಿಟನ್ I | ... | 1876–1880 |
| ಲಾರ್ಡ್ ರಿಪನ್ | ... | 1880–1884 |
| ಲಾರ್ಡ್ ಡಫರಿನ್ | ... | 1884–1888 |
| ಲಾರ್ಡ್ ಲ್ಯಾನ್ಸ್‌ಡೌನ್ | ... | 1888–1894 |
| ಲಾರ್ಡ್ ಎಲ್ಗಿನ್ I | ... | 1894–1899 |
| ಲಾರ್ಡ್ ಕರ್ಜನ್ | ... | 1899–1904 |
| ಲಾರ್ಡ್ ಮಿಂಟೊ II | ... | 1905–1910 |
| ಲಾರ್ಡ್ ಹಾರ್ಡಿಂಜ್ II | ... | 1910–1916 |
| ಲಾರ್ಡ್ ಚೆಮ್ಸ್‌ಫರ್ಡ್ | ... | 1916–1921 |
| ಲಾರ್ಡ್ ರೀಡಿಂಗ್ | ... | 1921–1925 |
| ಲಾರ್ಡ್ ಇರ್ವಿನ್ | ... | 1925–1931 |
| ಲಾರ್ಡ್ ವಿಲಿಂಗ್ಡನ್ | ... | 1931–1935 |
| ಲಾರ್ಡ್ ಲಿನ್ಲಿತ್‌ಗೊ | ... | 1936–1943 |
| ಲಾರ್ಡ್ ವೇವೆಲ್ | ... | 1943–1947 |
| ಲಾರ್ಡ್ ಮೌಂಟ್‌ಬ್ಯಾಟನ್ | ... | 1947–1948 |
| ಸಿ. ರಾಜಗೋಪಾಲಾಚಾರಿ | ... | 1948–1950 |

(ಎ.ಎಂ.)

**ಗಸಗಸೆ ಗಿಡ :** ಪಪಾವರೇಸೀ ಕುಟುಂಬಕ್ಕೆ ಸೇರಿದ ಸುಪ್ರಸಿದ್ಧ ಮೂಲಿಕೆ ಸಸ್ಯ. ಪರ್ಯಾಯ ನಾಮ ಅಫೀಮುಗಿಡ. ಪಪೇವರ್ ಸಾಮ್ನಿಫೆರಂ ವೈಜ್ಞಾನಿಕ ನಾಮ. ಸಾಮಾನ್ಯ ಬಳಕೆಯ ಇಂಗ್ಲಿಷ್ ಹೆಸರು ಓಪಿಯಂ ಪಾಪಿ ಅಥವಾ ವೈಟ್ ಪಾಪಿ. ಬಹಳ ಹಿಂದಿನ ಕಾಲದಿಂದ ಮೆಡಿಟರೇನಿಯನ್ ಪ್ರದೇಶಗಳು, ಮಧ್ಯ ಪ್ರಾಚ್ಯ, ಭಾರತ, ರಷ್ಯ ದೇಶಗಳಲ್ಲಿ ಇದರ ವ್ಯವಸಾಯ ಇದೆ. ಪಶ್ಚಿಮ ಯುರೋಪ್ ದೇಶಗಳಲ್ಲಿ ಇದನ್ನು ಗಸಗಸೆ ಬೀಜಗಳಿಗಾಗಿಯೂ ಪೂರ್ವದೇಶಗಳಲ್ಲಿ ಅದರಲ್ಲೂ ಭಾರತ, ಇರಾನ್, ಟರ್ಕಿಗಳಲ್ಲಿ ಅಫೀಮಿಗಾಗಿಯೂ ಹೆಚ್ಚಾಗಿ ಬೆಳೆಸಲಾಗುತ್ತಿದೆ. ಭಾರತದಲ್ಲಿ ಇದನ್ನು ಬೀಜ ಮತ್ತು ಅಫೀಮಿಗಾಗಿ ಸುಮಾರು 16ನೆಯ ಶತಮಾನದಿಂದ ಬೆಳೆಸುತ್ತಿದ್ದಾರೆ. ಅಫೀಮಿನ ಬೇಸಾಯ, ಮಾರಾಟ, ಬಳಕೆಗಳ ಬಗ್ಗೆ ಕಟ್ಟುನಿಟ್ಟಾದ ನಿಬಂಧನೆಗಳಿವೆ. ಸರ್ಕಾರದ ಅನುಮತಿ ಇಲ್ಲದೆ ಗಸಗಸೆ ಗಿಡವನ್ನು ಬೆಳೆಸಲಾಗದು. ಉತ್ತರ ಪ್ರದೇಶ, ಮಧ್ಯಪ್ರದೇಶ, ರಾಜಸ್ತಾನ, ಬಿಹಾರಗಳಲ್ಲಿ ಹೆಚ್ಚಾಗಿಯೂ ಕಾಶ್ಮೀರದಲ್ಲಿ ಅಲ್ಪಸ್ವಲ್ಪವಾಗಿಯೂ ಇದನ್ನು ಬೆಳೆಸುತ್ತಾರೆ. ಹಿಮಾಚಲ ಪ್ರದೇಶದಲ್ಲಿ ಇದರ ವ್ಯವಸಾಯವನ್ನು ನಿಷೇಧಿಸಲಾಗಿದೆ. ಗಸಗಸೆ ಗಿಡದ ಬೇಸಾಯ, ಇದರಿಂದ ಅಫೀಮನ್ನು ತೆಗೆಯುವ ವಿಧಾನ ಮತ್ತು ಅಫೀಮಿನ ಬಳಕೆಗಳನ್ನು ಕುರಿತ ವಿವರಗಳಿಗೆ **ನೋಡಿ– ಅಫೀಮು.**



ಗಸಗಸೆ ಗಿಡ ವಾರ್ಷಿಕ ಬಗೆಯದು. ಇದು ಸುಮಾರು 61ಸೆಂಮೀನಿಂದ 1ಮೀ–22ಸೆ.ಮೀ ಎತ್ತರಕ್ಕೆ ಬೆಳೆಯುತ್ತದೆ. ಕಾಂಡ ನೀಳವಾಗಿ ಬೆಳೆಯುವುದು. ಇದರ ಮೇಲ್ಭಾಗದಲ್ಲಿ ವಿರಳವಾಗಿ ಕೊಂಬೆಗಳು ಹರಡಿರುತ್ತವೆ. ಎಲೆಗಳ ಆಕಾರ ದೀರ್ಘ ಅಂಡದಂತೆ. ಅಂಚು ಸೀಳುಗೊಂಡಿದೆ. ಹೂಗಳು ಗಾತ್ರದಲ್ಲಿ ದೊಡ್ಡವು. ಇವುಗಳ ಭಾರಕ್ಕೆ ಕೊಂಬೆಗಳು ಜಗ್ಗಿ ತೂಗಾಡುತ್ತಿರುತ್ತವೆ. ಹೂಗಳ ಬಣ್ಣ ಕೆಂಪು, ಬಿಳಿ, ನೇರಳೆ, ನೀಲಿ–ಹೀಗೆ ವೈವಿಧ್ಯಮಯ. ಅಂಡಾಶಯ ಗುಂಡಗೆ ದಪ್ಪವಾಗಿದೆ. ಶಲಾಕೆ ಇಲ್ಲ. ಅಂಡಾಶಯದ ಮೇಲ್ಭಾಗದಲ್ಲಿ ಛಾವಣಿಯಂಥ ಶಲಾಕಾಗ್ರ ಉಂಟು. ಕಾಯಿಯ ಒಳಗೆ ಅಸಂಖ್ಯಾತ ಬೀಜಗಳಿವೆ. ಇವೇ ಗಸಗಸೆ. ಬೀಜಗಳ ಬಣ್ಣ ಕಪ್ಪು ಇಲ್ಲವೆ ಬಿಳಿ. ಆಕಾರ ಮೂತ್ರಪಿಂಡದಂತೆ. ಕಾಯಿಗಳು ಬಲಿತ ಮೇಲೆ ತುದಿಯಲ್ಲಿ ಸಣ್ಣ ಸಣ್ಣ ರಂಧ್ರಗಳು ಉಂಟಾಗಿ ಅವುಗಳ ಮೂಲಕ ಬೀಜಗಳು ಹೊರಬರುತ್ತವೆ. ಗಾಳಿಗೆ ಕಾಯಿ ಅಲುಗಾಡಿದಾಗ ಬೀಜಗಳು ಸ್ವಲ್ಪಸ್ವಲ್ಪವಾಗಿ ಹೊರಬಂದು ಚದರುತ್ತವೆ.

ಬೀಜಗಳಲ್ಲಿ ಪೌಷ್ಟಿಕಾಂಶಗಳು ಹೇರಳವಾಗಿವೆ. ಬೀಜಗಳ ರಾಸಾಯನಿಕ ಸಂಯೋಜನೆ ಈ ರೀತಿ ಇದೆ: ಶೇ.4.3–ಶೇ.5.2 ತೇವಾಂಶ, ಶೇ.22.3– ಶೇ.24.4 ಪ್ರೋಟೀನು, ಶೇ.1.03– ಶೇ.1.45 ಸುಣ್ಣ, ಶೇ.0.79–ಶೇ.0.89 ರಂಜಕ, ಶೇ.8.5–ಶೇ.11.1 ಕಬ್ಬಿಣ ಮತ್ತು ಥಯಾಮಿನ್, ರೈಬೊಫ್ಲೇವಿನ್, ನಿಕೊಟಿನಿಕ್ ಆಮ್ಲ ಮುಂತಾದ ವಿಟಮಿನ್ನುಗಳೂ ಮ್ಯಾಂಗನೀಸ್, ತಾಮ್ರ, ಮೆಗ್ನೀಸಿಯಂ, ಪೊಟ್ಯಾಸಿಯಂ, ಸತು ಮುಂತಾದ ಖನಿಜಾಂಶಗಳೂ ಲಘು ಪರಿಮಾಣಗಳಲ್ಲಿರುತ್ತವೆ. ಅಲ್ಲದೆ ಲೆಸಿತಿನ್, ಆಕ್ಸ್ಯಾಲಿಕ್ ಆಮ್ಲ, ಪೆಂಟಾಸಾನ್ಸ್ ಎಂಬ ವಸ್ತುಗಳೂ ಡಯಾಸ್ಟೇಸ್, ಎಮಲ್ಸಿನ್, ಲೈಪೇಸ್, ನ್ಯೂಕ್ಲಿಯೇಸ್ ಮುಂತಾದ ಕಿಣ್ವಗಳೂ ಇವೆ. ಮತ್ತುಬರಿಸುವ ಅಂಶವಾದ ನಾರ್ಕೋಟಿನ್ ಅತ್ಯಲ್ಪ ಪರಿಮಾಣದಲ್ಲಿದೆ. ಅನೇಕ ಬಗೆಯ ಖಾದ್ಯ ವಸ್ತುಗಳ ತಯಾರಿಕೆಯಲ್ಲಿ ಬೀಜಗಳನ್ನು ಬಳಸುತ್ತಾರೆ. ಬೀಜಗಳಿಗೆ ಔಷಧೀಯ ಗುಣಗಳೂ ಇವೆ. ಬೀಜಕ್ಕೆ ಪುಷ್ಟಿದಾಯಕ ಮತ್ತು ತಂಪುಕಾರಕವೆಂದು ಹೆಸರುಂಟು. ದೇಹಭಾಗಗಳನ್ನು ಮೃದುಗೊಳಿಸುವ ಲೇಪವಾಗಿಯೂ ಮಲಬದ್ಧತೆಯ ನಿವಾರಕವಾಗಿಯೂ ಇದನ್ನು ಬಳಸುವುದಿದೆ.

ಗಸಗಸೆಯ ಬೀಜಗಳಿಂದ ಎಣ್ಣೆಯನ್ನು ತೆಗೆಯುತ್ತಾರೆ. ಹಸಿಬೀಜಗಳನ್ನು ಗಾಣಕ್ಕೆ ಒಡ್ಡಿ ಇಲ್ಲವೆ ಬೇಯಿಸಿ ಎಣ್ಣೆ ತೆಗೆಯಬಹುದು. ಎಣ್ಣೆಯನ್ನು ಶುದ್ಧ ಮಾಡಿ ಅಡುಗೆಗೆ ಉಪಯೋಗಿಸಬಹುದು. ಎಣ್ಣೆಗೆ ಬಣ್ಣವಾಗಲಿ ವಾಸನೆಯಾಗಲಿ ಇಲ್ಲ. ರುಚಿ ಕೊಂಚ ಮಟ್ಟಿಗೆ ಬಾದಾಮಿ ರುಚಿಯನ್ನು ಹೋಲುತ್ತದೆ. ಎಣ್ಣೆಯನ್ನು ಸಾಬೂನು, ಡಾಲ್ಡ, ವಾರ್ನಿಷ್ ಬಣ್ಣ, ಚಿತ್ರ ಲೇಖನದ ಬಣ್ಣಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಎಣ್ಣೆ ತೆಗೆದ ಮೇಲೆ ಉಳಿವ ಹಿಂಡಿ ಸಿಹಿಯಾಗಿ ಪುಷ್ಟಿದಾಯಕವಾಗಿರುತ್ತದೆ. ಇದನ್ನು ತಿನ್ನುವುದುಂಟು. ದನಕರುಗಳಿಗೆ ಮೇವಾಗಿ ಉಪಯೋಗಿಸುತ್ತಾರೆ. ಎಳೆಯ ಗಸಗಸೆ ಗಿಡವನ್ನು ಸೊಪ್ಪಿನಂತೆ ತರಕಾರಿಯಾಗಿ ಬಳಸುವುದುಂಟು. ಹೂಗಳಿಂದ ಒಂದು ವಿಧವಾದ ಪಾಕವನ್ನು ತಯಾರಿಸುತ್ತಾರೆ. ಕಾಯಿಗಳಿಂದ ಒಂದು ಬಗೆಯ ಮಾದಕ ಪಾನೀಯವನ್ನು ತಯಾರಿಸುತ್ತಾರೆ. ಗಾಯಗಳಿಗೂ ಊತಗಳಿಗೂ ಇದರ ಎಲೆಯನ್ನು ಕಟ್ಟುತ್ತಾರೆ. (ಎಂ.ಸಿ.ಆರ್.)

**ಗಸಗಸೆ ಹಣ್ಣಿನ ಮರ :** ಟೀಲಿಯೇಸೀ ಕುಟುಂಬಕ್ಕೆ ಸೇರಿದ ಒಂದು ಮಧ್ಯಮಗಾತ್ರದ ಮರ. ಇದರ ಹಣ್ಣಿನಲ್ಲಿ ಗಸಗಸೆ ಬೀಜವನ್ನು ಹೋಲುವ ನೂರಾರು ಬೀಜಗಳು ಇರುವುದರಿಂದ ಇದಕ್ಕೆ ಈ ಹೆಸರು. ಇದನ್ನು ಸಾಮಾನ್ಯ ಬಳಕೆಯ ಇಂಗ್ಲಿಷಿನಲ್ಲಿ ಸಿಂಗಪುರ ಚೆರಿ ಅಥವಾ ಜಪಾನೀಸ್ ಚೆರಿ ಎನ್ನಲಾಗುತ್ತದೆ. ಮುಂಟಿಂಜಿಯ ಕ್ಯಾಲಬುರ ಶಾಸ್ತ್ರೀಯ ನಾಮ. ಇದು ಮೂಲತಃ ದಕ್ಷಿಣ ಅಮೆರಿಕದ್ದು. ಉಷ್ಣವಲಯ ದೇಶಗಳಲ್ಲೆಲ್ಲ ಇದನ್ನು ಹಣ್ಣಿಗಾಗಿ ಮತ್ತು ಉದ್ಯಾನವನಗಳಲ್ಲಿ ಅಲಂಕಾರಕ್ಕಾಗಿ ಬೆಳೆಸುತ್ತಾರೆ. ಎಲ್ಲ ದಿಕ್ಕುಗಳಲ್ಲಿಯೂ ಹರಡಿ ಬೆಳೆಯುವ ಕೊಂಬೆಗಳು, ಭರ್ಜಿಯಾಕಾರದ ಹಾಗೂ ಗರಗಸ ಅಂಚುಳ್ಳ ಎಲೆಗಳು ಮತ್ತು ಸಣ್ಣಗಾತ್ರದ ಬಿಳಿಯಬಣ್ಣದ ಹೂಗಳು ಇದರ ಮುಖ್ಯ ಲಕ್ಷಣಗಳಲ್ಲಿ ಕೆಲವು. ಹಣ್ಣು ಬೆರಿ ಮಾದರಿಯದು. ಇದು ಗುಂಡಾಗಿಯೂ ನುಣುಪಾಗಿಯೂ ಇದೆ. ಇದರ ಬಣ್ಣ ಕೆಂಪು. ರುಚಿ ಸಿಹಿ. ಹಣ್ಣಿನಲ್ಲಿ ರಸಭರಿತ ತಿರುಳಿದೆ. ಇದರಿಂದ ಮುರಬ್ಬ ತಯಾರಿಸಬಹುದು. ಗಸಗಸೆ ಹಣ್ಣಿನ ಮರವನ್ನು ಕಾಂಡತುಂಡುಗಳಿಂದ ವೃದ್ಧಿಸುತ್ತಾರೆ. ಮರಳುಭೂಮಿ ಇದರ ಬೆಳವಣಿಗೆಗೆ ಉತ್ತಮ. ಈ ಮರದ ಎಲೆಗಳಿಂದ ಒಂದು ಬಗೆಯ ಕಷಾಯ ಮಾಡುವುದುಂಟು. ಹೂಗಳನ್ನು ತಲೆನೋವು ಮತ್ತು ನೆಗಡಿಗೆ ಔಷಧಿಯಾಗಿ ಉಪಯೋಗಿಸುತ್ತಾರೆ. ಇದರ ತೊಗಟೆಯಿಂದ ನಾರು ತೆಗೆದು ಹಗ್ಗಗಳನ್ನು ತಯಾರಿಸುವುದಿದೆ. (ಎನ್.)

**ಗಸ್ಟೇವಸ್ :** ಸ್ವೀಡನಿನ ದೊರೆಗಳ ಹೆಸರು.

**ಗಸ್ಟೇವಸ್ I ವೇಸ :** 1496–1560. ಸ್ವೀಡನನ್ನು ಡೆನ್ಮಾರ್ಕಿನಿಂದ ಪ್ರತ್ಯೇಕಿಸಿ ಅಲ್ಲಿ ಸ್ವತಂತ್ರ ರಾಜಮನೆತನವನ್ನು ಸ್ಥಾಪಿಸಿದ. ಈತ 15ನೆಯ ಶತಮಾನದ ಕೊನೆಯಲ್ಲಿ ಅಲ್ಲಿಯ ಪ್ರಸಿದ್ಧ ಮನೆತನವೊಂದರಲ್ಲಿ ಹುಟ್ಟಿದ. ಈತನ ಪೂರ್ವಿಕರು ಸ್ಕಾಂಡಿನೇವಿಯದ ರಾಜಕೀಯದಲ್ಲಿ ಆಸಕ್ತಿ ಹೊಂದಿದ್ದರು. ಸ್ವೀಡನಿನ ರೀಜೆಂಟರಾಗಿದ್ದ ಸ್ಟೂರರ

ಮನೆತನದೊಡನೆ ಸಂಬಂಧ ಹೊಂದಿದ್ದರು. ಗಸ್ಟೇವಸ್ ಯೌವನದಲ್ಲಿ ಸ್ಟೆನ್ ಸ್ಟೂರನ ಪರವಾಗಿ ಡೆನ್ಮಾರ್ಕಿನ ರಾಜ ಎರಡನೆಯ ಕ್ರಿಶ್ಚನೊಡನೆ 1517–18ರಲ್ಲಿ ಕಾದಾಡಿದ. ಸ್ಟೇನ್ ಮತ್ತು ಕ್ರಿಶ್ಚನ್ ನಡುವೆ ಆದ ಒಪ್ಪಂದದ ಪ್ರಕಾರ ಗಸ್ಟೇವಸ್‌ನನ್ನು ಕ್ರಿಶ್ಚನನಿಗೆ ಒತ್ತೆಯಾಗಿ ಸ್ಟೆನ್ ಒಪ್ಪಿಸಿದ. ಕ್ರಿಶ್ಚನ್ ಒಪ್ಪಂದವನ್ನು ಉಲ್ಲಂಘಿಸಿ ಗಸ್ಟೇವಸನನ್ನು ಡೆನ್ಮಾರ್ಕಿಗೆ ಕೊಂಡೊಯ್ದ. ಗಸ್ಟೇವಸ್ ಬಂಧನದಿಂದ ತಪ್ಪಿಸಿಕೊಂಡು ಲುಬೆಕ್ ನಗರಕ್ಕೆ ಓಡಿಹೋದ. ಅಲ್ಲಿ ಅನೇಕ ಮಂದಿ ಶ್ರೀಮಂತರು ಇವನ ಸ್ನೇಹಿತರಾದರು. ಅನಂತರ ಗಸ್ಟೇವಸ್ ಸ್ವೀಡನನ್ನು ತಲುಪಿದ. ಸ್ವೀಡನಿನ ರೀಜೆಂಟರಾಗಿದ್ದ ಸ್ಟೆನ್ ಸ್ಟೂರ್ 1520ರಲ್ಲಿ ಮರಣ ಹೊಂದಿದ್ದರಿಂದ ಎರಡನೆಯ ಕ್ರಿಶ್ಚನ್ ಸ್ಟಾಕೋಂ ಉಳಿದು ಇಡೀ ಸ್ವೀಡನಿನ ಮೇಲೆ ಅಧಿಕಾರ ಸ್ಥಾಪಿಸಿದ. ಕ್ರಿಶ್ಚನ್ ತನ್ನ ತೀವ್ರ ವಿರೋಧಿಗಳೆನಿಸಿ ದವರನ್ನೆಲ್ಲ ಕೊಲೆ ಮಾಡಿದ. ಗಸ್ಟೇವಸನ ತಂದೆಯೂ ಚಿಕ್ಕಪ್ಪಂದಿರೂ ಸಾವಿಗೆ ಈಡಾದರು. ಗಸ್ಟೇವಸ್ ಧೈರ್ಯಗೆಡಲಿಲ್ಲ. ಸ್ವೀಡನಿನಲ್ಲಿ ಕ್ರಿಶ್ಚನನ ಅಧಿಕಾರವನ್ನು ಕೊನೆಗಾಣಿಸದೆ ಗತ್ಯಂತರವಿಲ್ಲವೆಂದು ನಿರ್ಧರಿಸಿದ. ಅವನು ಕ್ರಿಶ್ಚನಿನ ಆಡಳಿತವನ್ನು ವಿರೋಧಿಸುತ್ತ ಗುಂಪಿನ ಮುಖಂಡನಾಗಿ ಬಂಡಾಯಕ್ಕೆ ಸಿದ್ಧವಾದ. ಲುಬೆಕ್‌ನ ಶ್ರೀಮಂತ ವರ್ತಕರು ಗಸ್ಟೇವಸನಿಗೆ ಅಗತ್ಯವಾಗಿದ್ದ ಹಣದ ನೆರವು ನೀಡಿದರು. ಗಸ್ಟೇವಸ್ ಪ್ರಬಲನಾಗಿ, ಸ್ವೀಡನಿನ ಮೇಲೆ ಡೆನ್ಮಾರ್ಕಿನ ದೊರೆ ಎರಡನೆಯ ಕ್ರಿಶ್ಚನನ ಆಡಳಿತವನ್ನು ಕೊನೆಗಾಣಿಸಿದ. 1523ರಲ್ಲಿ ಈತ ಸ್ವತಂತ್ರ ಸ್ವೀಡನಿನ ರಾಜನಾದ. ಈತ ಚುನಾವಣೆಯ ಮುಖಾಂತರ ಸಿಂಹಾಸನಕ್ಕೆ ಬಂದರೂ ಮುಂದೆ ರಾಜತ್ವ ತನ್ನ ವಂಶಪಾರಂಪರ್ಯ ವಾಗುವಂತೆ ಪ್ರತಿನಿಧಿಸಭೆಯ ಒಪ್ಪಿಗೆ ದೊರಕಿಸಿಕೊಂಡ. ಡೆನ್ಮಾರ್ಕಿನಲ್ಲಿ ಸಿಂಹಾಸನಕ್ಕಾಗಿ ಕಚ್ಚಾಟಗಳುಂಟಾದವು. ಆ ಸಮಯದಲ್ಲಿ ಗಸ್ಟೇವಸ್ ಎರಡನೆಯ ಕ್ರಿಶ್ಚನನ ವಿರೋಧಿಗಳ ಜೊತೆ ಸೇರಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡ. ಕ್ರಿಶ್ಚನನ ಚಿಕ್ಕಪ್ಪ ಒಂದನೆಯ ಫ್ರೆಡರಿಕ್ ಎಂಬವನು ಕ್ರಿಶ್ಚನನನ್ನು ಓಡಿಸಿ ತಾನೇ ದೊರೆಯಾಗಿದ್ದ. ಅವನು ಗಸ್ಟೇವಸನ ಸಖ್ಯ ಸಾಧಿಸುವುದು ಅವನ ಹಿತದೃಷ್ಟಿಯಿಂದ ಅವಶ್ಯವಾಯಿತು. ಸ್ವೀಡನ್ ಡೆನ್ಮಾರ್ಕ್‌ಗಳ ಮಧ್ಯೆ ಕಾಲಕ್ರಮದಲ್ಲಿ ಸ್ನೇಹ ಬೆಳೆಯಿತು.

ಗಸ್ಟೇವಸ್ ಅನೇಕ ಸುಧಾರಣೆಗಳನ್ನು ಕೈಗೊಂಡ. ಹೆಚ್ಚು ತೆರಿಗೆಗಳನ್ನು ವಿಧಿಸಿದ. ಶ್ರೀಮಂತವಾಗಿದ್ದ ಚರ್ಚುಗಳ ಆಸ್ತಿಯನ್ನು ಮೊಟಕುಗೊಳಿಸಲು ಹವಣಿಸಿದ. ರಾಜ ತನಿಗಿಷ್ಟ ಬಂದಂತೆ ಚರ್ಚಿನ ಆಸ್ತಿಯನ್ನು ಬಳಸಿಕೊಳ್ಳಬಹುದೆಂದು ಸ್ವೀಡನಿನ ಪ್ರತಿನಿಧಿ ಸಭೆ 1527ರಲ್ಲಿ ಒಪ್ಪಿಗೆ ನೀಡಿತು. ಈ ನಿಮಿತ್ತವಾಗಿ ಸ್ವೀಡನಿನಲ್ಲಿ ಮತಸುಧಾರಣೆಯೂ ಪ್ರಾರಂಭವಾಯಿತು. ಗಸ್ಟೇವಸ್ ಪ್ರಾಟೆಸ್ಟಂಟ್ ಪಂಥದತ್ತ ವಾಲಲು ಅವನ ಧಾರ್ಮಿಕ ಒಲವಿಗಿಂತ ರಾಜಕೀಯ ಚಾತುರ್ಯವೇ ಮುಖ್ಯ ಕಾರಣ. ಜರ್ಮನಿಯ ಪ್ರಾಟೆಸ್ಟಂಟ್ ರಾಜರು ನಿರ್ಮಿಸಿಕೊಂಡಿದ್ದ ರಾಜಕೀಯ ನೀತಿಯನ್ನನುಸರಿಸಿ ಸ್ವೀಡನಿನಲ್ಲಿ ಪ್ರಬಲವಾದ ರಾಜತ್ವವನ್ನು ಸ್ಥಾಪಿಸಿದ. ವೈಯಕ್ತಿಕವಾಗಿ ವಿಪುಲವಾದ ಹಣ ಮತ್ತು ಆಸ್ತಿಯನ್ನು ಕಲೆ ಹಾಕಿ ಇತರ ಎಲ್ಲ ಶ್ರೀಮಂತರಿಗಿಂತಲೂ ಸ್ಥಿತಿವಂತನೆನಿಸಿಕೊಂಡ. ಇಡೀ ಸ್ವೀಡನ್ ಒಂದು ಭಾರಿ ಜಹಗೀರು, ಅದಕ್ಕೆ ತಾನೇ ಅಧಿಪತಿ–ಎಂಬಂತೆ ಅವನ ಧೋರಣೆ ಯಾಗಿತ್ತು. ಸ್ವೀಡನಿನ ಆಡಳಿತವನ್ನು ಪ್ರಗತಿದಾಯಕವಾಗಿ ಮಾರ್ಪಡಿಸಲು ಆತ ಅನೇಕ ಸುಧಾರಣೆಗಳನ್ನು ಕೈಗೊಂಡ. ಕೊನೆಗೆ 1644ರಲ್ಲಿ ರಾಜತ್ವ ವಂಶಪಾರಂಪರ್ಯವಾಗಿ ಅವನ ಮನೆತನದ ಹಕ್ಕೆಂಬುದಕ್ಕೆ ಪ್ರತಿನಿಧಿ ಸಭೆ ಸಮ್ಮತಿ ನೀಡಿತು.

ಗಸ್ಟೇವಸ್ ವೇಸ ಪರಾಕ್ರಮಿ. ಹಲವು ವೇಳೆ ಭಯೋತ್ಪಾದಕ ಕೃತ್ಯಗಳಲ್ಲಿ ತೊಡಗುತ್ತಿದ್ದ. ತನ್ನ ಶತ್ರುಗಳನ್ನು ನಿರ್ನಾಮ ಮಾಡಲು ಎಂಥ ಕೃತ್ಯಕ್ಕೂ ಅವನು ಹಿಂಜರಿಯುತ್ತಿರಲಿಲ್ಲ. ಸಾಹಿತ್ಯ ಮತ್ತು ಕಲೆಯಲ್ಲಿ ಹೆಚ್ಚು ಅಭಿರುಚಿಯಿಲ್ಲದಿದ್ದರೂ ಅವನು ಸಂಗೀತಪ್ರಿಯನಾಗಿದ್ದ. ಸ್ವೀಡಿಷ್ ಭಾಷೆಯಲ್ಲಿ ಚತುರ ಭಾಷಣಕಾರನಾಗಿದ್ದ. ಪತ್ರ ವ್ಯವಹಾರದಲ್ಲಿ ಅವನಿಗೆ ವಿಶೇಷ ಪ್ರತಿಭೆಯಿತ್ತು. ಸ್ವೀಡನನ್ನು ಸ್ವತಂತ್ರಗೊಳಿಸಿ 40 ವರ್ಷಗಳ ಕಾಲ ಭದ್ರವಾದ ಆಡಳಿತ ನಡೆಸಿದ. ಮತಸುಧಾರಣಾ ಚಳವಳಿಯಲ್ಲಿ ಸ್ವೀಡನ್ ಭಾಗವಹಿಸುವಂತೆ ಮಾಡಿದ. ಸದಾ ಸಜ್ಜಾಗಿದ್ದ ಭೂ ಸೈನ್ಯ ಹಾಗೂ ನೌಕಾದಳವನ್ನು ಅವನು ಪ್ರಪ್ರಥಮವಾಗಿ ಸ್ಥಾಪಿಸಿದ. ಸಮಕಾಲೀನ ದಕ್ಷ ರಾಜರಲ್ಲಿ ಗಸ್ಟೇವಸ್ ವೇಸನೂ ಒಬ್ಬನೆಂದು ಪರಿಗಣಿತನಾಗಿದ್ದಾನೆ. ಗಸ್ಟೇವಸ್ ವೇಸನ ಮರಣಾ ನಂತರ (1560) ಅವನ ಮಗ 14ನೆಯ ಎರಿಕ್ ರಾಜನಾದ.

**ಗಸ್ಟೇವಸ್ II ಅಡಾಲ್ಫಸ್** : 1594–1632. ಸ್ವೀಡನಿನ 9ನೆಯ ಚಾರ್ಲ್ಸ್‌ನಿಗೆ ಅವನ ಎರಡನೆಯ ಹೆಂಡತಿ ಕ್ರಿಸ್ಟೀನಳಲ್ಲಿ ಹುಟ್ಟಿದ ಹಿರಿಯ ಮಗ. ತನ್ನ ತಂದೆಯ ಮರಣಾನಂತರ 1611ರಲ್ಲಿ ಇನ್ನೂ ಚಿಕ್ಕ ವಯಸ್ಸಿನಲ್ಲೇ ಪಟ್ಟಕ್ಕೆ ಬಂದ. ಅವನ ತಂದೆಯ ದರ್ಪಿಷ್ಟ ಆಡಳಿತ, ಪೋಲೆಂಡಿನೊಡನೆ ಅವನ ಯುದ್ಧ–ಈ ಕಾರಣ ಗಳಿಂದಾಗಿ ಗಸ್ಟೇವಸ್ ಸಿಂಹಾಸನಕ್ಕೆ ಬಂದ ತರುವಾಯ ಅನೇಕ ಕಷ್ಟಗಳನ್ನೆದುರಿಸ ಬೇಕಾಯಿತು. ಬಾಲ್ಯದಲ್ಲಿ ಒಳ್ಳೆಯ ಶಿಕ್ಷಣವನ್ನು ಪಡೆದಿದ್ದ ಗಸ್ಟೇವಸ್ ಚತುರತೆಯಿಂದ ತನಗೆದುರಾದ ತೊಡಕುಗಳನ್ನು ಬಗೆಹರಿಸಿಕೊಂಡ. ಆಡಳಿತದಲ್ಲಿದ್ದ ಲೋಪದೋಷ ಗಳನ್ನು ಸರಿಪಡಿಸಿದ. ಶ್ರೀಮಂತರಿಗೆ ಹಣ ಕೊಟ್ಟು ಅವರ ವಿಶ್ವಾಸ ಸಂಪಾದಿಸಿಕೊಂಡ. ಸ್ಥಳೀಯ ಸಂಸ್ಥೆಗಳನ್ನು ನೇರ್ಪುಗೊಳಿಸಿದ. ಹೀಗಾಗಿ ಪ್ರಜೆಗಳ ಮೆಚ್ಚುಗೆಗೆ ಪಾತ್ರನಾದ. ಈತ ಸ್ವೀಡನ್‌ನ ಅತ್ಯಂತ ಪ್ರಸಿದ್ಧ ರಾಜರಲ್ಲೊಬ್ಬ. ಇವನ ಸುಧಾರಣೆಗಳು ಮುಂದಿನ ಎರಡು ಶತಮಾನಗಳ ಕಾಲದಲ್ಲಿ ಸ್ವೀಡನ್‌ನ ಪ್ರಗತಿಗೆ ಸಹಕಾರಿಯಾದವು. ಈತ ವಾಕ್‌ಚತುರ, ಮೇಧಾವಿ, ಸಂಗೀತಪ್ರಿಯ, ತೀಕ್ಷ್ಣಮತಿ. ವಿದ್ಯಾಭ್ಯಾಸದ ಪ್ರಗತಿಗೆ ಇವನು ವಿಶೇಷ ಗಮನ ಕೊಟ್ಟ. ಅನೇಕ ಶಾಲೆಗಳನ್ನು ಸ್ಥಾಪಿಸಿದ. ಸ್ವೀಡನ್‌ನ ಉಪ್ಸಾಲ ವಿಶ್ವವಿದ್ಯಾಲಯ ಪುರೋಭಿವೃದ್ಧಿ ಹೊಂದಿ ಯುರೋಪಿನ ಇತರ ಸುಪ್ರಸಿದ್ಧ ವಿಶ್ವವಿದ್ಯಾಲಯಗಳಿಗೆ ಸರಿಸಮನಾಗಿ ಬೆಳೆದು ಪ್ರಸಿದ್ಧಿಗೆ ಬರಲು ಈತನೇ ಕಾರಣ. ರಾಷ್ಟ್ರದ ವಾಣಿಜ್ಯ ಪ್ರಗತಿ ಸಾಧಿಸಲು ಅನೇಕ ಹೊಸ ಪಟ್ಟಣಗಳನ್ನು ಸ್ಥಾಪಿಸಿದ. ಅವುಗಳಲ್ಲಿ ಎಲ್ಲವೂ ಬೆಳೆಯಲಿಲ್ಲವಾದರೂ ಗಾತನ್‌ಬರ್ಗ್ ಪ್ರಸಿದ್ಧವಾಯಿತು. ದೇಶದಲ್ಲಿ ದೊರೆಯುತ್ತಿದ್ದ ಖನಿಜ ನಿಕ್ಷೇಪಗಳನ್ನು ಸದುಪಯೋಗಪಡಿಸಿಕೊಳ್ಳುವ ಸಲುವಾಗಿ ವಿದೇಶಿ ಬಂಡವಾಳಗಾರರನ್ನು ಆಹ್ವಾನಿಸಿ ಗಣಿ ಉದ್ಯಮಗಳನ್ನು ಸ್ಥಾಪಿಸಿದ. ಇದರಿಂದ ಸ್ವೀಡನ್ ದೇಶ ತಾಮ್ರ ಮತ್ತು ಕಬ್ಬಿಣ ಕೈಗಾರಿಕೆಗಳಲ್ಲಿ ವಿಶೇಷ ಪ್ರಗತಿ ಸಾಧಿಸಿತು.

2ನೆಯ ಗಸ್ಟೇವಸ್ ಆಂತರಿಕ ಹಾಗೂ ಅಂತಾರಾಷ್ಟ್ರೀಯ ನೀತಿಗಳನ್ನು ಬಹು ಸೂಕ್ಷ್ಮವಾಗಿ ಯೋಚಿಸಿ ರೂಪಿಸುತ್ತಿದ್ದ. ಡೆನ್ಮಾರ್ಕ್ ರಷ್ಯಗಳೊಡನೆ ಅವನು ಅನಿವಾರ್ಯವಾಗಿ ಯುದ್ಧ ಮಾಡಲೇಬೇಕಾಯಿತು. ರಷ್ಯದೊಡನೆ ಸಂಧಾನವನ್ನೇರ್ಪ ಡಿಸಿಕೊಂಡು ಪರಿಸ್ಥಿತಿಯನ್ನು ಸುಧಾರಿಸಿಕೊಂಡ. ಪೋಲೆಂಡಿನೊಡನಿದ್ದ ಹಗೆತನವನ್ನು ಅಂತ್ಯಗೊಳಿಸಲು ಅವನು ಅನೇಕ ಕ್ರಮಗಳನ್ನು ಕೈಗೊಂಡ. ಯುರೋಪಿನ ಪ್ರಾಟೆಸ್ಟಂಟ್ ರಾಷ್ಟ್ರಗಳೊಡನೆ ಮೈತ್ರಿ ಬೆಳೆಸಿದ. ಬ್ರಾಂಡನ್‌ಬರ್ಗಿನ ಜಾನ್ ಸಿಗಿಸ್ಮಂಡನ ಮಗಳಾದ ಎಲಿಯನೋರಳನ್ನು 1620ರಲ್ಲಿ ವಿವಾಹವಾದದ್ದು ಈ ಉದ್ದೇಶಕ್ಕಾಗಿ.

ಈ ಮಧ್ಯೆ 1618ರಲ್ಲಿ ಯುರೋಪಿನಲ್ಲಿ ಮೂವತ್ತು ವರ್ಷಗಳ ಯುದ್ಧ ಪ್ರಾರಂಭವಾಯಿತು. ಆಸ್ಟ್ರಿಯದ ಚಕ್ರವರ್ತಿ 2ನೆಯ ಫರ್ಡಿನೆಂಡ್ ಪೋಲೆಂಡಿಗೆ ವಿಶೇಷ ಸಹಾಯ ನೀಡಿದ. ಸ್ವೀಡನ್‌ಗೂ ಪೋಲೆಂಡ್‌ಗೂ ವೈರ ಬೆಳೆಯಿತು. ಆಸ್ಟ್ರಿಯನ್‌ರ ಸಹಾಯದಿಂದ ಬಾಲ್ಟಿಕ್ ಪ್ರದೇಶಗಳನ್ನು ವಶಪಡಿಸಿಕೊಳ್ಳಲು ಪೋಲೆಂಡ್ ಯತ್ನಿಸಿತು. 2ನೆಯ ಗಸ್ಟೇವಸ್ 1621ರಲ್ಲಿ ಪೋಲೆಂಡ್‌ನ ಸೈನ್ಯವನ್ನು ರೀಗ್‌ನಲ್ಲಿ ಸೋಲಿಸಿದ. ಆ ವೇಳೆಗೆ ಮಧ್ಯ ಜರ್ಮನಿಯಲ್ಲಿ ಆಸ್ಟ್ರಿಯನ್ ಸೈನ್ಯಗಳು ಪ್ರಾಟೆಸ್ಟಂಟ್ ರಾಜರನ್ನು ಸೋಲಿಸಿದವು. 1627ರಲ್ಲಿ ಪ್ರಾಟೆಸ್ಟಂಟ್ ಪಂಥಕ್ಕೆ ವಿಪತ್ತೊದಗಿದಂತೆ ಕಂಡಿತು. ಗಸ್ಟೇವಸ್ ಪ್ರಾಟೆಸ್ಟಂಟ್ ರಾಜರ ಒಕ್ಕೂಟವನ್ನು ಸ್ಥಾಪಿಸಿ ಆಸ್ಟ್ರಿಯನ್ ಸಾಮ್ರಾಜ್ಯವನ್ನು ಸೋಲಿಸಲು ಯತ್ನಿಸಿದ. ಆದರೆ ಅವನ ಈ ಪ್ರಯತ್ನ ಪೂರ್ಣವಾಗಿ ಯಶಸ್ವಿಯಾಗಲಿಲ್ಲ. ಸ್ವೀಡನ್ ಮತ್ತು ಪ್ರಾಟೆಸ್ಟಂಟ್ ಪಂಥದ ಮೇಲ್ಮೆಗಾಗಿ ಹೋರಾಡಲು ಗಸ್ಟೇವಸ್ ನಿರ್ಧರಿಸಿ 1629ರಲ್ಲಿ ಜರ್ಮನಿಯನ್ನು ಪ್ರವೇಶಿಸಿದ. ಪ್ರಾಟೆಸ್ಟಂಟ್ ಪಂಥಾನುಯಾಯಿಗಳು ಗಸ್ಟೇವಸ್‌ನನ್ನು ಉತ್ತರದ ಸಿಂಹ ಎಂಬುದಾಗಿ ಕರೆದು ಅವನ ನೇತೃತ್ವದಲ್ಲಿ ಹೋರಾಡಲು ಸಿದ್ಧರಾದರು. ಮ್ಯಾಗ್ಡೆಬರ್ಗ್ ನಗರವನ್ನು ವಶಪಡಿಸಿ ಕೊಳ್ಳುವುದರಲ್ಲಿ ಗಸ್ಟೇವಸ್ ವಿಫಲನಾದರೂ ಧೈರ್ಯಗೆಡದೆ ಯುದ್ಧವನ್ನು ಮುಂದುವರಿಸಿದ. ಬ್ರೈಟೆನ್‌ಫೆಲ್ಟ್ ಕದನದಲ್ಲಿ ಗಸ್ಟೇವಸ್ ಆಸ್ಟ್ರಿಯನ್ ಸಾಮ್ರಾಜ್ಯದ ಸೈನ್ಯವನ್ನು ಸಂಪೂರ್ಣವಾಗಿ ಸೋಲಿಸಿ ಅದ್ಭುತ ವಿಜಯ ಗಳಿಸಿದ. ಅವನ ಪ್ರತಿಷ್ಠೆ ಹೆಚ್ಚಿತು. ಪ್ರಾಟೆಸ್ಟಂಟ್ ಪಂಥಕ್ಕೆ ಒದಗಿದ್ದ ವಿಪತ್ತು ದೂರವಾಯಿತು. 1632ರಲ್ಲಿ ಗಸ್ಟೇವಸ್ ಬವೇರಿಯದ ಮೇಲೆ ದಂಡೆತ್ತಿಹೋಗಿ ಮ್ಯೂನಿಕ್ ಅನ್ನು ಆಕ್ರಮಿಸಿದ. ಅದೇ ವರ್ಷ ಲುಟ್ಸೆನ್‌ನಲ್ಲಿ ನಡೆದ ಕದನದಲ್ಲಿ ಗಸ್ಟೇವಸ್‌ನ ಸೈನ್ಯ ವಿಜಯ ಗಳಿಸಿತಾದರೂ ಅಶ್ವದಳವೊಂದರ ಮುಂದಾಳಾಗಿದ್ದ ಆತ ಮರಣ ಹೊಂದಿದ.

2ನೆಯ ಗಸ್ಟೇವಸ್ ರಾಜತಂತ್ರ ನಿಪುಣ, ವೀರಯೋಧ, ಚತುರ ದಳಪತಿ. ಕರ್ತವ್ಯ, ಶ್ರದ್ಧೆ, ಕರುಣೆ, ಸಹನೆ ಮೊದಲಾದ ಗುಣಗಳಿಗೂ ಅವನು ಹೆಸರಾಗಿದ್ದ. ತನ್ನ ರಾಷ್ಟ್ರದ ಹಿರಿಮೆಯನ್ನು ಹೆಚ್ಚಿಸಿದ ಪ್ರಾಟೆಸ್ಟಂಟ್ ಪಂಥದ ಉಳಿವು ಸಂದಿಗ್ಧ ಸ್ಥಿತಿಯಲ್ಲಿದ್ದಾಗ ಅದಕ್ಕೆ ಗೆಲವು ತುಂಬಿ, ರಣರಂಗದಲ್ಲಿ ವೀರಾವೇಶದಿಂದ ಹೋರಾಡಿದ. ಗಸ್ಟೇವಸ್‌ನ ಮರಣಾನಂತರ ಅವನ ಏಕಮಾತ್ರ ಪುತ್ರಿಯಾದ ಕ್ರಿಸ್ಟೀನ ಸ್ವೀಡನ್‌ನ ಸಿಂಹಾಸನವನ್ನೇರಿದಳು.

**ಗಸ್ಟೇವಸ್ III :** 1746–92. ಸ್ವೀಡನಿನ ದೊರೆ ಅಡಾಲ್ಫಸ್ ಫ್ರೆಡರಿಕ್ ಮತ್ತು ಲೂಯಿಸ ಉಲ್ರಿಕ–ಇವರ ಮಗ. ಲೂಯಿಸ ಉಲ್ರಿಕ ಪ್ರಷ್ಯದ ಫ್ರೆಡರಿಕ್ ಮಹಾಶಯನ ಸೋದರಿ. 3ನೆಯ ಗಸ್ಟೇವಸ್ 1771ರಲ್ಲಿ ಸ್ವೀಡನ್‌ನ ರಾಜನಾದ. ರಾಜತಂತ್ರ ನಿಪುಣರೂ ವಿದ್ವಾಂಸರೂ ಅವನಿಗೆ ಬಾಲ್ಯದಲ್ಲಿ ಶಿಕ್ಷಣ ನೀಡಿದರು. 1771ರ ಪ್ರಾರಂಭದಲ್ಲಿ ಯುವರಾಜ ಗಸ್ಟೇವಸ್ ರಾಜಕೀಯ ಸಂಧಾನಕ್ಕಾಗಿ ಫ್ರಾನ್ಸ್‌ಗೆ ಭೇಟಿ ನೀಡಿದ್ದ ಕಾಲದಲ್ಲಿ ಅವನ ತಂದೆ ಮರಣ ಹೊಂದಿದ. ತತ್‌ಕ್ಷಣ ಗಸ್ಟೇವಸ್ ರಾಜಧಾನಿಗೆ ಧಾವಿಸಿ ಬಂದು ಅಧಿಕಾರ ವಹಿಸಿಕೊಂಡ. ಆ ವೇಳೆಗೆ ಸ್ವೀಡನ್‌ನಲ್ಲಿ ಹ್ಯಾಟ್ಸ್ ಮತ್ತು ಕ್ಯಾಪ್ಸ್

ಎಂಬ ಎರಡು ಪ್ರಧಾನ ಗುಂಪುಗಳು ಅಧಿಕಾರಕ್ಕಾಗಿ ಹೋರಾಟದಲ್ಲಿ ತೊಡಗಿದ್ದವು. ಗಸ್ಟೇವಸ್ ಈ ಪಕ್ಷಗಳೊಡನೆ ಸಂಧಾನದಲ್ಲಿ ತೊಡಗಿ, ಭಿನ್ನಾಭಿಪ್ರಾಯಗಳನ್ನೂ ಆಂತರಿಕ ಕಚ್ಚಾಟಗಳನ್ನೂ ಕೊನೆಗಾಣಿಸಲು ಯತ್ನಿಸಿ ವಿಫಲನಾದ. ಈ ಪಕ್ಷಗಳು ಪರಸ್ಪರ ಬಲಾಬಲಪ್ರದರ್ಶನದಲ್ಲಿ ತೊಡಗಿದವು. ಕೊನೆಗೆ ಗಸ್ಟೇವಸ್ ತನ್ನ ಆಪ್ತ ದಳಪತಿಗಳ ಸಹಾಯದಿಂದ ಈ ಪಕ್ಷಗಳ ಬಲವನ್ನು ಸೋಲಿಸಿ ಅವರ ನಾಯಕರನ್ನು ಬಂಧಿಸಿ ಪ್ರತಿನಿಧಿ ಸಭೆಯನ್ನು ಸೇರಿಸಿ ಹೊಸ ಸಂವಿಧಾನವನ್ನು ಅಸ್ತಿತ್ವಕ್ಕೆ ತಂದ.

ಅನಂತರ ಗಸ್ಟೇವಸ್ ಸ್ವೀಡನ್ನನ್ನು ಪ್ರಗತಿಪರ ರಾಷ್ಟ್ರವನ್ನಾಗಿ ಮಾರ್ಪಡಿಸಲು ವಿಶೇಷವಾಗಿ ಶ್ರಮಿಸಿದ. ಆಡಳಿತ ಯಂತ್ರವನ್ನು ಚುರುಕುಗೊಳಿಸಿದ. ನ್ಯಾಯಾಂಗದಲ್ಲಿ ಅನೇಕ ಸುಧಾರಣೆಗಳು ಜಾರಿಗೆ ಬಂದವು. ಪತ್ರಿಕಾ ಸ್ವಾತಂತ್ರ್ಯ ನೀಡುವ ಸುಗ್ರೀವಾಜ್ಞೆಯೊಂದು 1774ರಲ್ಲಿ ಹೊರಬಂತು ಈತ ಮತೀಯ ಸ್ವಾತಂತ್ರ್ಯವನ್ನು ಘೋಷಿಸಿದ. ವಾಣಿಜ್ಯ ವಹಿವಾಟುಗಳ ಮೇಲಿದ್ದ ನಿರ್ಬಂಧಗಳನ್ನು ತೆಗೆದುಹಾಕಿದ. ನಾಣ್ಯಪದ್ಧತಿಯನ್ನು ಸುಧಾರಿಸಿದ. ರಾಷ್ಟ್ರೀಯ ನೌಕಾಬಲದ ಸಾಮರ್ಥ್ಯವನ್ನು ಇಮ್ಮಡಿಗೊಳಿಸಿದ. ಕೇವಲ ಆರು ವರ್ಷಗಳಲ್ಲಿ ಅನೇಕ ಪ್ರಗತಿಪರ ಸುಧಾರಣೆಗಳು ಜಾರಿಗೆ ಬಂದವು. ಆದರೂ 1778ರಲ್ಲಿ ರೀಕ್ಸ್‌ದಾಗ್ ಸಭೆ ಗಸ್ಟೇವಸ್‌ನ ಅಧಿಕಾರಕ್ಕೆ ವಿರೋಧ ವ್ಯಕ್ತಪಡಿಸಿತು. ಗಸ್ಟೇವಸ್ ಈ ಸಭೆಯ ಅಧಿಕಾರವನ್ನು ಮೊಟಕುಗೊಳಿಸಲು ಸಮಯ ಕಾಯುತ್ತಿದ್ದ. 1789ರಲ್ಲಿ ಸ್ವೀಡನ್ ರಷ್ಯಗಳ ಮಧ್ಯೆ ಯುದ್ಧ ಸಂಭವಿಸಿದ್ದರಿಂದ ಗಸ್ಟೇವಸ್ ರೀಕ್ಸ್‌ದಾಗ್ ಸಭೆಯನ್ನು ಮೂಲೆಗೊತ್ತಿ ಸಂಪೂರ್ಣ ಅಧಿಕಾರವನ್ನು ತಾನೇ ವಹಿಸಿಕೊಂಡ. 1790ರಲ್ಲಿ ರಷ್ಯವನ್ನು ನೌಕಾಯುದ್ಧದಲ್ಲಿ ಸೋಲಿಸಿದ. ಆದರೂ ಸ್ವೀಡನ್‌ಗಿಂತ ರಷ್ಯ ಪ್ರಬಲವೆಂಬುದನ್ನರಿತ ಗಸ್ಟೇವಸ್ ಅದರೊಂದಿಗೆ ಶಾಂತಿ ಏರ್ಪಡಿಸಿಕೊಂಡು ಎಂಟು ವರ್ಷಗಳ ರಕ್ಷಣಾ ಒಪ್ಪಂದ ಮಾಡಿಕೊಂಡ. ರಷ್ಯದ ಸಾಮ್ರಾಜ್ಞಿ ಕ್ಯಾಥರೀನ್ ಸ್ವೀಡಿನ್‌ಗೆ ವಾರ್ಷಿಕ ಸಹಾಯಧನ ನೀಡಲೊಪ್ಪಿದರು. ಅನಂತರ ಗಸ್ಟೇವಸ್ ಐರೋಪ್ಯ ಸಮಸ್ಯೆಗಳಿಗೆ ಗಮನ ನೀಡತೊಡಗಿದ. ಕ್ರಾಂತಿ ವಿರುದ್ಧವಾಗಿ ದೊರೆಗಳ ಕೂಟವೊಂದನ್ನು ಸ್ಥಾಪಿಸುವುದು ಇವನ ಉದ್ದೇಶವಾಗಿತ್ತು. ಆದರೆ ಬಡತನ ಮತ್ತು ಪರಸ್ಪರ ಅಸೂಯೆಗಳಿಂದಾಗಿ ಈ ಪ್ರಯತ್ನಕ್ಕೆ ಯಶಸ್ಸು ದೊರಕಲಿಲ್ಲ. 1792ರಲ್ಲಿ ಶ್ರೀಮಂತರ ಸಂಚೊಂದಕ್ಕೆ ಗಸ್ಟೇವಸ್ ಬಲಿಯಾದ. ಸ್ಟಾಕ್ಹೋಮಿನ ನಾಟಕಶಾಲೆಯೊಂದರಲ್ಲಿ ಕ್ಯಾಪ್ಟನ್ ಜೇಕಬ್ ಜೊಹಾನ್ ಆಂಕಾರ್‌ಸ್ಟ್ರಾಂ ಈತನನ್ನು ತಿವಿದ (ಮಾರ್ಚ್ 16). ಹದಿಮೂರು ದಿನಗಳ ಅನಂತರ ಗಸ್ಟೇವಸ್ ತೀರಿಕೊಂಡ.

3ನೆಯ ಗಸ್ಟೇವಸ್ ಸ್ವೀಡಿನ್‌ನ ಅತಿ ದಕ್ಷ ಹಾಗೂ ರಾಷ್ಟ್ರಾಭಿಮಾನ ರಾಜರಲ್ಲಿ ಒಬ್ಬ. ಅವನು ಸಾಹಿತ್ಯ ಕಲೆಗಳಲ್ಲಿ ಅಭಿರುಚಿ ಹೊಂದಿದ್ದು ಅವಕ್ಕೆ ವಿಶೇಷ ಪ್ರೋತ್ಸಾಹ ನೀಡಿದ. ಗಸ್ಟೇವಸ್ 1786ರಲ್ಲಿ ಸ್ವೀಡಿಷ್ ಅಕಾಡೆಮಿಯನ್ನು ಸ್ಥಾಪಿಸಿದ. ಈತನಿಂದ ನಾಟ್ಯಕಲೆಗೆ ವಿಶೇಷ ಪ್ರೋತ್ಸಾಹ ದೊರಕಿತು. ಇವನ ಸಾಂಸ್ಕೃತಿಕ ಅಭಿಮಾನ ಮತ್ತು ಪ್ರೋತ್ಸಾಹ ಹಾಗೂ ರಾಜಕೀಯ ಸಿದ್ಧಿಗಳಿಂದಾಗಿ ಇವನ ಆಳ್ವಿಕೆ ಸ್ವೀಡನ್‌ನ ಇತಿಹಾಸದಲ್ಲಿ ಗಸ್ಟೇವಿಯನ್ ಯುಗವೆಂದು ಪ್ರಸಿದ್ಧವಾಗಿದೆ.

**ಗಸ್ಟೇವಸ್ IV** : 1778–1837. 3ನೆಯ ಗಸ್ಟೇವಸ್‌ನ ಮಗ. 3ನೆಯ ಗಸ್ಟೇವಸ್ ಕೊಲೆಯಾದಾಗ ಈತ ಇನ್ನೂ ಬಾಲಕನಾಗಿದ್ದ. ಆದ್ದರಿಂದ ಗತಿಸಿದ ರಾಜನ ಸೋದರನೂ ಸಾಡರ್‌ಮನ್‌ಲೆಂಟಿನ ಡ್ಯೂಕನು ಆಗಿದ್ದ ಚಾರಲ್ಸ್ ರೀಜೆಂಟಾಗಿ ಆಡಳಿತ ನಡೆಸುವಂತೆ ಏರ್ಪಾಡಾಗಿತ್ತು. 4ನೆಯ ಗಸ್ಟೇವಸ್ ಬಾಲ್ಯದಲ್ಲಿ ಯೋಗ್ಯ ಶಿಕ್ಷಣ ಪಡೆದ. ಬೇಡನಿನ ಚಾರಲ್ಸ್ ಲೂಯಿಯ ಮಗಳಾದ ಫ್ರೆಡರಿಕ್ ಡೊರೋತಿಯಳೊಂದಿಗೆ 1797ರಲ್ಲಿ ಇವನ ವಿವಾಹವಾಯಿತು. 1800ರಲ್ಲಿ ಪ್ರಾಪ್ತ ವಯಸ್ಕನಾದ 4ನೆಯ ಗಸ್ಟೇವಸ್ ವಿಧಿವತ್ತಾಗಿ ಸಿಂಹಾಸನಾರೋಹಣ ಮಾಡಿದ. ಫ್ರಾನ್ಸಿನ ಕ್ರಾಂತಿಯ ಪರಿಣಾಮವಾಗಿ ಗಸ್ಟೇವಸ್ ಹಲವು ಉಗ್ರಕ್ರಮಗಳನ್ನು ಆಚರಣೆಗೆ ತಂದ. ಅಲ್ಲದೆ ಕೆಲವು ವರ್ಷಗಳ ಕಾಲ ಸ್ವೀಡನ್‌ನಲ್ಲಿ ಬೆಳೆಗೆ ಹಾನಿ ತಟ್ಟಿತ್ತು. 1808ರ ವೇಳೆಗೆ ದೇಶದಲ್ಲಿ ಆರ್ಥಿಕಸ್ಥಿತಿ ಅಧೋಗತಿ ಹೊಂದಿತು. ಗಸ್ಟೇವಸ್ ಚತುರತೆಯಿಂದ ಪರಿಸ್ಥಿತಿಯನ್ನು ಹತೋಟಿಗೆ ತೆಗೆದುಕೊಳ್ಳುವ ಬದಲು ಬೆದರಿಕೆಯ ಉಗ್ರಕ್ರಮಗಳನ್ನು ಕೈಗೊಂಡ. ಅವನನ್ನು ಅಧಿಕಾರದಿಂದ ತೆಗೆಯಲು ಪಿತೂರಿಗಳು ನಡೆದುವು. ಕೊನೆಗೆ 1809ರಲ್ಲಿ ಸೇನಾನಾಯಕರು ಅರಮನೆಗೆ ನುಗ್ಗಿ ರಾಜನನ್ನೂ ಅವನ ಪರಿವಾರವನ್ನೂ ಬಂಧಿಸಿ ರಾಜಧಾನಿಯಿಂದ ಬೇರೆ ಕಡೆಗೆ ಸಾಗಿಸಿ ಬಂಧನದಲ್ಲಿಟ್ಟರು. ಕೂಡಲೇ ಡಯಟ್ ಸಭೆ ಸೇರಿ ಕ್ರಾಂತಿಯನ್ನು ಅನುಮೋದಿಸಿ ಗಸ್ಟೇವಸ್‌ನ ಚಿಕ್ಕಪ್ಪನಾದ ಚಾರ್ಲ್ಸನ ನೇತೃತ್ವದಲ್ಲಿ ತಾತ್ಕಾಲಿಕವಾಗಿ ಆಡಳಿತ ನಡೆಸುವ ಏರ್ಪಾಡು ಮಾಡಿತು. ಸಿಂಹಾಸನದ ಹಕ್ಕನ್ನು ತನ್ನ ಮಗನಿಗೆ ಉಳಿಸುವ ದೃಷ್ಟಿಯಿಂದ 4ನೆಯ ಗಸ್ಟೇವಸ್ ತಾನಾಗಿಯೇ ಸಿಂಹಾಸನ ತ್ಯಾಗ ಮಾಡಿದ. ಸೈನ್ಯದ ಬೆಂಬಲ ಪಡೆದಿದ್ದ ಕ್ರಾಂತಿಯ ಮುಖಂಡರು ಗಸ್ಟೇವಸ್‌ನ ಸಂತತಿಗೆ ಸಿಂಹಾಸನದ ಹಕ್ಕಿಲ್ಲವೆಂದು ತೀರ್ಮಾನಿಸಿದರು. ಗಸ್ಟೇವಸ್ ಮತ್ತು ಅವನ ಕುಟುಂಬದವರನ್ನು ಜರ್ಮನಿಗೆ ಸ್ಥಳಾಂತರಿಸಲಾಯಿತು. ಅವನ ಚಿಕ್ಕಪ್ಪ ಚಾರ್ಲ್ಸ್‌ನನ್ನೇ 13ನೆಯ ಚಾರ್ಲ್ಸ್ ದೊರೆಯೆಂದು ಘೋಷಿಸಲಾಯಿತು. ಆತ ಒಪ್ಪಿಕೊಂಡ ನೂತನ ಉದಾರವಾದಿ ಸಂವಿಧಾನವನ್ನು ಡಯಟ್ ಸ್ಥಿರೀಕರಿಸಿತು.

ಗಸ್ಟೇವಸ್ ತನ್ನ ಜೀವನದ ಉಳಿದ ಕಾಲವನ್ನು ಬೇರೆಬೇರೆ ಸ್ಥಳಗಳಲ್ಲಿ ಕಳೆದ. ಗಾಟಾರ್ಪ್‌ನ ಕೌಂಟ್ ಎಂಬ ಬಿರುದು ತಳೆದ. ಇವನು ಕೆಲವು ಗ್ರಂಥಗಳನ್ನೂ ಬರೆದಿದ್ದಾನೆ. ಈತ ಸಂಸಾರವನ್ನು ತ್ಯಜಿಸಿ ಅವ್ಯವಸ್ಥೆಯ ಜೀವನ ನಡೆಸಿ 1812ರಲ್ಲಿ ವಿವಾಹವಿಚ್ಛೇದ ಮಾಡಿಕೊಂಡು, ಅಂತಿಮವಾಗಿ ಸ್ವಿಟ್ಜರ್ಲೆಂಡಿನಲ್ಲಿ ಒಂಟಿ ಜೀವನ ನಡೆಸಿದ. 1837ರಲ್ಲಿ ಮರಣ ಹೊಂದಿದ. 2ನೆಯ ಆಸ್ಕಾರ್ ದೊರೆಯ ಸಲಹೆಯಂತೆ 1884ರಲ್ಲಿ ಅವನ ದೇಹವನ್ನು ಸ್ವೀಡನ್‌ಗೆ ತಂದು ರಿಡ್ಡರ್ ಹೋಂಸ್ಕಿರ್ಕದಲ್ಲಿ ಸಮಾಧಿ ಮಾಡಲಾಯಿತು.

**ಗಸ್ಟೇವಸ್ V** : 1858–1950. 2ನೆಯ ಆಸ್ಕರನ ಮಗ. 1872ರಲ್ಲಿ ಯುವರಾಜನಾದ. ಸೈನ್ಯದಲ್ಲಿ ಉನ್ನತ ಅಧಿಕಾರಿಯಾಗಿದ್ದ. ವಿದೇಶಗಳಲ್ಲಿ ಪ್ರಯಾಣ ಕೈಗೊಂಡು ಅನುಭವ ಗಳಿಸಿದ. ಬೇಡನಿನ ಗ್ರಾಂಡ್ ಡ್ಯೂಕ್ 1ನೆಯ ಫ್ರೆಡರಿಕ್‌ನ ಮಗಳೂ 4ನೆಯ ಗಸ್ಟೇವಸ್‌ನ ಮರಿಮಗಳೂ ಆದ ವಿಕ್ಟೋರಿಯಳನ್ನು 1881ರಲ್ಲಿ ವಿವಾಹವಾದ್ದರಿಂದ ಸ್ವೀಡನ್‌ನ ವೇಸ ವಂಶದೊಂದಿಗೆ ಇವನ ವಂಶ ಸಮಾವೇಶಗೊಂಡಿತು. 5ನೆಯ ಗಸ್ಟೇವಸ್ 1907ರಲ್ಲಿ ಸ್ವೀಡನ್‌ನ ರಾಜನಾದ. ಎರಡು ಮಹಾಯುದ್ಧಗಳ ಕಾಲದಲ್ಲಿ ಇವನ ನೇತೃತ್ವದಲ್ಲಿ ಸ್ವೀಡನ್ ತಟಸ್ಥ ನೀತಿ ಅನುಸರಿಸಿತು. 1942ರಲ್ಲಿ ಇವನು ತೀವ್ರವಾದ ಕಾಯಿಲೆಯಿಂದ ಮಲಗುವವರೆಗೂ ಒಳ್ಳೆಯ ಟೆನಿಸ್ ಆಟಗಾರನಾಗಿದ್ದ. 5ನೆಯ ಗಸ್ಟೇವಸ್ 1950ರಲ್ಲಿ ಸ್ಟಾಕ್ಹೋಂನಲ್ಲಿ ಮರಣ ಹೊಂದಿದ.

**ಗಸ್ಟೇವಸ್ VI** : 5ನೆಯ ಗಸ್ಟೇವಸ್‌ನ ಮಗ. 1882ರಲ್ಲಿ ಹುಟ್ಟಿದ. ತನ್ನ ತಂದೆಯ ಸುದೀರ್ಘ ಆಳ್ವಿಕೆಯ ಕಾಲದಲ್ಲಿ ಗಸ್ಟೇವಸ್ ಪ್ರಾಕ್ತನ ಶಾಸ್ತ್ರದಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದು ಒಳ್ಳೆಯ ವಿದ್ವಾಂಸನೆನಿಸಿಕೊಂಡಿದ್ದ. ಅವನು ಸ್ವೀಡನ್‌ನ ಅನೇಕ ಐತಿಹಾಸಿಕ ಸ್ಥಳಗಳಲ್ಲಿ ಪ್ರಾಕ್ತನ ಸಂಶೋಧನೆ ನಡೆಸಿ ಆ ಬಗ್ಗೆ ಲೇಖನಗಳನ್ನು ಪ್ರಕಟಿಸಿದ್ದಾನೆ. ಗ್ರೀಸ್, ಚೀನ ಮತ್ತು ಸೈಪ್ರಸ್ ಪ್ರದೇಶಗಳಲ್ಲಿ ಅವನ ನೇತೃತ್ವದಲ್ಲಿ ಸ್ವೀಡನಿನ ಪ್ರಾಕ್ತನ ತಜ್ಞರು ಅನೇಕ ಸಂಶೋಧನೆಗಳನ್ನು ನಡೆಸಿದ್ದಾರೆ. 6ನೆಯ ಗಸ್ಟೇವಸ್ ತನ್ನ ತಂದೆಯ ಮರಣಾನಂತರ 1950ರಲ್ಲಿ ಸ್ವೀಡನ್‌ನ ಸಿಂಹಾಸನವನ್ನೇರಿದ. (ಜಿ.ಆರ್.ಆರ್.; ಎಸ್.ಎಸ್.)

## ಗಳಗಂಡ : ನೋಡಿ– ಗಂಡಮಾಲೆ

**ಗಳಗನಾಥ¹** : ಹಾವೇರಿ ಜಿಲ್ಲೆ ಹಾವೇರಿ ತಾಲ್ಲೂಕಿನಲ್ಲಿರುವ ಒಂದು ಪುಣ್ಯಕ್ಷೇತ್ರ. ಸುಂದರ ತಾಣ. ವರದಾ ಮತ್ತು ತುಂಗಭದ್ರಾ ನದಿಗಳ ಸಂಗಮಸ್ಥಳದಲ್ಲಿದೆ.

ಇಲ್ಲಿರುವ ಗಳಗೇಶ್ವರ ದೇವಸ್ಥಾನದಿಂದ ಈ ಸ್ಥಳಕ್ಕೆ ಗಳಗನಾಥ ಎಂಬ ಹೆಸರು ಬಂದಿದೆ. ಈ ದೇವಾಲಯವನ್ನು ಗಳಗೇಶ್ವರ ಮುನಿ ಸ್ಥಾಪಿಸಿದರೆಂದು ಪ್ರತೀತಿ. ಈ ದೇವಾಲಯ 28ಮೀ. ಉದ್ದ 14ಮೀ ಅಗಲವಿದೆ. ಇದರ ಮೇಲ್ಛಾವಣಿಯನ್ನು ನಾಲ್ಕು ಸುಂದರವಾದ ಸ್ತಂಭಗಳು ಅಂದವಾಗಿ ಎತ್ತಿ ಹಿಡಿದಿವೆ. ದೇವಾಲಯದ ಸುತ್ತಲೂ ಗೋಡೆಯ ಮೇಲೆ ಪೌರಾಣಿಕ ಕಥೆಗಳನ್ನು ಕೆತ್ತಲಾಗಿದೆ. ಈ ದೇವಾಲಯದ ಕಟ್ಟಡದ ವೈಶಿಷ್ಟ್ಯವೆಂದರೆ ಇದರ ಅಡಿಪಾಯ. ಇದರ ಆಕಾರ ಪಿರಮಿಡ್‌ನಂತಿದೆ. ನದಿಯ ನೆರೆಹಾವಳಿಯಿಂದ ಈ ದೇವಾಲಯವನ್ನು ರಕ್ಷಿಸಲು ಗೋಡೆಗಳನ್ನು ಕಟ್ಟಲಾಗಿದೆ. ಇಲ್ಲಿ ಒಂದು ಹನುಮಂತದೇವರ ಗುಡಿಯೂ ಇದೆ. ಈ ಊರಲ್ಲಿ ಕಲ್ಯಾಣ ಚಾಳುಕ್ಯರ ಆರು ಶಾಸನಗಳು ದೊರೆತಿವೆ. ಹೊಯ್ಸಳ ವಿಷ್ಣುವರ್ಧನ ಇಲ್ಲಿಂದ ದಾನಮಾಡಿದ ಸಂಗತಿ ತಿಳಿದುಬರುತ್ತದೆ. ಈ ಗ್ರಾಮದ ಸಮೀಪದಲ್ಲಿ ಅನೇಕ ಬೃಹತ್ ಶಿಲಾ ಸಮಾಧಿಗಳು ಬೆಳಕಿಗೆ ಬಂದಿವೆ. ಕನ್ನಡದ ಪ್ರಸಿದ್ಧ ಕಾದಂಬರಿಕಾರರಾದ ಗಳಗನಾಥರು ಈ ಸ್ಥಳದವರು. (ಎಸ್.ಎಸ್.ಬಿ.)

**ಗಳಗನಾಥ²** : 1869–1942. ಕನ್ನಡದ ಹೊಸ ಹುಟ್ಟಿನ ಕಾಲದ ಪ್ರಾರಂಭದಲ್ಲಿ ತಮ್ಮ ವಿಪುಲವಾದ ಕನ್ನಡ ಬರವಣಿಗೆಯಿಂದ ಇಡೀ ನಾಡಿನಲ್ಲಿ ಭಾಷಾ ಜಾಗೃತಿಯನ್ನುಂಟುಮಾಡಿದ ಪ್ರಸಿದ್ಧ ಲೇಖಕರಲ್ಲೊಬ್ಬರು. ಇವರ ಪೂರ್ಣ ಹೆಸರು ವೆಂಕಟೇಶ ತಿರಕೋ ಕುಲಕರ್ಣಿ ಗಳಗನಾಥ. ವೆಂಕಣ್ಣ, ವೆಂಕಟೇಶ ಎಂಬುದು ಮನೆಯ ಹೆಸರುಗಳು. ಗಳಗನಾಥರು ಹಾವೇರಿ ಜಿಲ್ಲೆಯ ಹಾವೇರಿ ತಾಲ್ಲೂಕಿನ ಗಳಗನಾಥ ಎಂಬ ಹಳ್ಳಿಯಲ್ಲಿ 1869ರ ಜನವರಿ 5ರಂದು ಹುಟ್ಟಿದರು. ಇವರು ಊರಿನ ಕುಲಕರ್ಣಿಯವರ ಚೊಚ್ಚಲು ಮಗನಾದುದರಿಂದ ಇಡಿಯ ಊರಿನಲ್ಲಿಯೇ ಅಂದು ಒಂದು ದೊಡ್ಡ ಸಂಭ್ರಮ. ತನ್ನಿಮಿತ್ತ ಆ ಊರಿನ ಸ್ವಾಮಿಯಾದ ಗಳಗೇಶ್ವರನ ದೇವಾಲಯದಲ್ಲಿ ವಿಶೇಷ ಪೂಜಾದಿಗಳು ಜರುಗಿದವು. ಮುಂದೆ ವೆಂಕಣ್ಣನ ಬಾಲ್ಯ ಆ ಪರಿಸರದಲ್ಲಿಯೇ ಕಳೆಯಿತು. ವರದಾ ಹಾಗೂ ತುಂಗಭದ್ರಾ ನದಿಗಳ ಸಂಗಮ ಸ್ಥಾನದ ಹತ್ತಿರ ರಮಣೀಯ ಸ್ಥಳದಲ್ಲಿರುವ ಗಳಗನಾಥದ ಗಳಗೇಶ್ವರ ದೇವಾಲಯವೇ ಇವರ ಪ್ರಥಮ ಪಾಠಶಾಲೆಯಾಯಿತಲ್ಲದೆ ಅಲ್ಲಿ ಇವರಿಗೆ ಅಕ್ಕರೆಯ ಗುರುಕುಲ

ಶಿಕ್ಷಣ ದೊರೆಯಿತು. ಇದರಿಂದಾಗಿ ಗಳಗನಾಥರಲ್ಲಿ ಸ್ವಾಭಿಮಾನ, ಸ್ವಭಾಷೆ ಹಾಗೂ ಸಂಸ್ಕೃತಿಗಳ ಬಗ್ಗೆ ವಿಶೇಷ ಪ್ರೇಮ ಬೆಳೆದವು. ಹಾವನೂರಿನಲ್ಲಿ ಮುಲ್ಕಿ ಪರೀಕ್ಷೆ ಮುಗಿಸಿದನಂತರ ಶಿಕ್ಷಕನಾಗಬೇಕೆಂಬ ಹಂಬಲವು ಸ್ವಭಾವತಃ ಇದ್ದುದರಿಂದ ಗಳಗನಾಥರು ಧಾರವಾಡ ಟ್ರೇನಿಂಗ್ ಕಾಲೇಜಿಗೆ ಸೇರಿದರು (1886). ಕಾಲೇಜಿನ ಎಲ್ಲಾ ಪರೀಕ್ಷೆಗಳಲ್ಲೂ ಮೇಲ್ದರ್ಜೆಯಲ್ಲಿ ತೇರ್ಗಡೆ ಹೊಂದಿ ಮೂರು ವರ್ಷದ ಶಿಕ್ಷಕ ತರಬೇತಿಯನ್ನು ಮುಗಿಸಿ (1889) ಶಿಕ್ಷಕರಾಗಿ ಕೆಲಸಕ್ಕೆ ಸೇರಿದರು. ಉತ್ತಮ ಶಿಕ್ಷಕರೆಂದು ಹೆಸರು ಗಳಿಸಿದರು. ಗಳಗನಾಥರ ಜೀವನದಲ್ಲಿ ಧಾರವಾಡ ಮಹತ್ತ್ವದ ಸ್ಥಾನವನ್ನು ಪಡೆದಿದೆ. ಅದು ಇವರನ್ನು ಸಾಹಿತಿಯನ್ನಾಗಿ ರೂಪಿಸಿದ ಕ್ಷೇತ್ರ. ಟ್ರೇನಿಂಗ್ ಕಾಲೇಜಿನ ವಾತಾವರಣ ತುಂಬ ಉತ್ತಮವಾಗಿತ್ತು. ಪಂಡಿತರಾದ ಕಿತ್ತೂರ ಅಯ್ಯನವರು, ಧೋಂಡೋ ನರಸಿಂಹ ಮುಳಬಾಗಲ ಅವರು ತಮ್ಮ ಪ್ರಭಾವಬೀರಿ ಗಳಗನಾಥರಿಗೆ ಕನ್ನಡ ಕಲಿಸಿದರು. ಅದೇ ಪ್ರಕಾರ ಪ್ರಭಾವ ಬೀರಿದವರು ರೊದ್ದ ಶ್ರೀನಿವಾಸರಾಯರು ಹಾಗೂ



ಕರಂದೀಕರರು. ಕರಂದೀಕರರ ಅಚ್ಚುಕಟ್ಟು, ಶಿಸ್ತು, ಗಳಗನಾಥರಿಗೂ ಬಂದವು. ಆ ಸಮಯದಲ್ಲಿ ಅಪ್ರತ್ಯಕ್ಷವಾಗಿ ಇವರ ಜೀವನದ ಮೇಲೆ ಪ್ರಭಾವ ಬೀರಿದ ವ್ಯಕ್ತಿಗಳೆಂದರೆ ಮಹಾರಾಷ್ಟ್ರದ ಲೋಕಮಾನ್ಯ ಟಿಳಕ ಹಾಗೂ ಹರಿ ನಾರಾಯಣ ಆಪ್ಟೆ ಅವರು.

ಆಗ ಉತ್ತರ ಕರ್ನಾಟಕದಲ್ಲಿ ಟಿಳಕ ಹಾಗೂ ಆಪ್ಟೆಯವರ ಹೆಸರುಗಳು ಮನೆಮಾತಾಗಿದ್ದವು. ಟಿಳಕರ ಕೇಸರಿ, ಆಪ್ಟೆಯವರ ಕರಮಣೂಕ ಪತ್ರಿಕೆಗಳು ಹೆಚ್ಚು ಪ್ರಚಾರದಲ್ಲಿದ್ದವು. ಕನ್ನಡ ಪತ್ರಿಕೆಗಳ ಅಭಾವದಿಂದಾಗಿ ಕನ್ನಡಿಗರು ಮರಾಠಿ ಪತ್ರಿಕೆಗಳನ್ನೇ ಓದುತ್ತಿದ್ದರು. ಇಷ್ಟೇ ಅಲ್ಲದೇ ಪೇಶ್ವೆ ಕಾಲದ ರಾಜಭಾಷೆಯಾದ ಮರಾಠಿ ತನ್ನ ರಾಜಕೀಯ ಮುದ್ರೆಯನ್ನೊತ್ತಿ ತನ್ನದೇ ಆದ ವಿಶಿಷ್ಟ ಪ್ರಭಾವವನ್ನು ಬೀರುತ್ತಿತ್ತು. ಟ್ರೇನಿಂಗ್ ಕಾಲೇಜಿಗೆ ಬರುತ್ತಿದ್ದ ಈ ಎರಡು ಪತ್ರಿಕೆಗಳನ್ನು ಗಳಗನಾಥರು ತಪ್ಪದೆ ಓದುತ್ತಿದ್ದರಲ್ಲದೆ ತಮ್ಮ ಗೆಳೆಯರೊಂದಿಗೆ ಅಲ್ಲಿನ ವಿಷಯಗಳನ್ನು ಚರ್ಚಿಸುತ್ತಿದ್ದರು. ಟಿಳಕರ ವಿಚಾರಧಾರೆ ಇವರ ಮನಸ್ಸನ್ನು ಸಂಪೂರ್ಣ ಆಕರ್ಷಿಸಿತ್ತು; ಅಷ್ಟೇ ಸತ್ತ್ವಶಾಲಿಯಾಗಿ ಆಪ್ಟೆಯವರ ಕಾದಂಬರಿಗಳಲ್ಲಿಯ ಕಲ್ಪನಾ ವೈಭವದ ವೈಖರಿ ಮನಸ್ಸನ್ನು ಬೆರಗುಗೊಳಿಸುತ್ತಿತ್ತು. ಆ ಭಾಗದ ಕನ್ನಡ ಜನತೆ ಮರಾಠಿ ವ್ಯಾಮೋಹದಲ್ಲಿದ್ದುದು ಇವರಿಗೆ ಕಂಡುಬಂದಿತು. ಟಿಳಕರ ವಿಚಾರಧಾರೆಯನ್ನೂ ಆಪ್ಟೆಯವರ ಕಾದಂಬರಿ ಕತೆಗಳನ್ನೂ ಕನ್ನಡದಲ್ಲಿಯೇ ಹೇಳಿ ಕನ್ನಡಿಗರ ವಾಚನಾಭಿ ರುಚಿಯನ್ನು ಬೆಳೆಸುವ ಉತ್ಕಟ ಆಸೆ ಇವರಲ್ಲಿ ಮೂಡಿತು. ಅದೇ ಕಾಲಕ್ಕೆ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದವರು ಕನ್ನಡ ಗ್ರಂಥಕರ್ತರಿಗೆ ಬಹುಮಾನ ಕೊಡುವ ಪರಿಪಾಠವನ್ನು ಹಾಕಿದರು. ಆ ಸಂದರ್ಭದಲ್ಲಿ ಇವರು ಬರೆದ ಪ್ರಥಮ ಕಾದಂಬರಿ ಪ್ರಬುದ್ಧ ಪದ್ಮನಯನೆಗೆ ಬಹುಮಾನ ದೊರಕಿತು. ಹೀಗೆ 1898ರಲ್ಲಿ ಆರಂಭವಾದ ಇವರ ಬರೆವಣಿಗೆ 1942ರ ವರೆಗೂ ಅವ್ಯಾಹತವಾಗಿ ಸಾಗಿತು. ನರೇಂದ್ರ, ಶಿರಗುಪ್ಪ, ಅಗಡಿ, ಹಾವೇರಿ ಇವು ಇವರು ನೆಲಸಿನಿಂತು ಕನ್ನಡಕ್ಕೆ ದುಡಿದ ಇತರ ಸ್ಥಳಗಳು. ಅಗಡಿಯ ಶ್ರೀ ಶೇಷಾಚಲ ಸ್ವಾಮಿಗಳು ಗಳಗನಾಥರ ಮೇಲೆ ವಿಶೇಷ ಪ್ರಭಾವವನ್ನು ಬೀರಿದರು. ಅಂತೆಯೇ ಸರ್ಕಾರಿ ಕೆಲಸದಲ್ಲಿ ಘರ್ಷಣೆ ಬಂದಾಗ ಕಾಲಕ್ಕೆ ಮೊದಲೆ ಪಿಂಚಣಿ ಪಡೆದು ಅಗಡಿಯ ಆನಂದವನದಲ್ಲಿ ನೆಲಸಿದರು. ಅಲ್ಲಿನ ವಾತಾವರಣ ವಿಪರೀತವಾದಾಗ ಹಾವೇರಿಗೆ ಹೋಗಿ ರಾಮದೇವರ ಗುಡಿಯ ಆವಾರವನ್ನೆ ತಮ್ಮ ಆಶ್ರಮವನ್ನಾಗಿ ಮಾಡಿಕೊಂಡು ಸುತ್ತಣ ಜನತೆಯೊಂದಿಗೆ ಬೆರೆತು ಬಾಳಿದರು. ಆನಂದವನದಲ್ಲಿದ್ದಾಗ ಸದ್ಬೋಧ ಚಂದ್ರಿಕೆ ಎಂಬ ಪತ್ರಿಕೆಯ ಮೂಲಕ ಮತ್ತು ಹಾವೇರಿಯಲ್ಲಿ ಇರತೊಟ್ಟಂದಿನಿಂದ ಸದ್ಗುರು (1919) ಎಂಬ ಪತ್ರಿಕೆಯ ಮೂಲಕ ತಮ್ಮ ಬರೆವಣಿಗೆಯನ್ನು ಪ್ರಕಟಿಸಿದರು. ಸದ್ಬೋಧ ಚಂದ್ರಿಕೆಗೆ 7000ದಷ್ಟು ಚಂದಾದಾರರು ಇದ್ದರೆಂಬುದು ನಿಜವಾಗಿಯೂ ಅಚ್ಚರಿಯ ವಿಷಯ.

ಆದರೂ ಕಾಲ ಕಳೆದಂತೆ ಗಳಗನಾಥರ ಆದಾಯ ಇಳಿಮುಖವಾಗಹತ್ತಿ ಸಾಲ ಬೆಳೆಯತೊಡಗಿತು. ಸಾಲ ತೀರಿಸುವುದಕ್ಕಾಗಿ ಗಳಗನಾಥರು ಪುಸ್ತಕಗಳನ್ನು ಬರೆದು ಊರಿಂದೂರಿಗೆ, ಓಣಿಯಿಂದ ಓಣಿಗೆ, ಮನೆಯಿಂದ ಮನೆಗೆ, ಮಳೆಗಾಳಿ ಚಳಿಬಿಸಿಲು ಒಂದನ್ನೂ ಗಮನಿಸದೆ ತಿರುಗಿ ತಿರುಗಿ ಸೋತು ಸುಣ್ಣವಾದರು. ಸಾಲದ ಶೂಲ ನಿತ್ಯ ತಿವಿದಿತಾಗಿ ಆರೋಗ್ಯ ತೀರ ಕೆಟ್ಟು ಕ್ಯಾನ್ಸರ್ ಮೊದಲಾಯಿತು. ಗಳಗನಾಥರು ಆ ಬೇನೆಯಿಂದ ತಮ್ಮ 74ನೆಯ ವಯಸ್ಸಿನಲ್ಲಿ ಬೆಂಗಳೂರಿನ ವಿಕ್ಟೋರಿಯ ಆಸ್ಪತ್ರೆಯಲ್ಲಿ 1942ರ ಏಪ್ರಿಲ್ 22ರಂದು ಕೊನೆಯುಸಿರೆಳೆದರು. ಸರಳತೆ, ಅನುಕಂಪ, ಗುರಿಯನ್ನು ಸಾಧಿಸುವಲ್ಲಿ ನಿಸ್ಸೀಮ ತ್ಯಾಗ, ಉಜ್ಜ್ವಲ ಸ್ವಾಭಿಮಾನ, ಮಡಿವಂತ ಜೀವನ ಇತ್ಯಾದಿಗಳಿಗೆ ಸಂಕೇತವಾಗಿದ್ದ ಗಳಗನಾಥರು ಶುಚಿಯಾದದ್ದನ್ನೇ ನೋಡಿದರು, ಮಾಡಿದರು, ಬರೆದರು. ಪ್ರಾಥಮಿಕ ಶಾಲೆಯ ಕಿರುಬಯಲಿನಲ್ಲಿಯೇ ತಮ್ಮ ಶಕ್ತಿಯನ್ನು ಸಂಪೂರ್ಣ ವ್ಯಯಗೊಳಿಸದೆ ಅಲ್ಲಿಗೆ ಸಲ್ಲುವಷ್ಟನ್ನು ಸಲ್ಲಿಸಿ ಹೊರಜಗತ್ತಿಗೂ ಜಾಗೃತಚೇತನ ಶಕ್ತಿಯನ್ನು ಒದಗಿಸಿದರು.

ಬಂಗಾಲಿ ಸಾಹಿತ್ಯಕ್ಕೆ ಬಂಕಿಮ್‌ಚಂದ್ರ, ಮರಾಠಿ ಸಾಹಿತ್ಯಕ್ಕೆ ಹರಿ ನಾರಾಯಣ ಆಪ್ಟೆ ಯಾವ ಬಗೆಯ ಸೇವೆಯನ್ನು ಸಲ್ಲಿಸಿದರೂ ಅದೇ ಬಗೆಯ ಸೇವೆಯನ್ನು ಕನ್ನಡ ಸಾಹಿತ್ಯಕ್ಕೆ ಸಲ್ಲಿಸಿದ ಪ್ರಮುಖ ಮಹನೀಯರು ಗಳಗನಾಥರು. ಇವರು ವಿಶೇಷವಾಗಿ ಹರಿ ನಾರಾಯಣ ಆಪ್ಟೆಯವರ ಗ್ರಂಥಗಳನ್ನು ಅನುವಾದಿಸಿ ಕೊಟ್ಟರು. ಮರಾಠೀ ಸಾಹಿತ್ಯ ಕ್ಷೇತ್ರದಲ್ಲಿ ಆಪ್ಟೆಯವರು ಯುಗಪ್ರವರ್ತಕ ಲೇಖಕರು. ಕಥಾನಕ ಪ್ರಾಧಾನ್ಯ, ವ್ಯಕ್ತಿದರ್ಶನ, ಮೂರ್ತಿಮತ್ತ ಪ್ರಸಂಗವರ್ಣನೆ, ವೈಚಿತ್ರ್ಯ ಮತ್ತು ಅದ್ಭುತಗಳ ನಿರೂಪಣೆಯಲ್ಲಿ ಪಳಗಿದ ಚಿತ್ತಾಕರ್ಷಕ ಶೈಲಿ, ಆಪ್ಟೆಯವರದು. ಆ ಶೈಲಿಯನ್ನೇ ಗಳಗನಾಥರು ಅನುಸರಿಸಿದರು. ಅನುಸರಣೆ ಇದ್ದರೂ ಅದು ಸಂಪೂರ್ಣ ಅನುಕರಣೆಯಲ್ಲ. ಒಂದು ಉದಾತ್ತವಾದ ಭಾವನೆಯಿಂದ, ದಿವ್ಯವಾದ ಆದರ್ಶದಿಂದ, ಅದ್ಭುತವಾದ ದೃಷ್ಟಿಯಿಂದ ಜನರಲ್ಲಿ ಪ್ರೇಮ, ದಯೆ, ತ್ಯಾಗ, ಸ್ವಾತಂತ್ರ್ಯ, ಸ್ವಾಭಿಮಾನಗಳು ಒಡಮೂಡಬೇಕು, ನೆಲೆನಿಲ್ಲಬೇಕು, ಬೆಳಗಬೇಕು ಎಂಬ ಹೆಗ್ಗುರಿಯಿಂದ ಗಳಗನಾಥರು ಸಾಹಿತ್ಯವನ್ನು ಸೃಜಿಸಿದರು. ಪ್ರಾಯಶಃ ಇದೇ ಕಾರಣದಿಂದ ಇವರು ಸಮಕಾಲೀನ ಚಿತ್ರವನ್ನು ಕೊಡುವ ಸಾಮಾಜಿಕ ಕಾದಂಬರಿಯನ್ನು ರಚಿಸಲಿಲ್ಲವೆಂದು ತೋರುತ್ತದೆ.

ಗಳಗನಾಥರು ರಚಿಸಿದ ಸಾಹಿತ್ಯ ವಿಪುಲವಾದುದು, ವಿವಿಧ ಮುಖವಾದುದು– 24 ಕಾದಂಬರಿಗಳು, 9 ಪೌರಾಣಿಕ ಕಥೆಗಳು, 3 ಸತ್ಪುರುಷ ಚರಿತ್ರೆಗಳು (ಮಹಾಭಾರತದ 18 ಪರ್ವಗಳಲ್ಲಿ ಮೊದಲಿನ 2 ಪರ್ವಗಳು ಅಚ್ಚಾಗಿವೆ; ಮಿಕ್ಕಿನ 16 ಪರ್ವಗಳು ಅಚ್ಚಾಗಿಲ್ಲ. ಕಲಿಕುಠಾರದ 2ನೆಯ ಭಾಗ ಮತ್ತು ಬಿಚ್ಚುಗತ್ತಿಯ 2ನೆಯ ಭಾಗ ಅಚ್ಚಾಗಿಲ್ಲ.) ಮತ್ತು 8 ನಿಬಂಧಗಳು ಇಲ್ಲವೇ ಪ್ರಬಂಧಗಳು, 24 ಕಾದಂಬರಿಗಳಲ್ಲಿ ಆರು ಸ್ವತಂತ್ರ, ಮಿಕ್ಕಿನವು ಅನುವಾದಿತ. ಅನುವಾದಿತ ಕಾದಂಬರಿಗಳನ್ನು ಅನುವಾದಗಳೆಂದು ಹೇಳುವುದಕ್ಕಿಂತ ರೂಪಾಂತರಗಳೆಂದು ಕರೆಯುವುದೇ ಹೆಚ್ಚು ಸಮಂಜಸ. ಕಮಲಕುಮಾರಿ ಕೃತಿಯೊಂದೇ ಶಬ್ದಶಃ ಅನುವಾದ; ಇದಕ್ಕೆ ಮೂಲ, ಆಪ್ಟೆಯವರ ಕೃತಿ ಗಡ ಆಲಾ ಪಣ ಸಿಂಹ ಗೇಲಾ (ಕೋಟೆ ಕೈವಶವಾಯಿತು ಆದರೆ ಸಿಂಹ ಹೋಯಿತು) ಎಂಬುದು.

ಕಾಲಾನುಕ್ರಮವಾಗಿ ಹೊರಬಂದ ಇವರ ಕೃತಿಗಳ ಪಟ್ಟಿಕೆ ಹೀಗಿದೆ:

**1 ಕಾದಂಬರಿಗಳು :** (1) ಪದ್ಮನಯನೆ ಅಥವಾ ಪ್ರಬುದ್ಧ ಪದ್ಮನಯನೆ, ಸ್ವತಂತ್ರ ರಮ್ಯಾದ್ಭುತ ಕಾದಂಬರಿ. (2) ಕಮಲಕುಮಾರಿ, ಮರಾಠಿ ಇತಿಹಾಸಕ್ಕೆ ಸಂಬಂಧಪಟ್ಟ ಇದರ ಮೂಲ–ಮೇಲೆ ತಿಳಿಸಿರುವಂತೆ ಗಡ ಆಲಾ ಪಣ ಸಿಂಹ ಗೇಲಾ. (3) ಮೃಣಾಲಿನಿ ಅಥವಾ ರಾಣಿ ಮೃಣಾಲಿನಿ. ಇದು ಬಂಕಿಮ್‌ಚಂದ್ರರ ಮೃಣಾಲಿನಿ ಕೃತಿಯ ಮರಾಠಿ ಅನುವಾದದ ಅನುವಾದ. (4) ವೈಭವ. ಮೌರ್ಯರ ಇತಿಹಾಸಕ್ಕೆ ಸಂಬಂಧಪಟ್ಟಿದೆ. ಇದರ ಇನ್ನೊಂದು ಹೆಸರೇ ಚಾಣಕ್ಯನ ಕಾರಸ್ಥಾನ. ಇದರ ಕತೆ ಮುದ್ರಾರಾಕ್ಷಸ (ಸಂಸ್ಕೃತ) ಹಾಗೂ ಕೆಂಪುನಾರಾಯಣನ ಮುದ್ರಾಮಂಜೂಷಗಳಿಂದ ಭಿನ್ನವಾಗಿದೆ. (5) ಕುಮುದಿನಿ ಅಥವಾ ಬಾಲಕ್ಕೆ ಬಡಿದಾಟ. 2ನೆಯ ಸ್ವತಂತ್ರ ಕಾದಂಬರಿ ಹಾಗೂ ಕರ್ನಾಟಕದ ಇತಿಹಾಸಕಕ್ಕೆ ಸಂಬಂಧಪಟ್ಟ ಮೊದಲ ಕಾದಂಬರಿ (1913). ಚಂದ್ರಗಿರಿಯಲ್ಲಿ ಬಾಳಿದ ವಿಜಯನಗರದ ರಾಜಮನೆತನದ ಕೊನೆಗಾಲದ ಚಿತ್ರವೇ ಇದರ ವಸ್ತು. (6) ಈಶ್ವರೀ ಸೂತ್ರವೆಂಬುದು ಉಷಃಕಾಲ ಎಂಬ ಮರಾಠೀ ಗ್ರಂಥದ ಅನುವಾದ. ಮರಾಠರ ಇತಿಹಾಸಕ್ಕೆ ಸಂಬಂಧ ಪಟ್ಟಿದೆ. (7) ಕ್ಷಾತ್ರತೇಜ. ಇದು ಮರಾಠೀ ಕೃತಿ ರೂಪನಗರೇಚಿ ರಾಜಕನ್ಯಾ ಎಂಬುದರ ಅನುವಾದ. ರಾಜಪುತ್ರರ ಇತಿಹಾಸಕ್ಕೆ ಸಂಬಂಧಪಟ್ಟಿದೆ. ರಜಪೂತರ ಕ್ಷಾತ್ರತೇಜಸ್ಸನ್ನೇ ಎತ್ತಿ ತೋರುತ್ತದೆ. (8) ಧರ್ಮರಹಸ್ಯ ಅಥವಾ ಸತ್ಸಮಾಗಮ ಪ್ರಭಾವ. ಇದಕ್ಕೆ ಮೂಲ ಮರಾಠಿಯ ಎರಡು ಕೃತಿಗಳು: (1) ಸಮ್ರಾಟ ಅಶೋಕ (2) ಅಶೋಕ ಅಥವಾ ಆರ್ಯಾ ವೃತ್ತಾಂತಲಾ ಪಹಿಲಾ. ಚಕ್ರವರ್ತಿ ರಾಜಾಚಂಡಾಶೋಕ ಧರ್ಮಾಶೋಕನಾದುದೇ ಇದರ ವಸ್ತು. (9) ಸತ್ವಸಾರ ಅಥವಾ ಶೌರ್ಯಸಂಜೀವಿನಿ–ರಜಪೂತರ ಇತಿಹಾಸಕ್ಕೆ ಸಂಬಂಧಪಟ್ಟಿದೆ. ಗಳಗನಾಥರ 3ನೆಯ ಸ್ವತಂತ್ರ ಕಾದಂಬರಿಯಿದು. ಮೇವಾಡದ ಪ್ರತಾಪಸಿಂಹನ

ಕತೆಯೇ ಇದರ ವಸ್ತು. (10) ತಿಲೋತ್ತಮೆ ಅಥವಾ ಸರಸ ಪ್ರೇಮ. ಅಕ್ಬರನ ಕಾಲದಲ್ಲಿದ್ದ ರಾಣಾ ಮಾನಸಿಂಗನ ಮಗ ಜಗತ್ಸಿಂಗನ ಪ್ರೇಮ ಕಥೆ. ರಜಪೂತರ ಇತಿಹಾಸಕ್ಕೆ ಸಂಬಂಧಪಟ್ಟಿದೆ. ಇಲ್ಲಿಯ ಪ್ರೇಮದಲ್ಲಿ ಸರಸಕ್ಕಿಂತ ವಿರಸವೇ ಹೆಚ್ಚು. ಗಳಗನಾಥರು ವೀರರ ಕತೆಗಳಂತೆ ಪ್ರೇಮಕಥೆಯನ್ನು ಹೇಳಲಾರರೆಂಬುದು ಇಲ್ಲಿ ವ್ಯಕ್ತವಾಗಿದೆ. (11) ಕನ್ನಡಿಗರ ಕರ್ಮಕಥೆ. ಇದು ವಿಜಯನಗರದ ಪತನವನ್ನು ಸೂಚಿಸುವ ಕಾದಂಬರಿ. ಇದಕ್ಕೆ ಮೂಲ ಮರಾಠೀಕೃತಿ ವಜ್ರಾಘಾತ. (12) ಶಿವಪ್ರಭುವಿನ ಪುಣ್ಯ. ಮರಾಠೀ ಇತಿಹಾಸಿಕ ಕಾದಂಬರಿಯ ಅನುವಾದ. ಶಿವಾಜಿಯ ಅನಂತರದಲ್ಲಿ ಆತನ ಮನೆಯಲ್ಲಿ ನಡೆದ ಘಟನೆಗಳೇ ಇದರ ವಸ್ತು. (13) ಕುರುಕ್ಷೇತ್ರ ಇದು ಪಾಣೀಪತಚಾ ಮೋಹಿಮ್ ಎಂಬುದರ ಅನುವಾದ; ಪೇಶ್ವೆಯವರ ಐತಿಹಾಸಕ್ಕೆ ಸಂಬಂಧಪಟ್ಟಿದೆ. (14) ಮರಾಠರ ಅಭ್ಯುದಯ. ಇದು ಶಿವಾಜಿ ಅಫ್‌ಜಲಖಾನನನ್ನು ಕೊಂದ ಕತೆಯನ್ನು ವಿವರಿಸುತ್ತದೆ. ಮರಾಠಿಯಿಂದ ಅನುವಾದಿತ. (15) ಛತ್ರಪತಿ. ಛತ್ರಪತಿ ಶಿವಾಜಿಯ ಕತೆಗೆ ಸಂಬಂಧಿಸಿದೆ. (16) ಮಾಧವಕರುಣವಿಲಾಸ. ಗಳಗನಾಥರ ನಾಲ್ಕನೆಯ ಸ್ವತಂತ್ರ ಕಾದಂಬರಿ. ಇದು ತಮ್ಮ ಹಿರಿಯ ಕೃತಿಯೆಂದು ಅವರೇ ಹೇಳಿಕೊಂಡಿದ್ದಾರೆ. ವಿಜಯನಗರ ರಾಜ್ಯ ಸ್ಥಾಪನೆಯ ವಿಷಯವೇ ಇದರ ವಸ್ತು. ಕನ್ನಡ ಜನತೆಯಲ್ಲಿ ಜಾಗೃತಿಯನ್ನುಂಟು ಮಾಡಿದ ಮಹಾಕೃತಿ. (17) ಗೃಹಕಲಹ. ಮರಾಠೀ ಕೃತಿಯ ಅನುವಾದ. ಮರಾಠರ ಇತಿಹಾಸಕ್ಕೆ ಸಂಬಂಧಪಟ್ಟಿದೆ. (18) ರಾಣಾ ರಾಜಸಿಂಹ. ರಜಪೂತ ಇತಿಹಾಸಕ್ಕೆ ಸಂಬಂಧಿಸಿದ ಮರಾಠೀ ಕೃತಿಯ ಅನುವಾದ. (19) ಧಾರ್ಮಿಕತೇಜ ಅಥವಾ ಪರಹಿತದಕ್ಷತಾ. ಇದೂ ರಜಪೂತರ ಇತಿಹಾಸಕ್ಕೆ ಸಂಬಂಧಿಸಿದೆ. ಬುಂದೇಲ ಖಂಡದ ರಾಜಾ ಛತ್ರಸಾಲನ ಕಥೆ. ಮರಾಠಿಯಿಂದ ಅನುವಾದಿತ. (20) ಸಂಸಾರ ಸುಖ. ಮರಾಠಿಯಿಂದ ಅನುವಾದಿತ. ಮೊಗಲರ ಇತಿಹಾಸಕ್ಕೆ ಸಂಬಂಧಪಟ್ಟಿದೆ. (21) ಸ್ವರಾಜ್ಯ ಸುಗಂಧ. ಅನುವಾದಿತ ಕೃತಿ. ಮರಾಠರ ಇತಿಹಾಸಕ್ಕೆ ಸಂಬಂಧಿಸಿದೆ. (22) ಸತ್ವಾದರ್ಶ. (23) ದುರ್ಗದ ಬಿಚ್ಚುಗತ್ತಿ. ಚಿತ್ರದುರ್ಗದ ನಾಯಕರ ಇತಿಹಾಸಕ್ಕೆ ಸಂಬಂಧಪಟ್ಟಿದೆ. ಗಳಗನಾಥರ ಐದನೆಯ ಸ್ವತಂತ್ರ ಕಾದಂಬರಿ. ಒಂದನೆಯ ಭಾಗ ಮಾತ್ರ ಅಚ್ಚಾಗಿದೆ. (24) ಭಗವತೀ ಕಾತ್ಯಾಯಿನಿ. ಪೌರಾಣಿಕ ಕಾದಂಬರಿ. ಗಳಗನಾಥರ ಆರನೆಯ ಸ್ವತಂತ್ರ ಕಾದಂಬರಿ.

**II ಪೌರಾಣಿಕ ಕಥೆಗಳು :** (1) ಗಿರಿಜಾಕಲ್ಯಾಣ (2) ಉತ್ತರರಾಮಚಂದ್ರ (3) ನಳಚರಿತ್ರ (4) ಚಿದಂಬರಚರಿತ್ರ (5) ಭಾಗವತಾಮೃತ (6) ಶೈವಸುಧಾರ್ಣವ (7) ತುಲಸೀರಾಮಾಯಣ (8) ಮಹಾಭಾರತ (ಆದಿಪರ್ವ ಮತ್ತು ಸಭಾಪರ್ವ ಮಾತ್ರ ಅಚ್ಚಾಗಿವೆ.)

**III ಸತ್ಪುರುಷ ಚರಿತ್ರೆಗಳು :** (1) ನಿರ್ಯಾಣ ಮಹೋತ್ಸವ (2) ಸದ್ಗುರು ಪ್ರಭಾವ (3) ಕಲಿಕುಠಾರ (1ನೆಯ ಭಾಗ ಮಾತ್ರ ಅಚ್ಚಾಗಿದೆ.)

**IV ನಿಬಂಧಗಳು :** (1) ದಾಂಪತ್ಯ (2) ಕುಟುಂಬ (3) ಸುಂದರಲೇಖ ಸಮುಚ್ಚಯ (4) ನಿಬಂಧ ಶಿಕ್ಷಣ (5) ಕನ್ಯಾಶಿಕ್ಷಣ (6) ರಾಜನಿಷ್ಠೆ (7) ಶ್ರೇಷ್ಠ ಸದುಪದೇಶ ಹಾಗೂ (8) ಬ್ರಾಹ್ಮಣ ಪ್ರಾಪ್ತಿ ಸಾಧನೆ.

ಕಲ್ಪಕತೆ, ಭಾವೋದ್ರೇಕತೆ, ಐತಿಹಾಸಿಕ ವ್ಯಕ್ತಿಗಳ ಮೂಲಕ ವೀರಸಾಹಸರಸಿಕತೆ ಸಾಧುಸಂತರ ಪಾತ್ರಗಳ ಮೂಲಕ ಸದುಪದೇಶ–ಇವನ್ನು ಕನ್ನಡ ಜನತೆಗೆ ಗಳಗನಾಥರು ತಮ್ಮ ಹಲವಾರು ಕೃತಿಗಳ ಮೂಲಕ ಒದಗಿಸಿದ್ದಾರೆ. ಇವರ ಕೃತಿಗಳಲ್ಲಿ ಮಾನವೀಯ ಹೋರಾಟ ರಾಷ್ಟ್ರೀಯತೆಯಲ್ಲಿ ಪರ್ಯವಸಾನವಾಗಿ ಈಶ್ವರೀ ಭಾವದತ್ತ ನಡೆಯುತ್ತದೆ. ಕೃತಿಗಳಲ್ಲಿ ಸಮಕಾಲೀನ ರಾಜಕೀಯ ಆಂದೋಲನಗಳ ಪ್ರಭಾವ ಇಲ್ಲದಿದ್ದರೂ ಸನಾತನಧರ್ಮದ ಪುನರುಜ್ಜೀವನದ ಹೆಬ್ಬಯಕೆ ಇತ್ತೆಂಬುದು ಸ್ಪಷ್ಟವಿದೆ. ಇದು ಗಳಗನಾಥರ ಜೀವನಕಾಲದ ಭಾರತೀಯ ಸಾಹಿತ್ಯದ ಲಕ್ಷಣವೇ ಆಗಿತ್ತು. ಆದುದರಿಂದ ಅವು ಆಗಿನ ಕಾಲಕ್ಕೆ ತಕ್ಕಂತೆ ಜನರ ಮನೋಧರ್ಮವನ್ನು ಸಂಸ್ಕಾರಗೊಳಿಸಿದ, ಜಾಗೃತಿಯನ್ನುಂಟುಮಾಡಿದ ಕೃತಿಗಳಾದವು.

ಗಳಗನಾಥರು ಸಂಸ್ಕೃತ ಭಾಷೆ ಹಾಗೂ ಸಾಹಿತ್ಯಗಳಲ್ಲಿ ವಿಶೇಷ ಪ್ರೇಮವುಳ್ಳವರಾಗಿದ್ದರೂ ಸಂಸ್ಕೃತ ಶಬ್ದಗಳ ಜಡಪ್ರಯೋಗಗಳಿಗೆ ಮರುಳಾಗದೆ, ಎಷ್ಟು ಬೇಕೋ ಅಷ್ಟನ್ನು ಮಾತ್ರ ತೆಗೆದುಕೊಂಡು ಅದಕ್ಕೆ ತಿರುಳ್ಗನ್ನಡ ಶಬ್ದಗಳನ್ನೂ ಕೆಲವು ಬಾರಿ ಮನೆಮಾತುಗಳ ಪಡೆನುಡಿಗಳನ್ನೂ ಸೇರಿಗೆ ಸವ್ವಾಸೇರು ಎಂಬಂಥ ಗಾದೆಮಾತುಗಳನ್ನೂ ಬೆರೆಸಿ ಹಾಳತವಾದ ಶೈಲಿಯೊಂದನ್ನು ಸೃಷ್ಟಿಸಿದರು. ಅಷ್ಟೆ ಅಲ್ಲ ಉತ್ತರ, ಮಧ್ಯ, ದಕ್ಷಿಣ ಕನ್ನಡಗಳಿಗೆ ಸಮಾನ ಬೆಲೆ ಕೊಟ್ಟು ಎಲ್ಲರಿಗೂ ಅರ್ಥವಾಗಬಲ್ಲ ಕನ್ನಡ ಒಂದೇ ಎಂಬುದನ್ನೂ ತಮ್ಮ ಕೃತಿಗಳ ಮೂಲಕ ವ್ಯಕ್ತಪಡಿಸಿದರು. ಮೈಸೂರಿನ ಮಹಾರಾಜಾ ಕಾಲೇಜಿನ ಕರ್ನಾಟಕ ಸಂಘ ಇವರಿಗರ್ಪಿಸಿದ ಮಾನಪತ್ರವೇ ಇದಕ್ಕೆ ಸಾಕ್ಷಿ. ಹೀಗೆ ಕನ್ನಡಕ್ಕೆ ಏಕರೂಪತೆಯನ್ನು ಕೊಟ್ಟವರಲ್ಲೂ ಇವರು ಆದ್ಯರಾಗಿದ್ದಾರೆ. (ಎಸ್.ಎಸ್.ಜಿ.ಎ.;ಎನ್.ಆರ್.ಎನ್.)

**ಗಳಲೆ :** ದುಗ್ಧರಸನಾಳಗಳ (ಲಿಂಫ್ಯಾಟಿಕ್ ವೆಸಲ್ಸ್) ಮಾರ್ಗದಲ್ಲಿ ಸಾಧಾರಣವಾಗಿ ಅಲ್ಲಲ್ಲಿ ಇರುವ ಸಾಸಿವೆಕಾಳಿನಿಂದ ಅವರೆಕಾಳಿನ ಗಾತ್ರದ ಗಂಟುಗಳು ರೋಗಗ್ರಸ್ತವಾದಾಗ ತಳೆಯುವ ಗಡಸಾದ ಮತ್ತು ದಪ್ಪವಾದ ಒಂದು ವಿಶೇಷ ಸ್ಥಿತಿ. ಗಾತ್ರ ಮತ್ತು ಗಡಸುತನದಿಂದ ಗಳಲೆಗಳು, ಕೈಗೆ ಸಿಕ್ಕುವುದರಿಂದ ಸ್ಪರ್ಶಪರೀಕ್ಷೆಯಿಂದ ಅವನ್ನು ಕಂಡುಕೊಳ್ಳಬಹುದು. ಅನೇಕ ವೇಳೆ ಅವು ನೋಯುವುದರಿಂದಲೂ ಗಮನಕ್ಕೆ ಬರುತ್ತವೆ. ಗಳಲೆಗಳು ತಾತ್ಕಾಲಿಕವಾಗಿಯೋ ಬಹುಕಾಲಿಕವಾಗಿಯೋ ಇರಬಹುದು. ತಾತ್ಕಾಲಿಕವಾದ ಅಥವಾ ಬಹುಕಾಲಿಕವಾದ ವಿಷಾಣು ಸೋಂಕಿನಿಂದ ರೋಗಗ್ರಸ್ತವಾದ ದೇಹಭಾಗಗಳಿಂದ ಪ್ರವಹಿಸುವ ದುಗ್ಧರಸಮಾರ್ಗದಲ್ಲಿರುವ ಗಂಟುಗಳು ಅದೇ ವಿಷಾಣು ಸೋಂಕಿನಿಂದ ಗಳಲೆ ಕಟ್ಟಿಕೊಳ್ಳುವುದು ಸಾಮಾನ್ಯ. ಕೈಕಾಲುಗಳಲ್ಲಿ ಗಾಯವಾಗಿ ಕೀತುಕೊಂಡಾಗ ಕಂಕುಳು ತೊಡೆಸಂದಿಗಳಲ್ಲಿ ತಾತ್ಕಾಲಿಕ ಗಳಲೆಗಳು ಕಾಣಿಸಿಕೊಳ್ಳುವುದೂ ಗಂಟಲು ನೋವು ಬಂದಾಗ ದವಡೆಯ ತಳಭಾಗದಲ್ಲಿರುವ ಗಂಟುಗಳು ಗಳಲೆ ಕಟ್ಟಿಕೊಳ್ಳುವುದೂ ಹೇನು ಹತ್ತಿ ತಲೆಯಲ್ಲಿ ವ್ರಣವಾದಾಗ ಕತ್ತಿನ ಹಿಂಭಾಗದಲ್ಲಿ ಗಳಲೆ ಕಟ್ಟಿಕೊಳ್ಳುವುದೂ ಸಾಮಾನ್ಯವಾಗಿ ಎಲ್ಲರಿಗೂ ತಿಳಿದ ವಿಷಯ. ಈ ಗಳಲೆಗಳೆಲ್ಲ ಸಾಧಾರಣವಾಗಿ ತಾತ್ಕಾಲಿಕವಾಗಿದ್ದು ನೋವನ್ನು ಉಂಟುಮಾಡುತ್ತಿದ್ದರೂ ಕಾರಣಭೂತ ಸ್ಥಿತಿಗಳಿಗೆ ಅನುಸಾರವಾಗಿ ಇವು ಬಹುಕಾಲಿಕವಾಗಿಯೂ ವೇದನಾರಹಿತವಾಗಿಯೂ ಇರಬಹುದು.

ಬಹುಕಾಲಿಕ ವ್ಯಾಧಿಗಳಾದ ಕ್ಷಯ, ಫರಂಗಿರೋಗ (ಸಿಫಿಲಿಸ್), ಏಡ್ಸ್ ಇವುಗಳಲ್ಲಿ ಗಳಲೆ ಸಹಜವಾಗಿಯೇ ಬಹುಕಾಲಿಕವಾಗಿ ಇರುತ್ತದೆ. ಬಾಲ್ಯಾವಸ್ಥೆಯಲ್ಲಿ ಕ್ಷಯ ರೋಗಾಣು ಸೋಂಕಿನಿಂದ ಉಂಟಾದ ಜಡೆಕಟ್ಟಿಕೊಂಡಿರುವ ಕೊರಳಿನ ಹಿಂಭಾಗದಲ್ಲಿ (ಕಳ್ಳಂಗುಣಿ) ಇರುವ ಗಳಲೆಗಳು, ಹಾಗೆಯೇ ಫರಂಗಿ ರೋಗದಲ್ಲಿ ಕಾಣಬರುವ ಮೊಣಕೈ ಮತ್ತು ತೊಡೆಯ ಸಂದಿನಲ್ಲಿ ಸಿಕ್ಕುವ ಕಲ್ಲಿನಂತೆ ಗಡಸಾದ ಗಳಲೆಗಳು ಈ ರೀತಿಯವು. ಏಡ್ಸ್ ರೋಗದಲ್ಲಿ ಅಕಾರಣವಾಗಿ ದೇಹಾದ್ಯಂತ ಗಳಲೆಗಳು ದೊಡ್ಡದಾಗಿ ಗೋಚರಿಸುತ್ತವೆ. ಏಡಿಗಂತಿಕೋಶಗಳ ಆಕ್ರಮಣದಿಂದಲೂ ಗಳಲೆ ಕಟ್ಟಿಕೊಳ್ಳುವುದರಿಂದ ಗಳಲೆ ರೋಗನಿದಾನವನ್ನು ಬಹು ಎಚ್ಚರಿಕೆಯಿಂದ ಮಾಡಬೇಕಾಗುತ್ತದೆ. ಕಾರಣಭೂತ ರೋಗ ಗುಣವಾದರೆ ಕ್ರಮೇಣ ಗಳಲೆಗಳೂ ಇಂಗಿ ಮಾಯವಾಗುತ್ತವೆ. (ಎಸ್.ಆರ್.ಆರ್.)

**ಗಳಿಸಿದ ವರಮಾನ :** ಕೊಡುಗೆಗಳು ಮತ್ತು ಇತರ ಆಕಸ್ಮಿಕ ಲಾಭಗಳನ್ನು ಬಿಟ್ಟು ಉಳಿದ ಎಲ್ಲ ವರಮಾನವೂ ಸ್ಥೂಲವಾಗಿ ಗಳಿಸಿದ ವರಮಾನ (ಇನ್‌ಕಮ್ ಅರ್ನ್‌ಡ್) ಎಂದು ಸಾಮಾನ್ಯವಾಗಿ ಭಾವಿಸಲಾಗಿದೆ. ಏಕೆಂದರೆ ಉಳಿದೆಲ್ಲ ಯಾವುದಾದರೊಂದು ಆರ್ಥಿಕ ಸೇವೆಗೆ ಪ್ರತಿಯಾಗಿ ಸಂಪಾದಿಸಿದ್ದು. ಸರ್ಕಾರಿ ಸಾಲಪತ್ರದ ಮೇಲೆ ಪಡೆದ ಬಡ್ಡಿಯೂ ಈ ದೃಷ್ಟಿಯಲ್ಲಿ ಗಳಿಸಿದ ವರಮಾನವೇ. ಏಕೆಂದರೆ ಸರ್ಕಾರಕ್ಕೆ ಸಾಲ ನೀಡುವ ಸೇವೆಗೆ ಪ್ರತಿಯಾಗಿ ಪಡೆದ ಸಂಪಾದನೆಯಿದು. ಆದರೆ ದುಡಿಮೆಯಿಂದ ಬರುವ ವರಮಾನವನ್ನು ಗಳಿಸಿದ ಆದಾಯವೆಂದೂ ಸ್ವತ್ತಿನಿಂದ ಬರುವ ಆದಾಯವನ್ನು ಗಳಿಕೆಯಾಗದ ವರಮಾನವೆಂದೂ ತಜ್ಞರು ಕರೆದಿದ್ದಾರೆ. ಉದಾಹರಣೆಗೆ ಕಟ್ಟಡಗಳು, ಸರ್ಕಾರಿ ಪ್ರತಿಭೂತಗಳು (ಸೆಕ್ಯೂರಿಟೀಸ್), ಷೇರುಗಳು ಮುಂತಾದವುಗಳ ಮೇಲೆ ಪಡೆಯುವ ವರಮಾನ, ಉತ್ತರಾಧಿಕಾರದಿಂದಾಗಿ ಪಡೆದ ಸ್ವತ್ತಿನಿಂದ ದೊರಕುವ ವರಮಾನ ಮುಂತಾದವನ್ನು ಗಳಿಕೆಯಾಗದ ವರಮಾನವೆಂದು ಕರೆಯಲಾಗಿದೆ. ಗಳಿಸಿದ ಆದಾಯ ದುಡಿಮೆಯ ಫಲವಾದ್ದರಿಂದ ಅದಕ್ಕೆ ಸ್ವಾಭಾವಿಕವಾಗಿಯೇ ಮಾನ್ಯತೆ ಹೆಚ್ಚು. ಅಂತೂ ವರಮಾನದ ಮೂಲ ಯಾವುದು ಎಂಬುದರ ಮೇಲಿಂದ ಅದನ್ನು ಗಳಿಸಿದ್ದೇ ಗಳಿಸದ್ದೇ ಎಂಬುದಾಗಿ ವಿಂಗಡಿಸಲಾಗುತ್ತದೆ. ಆದರೆ ಈ ಬಗೆಯ ವಿಂಗಡಣೆ ಅನೇಕ ವೇಳೆ ತುಂಬ ಸಂಕೀರ್ಣ. ಅನೇಕ ದೇಶಗಳಲ್ಲಿ ವರಮಾನ ವಿಧಿಸುವಾಗ ಗಳಿಸಿದ ಮತ್ತು ಗಳಿಸದ ವರಮಾನಗಳೆಂದು ವಿಂಗಡಣೆ ಮಾಡಲಾಗುತ್ತದೆ. ಬ್ರಿಟನ್‌ನಲ್ಲಿ 1907–20ರ ವರೆಗೆ ವರಮಾನವನ್ನು ಗಳಿಸಿದ ಮತ್ತು ಗಳಿಸದ ವರಮಾನಗಳೆಂದು ವಿಂಗಡಿಸಿ, ಗಳಿಸಿದ ವರಮಾನದ ಮೇಲೆ ಕಡಿಮೆ ದರದ ತೆರಿಗೆಯನ್ನೂ ಗಳಿಸದ ವರಮಾನದ ಮೇಲೆ ಹೆಚ್ಚಿನ ದರದ ತೆರಿಗೆಯನ್ನೂ ವಿಧಿಸಲಾಗುತ್ತಿತ್ತು. ಅಮೆರಿಕ ಸಂಯುಕ್ತಸಂಸ್ಥಾನದಲ್ಲಿ 1924ರ ಹಣಕಾಸು ಕಾಯಿದೆಯ ಪ್ರಕಾರ ಗಳಿಸಿದ ವರಮಾನದ ಮೇಲಿನ ತೆರಿಗೆಗೆ ರಿಯಾಯತಿ ಕೊಡುವ ಪದ್ಧತಿ ಪ್ರಾರಂಭವಾಯಿತು. 1924–43ರ ವರೆಗೆ ಈ ಕ್ರಮ ಜಾರಿಯಲ್ಲಿತ್ತು. ಭಾರತದಲ್ಲಿ ಗಳಿಸಿದ ವರಮಾನಕ್ಕೆ ರಿಯಾಯಿತಿ ನೀಡುವ ಪದ್ಧತಿ ಆರಂಭವಾದ್ದು 1945–46ರಲ್ಲಿ. ಇದಕ್ಕೆ ಸಂಬಂಧಿಸಿದಂತೆ ತೆರಿಗೆ ನೀತಿಯಲ್ಲಿ ಪದೇಪದೇ ಬದಲಾವಣೆಗಳಾಗುತ್ತಿದ್ದುವು. 1969–70ರಿಂದ ಈ ವಿಂಗಡಣೆಯನ್ನು ಭಾರತದಲ್ಲಿ ಕೈಬಿಡಲಾಯಿತು.

ಗಳಿಸಿದ ವರಮಾನಕ್ಕೆ ತೆರಿಗೆ ರಿಯಾಯಿತಿ ಅಗತ್ಯವೆಂಬುದಕ್ಕೆ ಕೆಲವು ಮುಖ್ಯವಾದ ಗಳನ್ನು ಮುಂದೊಡ್ಡಲಾಗಿದೆ: 1. ಗಳಿಸಿದ ವರಮಾನ ಅಥವಾ ದುಡಿಮೆಯಿಂದ ಬರುವ ವರಮಾನ ಶಾಶ್ವತವಾದ್ದಲ್ಲ. ದುಡಿಯುವ ಶಕ್ತಿ ಮತ್ತು ಅವಕಾಶಗಳಿರುವವರೆಗೆ ಮಾತ್ರ ವರಮಾನ ದೊರಕುತ್ತಿರುತ್ತದೆ. ಅಂದರೆ, ಗಳಿಸಿದ ವರಮಾನದಲ್ಲಿ ಸ್ಥಿರತೆ ಇರುವುದಿಲ್ಲ.

ಆದರೆ ಸ್ವತ್ತಿನಿಂದ ಬರುವ ವರಮಾನ ಹೆಚ್ಚು ಶಾಶ್ವತ, ಸ್ಥಿರ. ದುಡಿದು ಸಂಪಾದಿಸುವವನು ಉಳಿತಾಯಮಾಡಿ ವೃದ್ಧಾಪ್ಯ ಕಾಲದ ಜೀವನಕ್ಕೆ ಕೂಡಿಡ ಬೇಕಾಗುತ್ತದೆ. ಸ್ವತ್ತಿನಿಂದ ವರಮಾನ ಪಡೆಯುವವನು ಈಗಾಗಲೇ ಕೂಡಿಟ್ಟಿರು ವುದರಿಂದ ಅವನು ಹೊಸದಾಗಿ ಉಳಿಸಿಡಬೇಕಾದ ಅಗತ್ಯವಿರುವುದಿಲ್ಲ. 2. ವರಮಾನವನ್ನು ಗಳಿಸುವುದಕ್ಕೆ ದೈಹಿಕ ಮತ್ತು ಮಾನಸಿಕ ಶ್ರಮ ಅಗತ್ಯ. ಗಳಿಕೆಗಾಗಿ ದುಡಿಯುವವನು ತನ್ನ ಬಿಡುವನ್ನು ತ್ಯಾಗಮಾಡುತ್ತಾನೆ. ಆದರೆ ಸ್ವತ್ತಿನಿಂದ ವರಮಾನ ಪಡೆಯುವವನಿಗೆ ಶ್ರಮವಿರುವುದಿಲ್ಲ; ಅವನು ಬಿಡುವನ್ನು ಅನುಭವಿಸುತ್ತಾನೆ. 3. ಸಾಮಾನ್ಯವಾಗಿ ಆಸ್ತಿಯಿಂದ ವರಮಾನ ಪಡೆಯುವವರಿಗೆ ಇರುವಷ್ಟು ವೆಚ್ಚಮಾಡುವ ಶಕ್ತಿ ದುಡಿಮೆಯಿಂದ ಗಳಿಸುವವರಿಗೆ ಇರುವುದಿಲ್ಲ. ಆದರೆ ಸ್ವತ್ತಿನಿಂದ ಬಂದ ಅಲ್ಪ ವರಮಾನದಿಂದಲೇ ಜೀವನ ನಡೆಸಬೇಕಾಗಿರುವವರೂ ಇಲ್ಲದಿಲ್ಲ. 4. ದುಡಿಮೆಯಿಂದ ವರಮಾನ ಪಡೆಯುವವರು ಆ ಶಕ್ತಿಯನ್ನು ಗಳಿಸಲು ವಿದ್ಯಾಭ್ಯಾಸ ಮತ್ತು ತರಬೇತಿಗಾಗಿ ವೆಚ್ಚ ಮಾಡಿರುತ್ತಾರೆ. ಆದರೆ ಸ್ವತ್ತಿನಿಂದ ವರಮಾನ ಪಡೆಯಲು ಇಂಥ ವೆಚ್ಚದ ಅಗತ್ಯವಿರುವುದಿಲ್ಲ. 5. ದುಡಿಮೆಯಿಂದ ವರಮಾನ ಪಡೆಯುವವರಿಗೆ, ಮುಖ್ಯವಾಗಿ ಸಂಬಳ ವರಮಾನಗಾರರಿಗೆ, ತೆರಿಗೆಯನ್ನು ತಪ್ಪಿಸಿಕೊಳ್ಳುವ ಅವಕಾಶ ಸಾಮಾನ್ಯವಾಗಿ ಇರುವುದಿಲ್ಲ. ಆದರೆ ಈ ಮಾರ್ಗಗಳೆಲ್ಲವೂ ಬಹುಮಟ್ಟಿಗೆ ಲಭ್ಯವಿರುವುದು ಸ್ವತ್ತಿನಿಂದ ವರಮಾನ ಪಡೆಯುವವರಿಗೆ. ಈ ಕಾರಣಗಳಿಂದಾಗಿ ಗಳಿಸಿದ ವರಮಾನದ ಮೇಲೆ ತೆರಿಗೆ ಕೊಡುವ ಶಕ್ತಿ ಗಳಿಸದ ವರಮಾನದ ಮೇಲೆ ತೆರಿಗೆ ಕೊಡುವ ಶಕ್ತಿಗಿಂತ ಕಡಿಮೆಯಾಗಿರುತ್ತದೆಂದೂ ಆದ್ದರಿಂದ ಗಳಿಸಿದ ವರಮಾನಕ್ಕೆ ರಿಯಾಯಿತಿ ನೀಡ ಬೇಕೆಂದೂ ವಾದಿಸಲಾಗಿದೆ.

ಒಂದು ನಿರ್ದಿಷ್ಟ ಮೊತ್ತದ ರಾಜ್ಯಾದಾಯವನ್ನು ಸರ್ಕಾರ ಪಡೆಯಲೇ ಬೇಕಾಗಿರುವಾಗ, ಗಳಿಸಿದ ವರಮಾನಕ್ಕೆ ಅದು ತೆರಿಗೆಯಲ್ಲಿ ರಿಯಾಯಿತಿ ನೀಡುವುದ ರಿಂದ ಆಗುವ ನಷ್ಟ ತುಂಬಿಕೊಳ್ಳಲು ಗಳಿಸದ ವರಮಾನದ ಮೇಲಿನ ತೆರಿಗೆಯನ್ನು ಹೆಚ್ಚಿಸಬೇಕಾಗುತ್ತದೆ. ಗಳಿಸದ ವರಮಾನದ ಮೇಲೆ ಹೆಚ್ಚಿನ ದರದ ತೆರಿಗೆ ವಿಧಿಸುವುದಕ್ಕೆ ಆರ್ಥಿಕ ಅಸಮತೆಯನ್ನು ಕಡಿಮೆಮಾಡುವ ದೃಷ್ಟಿಯಿಂದಲೂ ಸಮರ್ಥನೆಯುಂಟು. ಆದರೆ ಈ ನೀತಿಯಿಂದ ಉಳಿತಾಯ ಮಾಡಲು ಮತ್ತು ಸ್ವತ್ತನ್ನು ಸಂಪಾದಿಸಲು ಉತ್ತೇಜನವಿಲ್ಲದಂತಾಗುತ್ತದೆಂಬ ಮತ್ತು ನಷ್ಟ ಸಂಭವವುಳ್ಳ ಉದ್ಯಮಗಳಲ್ಲಿ ಬಂಡವಾಳ ಹೂಡಲು ಉತ್ತೇಜನವಿಲ್ಲದಂತಾಗುತ್ತದೆಂಬ ಭಯವುಂಟು. ಸ್ವತ್ತನ್ನು ಸಂಪಾದಿಸಿದಾಗಿ ನಿಂದ ಹಲವಾರು ವರ್ಷಗಳವರೆಗೆ ವಿನಾಯಿತಿ ಕೊಟ್ಟು, ಅನಂತರ ಅದರಿಂದ ಬರುವ ವರಮಾನದ ಮೇಲೆ ಹೆಚ್ಚಿನ ದರದ ತೆರಿಗೆ ವಿಧಿಸುವುದಾದರೆ ಉಳಿತಾಯ ಮಾಡಲೂ ಸ್ವತ್ತನ್ನು ಆರ್ಜಿಸಲೂ ಉತ್ತೇಜನ ತಪ್ಪದಂತೆ ಮಾಡಬಹುದೆಂಬ ಅಭಿಪ್ರಾಯವೂ ಉಂಟು. (ಬಿ.ಎಸ್.ಎಸ್.ಎ.)

ಒಂದು ಆದಾಯವನ್ನು ಇತಮಿತ್ಥಂ ಎಂದು ಗಳಿಸಿದ ವರಮಾನ ಹಾಗು ಗಳಿಸದ ವರಮಾನವೆಂದು ವರ್ಗೀಕರಿಸುವುದು ಅಷ್ಟೇನೂ ಸುಲಭವಲ್ಲ. ಒಂದೇ ಆದಾಯವು ಗಳಿಸಿದ್ದೂ ಆಗಬಹುದು; ಗಳಿಸದ್ದೂ ಆಗಬಹುದು. ಆ ಹಣದ ಮೂಲವು ವ್ಯಕ್ತಿಯ ದುಡಿಮೆಯಿಂದ ಬಂದುದೇ ಅಥವಾ ಬೇರೆಯವರಿಂದಲೋ/ಆಕಸ್ಮಿಕವಾಗಿ ಬಂದುದೋ ಎಂಬುದರ ಮೇಲೆ ಆಧಾರಿತವಾಗಿದೆ.

ತನ್ನ ಸ್ವಯಂ ದುಡಿಮೆಯಿಂದ ಉಳಿಸಿದ ಅಥವಾ ಕೂಡಿಟ್ಟ ಅಥವಾ ಸಾಲ ಮಾಡಿ ಹಣ ದೊರಕಿಸಿಕೊಂಡು ಆಮೇಲೆ ತನ್ನ ವರಮಾನದಿಂದ ತೀರಿಸಿದ ಹಣ ಅಥವಾ (ನಿವೃತ್ತಿ, ವೇತನ ಪರಿಷ್ಕರಣ ಮೊದಲಾದ ಕಾರಣಗಳಿಂದ) ಇಡು ಗಂಟಾಗಿ ಬಂದ ಹಣವನ್ನು ಹಲವಾರು ರೀತಿ ವಿನಿಯೋಗಿಸಿ ಅದರಿಂದ ಬರುವ ಆದಾಯವು ಗಳಿಸಿದ ವರಮಾನವಾಗುವುದು. ಉದಾಹರಣೆಗೆ ಈ ಕೆಳಗಿನವುಗಳು ಗಳಿಸಿದ ವರಮಾನಗಳು:

1. ವೇತನ, ಬೋನಸ್ಸು, ತುಟ್ಟಿಭತ್ಯ, ವೇತನೇತರ ಸೌಲಭ್ಯಗಳು, ನಿವೃತ್ತಿವೇತನ, ನಿವೃತ್ತಿಕಾಲದ ಮೊತ್ತಗಳು.

2. ಠೇವಣಿಗಳು, ಅಂಚೆ ಕಛೇರಿಯ ರಾಷ್ಟ್ರೀಯ ಉಳಿತಾಯ ಪತ್ರಗಳು, ಮಾಸಿಕ ಆದಾಯ ಯೋಜನೆ ಠೇವಣಿ, ನಿವೃತ್ತರ ಆದಾಯ ಯೋಜನೆ, ಸಾರ್ವಜನಿಕ ಭವಿಷ್ಯನಿಧಿ, ಐಡಿಬಿಐ ಮೊದಲಾದ ಬಾಂಡುಗಳು, ಡಿಬೆಂಚರ್ ಬಾಂಡುಗಳು, ಉಳಿತಾಯ ಖಾತೆ, ಪಾರಸ್ಪರಿಕ ನಿಧಿ ಮೊದಲಾದವುಗಳಿಂದ ಬರುವ ಬಡ್ಡಿ.

3. ಮನೆ/ಕಟ್ಟಡದ ಬಾಡಿಗೆ, ಷೇರುಗಳು-ಬಂಡವಾಳ ಪತ್ರಗಳು ಮೊದಲಾದವುಗಳ ಮೇಲೆ ಬರುವ ಲಾಭಾಂಶ ಮೊದಲಾದವುಗಳು.

ಗಳಿಸದ ವರಮಾನವೆಂದರೆ ತನ್ನ ಸ್ವಂತ ದುಡಿಮೆಯ ಪ್ರತಿಫಲವಾಗದೆ ಬೇರೆಯವ ರಿಂದ ಹಲವಾರು ಕಾರಣಗಳಿಗಾಗಿ ಬರುವ ಆಸ್ತಿಯ ಅಥವಾ ಇಡುಗಂಟಿನ ಮೇಲಣ ಆದಾಯ ಅಥವಾ ಇತರೇ ಈ ರೀತಿಯ ಆದಾಯಗಳು ಗಳಿಸದ ವರಮಾನವಾಗುತ್ತವೆ.

1. ಪಿತ್ರಾರ್ಜಿತವಾಗಿ ಬಂದ ಮನೆ, ನಿವೇಶನ, ಕಟ್ಟಡ, ಹಣ ಮೊದಲಾದವುಗಳಿಂದ ಬರುವ ಆದಾಯವು ಗಳಿಸದ ವರಮಾನ. ಇದರಿಂದ ಬರುವ ಬಾಡಿಗೆ, ಬಡ್ಡಿ, ಲಾಭಾಂಶಗಳೂ ಗಳಿಸದ ವರಮಾನವಾಗುತ್ತವೆ.

2. ಲಾಟರಿ, ರಸಪ್ರಶ್ನೆಗಳಿಂದ ಬರುವ ಬಹುಮಾನ ಮೊದಲಾದವುಗಳು ಸಹ ಗಳಿಸದ ವರಮಾನ.

3. ತಂದೆ ಮೊದಲಾದವರ ಮರಣಾನಂತರ ವಾರಸುದಾರನಾಗಿ ಪಡೆಯುವ ಆಸ್ತಿ, ಹಣ, ಷೇರುಗಳು, ಡಿಬೆಂಚರ್-ಬಂಡವಾಳ ಪತ್ರಗಳು ಮೊದಲಾದವುಗಳಿಂದ ಬರುವ ಆದಾಯವು ಗಳಿಸದ ವರಮಾನವಾಗುತ್ತವೆ. (ಬಿ.ಎಸ್.ಎಸ್.ಎ.)

**ಗಾಂಕೂರ್ ಸಹೋದರರು :** ಎಡ್ಮಾನ್ ಡ ಗಾಂಕೂರ್ (1822-96) ಮತ್ತು ಝೂಲ್ ಡ ಗಾಂಕೂರ್ (1830-70) 19ನೆಯ ಶತಮಾನದ ಉತ್ತರಾರ್ಧದ ಫ್ರೆಂಚ್ ಸಾಹಿತ್ಯದಲ್ಲಿ ಹೆಸರಾಂತ ಕಾದಂಬರಿಕಾರರು; ಕಲಾ ವಿಮರ್ಶಕರು. ತಮ್ಮ ಕಾದಂಬರಿಗಳನ್ನು ರೂಪಾಂತರ ಮಾಡಿ ಇವರು ಬರೆದ ನಾಟಕಗಳು ಫ್ರೆಂಚ್ ರಂಗಭೂಮಿ ಸ್ವಲ್ಪಕಾಲ ಕಳೆಗಟ್ಟುವಂತೆ ಮಾಡಿದ್ದವು. ಇವರು ತಮ್ಮ ಪೂರ್ವದ ಬಾಲ್‌ಜ್ಯಾಕ್, ಫ್ಲೋಬರ್-ಮುಂತಾದವರ ವಾಸ್ತವತಾ ಸಿದ್ಧಾಂತವನ್ನೇ ಅನುಸರಿಸಿ ತಮ್ಮ ಅನಂತರ ಬಂದ ಎಮಿಲಿ ಝೋಲಾ ಮೊದಲಾದ ವಾಸ್ತವತಾವಾದಿಗಳಿಗೆ ದಾರಿ ತೋರಿಸಿದರು. ಈ ಇಬ್ಬರು ಸಹೋದರರಲ್ಲಿ ಚಿಕ್ಕವನಾದ ಝೂಲ್ ತನ್ನ 40ನೆಯ ವರ್ಷದಲ್ಲಿ ತೀರಿಕೊಂಡ. ಇವನು ಜೀವಿಸಿದ್ದಾಗ ಇಬ್ಬರೂ ಬರೆದ ಕೃತಿಗಳಲ್ಲಿ ಯಾರದ್ದು ಎಷ್ಟು ಭಾಗವೆಂದು ನಿರ್ಣಯಿಸುವುದು ಕಷ್ಟ. ಚಿತ್ರಕಲೆಯಲ್ಲಿ ಹೆಚ್ಚಿನ ಆಸಕ್ತಿ ಇದ್ದುದರಿಂದ ಇವರು 18ನೆಯ ಶತಮಾನದ ಫ್ರೆಂಚ್ ಸಮಾಜವನ್ನೂ ಆ ಕಾಲದ ಕಲೆಯನ್ನೂ ಆಳವಾಗಿ ಅಧ್ಯಯನ ಮಾಡಿದರು. ಆ ತನಕ ಸಾಮಾನ್ಯವಾಗಿ ಅನೇಕ ಇತಿಹಾಸಕಾರರು ಅಲಕ್ಷಿಸುತ್ತಿದ್ದ ಹಳೆಯ ಕಾಗದಪತ್ರಗಳು, ವರ್ಣಚಿತ್ರಗಳು,



ಕೆತ್ತನೆಯ ಚಿತ್ರಗಳು, ಸಾಮಾಜಿಕ ಹಿನ್ನೆಲೆಗೆ ಸಂಬಂಧಿಸಿದ ಸಾಕ್ಷ್ಯ ಸಂಗತಿಗಳು, ಅಲಂಕಾರವಸ್ತುಗಳು, ಪೀಠೋಪಕರಣಗಳು ಮುಂತಾದ ಐತಿಹಾಸಿಕ ಪುರಾವೆಗಳನ್ನು ಇವರಿಬ್ಬರೂ ಪರಿಣಾಮಕಾರಿ ಯಾಗಿ ಬಳಸಿಕೊಂಡರು. ಇವರು ಬರೆದ ಹಿಸ್ಟರಿ ಡ ಲ ಸೊಸೇತಿ ಫ್ರಾನ್ಸೇಸ್ ಪೆಂದಾಂತ್ ಲ ರೆವಲ್ಯೂಷನ್ (1854) ಮತ್ತು ಒಂಬತ್ತು ಸಂಪುಟಗಳಾಗಿ ರಚಿತವಾದ ಗಾಂಕೂರ್ ಜರ್ನಲ್ (1885-87) ಎಂಬುವು ಉಪಯುಕ್ತ ಚಾರಿತ್ರಿಕ ಆಕರ ಗ್ರಂಥಗಳಾಗಿವೆ. ಇವುಗಳ ಜೊತೆಗೆ 18ನೆಯ ಶತಮಾನದ ಚಿತ್ರಕಲೆಯನ್ನು ಕುರಿತು ವಿಚಾರಭರಿತ ಸಾಕ್ಷ್ಯ ಗ್ರಂಥಗಳನ್ನು ಇವರು ಬರೆದಿದ್ದಾರೆ. ಪ್ರಮುಖವಾಗಿ ಇತಿಹಾಸಕಾರ ರೆಂದು ಪ್ರಸಿದ್ಧಿ ಪಡೆದ ಇವರು ತಮ್ಮ ಕಾದಂಬರಿ ಹಾಗೂ ನಾಟಕಗಳಲ್ಲಿಯೂ ಅನನ್ಯ ವಾಸ್ತವಿಕ ಪ್ರಜ್ಞೆಯನ್ನು ತೋರಿಸಿದ್ದಾರೆ. ಆನ್ರೀತ್ ಮಾರೇಶಲ್ ಮುಂತಾದ ನಾಟಕಗಳಲ್ಲಿ ನಿತ್ಯಜೀವನದ ಆಡುಮಾತಿನ ಸೊಗಡನ್ನೂ ರಂಗಭೂಮಿಯ ಸಾಂಪ್ರದಾಯಿಕ ಗಡಸು ಶೈಲಿಯನ್ನೂ ಚೆನ್ನಾಗಿ ರೂಢಿಸಿಕೊಂಡಿದ್ದಾರೆ. ಹಲವು ಸಮಕಾಲೀನ ಸಮಸ್ಯೆಗಳನ್ನೆತ್ತಿಕೊಂಡು, ಪ್ರಮಾಣಬದ್ಧವಾದ ಜೀವಂತ ವಾಸ್ತವಿಕ ಚಿತ್ರಗಳನ್ನು ಕೊಟ್ಟಿದ್ದಾರೆ. ಇವರು ಯಥಾರ್ಥ ಸಂಗತಿಗಳನ್ನು ಯಾಥಾರ್ಥವಾದಿಗಳಂತೆ ಕೇವಲ ಬಾಹ್ಯಾಲಂಕರಣಕ್ಕಾಗಿ ಬಳಸುವುದಿಲ್ಲ. ಕಳೆದುಹೋದ ಯುಗದ ಜನ ಜೀವನವನ್ನು ವೀಕ್ಷಿಸುವಾಗ ಆ ಕಾಲದ ಜನರ ಮನಸ್ಸಿನ ಚಲನವಲನಗಳನ್ನು ಸೂಕ್ಷ್ಮವಾಗಿ ಗ್ರಹಿಸಿ, ಅತ್ಯಂತ ನವಿರಾದ, ಕಾವ್ಯಾತ್ಮಕ ಭಾಷೆಯಲ್ಲಿ ವಿಶ್ಲೇಷಿಸಿದ್ದಾರೆ. ಇವರ ಕೃತಿಗಳು ಆಧುನಿಕ ಮನೋವಿಶ್ಲೇಷಣಾತ್ಮಕ ಕಾದಂಬರಿಗಳ ಪೂರ್ವಸೂಚಿ ಯಂತಿವೆ. ಇವರ ರಿನೆಮಾ ಮೊಪೆರಿನ್ ಕಾದಂಬರಿಯಲ್ಲಿ ಸಮಕಾಲೀನ ಯುವಜನರನ್ನು ಕುರಿತ ಹೃದಯಸ್ಪರ್ಶಿ ಚಿತ್ರವಿದೆ. ಮದಾಂ ಜರ್ ವಾಯ್‌ಸಾಯ್ ಧರ್ಮದ ಗೀಳು ಹಿಡಿದ ವ್ಯಕ್ತಿಗಳನ್ನು ಕುರಿತ ಕಥೆ. ಮ್ಯಾನೀತ್ ಸಾಲೊಮನ್ ಚಿತ್ರಕಲಾವಿದರ ಬದುಕನ್ನೂ ಕಲಾವಿದನೊಬ್ಬನ ದುರಂತ ಜೀವನವನ್ನೂ ಪಡಿಮೂಡಿಸುವ ಗಂಭೀರ ಕಥೆ. ಎಲ್ಲಕ್ಕಿಂತ ಹೆಚ್ಚಾಗಿ ಜರ್ಮಿನಿ ಲ್ಯಾಸೆರ್‌ಟ್ಯೂ ಎನ್ನುವ ಕಾದಂಬರಿಯಲ್ಲಿ ದೀನವ್ಯಕ್ತಿಯೊಬ್ಬನ ದಾರುಣ ಕಥೆಯಿದೆ. ಎಡ್‌ಮಾನ್ ಗಾಂಕೂರ್ ಒಬ್ಬನೇ ಬರೆದ ಆತ್ಮಕಥೆಯಲ್ಲಿ ಸರ್ಕಸ್ ಕೆಲಸಗಾರರ ವೃತ್ತಿಜೀವನದ ಹಾಗೂ ತಮ್ಮ ಝೂಲ್ ಗಾಂಕೂರ್‌ನನ್ನು ಕುರಿತ ಅಂತಃಕರಣ ಪೂರ್ವಕವಾದ ವರ್ಣನೆಗಳಿವೆ. ಸೂಳೆಗಾರಿಕೆ ಮತ್ತು ಏಕಾಂತ ಕಾರಾಗೃಹವಾಸದ ಕ್ರೂರ ಪರಿಣಾಮಗಳನ್ನು ಬಣ್ಣಿಸುವ ದುರಂತ ಕಾದಂಬರಿ-ಲಾ ಫಿಲ್ ಎಲಿಸೊ.

ಗಾಂಕೂರ್ ಸಹೋದರರು ವಾಸ್ತವಿಕ ಬದುಕನ್ನು ಯಥಾರ್ಥವಾದಿಗಳಂತೆ ಕೇವಲ ಛಾಯಾಗ್ರಹಣ ಮಾಡಿ ತೋರಿಸುವುದಿಲ್ಲ. ಅತ್ಯಂತ ಸೂಕ್ಷ್ಮಸಂವೇದಿಗಳಾದ ಅವರು ಅದನ್ನು ಧ್ವನಿಪೂರ್ಣವಾದ ಭಾಷೆಯಲ್ಲಿ ಸಮಷ್ಟಿ ಪರಿಣಾಮ ಸಾಧಿಸುವಂತೆ ಚಿತ್ರಿಸುತ್ತಾರೆ. ಪರಿಣಾಮ ವಿಧಾನ 'ಇಂಪ್ರೆಷನಿಸಂ' ಎನ್ನುವ ಫ್ರೆಂಚ್ ಕಲಾಸಂಪ್ರದಾಯಕ್ಕೆ ಇವರು ವಿಶೇಷ ಕೊಡುಗೆ ನೀಡಿದ್ದಾರೆ. ಎಡ್ಮಾನ್ ಗಾಂಕೂರ್ ಸ್ಥಾಪಿಸಿದ ಗಾಂಕೂರ್ ಅಕಾಡೆಮಿ ಮತ್ತು ಪ್ರಿ ಗಾಂಕೂರ್ ಸಾಹಿತ್ಯ ಪ್ರಶಸ್ತಿ ಅವನ ಹೆಸರನ್ನು ಚಿರಸ್ಥಾಯಿಯಾಗಿಸಿವೆ.

(ಎಚ್.ಕೆ.ಆರ್.)

**ಗಾಂಗೇಯದೇವ :** ಆಳ್ವಿಕೆ 1015–41. ಚೇದಿ ವಂಶವೆಂದು ಪ್ರಸಿದ್ಧವಾದ ತ್ರಿಪುರಿ ಕಳಚುರಿ ವಂಶದ ಒಬ್ಬ ದೊರೆ. 2ನೆಯ ಕೊಕ್ಕಲನ ಮಗ; ಕೊಕ್ಕಲನ ಮರಣಾನಂತರ ಪಟ್ಟಕ್ಕೆ ಬಂದ. ಈಗಿನ ಜಬ್ಬಲ್‌ಪುರದ ಸುತ್ತಮುತ್ತ ಇರುವ ದಾಹಲ ಪ್ರದೇಶ ಮೊದಲು ಇವನ ರಾಜ್ಯವಾಗಿತ್ತು. ಇವನಿಗೆ ವಿಕ್ರಮಾದಿತ್ಯ, ಜಿತವಿಶ್ವ ಎಂಬ ಬಿರುದುಗಳಿದ್ದವು. ಇವನ ವೈರಿಗಳು ಕೂಡ ಇವನನ್ನು ಜಿತವಿಶ್ವನೆಂದೇ ಕರೆಯುತ್ತಿದ್ದರು.

ಗಾಂಗೇಯದೇವ ತನ್ನ ರಾಜ್ಯದ ವಿಸ್ತಾರಕ್ಕಾಗಿ ನೆರೆಹೊರೆಯ ರಾಜರೊಂದಿಗೆ ಅನೇಕ ಯುದ್ಧಗಳನ್ನು ಮಾಡಿದ. ಕಲ್ಯಾಣದ ಚಾಳುಕ್ಯ 2ನೆಯ ಜಯಸಿಂಹನ ಕಾಲಕ್ಕೆ ಪರಮಾರ ಭೋಜ ಮತ್ತು ದಕ್ಷಿಣದ ರಾಜೇಂದ್ರ ಚೋಳ ಇವರ ಜೊತೆಗೂಡಿಕೊಂಡು ಕುಂತಲ ದೇಶಾಧಿಪತಿಯಾದ ಇಮ್ಮಡಿ ಜಯಸಿಂಹನ ಮೇಲೆ ಧಾಳಿ ಮಾಡಿದ. ಆದರೆ ಈ ಯುದ್ಧದಲ್ಲಿ ಈ ಕೂಟಕ್ಕೆ ಸೋಲುಂಟಾಯಿತೆಂದು ಜಯಸಿಂಹನ ಕುಳೇನೂರ ಶಾಸನದಿಂದ ತಿಳಿದುಬರುತ್ತದೆ. ಭೋಜ ಮಾಲವ ದೇಶಕ್ಕೆ ಓಡಿಹೋದ. ದಕ್ಷಿಣದಲ್ಲಿ ಸೋತರೂ ಉತ್ತರದಲ್ಲಿ ಗಾಂಗೇಯ ಕೋಸಲದೇಶದ ಸೋಮವಂಶದ ಮಹಾಶಿವಗುಪ್ತನನ್ನು ಸೋಲಿಸಿದ. ಸಾಮಂತ ಹಾಗೂ ಮಹಾಮಂಡಲೇಶ್ವರನಾದ ತುಮ್ಮಾನದ ಕಳಚುರಿ ವಂಶದ ಕಮಲರಾಜನ ಜೊತೆಯಲ್ಲಿ ಉತ್ಕಲವನ್ನು ಗೆದ್ದು ಪೂರ್ವ ಸಮುದ್ರದವರೆಗೆ ರಾಜ್ಯವನ್ನು ವಿಸ್ತರಿಸಿದ. ಈ ಘಟನೆಯ ತರುವಾಯ ಅವನು ತ್ರಿಕಳಿಂಗಾಧಿಪತಿ ಎಂಬ ಬಿರುದನ್ನು ತಳೆದನೆಂದು ತೋರುತ್ತದೆ. ಉತ್ತರಾಪಥದಲ್ಲಿ ಚಕ್ರಾಧಿಪತ್ಯವನ್ನು ಸ್ಥಾಪಿಸುವ ಕಾರ್ಯದಲ್ಲಿ ಸ್ನೇಹಿತನಾಗಿದ್ದ ಪರಮಾರ ಭೋಜ ಮತ್ತು ಚಂದೇಲರ ಮೇಲೆ ಈತ ಯುದ್ಧ ಮಾಡಿದ. ಅಂತ್ಯದಲ್ಲಿ ಜಯ ಇವನದಾಯಿತು. ಸು. 1034ರಲ್ಲಿ ವಾರಾಣಸಿಯನ್ನು ಗೆದ್ದು ತನ್ನ ರಾಜ್ಯಕ್ಕೆ ಸೇರಿಸಿಕೊಂಡ. ಇದು ಆಗ್ಗೆ ಚಂದೇಲರ ಢಂಗನ ರಾಜ್ಯಕ್ಕೆ ಸೇರಿತ್ತು. ಪೂರ್ವದಲ್ಲಿಯ ಗೌಡದೇಶದ ಪಾಲವಂಶದ 1ನೆಯ ಮಹಿಪಾಲನಿಂದ ಅಂಗದೇಶದ ಭಾಗಲ್‌ಪುರವನ್ನು ಗೆದ್ದು ತನ್ನ ರಾಜ್ಯಕ್ಕೆ ಸೇರಿಸಿದ. ಇವನ ಮಗನಾದ ಲಕ್ಷ್ಮೀಕರ್ಣ ಅಥವಾ ಕರ್ಣ ನೇಪಾಲದವರೆಗೆ ದಂಡೆತ್ತಿ ಹೋಗಿದ್ದ. ಬಿಹಾರದಲ್ಲಿಯ ಪಾಲವಂಶದ ನಯಪಾಲನನ್ನು ಸೋಲಿಸಿ ಮಗಧದೇಶವನ್ನು ಗೆದ್ದ. ಸರಿಸುಮಾರು ಇದೇ ಸಮಯಕ್ಕೆ ಘಜ್ನಿ ವಂಶದ ದೊರೆಗಳ ರಾಜ್ಯಪಾಲನಾಗಿ ಪಂಜಾಬನ್ನು ಆಳುತ್ತಿದ್ದ ಅಹಮ್ಮದ್ ನಿಯಾಲ್ತಿಗೀನ್ ಎಂಬ ಸರದಾರ ವಾರಾಣಸಿಯನ್ನು ಮುತ್ತಿ ಅದನ್ನು ಕೊಳ್ಳೆ ಹೊಡೆದು ಅಪಾರ ಸಂಪತ್ತನ್ನು ದೋಚಿಕೊಂಡು ಆ ನಗರವನ್ನು ಹಾಳು ಮಾಡಿ ಹೋದ. ಆಗ ಗಾಂಗೇಯದೇವ ಅವನ ಬೆಂಬತ್ತಿ ಹೋಗಿ ಕೀರಾದೇಶವೆಂದು ಪ್ರಸಿದ್ಧಿ ಹೊಂದಿದ್ದ ಕಾಂಗ್ರಾ ಕಣಿವೆಯನ್ನು ಗೆದ್ದುಕೊಂಡ. ಅನಂತರ ಅವನು ಚಕ್ರಾಧಿಪತ್ಯಸೂಚಕವಾದ ಮಹಾರಾಜಾಧಿರಾಜ, ಪರಮೇಶ್ವರ ಎಂಬ ಬಿರುದುಗಳನ್ನು ಧರಿಸಿದ. ಕಳಚುರಿ ಶಕ 789ರ (1037–38) ಅವನ ಪಿವಾನ ಶಿಲಾಲೇಖದಿಂದ ಈ ವಿಷಯ ತಿಳಿದುಬರುತ್ತದೆ. ಎರಡನೆಯ ರಾಜಧಾನಿಯೆನಿಸಿದ್ದ ಪ್ರಯಾಗದ ಮೇಲೆ ಗಾಂಗೇಯನಿಗೆ ಬಹಳ ಪ್ರೇಮವಿತ್ತು. ಅಲ್ಲಿಯ ಆಲದ ಮರದ ನೆರಳಿನಲ್ಲಿಯೇ ಅವನು ಮರಣ ಹೊಂದಿದನೆಂದೂ ಅನಂತರ ಆತನ 100 ಜನ ಮಡದಿಯರು ಸತಿ ಹೋದರೆಂದೂ ಹೇಳಲಾಗಿದೆ.

ಗಾಂಗೇಯದೇವ ಶೈವಮತನಿಷ್ಠನಾಗಿದ್ದ. ಭೇರಾಘಾಟದ ಶಾಸನದ ಪ್ರಕಾರ ಅವನು ಅಲ್ಲೊಂದು ದೊಡ್ಡ ಶಿವಾಲಯವನ್ನು ಕಟ್ಟಿಸಿದ್ದ. ಪಿವಾನಶಾಸನವೂ ಶಿವಲಿಂಗದ ಪ್ರತಿಷ್ಠಾಪನೆಯನ್ನು ಸೂಚಿಸುತ್ತದೆ. ಜಲಶಯನ (ವಿಷ್ಣು) ದೇವರಿಗೆ ಬಿಟ್ಟ ದತ್ತಿಯ ವಿಷಯ ಮುಕುಂದಪುರ ಶಾಸನದಲ್ಲಿದೆ. ಅವನು ಉತ್ತರದಿಂದ ಬರುತ್ತಿದ್ದ ಮುಸಲ್ಮಾನರ ಅನೇಕ ಧಾಳಿಗಳನ್ನು ತಡೆದ. ಅವನ ಖ್ಯಾತಿಯನ್ನು ಆಲ್ಬೆರೂನಿ ತನ್ನ ಗ್ರಂಥದಲ್ಲಿ ಹೆಚ್ಚಾಗಿ ವರ್ಣಿಸಿದ್ದಾನೆ.

ಗಾಂಗೇಯ ದಕ್ಷ ಆಡಳಿತಗಾರನೂ ಅರ್ಥಶಾಸ್ತ್ರವನ್ನು ಬಲ್ಲವನೂ ಆಗಿದ್ದ. ಅವನ ಕಾಲದ ಚಿನ್ನ, ಬೆಳ್ಳಿ ಮತ್ತು ತಾಮ್ರ ನಾಣ್ಯಗಳು ದೊರೆತಿವೆ. ಇವುಗಳ ಮೇಲೆ ಮುಂಬದಿಯಲ್ಲಿ ಲಕ್ಷ್ಮೀಮೂರ್ತಿಯನ್ನೂ ಹಿಂಬದಿಯಲ್ಲಿ ರಾಜನ ಸಂಪೂರ್ಣ ಹೆಸರನ್ನೂ ಮೂರು ಸಾಲಿನ ನಾಗರೀಲಿಪಿಯಲ್ಲಿ ಬರೆಯಲಾಗಿದೆ. ಈ ನಾಣ್ಯಗಳನ್ನು ದ್ರಮ್ಮ, ಅರ್ಧ ದ್ರಮ್ಮ ಮತ್ತು ಕಾಲು ದ್ರಮ್ಮ ಎಂದು ಮುಂತಾಗಿ ವಿಭಜಿಸಿ ಟಂಕಿಸಲಾಗಿದೆ. ಈತ ಬಳಕೆಗೆ ತಂದ ಲಕ್ಷ್ಮೀಮೂರ್ತಿಯನ್ನುಳ್ಳ ನಾಣ್ಯಪದ್ಧತಿ ಉತ್ತರ ಭಾರತದಲ್ಲಿ ಬಹಳ ಬೇಗ ಪ್ರಖ್ಯಾತವಾಯಿತು. ಈ ನಾಣ್ಯಗಳಲ್ಲಿಯ ರೂಪರೇಷೆಗಳನ್ನು ಚಂದೇಲರು, ಗಾಹದ್ವಾಲರು, ತೋಮರರು ಮತ್ತು ದೂರದ ಕಾಶ್ಮೀರರಾಜರು ತಮ್ಮ ನಾಣ್ಯಗಳಲ್ಲಿ ಅನುಕರಿಸಿದರು.

(ಎಸ್.ಎಸ್.ಜಿಎ.)

**ಗಾಂಜಾ ಗಿಡ :** ಕ್ಯಾನಬಿನೇಸೀ ಕುಟುಂಬಕ್ಕೆ ಸೇರಿದ ಒಂದು ಸಸ್ಯ; ವೈಜ್ಞಾನಿಕ ನಾಮ ಕ್ಯಾನಬಿಸ್ ಸೇಟಿವ. ಪರ್ಯಾಯನಾಮ ಭಂಗಿ, ಹೆಂಪ್, ಸಾಫ್ಟ್ ಹೆಂಪ್ ಮುಂತಾದವು ಇಂಗ್ಲಿಷಿನ ಬಳಕೆಯ ಹೆಸರುಗಳು. ಈ ಸಸ್ಯ ಮೂಲತಃ ಹಿಮಾಲಯದ ಉತ್ತರಪ್ರದೇಶದ್ದು ಎಂದು ಹೇಳಲಾಗಿದೆ. ಪ್ರ.ಶ.ಪೂ. 2800ರಲ್ಲೇ ಚೀನೀಯರು ಈ ಗಿಡದ ನಾರನ್ನು ಉಪಯೋಗಿಸುತ್ತಿದ್ದರೆಂದು ಪ್ರಾಚೀನ ಕಾಲದ ಬರೆವಣಿಗೆಗಳ ಆಧಾರದಿಂದ ತಿಳಿದುಬಂದಿದೆ.

ಮಾನವ ಮೊಟ್ಟಮೊದಲಲ್ಲಿ ಉಪಯೋಗಿಸಿದ ನಾರುಗಳಲ್ಲಿ ಗಾಂಜಾ ಗಿಡದ ನಾರು ಕೂಡ ಒಂದು. ಏಷ್ಯ ಖಂಡದಿಂದ ಈ ಗಿಡ ಮೊದಲು ಪೂರ್ವ ಹಾಗೂ ದಕ್ಷಿಣ ಯುರೋಪುಗಳಿಗೂ ಸು. 500ರ ವೇಳೆಗೆ ಪಶ್ಚಿಮ ಯುರೋಪಿಗೂ ಹರಡಿತೆಂದು ಊಹಿಸಲಾಗಿದೆ. ದಕ್ಷಿಣ ಅಮೆರಿಕದ ಚಿಲಿ ಪ್ರದೇಶಕ್ಕೆ 16ನೆಯ ಶತಮಾನದ ಮಧ್ಯದಲ್ಲಿ ಹಾಗೂ 100 ವರ್ಷಗಳ ಬಳಿಕ ನ್ಯೂಇಂಗ್ಲೆಂಡ್ ಮತ್ತು ವರ್ಜಿನಿಯಕ್ಕೆ ಇದು ಹರಡಿತು. 20ನೆಯ ಶತಮಾನದ ಆದಿಯಲ್ಲಿ ಉತ್ತರ ಸಮಶೀತೋಷ್ಣವಲಯದಲ್ಲಿರುವ ಎಲ್ಲ ದೇಶಗಳಲ್ಲಿ ಹಾಗೂ ದಕ್ಷಿಣ ಸಮಶೀತೋಷ್ಣ ವಲಯದ ಕೆಲವು ಪ್ರದೇಶಗಳಲ್ಲಿ ಇದು ಕಾಡುಗಿಡದಂತೆ ಬೆಳೆಯತೊಡಗಿತ್ತು. ಅಲ್ಲದೆ ಅಲ್ಲಲ್ಲಿ ಇದರ ಬೇಸಾಯವೂ ಪ್ರಾರಂಭವಾಗಿತ್ತು. ನಾರಿನ ಉತ್ಪಾದನೆಗೋಸ್ಕರ ಈ ಗಿಡವನ್ನು ಇಂದು ರಷ್ಯ, ಇಟಲಿ, ಚೀನ, ಯೂಗೋಸ್ಲಾವಿಯ, ರೊಮೇನಿಯ, ಕೊರಿಯ, ಪೋಲೆಂಡ್ ಟರ್ಕಿಸ್ತಾನ, ಹಂಗರಿ, ಜಪಾನ್, ಜರ್ಮನಿ, ಚೆಕೋಸ್ಲೊವಾಕಿಯ, ಫ್ರಾನ್ಸ್, ಬಲ್ಗೇರಿಯ, ಚಿಲಿ ಮತ್ತು ಅಮೆರಿಕ ಸಂಯುಕ್ತಸಂಸ್ಥಾನಗಳಲ್ಲಿ ಬೇಸಾಯ ಮಾಡಲಾಗುತ್ತಿದೆ.




ಗಿಡದ ಬೇರೆ ಬೇರೆ ಭಾಗಗಳು: 1. ಹೆಣ್ಣು ಗಿಡದ ಒಂದು ರೆಂಬೆ, 2. ಹೆಣ್ಣು ಹೂ, 3. ಬೀಜ, 4. ಫಲ, 5. ಗಂಡು ಹೂ

ಗಾಂಜಾ ಗಿಡ ಏಕವಾರ್ಷಿಕ ಸಸ್ಯ. ಎತ್ತರದಲ್ಲಿ ಸುಮಾರು 2ಮೀ ವರೆಗಿರಬಹುದು. ಕಾಂಡ ಟೊಳ್ಳು. ಗಿಡಗಳಲ್ಲಿ ಗಂಡು ಹೆಣ್ಣು ಬೇರೆ ಬೇರೆ. ಅಪರೂಪಕ್ಕೆ ಒಂದೇ ಗಿಡ ಗಂಡು ಮತ್ತು ಹೆಣ್ಣು ಹೂಗಳೆರಡನ್ನೂ ಪಡೆದಿರಬಹುದು. ಸಾಗುವಳಿಯಲ್ಲಿ ಗಂಡು ಮತ್ತು ಹೆಣ್ಣು ಗಿಡಗಳು ಸಮಾನಸಂಖ್ಯೆಗಳಲ್ಲಿ ಇರುತ್ತವೆ. ಪರಾಗೋತ್ಪತ್ತಿಯಾದ ಬಳಿಕ ಗಂಡುಗಿಡ ಒಣಗಿಹೋಗುತ್ತದೆ. ಹೆಣ್ಣು ಗಿಡಗಳು ಬೀಜ ಬಲಿಯುವವರೆಗೂ ಜೀವಂತವಾಗಿರುತ್ತವೆ.

ನಾರು ಬೇಕಾದಲ್ಲಿ ಸೂಕ್ತರೀತಿಯ ಹದ ಮಾಡಿ ಅಳವಡಿಸಿಕೊಂಡ ಬೀಜಗಳನ್ನು ಬಿತ್ತಬೇಕು. ಆಗ ಗಿಡಗಳು ನೀಳವಾಗಿ ಎತ್ತರಕ್ಕೆ ಬೆಳೆಯುತ್ತವೆ. ಈ ರೀತಿ ಬೆಳೆದ ಗಿಡಗಳ ನೀಳ ಕಾಂಡಗಳ ನೆತ್ತಿಯಲ್ಲಿ ಮಾತ್ರ ಕೊಂಬೆಗಳು ಕಾಣಿಸಿಕೊಳ್ಳುತ್ತವೆ. ಬೀಜಗಳನ್ನು ವಿರಳವಾಗಿ ಬಿತ್ತಿದ್ದು ಅವುಗಳ ಮಧ್ಯಾಂತರ ಸಾಕಷ್ಟಿದ್ದರೆ ಕೆಳಭಾಗದಿಂದ ಮೇಲ್ತುದಿಯವರೆಗಿರುವ ಗೆಣ್ಣುಗಳಲ್ಲೆಲ್ಲ ಕೊಂಬೆಗಳು ಚಿಗುರೊಡೆದು ಗಿಡ ದಪ್ಪವಾಗಿ ಒರಟಾಗಿ ರೂಪುಗೊಳ್ಳುತ್ತದೆ. ಹರಡಿ ಬೆಳೆದಾಗ ಗಿಡ ಕುಳ್ಳಾಗಿರುತ್ತದೆ. ಎಣ್ಣೆ ಬೀಜದ ಉತ್ಪಾದನೆಗೋಸ್ಕರ ರಷ್ಯದ ಈಶಾನ್ಯ ಭಾಗಗಳಲ್ಲಿ ಬೆಳೆಯುವ ಗಿಡಗಳು ಹಾಗೂ ಭಾರತ, ಅರಬ್ ದೇಶಗಳಲ್ಲಿ ಮತ್ತು ಉತ್ತರ ಆಫ್ರಿಕದ ವಿವಿಧ ಪ್ರದೇಶಗಳಲ್ಲಿ ಔಷಧ ಮೂಲಿಕೆಗಾಗಿ ಬೆಳೆಯುವ ಗಿಡಗಳು ಈ ರೀತಿ ಅನೇಕ ಕೊಂಬೆಗಳುಳ್ಳ ಕುಳ್ಳುಜಾತಿಯವು. ಬುಡ ಮತ್ತು ತುದಿ ಭಾಗಗಳೆರಡನ್ನು ಹೊರತು ಉಳಿದ